ಪ್ರಜಾವಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒತ್ತಡದ ಬದುಕು ಭಾರವಾದಾಗ..

ಆರ್ಥಿಕ ಸಂಕಷ್ಟ, ಖಿನ್ನತೆ: ಸಿನಿಮಾ ಮಂದಿಯಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆ ಪ್ರವೃತ್ತಿ

• ಸೂರ್ಯನಾರಾಯಣ ವಿ.

ಒಳನೋಟ

ಬೆಂಗಳೂರು: ಮಠ ಗುರುಪ್ರಸಾದ್. ಕನ್ನಡ ಚಿತ್ರರಂಗದ ಜನಪ್ರಿಯ ನಿರ್ದೇಶಕರಲ್ಲಿ ಒಬ್ಬರಾಗಿದ್ದವರು. ಪ್ರತಿಭಾವಂತರಾಗಿದ್ದ ಅವರು ಮೊದಲ ಚಿತ್ರದ (ಮಠ) ಮೂಲಕವೇ ಛಾಪು ಮೂಡಿಸಿದವರು. ನವೆಂಬರ್ 4ರಂದು ಆತ್ಮಹತ್ಯೆ ಮಾಡಿಕೊಂಡರು. ಅವರಿಗಿನ್ನೂ 52 ವರ್ಷ. 'ಸಾಲದ ಶೂಲಕ್ಕೆ ಹೆದರಿ ಖಿನ್ನತೆಗೆ ಜಾರಿ ಇಹಲೋಕ ತ್ಯಜಿಸಿದರು' ಎಂದು ಹೇಳುತ್ತಾರೆ ಪೊಲೀಸರು.

ಕಿರುತೆರೆ, ಹಿರಿತೆರೆಗಳಲ್ಲಿ ನಿರ್ದೇಶಕರಾಗಿ ದುಡಿದ, ನಿರ್ಮಾಪಕರೂ ಆಗಿದ್ದ ವಿನೋದ್ ದೋಂಡಾಳೆ ಚಿತ್ರವೊಂದರ ನಿರ್ಮಾಣಕ್ಕಾಗಿ ಮಾಡಿದ್ದ ಸಾಲ ತೀರಿಸುವುದು ಹೇಗೆ ಎಂದು ಹೆದರಿ ಈ ವರ್ಷದ ಜುಲೈ 21ರಂದು ನೇಣಿಗೆ ಕೊರಳೊಡ್ಡಿ ತಮ್ಮ ಬದುಕಿಗೆ ಅಂತ್ಯ ಹಾಡಿದರು. ಅವರಿಗೆ ಬರೀ 49 ವರ್ಷ.

ಇದಕ್ಕೂ ಮೂರು ತಿಂಗಳ ಮೊದಲು, ಏಪ್ರಿಲ್ 14ರಂದು ನಿರ್ಮಾಪಕ, ಉದ್ಯಮಿ ಸೌಂದರ್ಯ ಜಗದೀಶ್ ತಮ್ಮ ಮನೆಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಚಿತ್ರರಂಗದಲ್ಲಿ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದ ಅವರು ಬಿಲ್ಡರ್ ಕೂಡ ಆಗಿದ್ದರು. ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುತ್ತಿದ್ದರು. ಆರ್ಥಿಕ ಕಾರಣಗಳು ಮತ್ತು ನಂಬಿದವರೇ ಮಾಡಿದ ವಂಚನೆಯಿಂದಾಗಿ ಅವರು ಆತ್ಮಹತ್ಯೆಯ ನಿರ್ಧಾರ ಕೈಗೊಂಡರು ಎಂಬುದು ಪೊಲೀಸರ ಹೇಳಿಕೆ. ಅವರಿಗೆ 55 ವರ್ಷ.

ಕನ್ನಡದ ಧಾರಾವಾಹಿಗಳಲ್ಲಿ ನಟಿಸಿ ಜನಪ್ರಿಯರಾಗಿದ್ದ ಶೋಭಿತಾ ಅವರು ಹೈದರಾಬಾದ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಈ ವಾರದ ಆರಂಭದಲ್ಲಿ ಬಂದಿದೆ. ಅವರು ಕೂಡ ಖಿನ್ನತೆಯಿಂದ ಬಳಲುತ್ತಿದ್ದರು ಎಂದು ಹೇಳಲಾಗುತ್ತಿದೆ.

ಬಣ್ಣದ ಲೋಕದಲ್ಲಿ ಜನಪ್ರಿಯರಾಗಿ, ಸೆಲೆಬ್ರೆಟಿಗಳಾಗಿ ಗುರುತಿಸಿಕೊಂಡಿರುವ ಹಲವಾರು ಮಂದಿ ಆರ್ಥಿಕ ಸಂಕಷ್ಟ, ಒತ್ತಡ–ಖಿನ್ನತೆ, ಕೌಟುಂಬಿಕ ಕಾರಣಗಳಿಂದ ಜಗತ್ತನ್ನು ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿರುವ ಇಂತಹ ನಿದರ್ಶನಗಳು ಹತ್ತಾರು ಸಿಗುತ್ತವೆ. ಇದು ಚಂದನವನ, ಕನ್ನಡ ಕಿರುತೆರೆಗೆ ಮಾತ್ರ ಸೀಮಿತವಲ್ಲ. ಹಾಲಿವುಡ್, ಬಾಲಿವುಡ್, ನೆರೆಯ ಟಾಲಿವುಡ್ (ತೆಲುಗು ಚಿತ್ರರಂಗ), ಕಾಲಿವುಡ್ (ತಮಿಳು ಚಿತ್ರರಂಗ), ಮಾಲಿವುಡ್ (ಮಲಯಾಳ ಚಿತ್ರರಂಗ) ಸೇರಿದಂತೆ ಎಲ್ಲ ಚಿತ್ರರಂಗಗಳಲ್ಲೂ ಇಂತಹ ಪ್ರಕರಣಗಳು ವರದಿಯಾಗಿವೆ.

ಸಾವಿಗೆ ದಾರಿ ತೋರುವ ಒತ್ತಡ: 70–80ರ ದಶಕದಲ್ಲಿ ಕನ್ನಡ ಚಿತ್ರರಂಗದ ಅಪ್ರತಿಮ ತಾರೆಯರಾಗಿ ಮೆರೆದಿದ್ದ ಮಿನುಗು ತಾರೆ ಕಲ್ಪನಾ (1979ರ ಮೇ 30), ಮಂಜುಳಾ (1986 ಸೆ.12) ಅವರು ಕೂಡ ಚಿಕ್ಕ ವಯಸ್ಸಿನಲ್ಲೇ ಆತ್ಮಹತ್ಯೆಯ ಮೂಲಕ ಬದುಕಿಗೆ ವಿದಾಯ ಹೇಳಿದವರು. 37 ವರ್ಷದ ಕಲ್ಪನಾ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದರು ಎಂದು ಹೇಳಲಾಗಿತ್ತು. ಮಂಜುಳಾ ಸಾವಿಗೆ ಶರಣಾಗುವಾಗ ಅವರಿಗೆ 35 ವರ್ಷ ವಯಸ್ಸಾಗಿತ್ತಷ್ಟೆ. ಅವರ ಸಾವಿಗೆ ವೈಯಕ್ತಿಕ ಮತ್ತು ಹಣಕಾಸಿನ ಕಾರಣಗಳಿದ್ದವು ಎನ್ನಲಾಗಿತ್ತು.

17 ವರ್ಷಗಳ ಅವಧಿಯಲ್ಲಿ ವಿವಿಧ ಭಾಷೆಗಳ 450 ಸಿನಿಮಾಗಳಲ್ಲಿ ಬಣ್ಣಹಚ್ಚಿದ್ದ, ಆ ಕಾಲದಲ್ಲಿ ಐಟಂ ಹಾಡುಗಳ ಮೂಲಕ ಮನೆ ಮಾತಾಗಿದ್ದ ಸಿಲ್ಕ್ ಸ್ಮಿತಾ ಅವರು ಏಕಾಂಗಿತನ, ಸಾಲದ ಹೊರೆಯಿಂದ ಖಿನ್ನತೆಗೆ ಜಾರಿ ಚೆನ್ನೈನ ತಮ್ಮ ಮನೆಯಲ್ಲಿ ಸಾವಿಗೆ ಶರಣಾಗಿದ್ದರು. ಹಾಲಿವುಡ್ ಖ್ಯಾತ ನಟರಾಗಿದ್ದ ರಾಬಿನ್ ವಿಲಿಯಮ್ಸ್ 2014ರ ಆಗಸ್ಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅನಾರೋಗ್ಯ, ಖಿನ್ನತೆಯಿಂದ ಬಳಲುತ್ತಿದ್ದ ಅವರು ಕೊನೆಗೆ ಸಾವನ್ನು ತಂದುಕೊಳ್ಳುವ ನಿರ್ಧಾರ ಕೈಗೊಂಡಿದ್ದರು. ಚಿಕ್ಕ ವಯಸ್ಸಿನಲ್ಲೇ ಆತ್ಮಹತ್ಯೆಗೆ ಶರಣಾದ ಹಿಂದಿ ಚಿತ್ರರಂಗದ ನಟ, ನಟಿಯರ ಪಟ್ಟಿ ದೊಡ್ಡದಿದೆ.

6ನೇ ಪುಟ ನೋಡಿ

ಸೃಜನಶೀಲತೆಯೂ, ಮಾನಸಿಕ ವ್ಯಾಧಿಯೂ...

ಸ್ವೀಡನ್ನಿನ ಕರೋಲಿಂಸ್ಕಾ ಇನ್‌ಸ್ಟಿಟ್ಯೂಟ್‌ನ ಅಧ್ಯಯನಕಾರರು 2012ರಲ್ಲಿ ನಡೆಸಿದ್ದ ಅಧ್ಯಯನವೊಂದು ಸೃಜನಶೀಲತೆ ಮತ್ತು ಮಾನಸಿಕ ಕಾಯಿಲೆಗೂ ಸಂಬಂಧ ಇರುವುದರ ಮೇಲೆ ಬೆಳಕು ಚೆಲ್ಲಿತ್ತು.

ಸಾಂಸ್ಕೃತಿಕ ಕ್ಷೇತ್ರ, ಸಿನಿಮಾ, ವಿಜ್ಞಾನ ಸೇರಿದಂತೆ ಸೃಜನಶೀಲತೆಗೆ ಹೆಚ್ಚು ಅವಕಾಶ ಇರುವ ವೃತ್ತಿಗಳಲ್ಲಿ ತೊಡಗಿಕೊಂಡಿರುವವರು ಜನಸಮಾನ್ಯರಿಗಿಂತ ಹೆಚ್ಚು ಮಾನಸಿಕ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ ಎಂದು ಅದು ಹೇಳಿತ್ತು. ಕಲಾವಿದರು, ವಿಜ್ಞಾನಿಗಳು ಮಾನಸಿಕ ವ್ಯಾಧಿಗೆ ತುತ್ತಾಗುವುದು ಜಾಸ್ತಿ. ಖಿನ್ನತೆ, ಗಾಬರಿ, ಭ್ರಾಂತಿಗೆ ಒಳಗಾಗುವುದು, ಕುಡಿತ– ಡ್ರಗ್ಸ್ ಸೇವನೆ ಚಟಕ್ಕೆ ತುತ್ತಾಗುವ ಸಾಧ್ಯತೆಗಳ ಬಗ್ಗೆಯೂ ಅಧ್ಯಯನ ಗಮನ ಸೆಳೆದಿತ್ತು.

‘ಬಿಬಿಎಂಪಿ ವ್ಯಾಪ್ತಿ: 1.08 ಕೋಟಿ ಕೊರೊನಾ ಪರೀಕ್ಷೆ!’

ಪ್ರಜಾವಾಣಿ ವಾರ್ತೆ


ಶಿವಕುಮಾರ್

ಬೆಂಗಳೂರು: ‘ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 1.08 ಕೋಟಿ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗಿದೆ ಎಂಬ ಲೆಕ್ಕ ತೋರಿಸಿ ₹648 ಕೋಟಿ ಬಿಲ್ ಮಾಡಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಬಿಲ್ ಆಗಿರುವ ಮೊತ್ತದಲ್ಲಿ ₹400 ಕೋಟಿ ಪಾವತಿ ಮಾಡಲಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಪರೀಕ್ಷೆ ನಡೆಸಲಾಗಿದೆ ಎಂದಿರುವುದು ಅನುಮಾನಗಳಿಗೆ ಕಾರಣವಾಗಿದೆ’ ಎಂದು ಅವರು ಹೇಳಿದರು.

ಕೋವಿಡ್ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕುರಿತ, ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗದ ವರದಿಯಲ್ಲಿ ರುವ ಶಿಫಾರಸುಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಾಮರ್ಶೆ ನಡೆಸಲು ರಚಿಸಲಾದ ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರೂ ಆಗಿರುವ ಅವರು, ಸಮಿತಿಯ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

‘ಕಿದ್ವಾಯಿ ಸಂಸ್ಥೆಯೊಂದರಲ್ಲೇ 24 ಲಕ್ಷ ಪರೀಕ್ಷೆ ಮಾಡಿರುವ ಉಲ್ಲೇಖ ವರದಿಯಲ್ಲಿದೆ. 24 ಲಕ್ಷ ಜನರಿಗೆ ಒಂದೇ ಕಡೆ ಪರೀಕ್ಷೆ ನಡೆದಾಗ ಎಷ್ಟು ಜನದಟ್ಟಣೆ, ಸಾಲು ಇರಬೇಕು. ತಾಂತ್ರಿಕವಾಗಿ ಇದನ್ನು ಒಪ್ಪಲಾಗದು. ಐಸಿಎಂಆರ್ ಅನುಮತಿ ಇಲ್ಲದೆ ಈ ಪರೀಕ್ಷೆ ನಡೆಸಿ ₹146 ಕೋಟಿ ಬಿಲ್ ಮಾಡಲಾಗಿದೆ’ ಎಂದರು.

5ನೇ ಪುಟ ನೋಡಿ



ಅವಕಾಶ ಸಿಕ್ಕರೆ 'ಇಂಡಿಯಾ' ನಾಯಕತ್ವ ವಹಿಸುವೆ: ಮಮತಾ

ಕೋಲ್ಕತ್ತ (ಪಿಟಿಐ): 'ಇಂಡಿಯಾ' ಮೈತ್ರಿಕೂಟ ಕೆಲಸ ಮಾಡುತ್ತಿರುವ ಬಗೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ, ಅವಕಾಶ ದೊರೆತರೆ ಮೈತ್ರಿಕೂಟದ ನಾಯಕತ್ವವನ್ನು ತಾವು ವಹಿಸಿ ಕೊಳ್ಳಲು ಸಿದ್ಧ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯ ಹೊಣೆ ಹಾಗೂ 'ಇಂಡಿಯಾ' ಮೈತ್ರಿಕೂಟವನ್ನು ಮುನ್ನಡೆಸುವ ಹೊಣೆಯನ್ನು ತಾವು ಏಕಕಾಲದಲ್ಲಿ ನಿರ್ವಹಿಸಲು ಸಾಧ್ಯವಿದೆ ಎಂದೂ ಮಮತಾ ಅವರು ಶುಕ್ರವಾರ ಹೇಳಿದ್ದಾರೆ.

'ಇಂಡಿಯಾ ಮೈತ್ರಿಕೂಟವನ್ನು ನಾನು ರೂಪಿಸಿದ್ದೆ. ಈಗ ಅದನ್ನು ನಿರ್ವಹಿಸುವ ಹೊಣೆಯು ಮೈತ್ರಿಕೂಟವನ್ನು ಮುನ್ನಡೆಸುತ್ತಿರುವವರ ಮೇಲಿದೆ. ಅವರಿಗೆ ನಿರ್ವಹಣೆ ಸಾಧ್ಯವಿಲ್ಲ ಎಂದಾದರೆ ನಾನೇನು ಮಾಡಲಿ? ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಬೇಕು ಎಂದು ನಾನು ಹೇಳುತ್ತೇನೆ' ಎಂದು ಮಮತಾ ಅವರು ಬಂಗಾಳಿ ಸುದ್ದಿವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.



ತಮಗೆ ಬಿಜೆಪಿಯನ್ನು ವಿರೋಧಿಸುವ ಬಲಿಷ್ಠ ನಾಯಕಿ ಎಂಬ ಹೆಗ್ಗಳಿಕೆ ಇರುವಾಗ, 'ಇಂಡಿಯಾ' ಮೈತ್ರಿಕೂಟದ ನಾಯಕತ್ವವನ್ನು ವಹಿಸಿಕೊಳ್ಳದೆ ಇರುವುದಕ್ಕೆ ಕಾರಣ ಏನು ಎಂಬ ಪ್ರಶ್ನೆಗೆ ಮಮತಾ ಅವರು, 'ಅವಕಾಶ ದೊರೆತರೆ ಮೈತ್ರಿಕೂಟವು ಸುಗಮವಾಗಿ ಕಾರ್ಯನಿರ್ವಹಿಸುವಂತೆ ನಾನು ನೋಡಿಕೊಳ್ಳುತ್ತೇನೆ' ಎಂದಿದ್ದಾರೆ.

'ನನಗೆ ಪಶ್ಚಿಮ ಬಂಗಾಳದಿಂದ ಹೊರಗಡೆ ಹೋಗಲು ಇಷ್ಟವಿಲ್ಲ. ಆದರೆ ನಾನು ಇಲ್ಲಿಂದಲೇ ಮೈತ್ರಿಕೂಟವನ್ನು ನಡೆಸಬಲ್ಲೆ' ಎಂದಿದ್ದಾರೆ.

ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದಲ್ಲಿ 24ಕ್ಕೂ ಹೆಚ್ಚು ಪಕ್ಷಗಳು ಇವೆ. ಆದರೆ ಪಕ್ಷಗಳ ನಡುವೆ ಸಮನ್ವಯ ಇಲ್ಲ ಎಂಬ ಟೀಕೆಯು ಈ ಮೈತ್ರಿಕೂಟದ ಕುರಿತಾಗಿ ಇದೆ.

'ಇಂಡಿಯಾ' ಮೈತ್ರಿಕೂಟದ ಕಾಂಗ್ರೆಸ್ ಹಾಗೂ ಇತರ ಪಕ್ಷಗಳು ತಮ್ಮ ನಡುವಿನ ಭಿನ್ನಾಭಿಪ್ರಾಯವನ್ನು ಬದಿಗೆ ತಳ್ಳಬೇಕು, ಮಮತಾ ಬ್ಯಾನರ್ಜಿ ಅವರನ್ನು ತಮ್ಮ ನಾಯಕಿ ಎಂದು ಸ್ವೀಕರಿಸಬೇಕು ಎಂದು ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ಹೇಳಿಕೆ ನೀಡಿದ ಎರಡು ದಿನಗಳ ನಂತರ ಮಮತಾ ಈ ಮಾತುಗಳನ್ನು ಆಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಈಚೆಗೆ ನಡೆದ ಉಪ ಚುನಾವಣೆಯಲ್ಲಿ ಟಿಎಂಸಿ ಪಕ್ಷವು ಉತ್ತಮ ಸಾಧನೆ ತೋರಿದೆ.

ಟಿಎಂಸಿ ನಾಯಕಿಯ ಮಾತಿನ ಮರ್ಮ ಏನು?

• ಶೆಮಿನ್ ಜಾಯ್

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ನಾಯಕರನ್ನಾಗಿ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಅಂತಿಮಗೊಳಿಸಬೇಕು ಎಂದು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಪಟ್ಟು ಹಿಡಿದು, ಆ ಮೈತ್ರಿಕೂಟದ ವಿವಿಧ ಪಕ್ಷಗಳ ನಾಯಕರಲ್ಲಿ ಆಶ್ಚರ್ಯ ಮೂಡಿಸಿದ್ದರು ಮಮತಾ ಬ್ಯಾನರ್ಜಿ.

ಆದರೆ, ಅದಾದ 12 ತಿಂಗಳ ನಂತರದಲ್ಲಿ ಈ ಸ್ಥಾನಕ್ಕೆ ತಾವೇ ಅತ್ಯಂತ ಹೆಚ್ಚು ಸೂಕ್ತ ಎಂದು ಮಮತಾ ಪ್ರತಿಪಾದಿಸುತ್ತಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಒಳ್ಳೆಯ ಸಾಧನೆ ತೋರಿದ್ದ ಕಾಂಗ್ರೆಸ್ ಪಕ್ಷವು ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಕಳಪೆ ಪ್ರದರ್ಶನ ನೀಡಿದೆ. ಪಕ್ಷಕ್ಕೆ ಇದು ಹಿನ್ನಡೆ ಎಂದು ವ್ಯಾಖ್ಯಾನಿಸಲಾಗಿದೆ. ಇಂತಹ ಸಂದರ್ಭದಲ್ಲಿ ಮಮತಾ ಅವರು ಕಾಂಗ್ರೆಸ್ಸಿಗೆ ವಿರುದ್ಧವಾಗಿ ನಿಲ್ಲಲು ಯತ್ನಿಸುತ್ತಿದ್ದಾರೆ.

'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ಸದನ ನಾಯಕರ ಸಭೆಯಲ್ಲಿ ಭಾಗಿಯಾಗಲು ನಿರಾಕರಿಸುವ ಮೂಲಕ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಅದಾನಿ ವಿಚಾರವಾಗಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನಿರಾಕರಿಸುವ ಮೂಲಕ ಕಾಂಗ್ರೆಸ್ಸಿಗೆ ಸಂದೇಶ ರವಾನಿಸುತ್ತಿದ್ದ ಮಮತಾ ಅವರು ತಮ್ಮ ಉದ್ದೇಶವನ್ನು ಸುದ್ದಿವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ.

'ಇಂಡಿಯಾ' ಮೈತ್ರಿಕೂಟ ಮುನ್ನಡೆಸುವ ಇಚ್ಛೆಯನ್ನು ಮಮತಾ ವ್ಯಕ್ತಪಡಿಸುವ ಮೊದಲು ಟಿಎಂಸಿ ಪ್ರಮುಖರಾದ ಕಲ್ಯಾಣ್ ಬ್ಯಾನರ್ಜಿ, ಕೀರ್ತಿ ಆಜಾದ್, ಕುನಾಲ್ ಘೋಷ್ ಅವರು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವೈಫಲ್ಯ ಕಂಡಿದೆ, ಮಮತಾ ಅವರು ಹೆಚ್ಚು ಉತ್ತಮ ಸಾಧನೆ ತೋರಬಲ್ಲರು ಎಂದು ಹೇಳಿದ್ದರು.

ಕಳೆದ ವರ್ಷ ಮಮತಾ ಮಂಡಿಸಿದ್ದ ಆಗ್ರಹವು ಜೆಡಿಯು ನಾಯಕ ನಿತೀಶ್ ಕುಮಾರ್ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡಿತ್ತು ಎಂಬ ವಿಶ್ಲೇಷಣೆಗಳು ಇದ್ದವು. ಆದರೆ ಈ ಬಾರಿ ಮಮತಾ ಆಡಿರುವ ಮಾತುಗಳು ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿಸಿಕೊಂಡಿವೆ.

ಈ ಬಾರಿ ಮಮತಾ ಆಡಿರುವ ಮಾತುಗಳಿಗೆ ಕಾಂಗ್ರೆಸ್ ಮುಖಂಡ ಉದಿತ್ ರಾಜ್ ಆಕ್ಷೇಪ ದಾಖಲಿಸಿದ್ದಾರೆ. ಮಮತಾ ನೇತೃತ್ವದ ಪಕ್ಷಕ್ಕೆ ಬಂಗಾಳದ ಆಚೆಗೆ ವಿಸ್ತರಿಸಲು ಆಗಿಲ್ಲದಿರುವಾಗ, ಮಮತಾ ಅವರು ರಾಷ್ಟ್ರ ಮಟ್ಟದ ಮೈತ್ರಿಕೂಟಕ್ಕೆ ನಾಯಕತ್ವ ನೀಡಲು ಸಾಧ್ಯವೇ ಎಂದು ರಾಜ್ ಪ್ರಶ್ನಿಸಿದ್ದಾರೆ. ಎನ್‌ಸಿಪಿ (ಎಸ್‌ಪಿ) ನಾಯಕಿ ಸುಪ್ರಿಯಾ ಸುಳೆ, ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಅವರು ಎಚ್ಚರಿಕೆಯ ನಿಲುವು ತಾಳಿದ್ದು, ಮಮತಾ ಅವರು ಮೈತ್ರಿಕೂಟದ ಅವಿಭಾಜ್ಯ ವ್ಯಕ್ತಿ ಎಂದಿದ್ದಾರೆ.

ಕಾಂಗ್ರೆಸ್ಸಿನ ಮುಖಂಡರಾದ ತಾರೀಕ್ ಅನ್ವರ್ ಮತ್ತು ಟಿ.ಎಸ್. ಸಿಂಹದೇವ ಅವರು ಮೈತ್ರಿಕೂಟದಲ್ಲಿ ನಿರ್ಧಾರಗಳನ್ನು ಎಲ್ಲರೂ ಒಂದಾಗಿ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

ಸಂಸತ್ತಿನಲ್ಲಿ ಟಿಎಂಸಿ ತಾಳಿದ ನಿಲುವು, 'ಇಂಡಿಯಾ' ಮೈತ್ರಿಕೂಟವು ಸದನದಲ್ಲಿನ ಹೋರಾಟಗಳ ವಿಚಾರವಾಗಿ ರೂಪಿಸಿದ್ದ ತಂತ್ರಗಾರಿಕೆಯನ್ನು ದುರ್ಬಲಗೊಳಿಸಿತ್ತು. ಇದು ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿತ್ತು. ತಾನು ಕಾಂಗ್ರೆಸ್ ಪಕ್ಷದ ಜೊತೆ ಚುನಾವಣಾ ಮೈತ್ರಿ ಹೊಂದಿಲ್ಲದ ಕಾರಣಕ್ಕೆ ಆ ಪಕ್ಷ ಹೇಳಿದ್ದೆಲ್ಲವನ್ನೂ ತಾನು ಕೇಳಬೇಕಾಗಿ ಇಲ್ಲ ಎಂಬುದು ಟಿಎಂಸಿ ವಾದ.

ಮಮತಾ ಅವರ ಮಾತುಗಳು ಕಾಂಗ್ರೆಸ್ ಪಕ್ಷದ ಪ್ರಭಾವವನ್ನು ಕುಗ್ಗಿಸುವ ಯತ್ನ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು, ಇದು ಟಿಎಂಸಿ ಉತ್ತರಾಧಿಕಾರಿ ವಿಚಾರವಾಗಿ ನಡೆದಿರುವ ಸಂಘರ್ಷದಿಂದ ಗಮನವನ್ನು ಬೇರೆಡೆ ಸೆಳೆಯುವ ತಂತ್ರ ಎಂದೂ ಹೇಳುತ್ತಾರೆ. ಮಮತಾ ಅವರ ಸಂಬಂಧಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಬಂಗಾಳದ ಆಡಳಿತದಲ್ಲಿ ದೊಡ್ಡ ಪಾತ್ರ ಇರಬೇಕು ಎಂದು ಪಕ್ಷದಲ್ಲಿನ ಒಂದು ವರ್ಗವು ಹೇಳುತ್ತಿದೆ.

'ಉತ್ತರಾಧಿಕಾರಿ ಬಗ್ಗೆ ಪಕ್ಷ ತೀರ್ಮಾನ'

ಕೋಲ್ಕತ್ತ (ಪಿಟಿಐ): ಟಿಎಂಸಿ ಪಕ್ಷದ ಉತ್ತರಾಧಿಕಾರಿ ಯಾರು ಎಂಬ ಬಗ್ಗೆ ಪಕ್ಷದ ನಾಯಕತ್ವವು ಒಟ್ಟಾಗಿ ತೀರ್ಮಾನ ಕೈಗೊಳ್ಳಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಸುದ್ದಿವಾಹಿನಿಯೊಂದಕ್ಕೆ ಶುಕ್ರವಾರ ಸಂದರ್ಶನ ನೀಡಿರುವ ಮಮತಾ, 'ನಾನೇ ಪಕ್ಷ ಅಲ್ಲ, ಪಕ್ಷದಲ್ಲಿ ನಾವೆಲ್ಲರೂ ಇದ್ದೇವೆ. ಇದು ಸಾಮೂಹಿಕವಾದ ಒಂದು ಕುಟುಂಬ, ಇಲ್ಲಿ ತೀರ್ಮಾನಗಳನ್ನು ಒಟ್ಟಾಗಿ ಸೇರಿ ತೆಗೆದುಕೊಳ್ಳಲಾಗುತ್ತದೆ' ಎಂದು ಹೇಳಿದ್ದಾರೆ.

'ನಿಮ್ಮ ಉತ್ತರಾಧಿಕಾರಿ ಯಾರಾಗಬಹುದು' ಎಂದು ಸಂದರ್ಶನಕಾರರು ಪ್ರಶ್ನಿಸಿದಾಗ, ಮಮತಾ ಅವರು ಪ್ರತಿಕ್ರಿಯೆಯಾಗಿ 'ನಿಮ್ಮ ಉತ್ತರಾಧಿಕಾರಿ ಯಾರಿರುತ್ತಾರೆ' ಎಂದು ಪ್ರಶ್ನಿಸಿದ್ದಾರೆ.

ಟಿಎಂಸಿ ಪಕ್ಷವು ಬಹಳ ಶಿಸ್ತಿನಿಂದ ಕೂಡಿದೆ. ಪಕ್ಷದಲ್ಲಿ ಯಾವುದೇ ಒಬ್ಬ ವ್ಯಕ್ತಿ ಎಲ್ಲವನ್ನೂ ತೀರ್ಮಾನಿಸುವ ಕೆಲಸ ಮಾಡುವುದಿಲ್ಲ ಎಂದಿದ್ದಾರೆ. ಪಕ್ಷದಲ್ಲಿ ಹಳಬರು ಮತ್ತು ಹೊಸಬರು ಎಂಬ ಚರ್ಚೆ ನಡೆದಿರುವ ಬಗ್ಗೆ ಉಲ್ಲೇಖಿಸಿದಾಗ ಮಮತಾ ಅವರು, 'ಎಲ್ಲರೂ ಮುಖ್ಯರಾಗುತ್ತಾರೆ. ಇಂದಿನ ಹೊಸಬರು ನಾಳಿನ ಹಿರಿಯರಾಗಿರುತ್ತಾರೆ' ಎಂದಿದ್ದಾರೆ.

'ರಾಜಕೀಯ ಕೊನೆಗಾಲದಲ್ಲಿದ್ದೇನೆ'

ಅಭಿಮಾನಿಯ ಮಾತಿಗೆ ಸಿದ್ದರಾಮಯ್ಯ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): 'ನಾನೀಗ ರಾಜಕೀಯದ ಕೊನೆಗಾಲದಲ್ಲಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಸತ್ತೇಗಾಲದಲ್ಲಿ ಲಕ್ಷ್ಮಮ್ಮ ಸೋಸಯ್ಯನ ಸಿದ್ದಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಭಿಮಾನಿಯೊಬ್ಬರು 'ನೀವು ಮೂರನೇ ಬಾರಿ ಮುಖ್ಯಮಂತ್ರಿಯಾಗುತ್ತೀರಿ' ಎಂದು ಕೂಗಿದಾಗ ಪ್ರತಿಕ್ರಿಯಿಸಿದ ಅವರು, 'ನಾನು ರಾಜಕೀಯದಲ್ಲಿ ಕೊನೆಯ ಕಾಲದಲ್ಲಿದ್ದೇನೆ. ಜನರ ಪ್ರೀತಿ ಅಭಿಮಾನ ಗಳಿಸದಿದ್ದರೆ ರಾಜಕೀಯದಲ್ಲಿ ಉಳಿಯಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದರು.

'ಮುಖ್ಯಮಂತ್ರಿಯಾದ ಬಳಿಕ ಇಪ್ಪತ್ತು ಬಾರಿಯಾದರೂ ನಾನು ಜಿಲ್ಲೆಗೆ ಭೇಟಿ ನೀಡಿದ್ದೇನೆ. ಇಲ್ಲಿಗೆ ಬಂದಾಗಲೆಲ್ಲ ಮುಖ್ಯಮಂತ್ರಿ ಸ್ಥಾನ ಹೋಗುವ ಬದಲಿಗೆ, ಮತ್ತಷ್ಟು ಗಟ್ಟಿಯಾಯಿತು' ಎಂದು ಹೇಳಿದರು.



ಸತ್ತೇಗಾಲದಲ್ಲಿ ಲಕ್ಷ್ಮಮ್ಮ ಸೋಸಯ್ಯನ ಸಿದ್ದಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಉದ್ಘಾಟಿಸಿ ಸಿದ್ದರಾಮಯ್ಯ ಮಾತನಾಡಿದರು
– ಪ್ರಜಾವಾಣಿ ಚಿತ್ರ

'ಚಾಮರಾಜನಗರ ಜಿಲ್ಲೆಗೆ ಬಂದರೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳಬೇಕಾಗುತ್ತದೆ ಎಂಬ ಕಳಂಕವನ್ನು ಜಿಲ್ಲೆಯ ಮೇಲೆ ಹೊರಿಸಲಾಗಿತ್ತು. ಕೆಲವು ಶಾಸಕರು ಹಾಗೆ ಹೇಳುತ್ತಾ, ಮುಖ್ಯಮಂತ್ರಿಯಾದವರು ಜಿಲ್ಲೆಗೆ ಬರದಂತೆ ಮಾಡಿದ್ದರು. ಇಂತಹ ಮೌಢ್ಯವನ್ನು ನಂಬದ ನಾನು ಹಾಗೂ ಬಿ.ರಾಚಯ್ಯನವರು ಚಾಮರಾಜನಗರ ಜಿಲ್ಲೆಯನ್ನು ಇಲ್ಲಿಗೇ ಬಂದು ಉದ್ಘಾಟನೆ ಮಾಡಿದೆವು. ನಂತರ ನಾನು ಎರಡು ಬಾರಿ ಮುಖ್ಯಮಂತ್ರಿಯಾದೆ' ಎಂದು ಸ್ಮರಿಸಿದರು.

'ಈ ಭಾಗದ ಹಿರಿಯ ರಾಜಕಾರಣಿ ಬಿ.ರಾಚಯ್ಯನವರ ಸಹಕಾರದಿಂದ ನಾನು ರಾಜಕೀಯದಲ್ಲಿ ಬೆಳೆಯಲು ಸಾಧ್ಯವಾಯಿತು. ಮೊದಲು ಮೈಸೂರು ಜಿಲ್ಲೆಗೆ ಸೇರಿದ್ದ ಚಾಮರಾಜನಗರವನ್ನು ಅವರ ಕಾಲದಲ್ಲಿ ಹೊಸ ಜಿಲ್ಲೆಯಾಗಿ ರಚಿಸಲಾಯಿತು. ಆಗ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ನಾನು ಉಪ ಮುಖ್ಯಮಂತ್ರಿಯಾಗಿದ್ದೆ. ಜೆ.ಎಚ್. ಪಟೇಲರು ಹಾಗೂ ವಾಟಾಳ್ ನಾಗರಾಜ್ ಅವರು ಮಹದೇಶ್ವರ ಸ್ವಾಮಿ ಬೆಟ್ಟಕ್ಕೆ ಬಂದು ಹೊಸ ಜಿಲ್ಲೆಯನ್ನು ಘೋಷಣೆ ಮಾಡಿದ್ದರು' ಎಂದು ಹೇಳಿದರು.

ಒಪ್ಪಂದ ಸೂತ್ರ: ಚರ್ಚೆ ಬೇಡ– ಡಿಕೆಶಿ

ಬೆಂಗಳೂರು: 'ರಾಜ್ಯದಲ್ಲಿ ಅಧಿಕಾರ ಹಂಚಿಕೆ ಒಪ್ಪಂದ ವಿಚಾರವಾಗಿ ಯಾರೊಬ್ಬರು ಚರ್ಚೆ ಮಾಡಬಾರದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಒಪ್ಪಂದ ಆಗಿರುವುದು ನಿಜ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ನೀಡಿರುವ ಹೇಳಿಕೆ ಬಗ್ಗೆ ಗಮನಸೆಳೆದಾಗ ಪ್ರತಿಕ್ರಿಯಿಸಿದ ಅವರು, 'ಪಕ್ಷದ ವರಿಷ್ಠರು ಮುಖ್ಯಮಂತ್ರಿಗೆ ಮತ್ತು ನನಗೆ ಕೆಲವು ಜವಾಬ್ದಾರಿಗಳನ್ನು ವಹಿಸಿದ್ದಾರೆ. ನಾವು ನಮ್ಮ ಕೆಲಸಗಳನ್ನು ಮಾಡುತ್ತಿದ್ದೇವೆ' ಎಂದರು.

'ಈ ಒಪ್ಪಂದ ಸೂತ್ರದ ಬಗ್ಗೆ ಯಾರೂ ಮಾತನಾಡುವ ಅವಶ್ಯ ಇಲ್ಲ. ಅಂತಹ ಸಂದರ್ಭವೂ ಇಲ್ಲ. ಮುಖ್ಯಮಂತ್ರಿ ಹೇಳಿದ್ದೇ ಅಂತಿಮ ಎಂದು ಈಗಾಗಲೇ ಹೇಳಿದ್ದೇನೆ' ಎಂದರು.

ಮುನಿಯಪ್ಪ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ.ಪರಮೇಶ್ವರ, 'ನನಗಿಂತ ಹೆಚ್ಚಿನ ಮಾಹಿತಿ ಮುನಿಯಪ್ಪ ಅವರಿಗೆ ಗೊತ್ತಿರಬಹುದು' ಎಂದು ತಿಳಿಸಿದರು.

ರಾಯಚೂರು: ಕೃಷಿಮೇಳದಲ್ಲಿ ಕುತೂಹಲ ಮೂಡಿಸುತ್ತಿರುವ 'ವಿಸ್ಮಯ ಕೀಟ ಪ್ರಪಂಚ'

ಮುಂದಿನ ತಲೆಮಾರಿಗೆ ಹುಳುಗಳೇ ಆಹಾರ!

• ಬಾವಸಲಿ

ರಾಯಚೂರು: ಭವಿಷ್ಯದಲ್ಲಿ ಮುಂದಿನ ತಲೆಮಾರಿಗೆ ಆಹಾರದ ಕೊರತೆಯಾದರೆ ಯಾವೆಲ್ಲ ಕೀಟಗಳನ್ನು ಸೇವಿಸಬಹುದು? ಯಾವ ಕೀಟ ಎಷ್ಟು ಪೋಷಕಾಂಶ ಹೊಂದಿದೆ? ಕೀಟಗಳಲ್ಲಿ ಎಷ್ಟೆಲ್ಲ ವಿಧಗಳಿವೆ? ಪರೋಪಕಾರಿ ಕೀಟಗಳು ಯಾವುವು...?

ಈ ಎಲ್ಲ ಪ್ರಶ್ನೆಗಳಿಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆಯೋಜಿಸಿರುವ ಕೃಷಿ ಮೇಳದ ಕೀಟಶಾಸ್ತ್ರ ವಿಭಾಗದ ಮಳಿಗೆಯಲ್ಲಿ ನಿಮಗೆ ಉತ್ತರ ಸಿಗುತ್ತದೆ. ಮಳಿಗೆಯಲ್ಲಿನ 'ವಿಸ್ಮಯಕಾರಿ ಕೀಟ ಪ್ರಪಂಚ' ನೋಡುಗರನ್ನು ಬೆರಗುಗೊಳಿಸುತ್ತಿದೆ.

'ವಿಸ್ಮಯಕಾರಿ ಕೀಟ ಪ್ರಪಂಚ' ಪ್ರವೇಶಿಸುತ್ತಿದ್ದಂತೆಯೇ ಬೃಹತ್ ಕೃತಕ ಇರುವೆ, ಮಿಡತೆ, ಜಿರಳೆ ಸ್ವಾಗತಿಸುತ್ತವೆ. ಸ್ಟಾಲ್ ಒಳ ಹೊಕ್ಕರೆ ವಿವಿಧ ಪ್ರಭೇದದ ದುಂಬಿಗಳು, ನೊಣ, ಜೇನು ಹುಳ, ತಿಗಣೆ, ಮಿಡತೆ, ಖಡ್ಗಮೃಗ, ಜಿಗಿಹುಳು, ಸರ್ಪಛಾಯಾ ಕೀಟ, ಹಸಿರು ಜಿಗಿಹುಳು ಹಾಗೂ ಪತಂಗಗಳು ಗಮನ ಸೆಳೆಯುತ್ತವೆ.

ಕೀಟಗಳಿಂದ ಕಳೆನಾಶಕ, ಬಣ್ಣಗಳ ತಯಾರಿಕೆ, ಮಿನುಗುವ ಹುಳುಗಳ ಸರ, ಹುಳುಗಳಿಂದಲೇ ಸಾವಯವಗೊಬ್ಬರ ತಯಾರಿಕೆ ಕುರಿತು ಮಾಹಿತಿ ಒದಗಿಸಲಾಗುತ್ತಿದೆ. ಪರಾಗಸ್ಪರ್ಶಕಗಳು, ಪರಭಕ್ಷಕ ಕೀಟಗಳು, ಉಪಕಾರಿ ಕೀಟಗಳ ಮಾಹಿತಿಯ ಜೊತೆಗೆ ಹತ್ತಿ, ತೊಗರಿ ಬೆಳೆಗೆ ಕಾಡುವ ಗುಲಾಬಿ ಕಾಯಿ ಕೊರಕ, ಬಿಳಿ ನೊಣ, ಥ್ರಿಪ್ಸ್ ನುಶಿ, ಟೊಮೆಟೊ ಕಾಯಿ ಕೊರಕ, ಜಂತುಹುಳು ಹಾಗೂ ಬೆಳೆ ನಾಶ ಮಾಡುವ ಕೀಟಗಳ ಬಗ್ಗೆಯೂ ಸಂಶೋಧನಾ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ತಿಳಿವಳಿಕೆ ನೀಡುತ್ತಿದ್ದಾರೆ.





ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಶನಿವಾರ ಆರಂಭಗೊಂಡ ಕೃಷಿ ಮೇಳದ 'ವಿಸ್ಮಯ ಕೀಟ ಪ್ರಪಂಚ' ವಿಭಾಗದಲ್ಲಿ ಕಂಡು ಬಂದ ಕೀಟಗಳ ಬರ್ಗರ್ (ಎಡಚಿತ್ರ) ವಿವಿಧ ಭಕ್ಷ್ಯಗಳು

ಕೀಟ ಪ್ರಪಂಚದಲ್ಲಿ ಜೇನು ನೊಣ, ಹಿಪ್ಪು ನೇರಳೆ ಹುಳು, ಗೆದ್ದಲ ಹುಳು, ಸಿಕಾಡ ಕೀಟ, ಇರುವೆ, ಸಿಂಹ ಸೇರಿ ಮೊದಲಾದವುಗಳ ಜೀವನ ಚಕ್ರ ಪ್ರದರ್ಶಿಸಲಾಗಿದೆ. ಕೀಟ ಎಂದರೇನು, ರೋಗ ಹರಡುವ ಮತ್ತು ಹರಡದ ಕೀಟಗಳ ವಿವರಣೆ ಹಾಕಲಾಗಿದ್ದು, ಹೆಸರಿಗೆ ತಕ್ಕಂತೆ ಕೀಟಗಳ ಪ್ರಪಂಚವೇ ಇಲ್ಲಿ ಕಾಣಬಹುದಾಗಿದೆ.

'ಜೀವ ಸಂಕುಲಕ್ಕೆ ಎಲ್ಲ ಹುಳುಗಳು ಮಾರಕವಲ್ಲ. ಉಪಕಾರಿ ಕೀಟಗಳೂ ನಮ್ಮ ಮಧ್ಯೆ ಇವೆ. ಎರೆಹುಳು ಮಾದರಿಯಲ್ಲಿ ಕೀಟಗಳಿಂದಲೂ ಗೊಬ್ಬರ ತಯಾರಿಸಬಹುದಾಗಿದೆ. ಬಣ್ಣಗಳ ಉತ್ಪಾದನೆಯೂ ಸಾಧ್ಯವಿದೆ. ಒಣಗಿರುವ ಹುಳಗಳಲ್ಲಿ ಪ್ರೋಟೀನ್ ಅಂಶ ಅಧಿಕವಾಗಿರುತ್ತದೆ. ಅವುಗಳ ಸೇವನೆ ದೇಹದ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಕೀಟಶಾಸ್ತ್ರ ವಿಭಾಗದ ಶ್ರೀನಿವಾಸ ಹಾಗೂ ಶ್ರೀವಾಣಿ ತಿಳಿಸಿದರು.

ಭವಿಷ್ಯದ ಭಕ್ಷ್ಯಗಳು

ಮಳಿಗೆಯಲ್ಲಿ ವಿಷಮುಕ್ತ ಕೀಟಗಳ ಆಹಾರ ಭಕ್ಷ್ಯಗಳನ್ನು ಇಡಲಾಗಿದೆ. ಖಡ್ಗಮೃಗ ಸೋಯಾ ಮಂಚೂರಿಯನ್, ಮಿಡತೆ ಕಾಜು ಫ್ರೈ, ಕ್ರಿಕೆಟ್ ಕರ್ರಿ, ಮ್ಯಾಗ್ಗಟ್ ನೂಡಲ್ಸ್, ಸಿಲ್ಕ್ ವಾರ್ಮ್ ಸೂಪ್, ಕ್ಯಾಬೇಜ್ ಸೋಲ್ಜರ್ ಫ್ರೈ, ಕಾಕ್ರೋಚ್ ಚಿಲ್ಲಿ, ಕುರಕಲು ಪ್ಯೂಪಾ ಸ್ಟಿಕ್, ಕಪ್ಪು ಸೈನಿಕ ನೊಣದ ಮಸಾಲಾ, ರೇಷ್ಮೆ ಕೋಶದ ಸೂಪ್, ಬರ್ಗರ್, ಪನ್ನೀರ್ ಟಿಕ್ಕಾ ಸೇರಿ 20ಕ್ಕೂ ಹೆಚ್ಚು ಕೀಟ ಭಕ್ಷ್ಯಗಳು ಜನರನ್ನು ಬೆರಗುಗೊಳಿಸಿತು.

'ಚೀನಾ, ಉತ್ತರ ಕೊರಿಯಾ ಮಾತ್ರವಲ್ಲದೇ ಭಾರತದ ಒಡಿಶಾ, ಮಹಾರಾಷ್ಟ್ರ ಹಾಗೂ ಆದಿವಾಸಿಗಳು ವಾಸಿಸುವ ಪ್ರದೇಶಗಳಲ್ಲಿ ಕೀಟಗಳ ಭಕ್ಷ್ಯ ಸೇವನೆ ಇದೆ. ಭವಿಷ್ಯದಲ್ಲಿ ಆಹಾರ ಉತ್ಪಾದನೆ ಕಡಿಮೆಯಾದರೆ ಕೀಟಗಳ ಭಕ್ಷ್ಯ ಮಹತ್ವ ಪಡೆದುಕೊಳ್ಳಲಿದೆ' ಎಂದು ಕೃಷಿ ವಿಶ್ವವಿದ್ಯಾಲಯದ ಕೀಟ ಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಅಶ್ವಿನಿ ತಿಳಿಸಿದರು.

ಭಾನುವಾರ, ಡಿಸೆಂಬರ್ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 339 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಯಾರೋ ಹೇಳಿದರೆಂದು ಅಧ್ಯಕ್ಷರನ್ನು ಇಳಿಸಲಾಗದು: ರಾಧಾಮೋಹನ್ ಅಗರ್‌ವಾಲ್ ಸ್ಪಷ್ಟೋಕ್ತಿ

ವಿಜಯೇಂದ್ರ ಬದಲಾವಣೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯ ರಾಜ್ಯ ನಾಯಕತ್ವದ ಬದಲಾವಣೆಯ ಪ್ರಶ್ನೆ ಈಗ ಇಲ್ಲ’ ಎಂದು ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಪ್ರತಿಪಾದಿಸಿದ್ದಾರೆ. ಈ ಬೆಳವಣಿಗೆಯಿಂದಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣಕ್ಕೆ ಹಿನ್ನಡೆಯಾಗಿದ್ದು, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ತುಸು ಮುನ್ನಡೆಯಾದಂತಿದೆ.


ಪಕ್ಷದ ಬಣ ಜಗಳ ಬೀದಿಗೆ ಬಂದು ತಿಂಗಳು ಕಳೆದ ಬಳಿಕ, ರಾಜ್ಯಕ್ಕೆ ದಿಢೀರ್ ಭೇಟಿ ನೀಡಿದ ಅಗರ್‌ವಾಲ್ ಪಕ್ಷದ ಪ್ರಮುಖರ ಸಮಿತಿ ಸಭೆ ನಡೆಸಿದರು.

ಕೇವಲ ಒಂದೂವರೆ ಗಂಟೆ ನಡೆದ ಸಭೆಯ ತರುವಾಯ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯ ಬದಲಾವಣೆಯ ಅಧಿಕಾರ ಇರುವುದು ಪಕ್ಷದ ಸಾಮಾನ್ಯ ಕಾರ್ಯಕರ್ತ ಮತ್ತು ವರಿಷ್ಠರಿಗೆ ಮಾತ್ರ. ಯಾರೋ ಮಧ್ಯದಲ್ಲಿ ಇರುವವರು ಹೇಳಿದರೆಂದು ಅಧ್ಯಕ್ಷರನ್ನು ಇಳಿಸಲಾಗದು’ ಎಂದರು.

ಬದಲಾವಣೆಯೇ ಇಲ್ಲ ಎಂದು ಅಗರ್‌ವಾಲ್ ಹೇಳಿದರೂ, ವರಿಷ್ಠರಿಗೆ ಆ ಅಧಿಕಾರ ಇದೆ ಎಂಬ ಮಾತನ್ನು ಸೇರಿಸಿದರು.

4ನೇ ಪುಟ ನೋಡಿ

‘ಈಗ ವಿಜಯೇಂದ್ರ ಸೂಕ್ತ’



ರಾಧಾಮೋಹನ್

‘ಅಧ್ಯಕ್ಷ ಹುದ್ದೆಗೆ ಆಯ್ಕೆಯು ಮಹತ್ವದ ನಿರ್ಧಾರ. ಯಾವ ಕಾಲಕ್ಕೆ, ಯಾರ ನಾಯಕತ್ವ ಅಗತ್ಯವಿದೆ ಎಂದು ವರಿಷ್ಠರಿಗೆ ಅನಿಸುತ್ತದೆಯೋ ಅಂತಹ ಪ್ರಯೋಗವನ್ನು ಅವರು ಮಾಡುತ್ತಾರೆ. ಈಗ ಕರ್ನಾಟಕಕ್ಕೆ ವಿಜಯೇಂದ್ರ ಅವರ ನಾಯಕತ್ವ ಸೂಕ್ತ ಎಂದು ಅವರನ್ನು ಆಯ್ಕೆ ಮಾಡಲಾಗಿದೆ’ ಎಂದು ರಾಧಾಮೋಹನ್ ಅಗರ್‌ವಾಲ್ ಹೇಳಿದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಇಲ್ಲಿ ಆ ಬಣ, ಈ ಬಣ ಎಂಬುದು ಇಲ್ಲ. ಪಕ್ಷದ ವಿರುದ್ಧ ಮಾತನಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಏನೇ ಭಿನ್ನಾಭಿಪ್ರಾಯಗಳು ಇದ್ದರೂ, ಆಂತರಿಕವಾಗಿಯೇ ಅದನ್ನು ಬಗೆಹರಿಸಿಕೊಳ್ಳಬೇಕು. ಯಾರೂ ಬಹಿರಂಗವಾಗಿ ಮಾತನಾಡಬಾರದು ಎಂಬುದನ್ನು ತಿಳಿಸಲಾಗಿದೆ. ನಾನೂ ಸೇರಿದಂತೆ ಪಕ್ಷದ ಎಲ್ಲರೂ ಇದನ್ನು ಪಾಲಿಸಬೇಕು’ ಎಂದರು.


‘ಯತ್ನಾಳಗೆ ನೋಟಿಸ್: ಉತ್ತರದ ನಂತರ ಕ್ರಮ’

‘ಬಸನಗೌಡ ಯತ್ನಾಳ ಅವರ ನಡೆಯನ್ನು ಪ್ರಶ್ನಿಸಿ ನೋಟಿಸ್ ನೀಡಲಾಗಿದೆ. ಅವರಿಂದ ಈವರೆಗೆ ನನಗೆ ಉತ್ತರ ಬಂದಿಲ್ಲ. ಉತ್ತರ ಬಂದ ನಂತರ ಮುಂದಿನ ಕ್ರಮದ ಬಗ್ಗೆ ಚರ್ಚಿಸಲಾಗುತ್ತದೆ’ ಎಂದು ರಾಧಾಮೋಹನ್ ತಿಳಿಸಿದರು.

‘ರಾಜ್ಯದಲ್ಲಿ ಏನಾಗುತ್ತಿದೆ ಎಂಬುದನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಎಲ್ಲವನ್ನೂ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಇಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ವರಿಷ್ಠರಿಗೆ ತಲುಪಿಸಲಾಗುವುದು. ಸೂಕ್ತ ಕ್ರಮವನ್ನು ಅವರು ತೆಗೆದುಕೊಳ್ಳಲಿದ್ದಾರೆ’ ಎಂದರು.



‘ಸೋಮಶೇಖರ್, ಹೆಬ್ಬಾರ್ ಉಚ್ಚಾಟನೆಗೆ ಶಿಫಾರಸು’



ವಿಜಯೇಂದ್ರ

‘ಕಾಂಗ್ರೆಸ್ ಜತೆಗೆ ಗುರುತಿಸಿಕೊಂಡು, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಶಾಸಕರಾದ ಎಸ್‌.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರನ್ನು ಉಚ್ಚಾಟನೆ ಮಾಡಬೇಕು ಎಂದು ಪ್ರಮುಖರ ಸಭೆ ಶಿಫಾರಸು ಮಾಡಿದೆ’ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

‘ಸಂಡೂರು ಹಾಗೂ ಶಿಗ್ಗಾವಿ ಕ್ಷೇತ್ರಗಳಲ್ಲಾದ ಸೋಲಿನ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ನಮಗೆ ಯಾಕೆ ಹಿನ್ನಡೆ ಆಯಿತು ಎಂಬ ಬಗ್ಗೆ ತಿಳಿದುಕೊಳ್ಳಲು ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಹಾಗೂ ಪಕ್ಷದ ಉಪಾಧ್ಯಕ್ಷ ಎನ್. ಮಹೇಶ್ ನೇತೃತ್ವದಲ್ಲಿ ಸತ್ಯಶೋಧನಾ ತಂಡವನ್ನು ರಚಿಸಲು ತೀರ್ಮಾನಿಸಲಾಗಿದೆ. ಈ ತಂಡವು ಎರಡೂ ಕ್ಷೇತ್ರಕ್ಕೆ ತೆರಳಿ ಮಾಹಿತಿ ಪಡೆಯಲಿದೆ’ ಎಂದು ಹೇಳಿದರು.

4ನೇ ಪುಟ ನೋಡಿ



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹಾಲಿನ ಖರೀದಿ ದರ ಏರಿಕೆಗೆ ಕೆಎಂಎಫ್ ಮತ್ತೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಲಿನ ಖರೀದಿ ದರವನ್ನು ಲೀಟರ್‌ಗೆ ₹5ರಂತೆ ಹೆಚ್ಚಿಸಬೇಕು ಎಂಬ ರೈತರ ಬೇಡಿಕೆಯನ್ನು ಮುಖ್ಯಮಂತ್ರಿ ಎದುರು ಶೀಘ್ರದಲ್ಲೇ ಮಂಡಿಸಲಾಗುವುದು’ ಎಂದು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಭೀಮಾನಾಯ್ಕ್ ಅವರು ತಿಳಿಸಿದರು.



‘ಹಿಂದೆ ರಾಮನಗರ ಜಿಲ್ಲೆ ಮಾಗಡಿಯಲ್ಲಿ ಹಾಲಿನ ಖರೀದಿ ದರ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರೈತರು ಮನವಿ ಮಾಡಿದ್ದರು. ಆಗ ಸಿ.ಎಂ, ಎಲ್ಲ ಹಾಲು ಮಹಾ ಮಂಡಳ ಒಕ್ಕೂಟಗಳ ಅಧ್ಯಕ್ಷರ ಸಭೆ ಕರೆದು, ಚರ್ಚಿಸಿ ಈ ಬಗ್ಗೆ ತೀರ್ಮಾನಿಸುವುದಾಗಿ ಭರವಸೆ ನೀಡಿದ್ದರು’ ಎಂದು ಭೀಮಾನಾಯ್ಕ್ ಹೇಳಿದರು.

‘ಸದ್ಯದಲ್ಲಿ ಖರೀದಿ ದರ ಏರಿಕೆ ಬಗ್ಗೆ ಚರ್ಚೆ ಆಗಿಲ್ಲ. ಆರು ತಿಂಗಳ ಹಿಂದೆ ಈ ಬಗ್ಗೆ ರೈತರು ಬೇಡಿಕೆ ಸಲ್ಲಿಸಿದ್ದರು. ಅದೇ ಪ್ರಸ್ತಾವವನ್ನು ಜನವರಿಯಲ್ಲಿ ಸಿ.ಎಂ ಎದುರು ಮಂಡಿಸಲಾಗುತ್ತದೆ’ ಎಂದು ಅವರು ಹೇಳಿದರು.

‘ಬಾಡೂಟ ಯಾಕಿಲ್ಲ ಸ್ವಾಮಿ?’

ಪ್ರಜಾವಾಣಿ ವಾರ್ತೆ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಮತ್ತು ವಾಣಿಜ್ಯ ಮಳಿಗೆಗಳನ್ನು ಕಾಯ್ದಿರಿಸಿದವರಿಗೆ ‘ಮಾಂಸಾಹಾರ, ಮದ್ಯ ಮತ್ತು ತಂಬಾಕು ಮಾರಾಟವನ್ನು ನಿಷೇಧಿಸಲಾಗಿದೆ’ ಎಂದು ಪರಿಷತ್ತು ನಿಯಮ ವಿಧಿಸಿದೆ. ಇದರ ಬೆನ್ನಲ್ಲೇ, ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆ ‘ಬಾಡೂಟ’ವನ್ನೂ ಹಾಕಿಸಬೇಕು ಎಂಬ ಆಗ್ರಹವು ಸಾಮಾಜಿಕ ಮಾಧ್ಯಮಗಳಲ್ಲಿ ಜೋರಾಗಿ ಕೇಳಿಬಂದಿದೆ. ಈ ಕುರಿತು ಪರ–ವಿರೋಧ ಚರ್ಚೆಗಳು ನಡೆದಿದ್ದು, ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರ ವಿರುದ್ಧ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಪೋಸ್ಟರ್

‘ಸಮ್ಮೇಳನ ಸಸ್ಯಾಹಾರಿಗಳಿಗೆ ಮಾತ್ರವೇ, ಬಾಡೂಟ ಯಾಕಿಲ್ಲ ಸ್ವಾಮಿ?’ ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ. ಇದು ‘ಮಡಿ ಸಾಹಿತ್ಯ ಸಮ್ಮೇಳನ’ ಎಂದು ಕೆಲವರು ಕುಟುಕಿದ್ದಾರೆ.

4ನೇ ಪುಟ ನೋಡಿ



ಗೇಮಿಂಗ್ ಆ್ಯಪ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಕೋಟ್ಯಂತರ ರೂಪಾಯಿ ವಂಚಿಸಿರುವ ಆರೋಪದಡಿ ಆನ್‌ಲೈನ್ ಪೋಕರ್ ಗೇಮಿಂಗ್ ಆ್ಯಪ್‌ವೊಂದರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ವ್ಯಕ್ತಿಯೊಬ್ಬರು ನೀಡಿರುವ ದೂರಿನನ್ವಯ ಕೇಂದ್ರ ವಿಭಾಗದ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

‘ಆನ್‌ಲೈನ್ ಪೋಕರ್ ಗೇಮಿಂಗ್ ಆ್ಯಪ್ ನಲ್ಲಿ ಸಣ್ಣ ಪ್ರಮಾಣದ ಹಣದಲ್ಲಿ ಆಟವಾಡಿದಾಗ ಗೆಲ್ಲಲು ಅನುವು ಮಾಡಿಕೊಡಲಾಗುತ್ತಿದೆ. ಆದರೆ ದೊಡ್ಡ ಮೊತ್ತವನ್ನು ಹೂಡಿಕೆ ಮಾಡಿದಾಗ ಸೋಲಿಸಲಾಗುತ್ತಿದೆ. ಇದರಿಂದ ಅನುಮಾನಗೊಂಡು ನಾವು ಆಟವಾಡಿದ ಟೇಬಲ್‌ನ ಮಾಹಿತಿ ಕೇಳಿದರೆ ನೀಡುವುದಿಲ್ಲ. ಆ್ಯಪ್‌ನಲ್ಲಿ ಸಾಕಷ್ಟು ಲೋಪಗಳಿದ್ದು, ಹೂಡಿಕೆ ಮಾಡುವ ಹಣಕ್ಕೆ ಯಾವುದೇ ಭದ್ರತೆಯಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ₹3 ಕೋಟಿಗೂ ಅಧಿಕ ಹಣ ವಂಚಿಸಲಾಗಿದೆ. ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ – ಪೂರ್ವ) ರವರ ಕಛೇರಿ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು – 02

ಸಂ.ಕಾಅ(ಕ್ಯುಎ/ಕ್ಯುಸಿ)/ಪೂರ್ವ/ಟೆಂಡರ್/61/24–25 ದಿನಾಂಕ : 07–12–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ಕ್ಯುಎ/ಕ್ಯುಸಿ – ಪೂರ್ವ ಇವರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗವು ಕೆಪಿಪಿ ಪೋರ್ಟಲ್ ಮೂಲಕ ಕೆಳಕಂಡ ಕೆಲಸಕ್ಕಾಗಿ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆಯ ಸಮಾಲೋಚನಾ ಸೇವೆಗಳಿಗಾಗಿ** (ಪಿಎಂಸಿ) ಇದೇ ರೀತಿಯ ಕಾಮಗಾರಿಯನ್ನು ಮಾಡಿರುವ ಆಸಕ್ತಿಯುಳ್ಳ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಕೋರಿಕೆಯನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಯ ಹೆಸರು
1	ವಾರ್ಡ್ ಸಂ.61, ಎಸ್‌ಕೆ ಗಾರ್ಡನ್‌ನಲ್ಲಿನ ಗೋವಾ ಗಾರ್ಡನ್‌ನ 6ನೇ, 7ನೇ ಮತ್ತು 8ನೇ ಅಡ್ಡರಸ್ತೆಗಳು ಮತ್ತು ಮೋದಿ ರಸ್ತೆಯ 10ನೇ, 11ನೇ ಮತ್ತು 12ನೇ ಅಡ್ಡರಸ್ತೆಗಳ ಗಟಾರಗಳು ಮತ್ತು ರಸ್ತೆಗಳ ಅಭಿವೃದ್ಧಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ವೆಚ್ಚ** : ರೂ.200.00 ಲಕ್ಷಗಳು. **ಇಎಂಡಿ ಮೊತ್ತ** : ರೂ.5,000/–
2	ವಾರ್ಡ್ ಸಂ.48 ಮುನೇಶ್ವರ ನಗರದಲ್ಲಿನ ಲಬಾಬಿನ್ ಮಸೀದಿ, ಮುನಿಭೈರಪ್ಪ ಬ್ಲಾಕ್ ಮತ್ತು ಸುತ್ತಲಿನ ಪ್ರದೇಶದಲ್ಲಿ ಗಟಾರಗಳು ಮತ್ತು ರಸ್ತೆಗಳ ಅಭಿವೃದ್ಧಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ವೆಚ್ಚ** : ರೂ.200.00 ಲಕ್ಷಗಳು. **ಇಎಂಡಿ ಮೊತ್ತ** : ರೂ.5,000/–
3	ವಾರ್ಡ್ ಸಂ.69 (ಹಳೆಯ ವಾರ್ಡ್ ಸಂ.32) ಕಾವಲ್‌ಭೈರಸಂದ್ರದಲ್ಲಿನ ಶಾಂಪುರ ಗ್ರಾಮ (ಬ್ಲಾಕ್ ಸಂ.19) ದಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ವೆಚ್ಚ** : ರೂ.200.00 ಲಕ್ಷಗಳು. **ಇಎಂಡಿ ಮೊತ್ತ** : ರೂ.5,000/–
4	ವಾರ್ಡ್ ಸಂ.59 ಮಾರುತಿಸೇವಾನಗರದಲ್ಲಿನ ದೋಭಿ ಘಾಟ್ ಮತ್ತು ಗ್ಯಾಂಗ್‌ಮೆನ್ ಕ್ವಾರ್ಟರ್ಸ್‌ನಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಒದಗಿಸುವುದಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣವನ್ನು ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. **ಯೋಜನೆಯ ವೆಚ್ಚ** : ರೂ.300.00 ಲಕ್ಷಗಳು. **ಇಎಂಡಿ ಮೊತ್ತ** : ರೂ.6,000/–

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ಗುತ್ತಿಗೆದಾರರಿಗೆ ಲಾಗ್‌ಇನ್ ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದು. (2) ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದಾದ ದಿನಾಂಕ : **10–12–2024 ರಿಂದ** (3) ಬಿಡ್–ಪೂರ್ವ ಸಭೆಯ ದಿನಾಂಕ : **13–12–2024 ರಂದು ಬೆಳಿಗ್ಗೆ 11.30 ಗಂಟೆಗೆ.** ಸ್ಥಳ : ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ) ರವರ ಕಛೇರಿ, ಕೊ.ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ ನರಸಿಂಹರಾಜ ಚೌಕ, ಬೆಂಗಳೂರು – 560002 (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **20–12–2024 ರಂದು ಸಂಜೆ 4:00 ಗಂಟೆಯವರೆಗೆ** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **21–12–2024 ರಂದು ಸಂಜೆ 4:30 ಗಂಟೆಗೆ** (6) ಟೆಂಡರ್‌ನ ಮಾನ್ಯತೆ : ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದಿಂದ 90 ದಿನಗಳು

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯುಎ/ಕ್ಯುಸಿ–ಪೂರ್ವ)

ಪಾರ್ಸೆಲ್‌ಗಳ ಮೂಲಕ ಮಾದಕ ವಸ್ತು ಪೂರೈಕೆ: ನಗರದ ಹಲವೆಡೆ ತಪಾಸಣೆ

ಕೊರಿಯರ್ ಏಜೆನ್ಸಿ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಸೆಲ್‌ಗಳ ಮೂಲಕ ಮಾದಕ ವಸ್ತುಗಳ ಪೂರೈಕೆ ಹಾಗೂ ಹೊಸ ವರ್ಷಾಚರಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೊರಿಯರ್ ಏಜೆನ್ಸಿಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ತಪಾಸಣೆ ಮಾಡಿದರು.

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಶ್ವಾನದಳದೊಂದಿಗೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ವಿವಿಧ ಕೊರಿಯರ್ ಏಜೆನ್ಸಿಗಳಲ್ಲಿ ಪಾರ್ಸೆಲ್‌ಗಳ ತಪಾಸಣೆ ನಡೆಸಿದರು.

ಚಾಮರಾಜಪೇಟೆ, ಕಲಾಸಿ ಪಾಳ್ಯ, ಮೈಸೂರು ರಸ್ತೆ, ಸಂಪಂಗಿರಾಮ ನಗರದಲ್ಲಿರುವ ಬ್ಲೂಡಾರ್ಟ್, ಡಿಎಚ್‌ಎಲ್, ಪ್ರೊಫೆಷನಲ್, ಡಿಟಿಡಿಸಿ, ಜಿ.ಎಂ.ಸಿ, ನ್ಯಾಷನಲ್ ಟ್ರಾವಲ್ಸ್ ಕೊರಿಯರ್ ಏಜೆನ್ಸಿಗಳ ಮೇಲೆ ದಾಳಿ ನಡೆಸಿ, ಪಾರ್ಸೆಲ್‌ಗಳ ತಪಾಸಣೆ ನಡೆಸಲಾಯಿತು. ಈ ವೇಳೆ ಯಾವುದೇ ಮಾದಕ ವಸ್ತುಗಳು ಪತ್ತೆಯಾಗಿಲ್ಲ. ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಸೇರಿದಂತೆ ಐದು ಸಿಬ್ಬಂದಿ ಪಾಲ್ಗೊಂಡಿದ್ದರು.

‘ಹೊಸ ವರ್ಷಾಚರಣೆ ಸಮೀಪಿಸುತ್ತಿರುವ ಕಾರಣ ಅಂಚೆ, ಕೊರಿಯರ್ ಮೂಲಕ ಡ್ರಗ್ಸ್ ಸರಬರಾಜು ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ.



ನಗರದ ಕೊರಿಯರ್ ಏಜೆನ್ಸಿಯಲ್ಲಿ ಸಿಸಿಬಿ ಪೊಲೀಸರು ಶ್ವಾನದಳದೊಂದಿಗೆ ಪಾರ್ಸೆಲ್‌ಗಳ ತಪಾಸಣೆ ನಡೆಸಿದರು

ತಪ್ಪು ವಿಳಾಸ ಕೊಟ್ಟು ಕೊರಿಯರ್‌ಗಳಲ್ಲಿ ಸರಬರಾಜು ಮಾಡುತ್ತಿದ್ದಾರೆ. ಹಾಗಾಗಿ ನಗರದ ಐದು ಕಡೆಗಳಲ್ಲಿ ಕೊರಿಯರ್ ಕಚೇರಿ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚಾಮರಾಜಪೇಟೆಯಲ್ಲಿರುವ ವಿದೇಶಿ ಅಂಚೆ ಕಚೇರಿ ತಲುಪಿದ್ದ ಅನೇಕ ಪಾರ್ಸೆಲ್‌ಗಳನ್ನು ಕೆಲ ವರ್ಷಗಳಿಂದ ಯಾರೂ ಸ್ವೀಕರಿಸಿರಲಿಲ್ಲ. ಹಾಗಾಗಿ ಕಳೆದ ಅಕ್ಟೋಬರ್‌ನಲ್ಲಿ ಶ್ವಾನದಳದೊಂದಿಗೆ ಸಿಸಿಬಿ ಪೊಲೀಸರು ತೆರಳಿ ತಪಾಸಣೆ ನಡೆಸಿದ್ದ ವೇಳೆ 606 ಪಾರ್ಸೆಲ್‌ಗಳಲ್ಲಿ ಎಂಡಿಎಂಎ, ಕೊಕೇನ್, ಬ್ರೌನ್ ಶುಗರ್, ಹೈಡ್ರೋಗಾಂಜಾ, ಚರಸ್, ಗಾಂಜಾ ಎಣ್ಣೆ, ಎಂಎಲ್ ನಿಕೋಟಿನ್ ಸೇರಿದಂತೆ ವಿವಿಧ ಮಾದರಿಯ ಮಾದಕ ವಸ್ತುಗಳು ಪತ್ತೆಯಾಗಿದ್ದವು.

ಇಂಗ್ಲೆಂಡ್, ಬ್ಯಾಂಕಾಕ್, ಥಾಯ್ಲೆಂಡ್, ನೆದರ್‌ಲೆಂಡ್ ಸೇರಿದಂತೆ ವಿವಿಧ ದೇಶಗಳಿಂದ ಮಾದಕ ಪದಾರ್ಥಗಳು ಪಾರ್ಸೆಲ್ ಬಂದಿರುವುದು ಪೊಲೀಸರ ತನಿಖೆಯಲ್ಲಿ ತಿಳಿದು ಬಂದಿತ್ತು.

1.5 ಟನ್ ಗೋಮಾಂಸ ಜಪ್ತಿ

ಬೆಂಗಳೂರು : ನಗರಕ್ಕೆ ಅಕ್ರಮವಾಗಿ ಗೋಮಾಂಸ ಸಾಗಾಟ ಮಾಡುತ್ತಿದ್ದ ಆರೋಪ ಸಂಬಂಧ ಅಮೃತಹಳ್ಳಿ ಹಾಗೂ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಒಟ್ಟಾರೆ 1.5 ಟನ್ ಗೋಮಾಂಸವನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

ಚಿಕ್ಕಬಳ್ಳಾಪುರದ ಗೌರಿಬಿದನೂರಿನ ಅಲ್ಲಿಪುರದ ಕಸಾಯಿ ಖಾನೆಯಿಂದ ಗೋವಿಂದಪುರ, ಕೆ.ಜಿ. ಹಳ್ಳಿ ಕಡೆಗೆ ಗೋಮಾಂಸ ಸಾಗಿಸಲಾಗುತ್ತಿತ್ತು. ಖಚಿತ ಮಾಹಿತಿ ಆಧರಿಸಿ ಹೆಬ್ಬಾಳ ಮೇಲ್ಸೇತುವೆ ಸಮೀಪದಲ್ಲಿ ಅಮೃತಹಳ್ಳಿ ಪೊಲೀಸರು ವಾಹನ ಅಡ್ಡಗಟ್ಟಿ ಪರಿಶೀಲಿಸಿದಾಗ, 900 ಕೆ.ಜಿ ಗೋಮಾಂಸ ಪತ್ತೆಯಾಗಿದೆ.

ಚಾಲಕ ತನ್ವೀರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದ್ದು, ಅಮೃತಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಟ್ಟು ನಿಂತ ಕಾರಿನಲ್ಲಿ 500 ಕೆ.ಜಿ. ಮಾಂಸ: ಮತ್ತೊಂದು ಪ್ರಕರಣದಲ್ಲಿ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ತರಬನಹಳ್ಳಿ ಬಳಿ ಕೆಟ್ಟು ನಿಂತಿದ್ದ ಕಾರಿನಲ್ಲಿ ಸುಮಾರು 500 ಕೆ.ಜಿ.ಯಷ್ಟು ಗೋಮಾಂಸ ಪತ್ತೆಯಾಗಿದೆ. ಆದರೆ, ಈ ಕಾರು ಯಾರಿಗೆ ಸೇರಿರುವುದು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ ಮೇಲೆ ಹಲ್ಲೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪಾರ್ಟ್‌ಮೆಂಟ್ ಮಾಲೀಕನ ಸಹೋದರ ತನ್ನ ಮೇಲೆ ಹಲ್ಲೆ ನಡೆಸಿ, ಅಸಭ್ಯವಾಗಿ ವರ್ತಿಸಿದ್ದಾನೆ’ ಎಂದು 33 ವರ್ಷದ ಯುವತಿ ಆರೋಪಿಸಿದ್ದಾರೆ .

ಸಂಗೀತಾ ರಾಯ್ ಚೌಧರಿ ಅವರ ದೂರಿನ ಆಧಾರದ ಮೇಲೆ ಸಂಜಯ್ ನಗರ ಪೊಲೀಸರು ಮಂಜುನಾಥ್ ಗೌಡ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕ್ರಿಮಿನಲ್ ಹಿನ್ನೆಲೆಹೊಂದಿರುವ ಮಂಜುನಾಥ್ ಗೌಡನನ್ನು ಈ ಹಿಂದೆಯೂ ಬಂಧಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

‘ಡಿ.3ರ ರಾತ್ರಿ ಪಾರ್ಸೆಲ್ ತೆಗೆದುಕೊಳ್ಳಲು ಹೋದ ವೇಳೆ ಅಪಾರ್ಟ್‌ಮೆಂಟ್‌ನ ಮುಖ್ಯ ಗೇಟ್ ಬಳಿ ನಿಂತಿದ್ದ ಮಂಜುನಾಥ್ ಗೌಡ, ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ. ಏಕಾಏಕಿ ನನ್ನ ಕಪಾಳಕ್ಕೆ ಬಾರಿಸಿದ. ಆತನಿಂದ ಬಿಡಿಸಿಕೊಳ್ಳಲು ಯತ್ನಿಸಿದಾಗ ನನ್ನ ಕೈ ಬೆರಳು ಕಚ್ಚಿದ್ದಾನೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘ಆತನ ಮನೆಗೆ ನನ್ನನ್ನು ಎಳೆದುಕೊಂಡು ಹೋಗಲು ಪ್ರಯತ್ನಿಸಿದಾಗ ಕಿರುಚಾಡಿ ತಪ್ಪಿಸಿಕೊಂಡು ಫ್ಲ್ಯಾಟ್ ಕಡೆ ಓಡಿದ ನನ್ನನ್ನು ಹಿಂಬಾಲಿಸಿಕೊಂಡು ಬಂದು ಥಳಿಸಿದ. ಆತ ನನ್ನೊಂದಿಗೆ ಹಲವು ಬಾರಿ ಅಸಭ್ಯವಾಗಿ ವರ್ತಿಸಿದ್ದಾನೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಯುವಕ ಆತ್ಮಹತ್ಯೆ

ತುಮಕೂರು: ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಲು ಆಕೆಯ ಪೋಷಕರು ಒಪ್ಪಲಿಲ್ಲ ಎಂಬ ಕಾರಣಕ್ಕೆ ಮಂಜುನಾಥ್ (32) ಎಂಬ ಯುವಕ ಪ್ರೇಯಸಿ ಮನೆಯ ಮುಂದೆ ಶುಕ್ರವಾರ ತಡರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 25-MYS 2024-25 ದಿನಾಂಕ: 27.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
2 ಸಿಲಿಂಡ್ರಿಕಲ್ ಆಕಾರವುಳ್ಳ ಪರ್ಫೋರೇಟ್ ಮಾಡಿದ ಗೋಡೆಯ ಕಸದ ಬುಟ್ಟಿಗಳು.	ರೂ. 01.10 ಕೋಟಿ

Gem ಬಿಡ್ ಸಂ.: GEM/2024/B/5652724

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.12.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.GeM.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಮೈಸೂರು

PUB/607/AAF/PRB/SWR/2024-25

South Western Railway - SWR | SWRRLY | SWRRLY

ಕಂಪನಿಗೆ ₹15 ಲಕ್ಷ ವಂಚನೆ: ಮತ್ತೊಬ್ಬ ನಾಪತ್ತೆ

ಹರಿಯಾಣದಲ್ಲಿ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಶ್ ಫ್ರೀ ಪೇಮೆಂಟ್ ಇಂಡಿಯಾ ಪ್ರೈ. ಲಿ. ಕಂಪನಿಗೆ ₹15.58 ಲಕ್ಷ ವಂಚಿಸಿದ್ದ ಆರೋಪಿಯನ್ನು ನಗರದ ಆಗ್ನೇಯ ವಿಭಾಗದ ಸಿಇಎನ್ ಪೊಲೀಸರು ಬಂಧಿಸಿದ್ದಾರೆ.



ನಿತೀಶ್ ಯಾದವ್

ರಾಜಸ್ಥಾನದ ನಿತೀಶ್ ಯಾದವ್ (26) ಅವರನ್ನು ಹರಿಯಾಣದ ಗುರುಗ್ರಾಮದಲ್ಲಿ ಬಂಧಿಸಿ, ಕೆಲ ದಾಖಲೆಗಳು ಹಾಗೂ ಹಣವನ್ನು ಜಪ್ತಿ ಮಾಡಲಾಗಿದೆ. ಮತ್ತೊಬ್ಬ ಆರೋಪಿ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಯಾಷ್ ಫ್ರೀ ಪೇಮೆಂಟ್ ಇಂಡಿಯಾ ಕಂಪನಿಯು ವ್ಯಾಪಾರಿ ಮತ್ತು ಗ್ರಾಹಕರ ನಡುವೆ ‘ಪೇಮೆಂಟ್ ಗೇಟ್ ವೇ’ ವೇದಿಕೆ ಸೃಷ್ಟಿಸಿ ಸೇವೆ ಸಲ್ಲಿಸುತ್ತಿದೆ. ಈ ಕಂಪನಿ ಜೊತೆಗೆ ಆರೋಪಿಗಳು ‘ಸಿವೈಇಎನ್" ಎಂಬ ಕಂಪನಿ ಹೆಸರನ್ನು ನೋಂದಣಿ ಮಾಡಿಸಿದ್ದರು. ಐಐಟಿ, ಜೆಇಇ ಮತ್ತು ನೀಟ್‌ಗೆ ಆನ್‌ಲೈನ್ ತರಗತಿ ಮತ್ತು ಪಠ್ಯಪುಸ್ತಕ ಒದಗಿಸುವುದಾಗಿ ಹೇಳಿಕೊಂಡಿದ್ದರು ಎಂದು ತಿಳಿಸಿದ್ದಾರೆ.

ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಕೋಚಿಂಗ್ ಬಗ್ಗೆ ಜಾಹೀರಾತು ನೀಡಿದ್ದರು. ಮತ್ತೆ ವಿದ್ಯಾರ್ಥಿಗಳ ಹೆಸರಿನಲ್ಲಿ ಸಿವೈಇಎನ್‌ನಲ್ಲಿ ನೋಂದಣಿ ಮಾಡಿ ಆನ್‌ಲೈನ್‌ನಲ್ಲಿ ₹2 ಲಕ್ಷ ಶುಲ್ಕ ತುಂಬಿದ್ದರು. ಹಣ ಪಡೆದ ಕ್ಯಾಶ್ ಫ್ರೀ ಪೇಮೆಂಟ್ ಇಂಡಿಯಾ ಕಂಪನಿಯು ತನಗೆ ಬಂದ ಹಣವನ್ನು ಆರೋಪಿಗಳ ಕಂಪನಿ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುತ್ತಿತ್ತು ಎಂದು ತಿಳಿಸಿದರು.

ಐಐಟಿ, ಜೆಇಇ ಮತ್ತು ನೀಟ್ ಸಂಬಂಧ ಯಾವುದೇ ಆನ್‌ಲೈನ್ ತರಗತಿ ನಡೆಸುತ್ತಿಲ್ಲ. ನಮಗೆ ಪಠ್ಯಪುಸ್ತಕ ಬಂದಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸುತ್ತಿದ್ದರು. ಆರ್‌ಬಿಐ ಮಾರ್ಗಸೂಚಿಯಂತೆ ಕ್ಯಾಶ್ ಫ್ರೀ ಪೇಮೆಂಟ್ ಕಂಪನಿಯು ನೇರ ಗ್ರಾಹಕರ (ವಿದ್ಯಾರ್ಥಿಗಳು) ಬ್ಯಾಂಕ್ ಖಾತೆಗೆ ರೀಫಂಡ್ ಮಾಡಿ ಬಳಿಕ ತಮ್ಮೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಆರೋಪಿಗಳು, ಕಂಪನಿಗೆ ರೀಫಂಡ್ ಮಾಡುವಂತೆ ಸೂಚಿಸುತ್ತಿದ್ದರು. ಆದರೆ, ಹಣ ಕಳುಹಿಸದೆ ಆರೋಪಿಗಳು ವಂಚನೆ ಮಾಡುತ್ತಿದ್ದರು. ಈ ಬಗ್ಗೆ ಕ್ಯಾಶ್ ಫ್ರೀ ಪೇಮೆಂಟ್ ಕಂಪನಿ ದೂರು ಸಲ್ಲಿಸಿತ್ತು. ಎಸಿಪಿ ಡಾ.ಗೋವರ್ಧನ್ ಗೋಪಾಲ್, ಇನ್‌ಸ್ಪೆಕ್ಟರ್ ಪಿ. ಎನ್. ಈಶ್ವರಿ ನೇತೃತ್ವದ ತಂಡ ತಾಂತ್ರಿಕ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಿದೆ.

ಚಿನ್ನಾಭರಣ ಕಳವು: ನಾಲ್ವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಮನೆಗಳ ಬೀಗ ಮುರಿದು ಚಿನ್ನಾಭರಣ ಕಳವು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಕಾಮಾಕ್ಷಿ ಠಾಣೆ ಪೊಲೀಸರು ಬಂಧಿಸಿ, ₹18.28 ಲಕ್ಷ ಮೌಲ್ಯದ 292 ಗ್ರಾಂ ಚಿನ್ನಾಭರಣ ಹಾಗೂ 140 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೀನಾಕ್ಷಿ ನಗರದ ನಿವಾಸಿ ಪ್ರಕಾಶ್ (24), ಗರಡಿ ಮುದ್ದಣ್ಣ ರಸ್ತೆಯ ಮಲ್ಲಿಕಾರ್ಜುನ್ (24) ಬಂಧಿಸಿ, ₹3.18 ಲಕ್ಷ ಮೌಲ್ಯದ 48.7 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ನ.25ರಂದು ಹೆಗ್ಗನಹಳ್ಳಿ ಕ್ರಾಸ್ ನಿವಾಸಿ ಮಂಜುನಾಥ್ ಅವರು ಮದ್ಯದ ಅಮಲಿನಲ್ಲಿದ್ದಾಗ ಚಿನ್ನಾಭರಣ ಹಾಗೂ ಮೊಬೈಲ್ ಕಿತ್ತುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಈ ಬಗ್ಗೆ ದಾಖಲಾದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಬೀಗ ಹಾಕಿದ ಮನೆಗಳನ್ನು ಗುರಿಯಾಗಿಸಿ ಕಳವು ಮಾಡುತ್ತಿದ್ದ ಅಶೋಕ್‌ನನ್ನು ಬಂಧಿಸಿ, ₹3.10 ಲಕ್ಷ ಮೌಲ್ಯದ 47 ಗ್ರಾಂ ಚಿನ್ನ ಹಾಗೂ 100 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಾಮಾಕ್ಷಿ ಪಾಳ್ಯ ವೃಷಭಾವತಿ ನಿವಾಸಿ ಸಾಗರ್ ಅವರ ಮನೆಯಲ್ಲಿ ಆಗಸ್ಟ್ 19ರಂದು ಕಳ್ಳತನವಾಗಿತ್ತು.

ಮನೆಗೆ ಕನ್ನ: ರಾತ್ರಿ ವೇಳೆ ಮನೆ ಬೀಗ ಮುರಿದು ಕಳ್ಳತನ ಮಾಡುತ್ತಿದ್ದ ಚಿತ್ರದುರ್ಗದ ರವಿಕುಮಾರ್ ಅವರನ್ನು ಬಂಧಿಸಿ, ₹12 ಲಕ್ಷ ಮೌಲ್ಯದ 197 ಗ್ರಾಂ ಚಿನ್ನಾಭರಣ ಹಾಗೂ 40 ಗ್ರಾಂ ಬೆಳ್ಳಿ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಸುಂಕದಕಟ್ಟೆ ಶ್ರೀನಿವಾಸ ನಗರದ ನಿವಾಸಿ ಭವ್ಯಾ ಮನೆಯಲ್ಲಿ ಕಳ್ಳತನ ಆಗಿತ್ತು. ಖಚಿತ ಮಾಹಿತಿ ಆಧರಿಸಿ, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.



ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರಿಗೆ ಹೊಸ ತಂತ್ರಜ್ಞಾನ 'ಕಿಯಾಸ್'

'ವಾಯು ವಜ್ರ': ಬೆರಳ ತುದಿಯಲ್ಲಿ ಮಾಹಿತಿ

ಪ್ರಜಾವಾಣಿ ವಾರ್ತೆ

ಬಿಎಂಟಿಸಿ ಸುದ್ದಿ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬಿಎಂಟಿಸಿ ವಾಯು ವಜ್ರ ಬಸ್‌ಗಳಲ್ಲಿ ಸಂಚರಿಸುವವರಿಗೆ ಬಸ್, ನಿಲ್ದಾಣ, ದರಗಳ ಮಾಹಿತಿ ಬೆರಳ ತುದಿಯಲ್ಲಿ ಲಭ್ಯವಾಗಲು ಬಿಎಂಟಿಸಿ 'ಕಿಯಾಸ್' ಎಂಬ ಜಾಲತಾಣವನ್ನು ರೂಪಿಸಿದೆ.

https://kias.mybmtc.com ಈ ಜಾಲತಾಣದ ಮೂಲಕ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಬಿಎಂಟಿಸಿ ನಿಲ್ದಾಣದ ಯಾವ ಪ್ಲ್ಯಾಟ್‌ ಫಾರ್ಮ್‌ನಲ್ಲಿ ಯಾವ ಕಡೆಗೆ ಸಂಚರಿಸುವ ಬಸ್ ಇದೆ? ಬಸ್ ಎಷ್ಟು ಗಂಟೆಗೆ ಹೊರಡಲಿದೆ. ಯಾವ ನಿಲ್ದಾಣಗಳ ಮೂಲಕ ಹಾದು ಹೋಗಲಿದೆ? ಟಿಕೆಟ್ ದರ ಎಷ್ಟು ಎಂಬುದೆಲ್ಲ ಸರಳವಾಗಿ ಸುಲಭವಾಗಿ ಪ್ರಯಾಣಿಕರು ಮಾಹಿತಿ ಪಡೆಯಬಹುದು.

ಪ್ರಯಾಣ ದರ ಕೂಡ ಕಿಯಾಸ್‌ನಲ್ಲಿ ನೋಡಬಹುದಾಗಿದೆ. ಇದರಲ್ಲಿ ವಾಯು ವಜ್ರ ಬಸ್‌ಗಳ ವೇಳಾಪಟ್ಟಿ ಪ್ರದರ್ಶಿತವಾಗುತ್ತದೆ. ಸಂಚರಿಸಬೇಕಾದ ಮಾರ್ಗವನ್ನು ಲೈವ್ ಟ್ರ್ಯಾಕ್ ಮೂಲಕ ಆಯ್ಕೆ ಮಾಡಿಕೊಂಡು ಈ ಮಾರ್ಗದಲ್ಲಿ ಬಸ್ ಯಾವ ನಿಲ್ದಾಣದಲ್ಲಿದೆ ಎಂದು ದೃಢಪಡಿಸಿಕೊಳ್ಳಬಹುದು. ಪ್ರಯಾಣಿಕರು ಸಮಯ ಹೊಂದಾಣಿಕೆ ಮಾಡಿಕೊಂಡು ನಿಲ್ದಾಣಕ್ಕೆ ಬಂದು ಬಸ್ ಹತ್ತಲು ಅನುಕೂಲವಾಗಲಿದೆ.



ವಿಮಾನ ನಿಲ್ದಾಣದ ಟರ್ಮಿನಲ್–2ರಿಂದ ನಿರ್ಗಮಿಸುವ ಬಿಎಂಟಿಸಿ ವಾಯು ವಜ್ರ ಬಸ್‌ಗಳು ನಿರ್ಗಮಿಸುವ ಮಾರ್ಗಗಳ ವಿವರಗಳನ್ನು ಕೂಡಾ ಗೂಗಲ್ ಮ್ಯಾಪ್ ಮೂಲಕ ನೀಡಲಾಗಿದೆ. ವಾಯು ವಜ್ರ ಬಸ್‌ನಲ್ಲಿ ಸಂಚರಿಸಿದ ಪ್ರಯಾಣಿಕರಿಗೆ ತಮ್ಮ ಅನುಭವವನ್ನು, ಅಭಿಪ್ರಾಯಗಳನ್ನು ಹಂಚಿಕೊಳ್ಳಲು, ತೊಂದರೆಯಾಗಿದ್ದರೆ ತಿಳಿಸಲು, ಸಲಹೆಗಳನ್ನು ನೀಡಲು ಕಿಯಾಸ್‌ನಲ್ಲಿ ಸಾರ್ವಜನಿಕ ಕುಂದುಕೊರತೆ ಪೋರ್ಟಲ್ ನೀಡಲಾಗಿದೆ. ಜಗತ್ತಿನ ವಿವಿಧ ಭಾಗಗಳಿಂದ ಬರುವ ಪ್ರಯಾಣಿಕರ ಅಗತ್ಯಕ್ಕೆ ಬಳಸಲು ಬಸ್ ಸಂಚರಿಸುವ ಪ್ರಮುಖ ನಿಲ್ದಾಣಾಧಿಕಾರಿಗಳ ಮೊಬೈಲ್ ಸಂಖ್ಯೆಗಳು ಕೂಡ ಸುಲಭದಲ್ಲಿ ದೊರೆಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರಯಾಣಿಕ ಸ್ನೇಹಿ ಯೋಜನೆ

ಬೆಂಗಳೂರಿನ ನಗರಸಾರಿಗೆ ವ್ಯವಸ್ಥೆ ಪ್ರಯಾಣಿಕ ಸ್ನೇಹಿಯಾಗಿದೆ. ಪ್ರಯಾಣಿಕರಿಗೆ ಸುಲಭದಲ್ಲಿ ಮಾಹಿತಿಗಳು ಸಿಗುವಂತಾಗಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಲಾಗುತ್ತಿದೆ. ಅದರ ಭಾಗವಾಗಿಯೇ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ 'ಕಿಯಾಸ್' ತಂತ್ರಜ್ಞಾನ ಪರಿಚಯಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ನಮ್ಮ ಮೆಟ್ರೊ: ಸಾರ್ವಕಾಲಿಕ ದಾಖಲೆ ಪ್ರಯಾಣ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಶುಕ್ರವಾರ 9.20 ಲಕ್ಷ ಪ್ರಯಾಣಿಕರು ಸಂಚರಿಸಿದ್ದು, ಇದು ಒಂದು ದಿನದ ಪ್ರಯಾಣಿಕರ ಸಂಖ್ಯೆಯಲ್ಲಿ ನೂತನ ದಾಖಲೆಯಾಗಿದೆ.

ಈ ಹಿಂದೆ ಆಗಸ್ಟ್ 14ರಂದು 9.17 ಲಕ್ಷ ಜನರು ಪ್ರಯಾಣಿಸಿದ್ದು ದಾಖಲೆಯಾಗಿತ್ತು.ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಹಮ್ಮಿ ಕೊಂಡಿದ್ದ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ತೆರಳುವವರು, ಸಾಲು ಸಾಲು ರಜೆ ಇದ್ದಿದ್ದರಿಂದ ಊರಿಗೆ ತೆರಳುವವರ ಸಂಖ್ಯೆ ಹೆಚ್ಚಿದ್ದರಿಂದ ಅಧಿಕ ಸಂಖ್ಯೆಯಲ್ಲಿ ಪ್ರಯಾಣಿಕರು ಸಂಚರಿಸಿದ್ದರು. ಆದರೆ, ಶುಕ್ರವಾರ ಡಾ.ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನ ಹೊರತುಪಡಿಸಿ ಬೇರೇನು ಮಹತ್ವದ ಕಾರ್ಯಕ್ರಮ ಇಲ್ಲದೇ ಇದ್ದರೂ ಭಾರಿ ಸಂಖ್ಯೆಯಲ್ಲಿ ಜನರು ಪ್ರಯಾಣಿಸಿದ್ದಾರೆ.

ಶುಕ್ರವಾರ ನೇರಳೆ ಮಾರ್ಗದಲ್ಲಿ 4,39,616 ಪ್ರಯಾಣಿಕರು, ಹಸಿರು ಮಾರ್ಗದಲ್ಲಿ 3,12,248 ಜನರು ಪ್ರಯಾಣಿಸಿದ್ದರೆ, 1,67,617 ಪ್ರಯಾಣಿಕರು ಇಂಟರ್‌ಚೇಂಜ್ ಮಾಡಿ ಎರಡೂ ಮಾರ್ಗಗಳಲ್ಲಿ ಸಂಚರಿಸಿದ್ದಾರೆ. 1,091 ಜನರು ಪೇಪರ್ ಟಿಕೆಟ್ ಬಳಸಿದ್ದಾರೆ. ನಗರದ ವಾಹನದಟ್ಟಣೆಯಲ್ಲಿ ಸಂಚರಿಸಲಾರದೇ ತೊಂದರೆ ಅನುಭವಿಸಿದವರೆಲ್ಲ ಮೆಟ್ರೊದಲ್ಲಿ ಸಂಚರಿಸಲು ಬಯಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



RAMRAJ COTTON SHOWROOMS

BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR • MARATHAHALLI • KR PURAM KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA • RAMNAGARA • TUMKUR CHANDAPURA • CHAMBENAHALLI (SARJAPURA MAIN ROAD) • ATTIBELE • SINGANAIKANAHALLI • NEW THIPPASANDRA

Available at Ramraj Cotton Showrooms and All Leading Textile Shops | shop online @ www.ramrajcotton.in

ಬಿಡಿಎ ಕಾರ್ಯಾಚರಣೆ ₹65 ಕೋಟಿ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಶನಿವಾರ ಭೀಮನಕುಪ್ಪೆ ಗ್ರಾಮದಲ್ಲಿ ಸುಮಾರು ₹ 65 ಕೋಟಿ ಮೌಲ್ಯದ ಜಾಗವನ್ನು ವಶಕ್ಕೆ ತೆಗೆದುಕೊಂಡಿದೆ.

ಕೆಂಗೇರಿ ಹೋಬಳಿಯ ಭೀಮನ ಕುಪ್ಪೆ ಗ್ರಾಮದ ಸರ್ವೆ ನಂ. 73ರಲ್ಲಿನ 3 ಎಕರೆ 20 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿ ಕೊಂಡಿದ್ದ ನರ್ಸರಿ ಮತ್ತು ಶೆಡ್‌ಗಳನ್ನು ತೆರವು ಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿದೆ.



ಭೀಮನಕುಪ್ಪೆಯಲ್ಲಿ ಒತ್ತುವರಿಯಾಗಿದ್ದ ಜಾಗದಲ್ಲಿ ನಿರ್ಮಿಸಿದ್ದ ಶೆಡ್‌ಗಳನ್ನು ಬಿಡಿಎ ಸಿಬ್ಬಂದಿ ಸ್ಥಳೀಯ ಪೊಲೀಸರ ನೆರವಿನೊಂದಿಗೆ ತೆರವುಗೊಳಿಸಿದರು

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ನಾಡಪ್ರಭು ಕೆಂಪೇಗೌಡ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಪೊಲೀಸರ ಸಹಕಾರದಲ್ಲಿ ಕಾರ್ಯಾಚರಣೆ ನಡೆಯಿತು.



2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/150223/005721 MYSORE ROAD NEAR CHALLAGHATTA METRO STN. ₹ 49.63 - 79.66 Lakhs*	PRM/KA/RERA/1251/308/PR/160824/006973 BANNERGHATTA RD. NEAR KOPPA GATE ₹ 47.20 L - 1.13 Cr*	PRM/KA/RERA/1250/301/PR/251024/007178 YELAHANKA 5 MINS. RAJANUKUNTE ₹ 43.88 - 76.38 Lakhs*
PRM/KA/RERA/1251/310/PR/210324/006724 SILKBOARD NEAR SINGASANDRA METRO STN. ₹ 71.36 L - 1.20 Cr*	PRM/KA/RERA/1251/310/PR/151223/006489 BANASHANKARI OPP. NPS SCHOOL (3 & 4-BHK) ₹ 98.00 L - 1.74 Cr*	PRM/KA/RERA/1251/309/PR/060923/006244 TUMKUR ROAD 10 MINS. MADAVARA METRO STN. ₹ 45.81 - 72.67 Lakhs*
PRM/KA/RERA/1251/308/PR/160824/006972 ELECTRONIC CITY 10 MINS. HOSA ROAD METRO STN. ₹ 54.60 L - 1.15 Cr*	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 45.12 Lakhs*	PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 74.27 - 93.43 Lakhs*
PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO STN. ₹ 37.60 - 49.60 Lakhs*	PRM/KA/RERA/1251/309/PR/030524/006841 HENNUR ROAD 5 MINS. HENNUR DECATHLON ₹ 58.74 - 95.70 Lakhs*	PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 62.09 - 78.37 Lakhs*

*T & C Apply

ಡಿಎಸ್ ಮ್ಯಾಕ್ಸ್ FOR PROJECT SPECIFIC INFORMATION 7022 791 222 www.dsmaxproperties.com

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

CREDAI BENGALURU

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can

ನಾವು e-BG ನೀಡುತ್ತೇವೆ
[ಎಲೆಕ್ಟ್ರಾನಿಕ್ ಬ್ಯಾಂಕ್ ಗ್ಯಾರಂಟಿ (e-BG)]

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ (ಕೆಪಿಪಿಪಿ) ಪಟ್ಟಿ ಮಾಡಲಾದ ಟೆಂಡರ್ ಗಳಿಗೆ ಎಲೆಕ್ಟ್ರಾನಿಕ್ ಬ್ಯಾಂಕ್ ಗ್ಯಾರಂಟಿ ಸಲ್ಲಿಸಲು ಕರ್ನಾಟಕ ರಾಜ್ಯ ಸರ್ಕಾರವು ಸೂಚನೆ ನೀಡಿದೆ.

ಕೆನರಾ ಬ್ಯಾಂಕ್‌ನ ಯಾವುದೇ ಶಾಖೆಗಳಿಂದ e - B G ವಿತರಣೆಗಾಗಿ ಕೆಪಿಪಿಪಿ ಯೊಂದಿಗೆ ಸಂಪೂರ್ಣವಾಗಿ ಸಂಯೋಜಿಸಲ್ಪಟ್ಟಿದೆ.

ಇ-ಬ್ಯಾಂಕ್ ಗ್ಯಾರಂಟಿಗಾಗಿ ದಯವಿಟ್ಟು ನಿಮ್ಮ ಕೆನರಾ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಡಿ)
ಜಾಗತಿಕ ವ್ಯಾಪಾರ ಸಂಸ್ಕರಣಾ ಕೇಂದ್ರ (ಜಿಟಿಪಿಸಿ),
ಮಣಿಪಾಲ


ದುರಸ್ತಿಯಾಗದ ಲಿಫ್ಟ್: ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎಂ.ಜಿ. ರಸ್ತೆಯಲ್ಲಿ ಲಿಫ್ಟ್ ಕಾರ್ಯನಿರ್ವಹಿಸದೇ ಎರಡು ವಾರ ಕಳೆದರೂ ಸರಿಪಡಿಸಿಲ್ಲ. ಜೊತೆಗೆ ಆಗಾಗ ಎಸ್ಕಲೇಟರ್ ಕೂಡ ಕೈಕೊಡುತ್ತಿದೆ. ಇದರಿಂದಾಗಿ ಎರಡು ಮಹಡಿ ಮೇಲಿರುವ ಪ್ಲ್ಯಾಟ್‌ಫಾರ್ಮ್‌ಗೆ ಹೋಗಲು ವೃದ್ಧರು, ಅಂಗವಿಕಲರು ಪರದಾಡುತ್ತಿದ್ದಾರೆ.

ಲಿಫ್ಟ್ ಬಳಸದಂತೆ, ಬಾಗಿಲಿಗೆ ಅಡ್ಡಲಾಗಿ ಎರಡು ಬ್ಯಾರಿಕೇಡ್‌ಗಳನ್ನು ಇಡಲಾಗಿದೆ. ಅಷ್ಟು ಸಾಲದು ಎಂದು ಕಸದ ತೊಟ್ಟಿಯನ್ನೂ ಅಡ್ಡ ಇರಿಸಲಾಗಿದೆ.

'ವೈಟ್‌ಫೀಲ್ಡ್ ಕಡೆಯಿಂದ ಚಲ್ಲಘಟ್ಟ ಕಡೆಗೆ ಪ್ರಯಾಣ ಬೆಳೆಸುವವರು ಎಂ.ಜಿ. ರಸ್ತೆಯಿಂದ ಒಳಗೆ ಬಂದು ಪ್ಲ್ಯಾಟ್‌ಫಾರ್ಮ್‌ಗೆ ತೆರಳಲು ಲಿಫ್ಟ್ ವ್ಯವಸ್ಥೆ ಇದೆ. ಆದರೆ, ಈ ಲಿಫ್ಟ್ ಆಗಾಗ ಕೆಟ್ಟು ನಿಲ್ಲುತ್ತಿತ್ತು. ಎಸ್ಕಲೇಟರ್ ಸರಿ ಇದ್ದಿದ್ದರಿಂದ ಆಗ ಜನರು ಎಸ್ಕಲೇಟರ್ ಬಳಸುತ್ತಿದ್ದರು. ಆದರೆ, ಇತ್ತೀಚೆಗೆ ಲಿಫ್ಟ್ ಕೆಲಸವೇ ಮಾಡುತ್ತಿಲ್ಲ. ಪಕ್ಕದಲ್ಲೇ ಇರುವ ಎಸ್ಕಲೇಟರ್ ಕೂಡ, ಈ ವಾರ ದಿನ ಬಿಟ್ಟು ದಿನ ಸರಿ ಕೆಟ್ಟು ನಿಲ್ಲುತ್ತಿತ್ತು' ಎಂದು ಪ್ರಯಾಣಿಕರು ಮಾಹಿತಿ ನೀಡಿದ್ದಾರೆ.



ನಮ್ಮ ಮೆಟ್ರೊ ಎಂ.ಜಿ. ರಸ್ತೆ ನಿಲ್ದಾಣದಲ್ಲಿರುವ ಲಿಫ್ಟ್

'ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ವಿಪರೀತ ಜನದಟ್ಟಣೆ ಇತ್ತು. ಲಿಫ್ಟ್ ಮತ್ತು ಎಸ್ಕಲೇಟರ್ ಎರಡೂ ಸರಿ ಇಲ್ಲದ ಕಾರಣ ಫ್ಲಾಟ್‌ಫಾರ್ಮ್‌ಗೆ ತೆರಳಲು ಎಲ್ಲರೂ ಮೆಟ್ಟಿಲನ್ನೇ ಬಳಸಬೇಕಾಯಿತು. ಮಕ್ಕಳು, ಯುವಜನರಿಗೆ ಇದು ಸಮಸ್ಯೆಯಲ್ಲ. ಮಂಡಿನೋವು ಇರುವ ನನ್ನಂಥವರಿಗೆ ಕಷ್ಟ' ಎಂದು ಹಿರಿಯ ನಾಗರಿಕರಾದ ಶ್ರೀನಿವಾಸ್ ಅಲವತ್ತುಕೊಂಡರು.

'ನವೀಕರಣಕ್ಕಾಗಿ ಲಿಫ್ಟ್ ಅನ್ನು ನ.22ರಂದು ಸ್ಥಗಿತಗೊಳಿಸಲಾಗಿದೆ ಡಿ.11ರ ನಂತರ ಎಂದಿನಂತೆ ಕಾರ್ಯಾಚರಿಸಲಿದೆ. ಈ ಬಗ್ಗೆ ಲಿಫ್ಟ್ ಪಕ್ಕದಲ್ಲಿ ಮಾಹಿತಿ ಪತ್ರ ಅಂಟಿಸಿದ್ದೇವೆ' ಎಂದು ಬಿಎಂಆರ್‌ಸಿಎಲ್ ಸಿಬ್ಬಂದಿ ತಿಳಿಸಿದ್ದಾರೆ.



ಮಹದೇವಪುರ ವಲಯದಲ್ಲಿ ಪಾದಚಾರಿ ಮಾರ್ಗದಲ್ಲಿ ಶೆಡ್‌ಗಳನ್ನು ತೆರವು ಮಾಡಲಾಯಿತು

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ದಕ್ಷಿಣ, ರಾಜರಾಜೇಶ್ವರಿ ನಗರ ಹಾಗೂ ಮಹದೇವಪುರ ವಲಯಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಶನಿವಾರ ನಡೆಯಿತು.

ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರ ನಿರ್ದೇಶನದಂತೆ ಪಾದಚಾರಿ ಮಾರ್ಗದಲ್ಲಿದ್ದ ಅಂಗಡಿಗಳನ್ನು ತೆರವು ಮಾಡಲಾಯಿತು. ಪಾದಚಾರಿ ಮಾರ್ಗಗಳಲ್ಲಿ ಶಾಶ್ವತ ಪೆಟ್ಟಿಗೆ ಗಳನ್ನು ತೆರವು ಮಾಡಿ, ಮತ್ತೆ ವ್ಯಾಪಾರ ಮಾಡದಂತೆ ಕಟ್ಟೆಚ್ಚರ ನೀಡಲಾಗುತ್ತಿದೆ.

ದಕ್ಷಿಣ ವಲಯದ ಜಯನಗರ 1ನೇ ಬ್ಲಾಕ್ 3ನೇ ಅಡ್ಡರಸ್ತೆ, ಲಕ್ಕಸಂದ್ರ ವಾರ್ಡಿನ 16ನೇ ಅಡ್ಡರಸ್ತೆ, ರಾಜರಾಜೇಶ್ವರಿ ನಗರ ವಲಯದ ನಾಗರಭಾವಿ 2ನೇ ಹಂತದ 6ನೇ ಅಡ್ಡರಸ್ತೆ, ಮಹದೇವಪುರ ವಲಯದ ಹಳೆ ವಿಮಾನನಿಲ್ದಾಣ ರಸ್ತೆ ಮಾರತ್‌ಹಳ್ಳಿ ಸೇತುವೆ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಹಳೆ ವಿಮಾನನಿಲ್ದಾಣ ರಸ್ತೆ ಮಾರತ್‌ಹಳ್ಳಿ ಸೇತುವೆ ಮುಖ್ಯರಸ್ತೆಯಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಓವರ್ ಹೆಡ್ ಕೇಬಲ್‌ಗಳನ್ನು ತೆರವುಗೊಳಿಸಲಾಗಿದೆ.

ಪ್ರಜಾವಾಣಿ QUIZ CHAMPIONSHIP 2024

Co-powered by PILOT Writing Is Emotion



ಬೆಂಗಳೂರು
ಹಾಗೂ ಇತರೆಡೆಯ ಮಕ್ಕಳಿಗೆ ಮಿನುಗಲು ಸದವಕಾಶ!

ಚಾಂಪಿಯನ್ ಆಗುವ ಸಾಮರ್ಥ್ಯ ನಿಮ್ಮಲ್ಲಿವೆಯೇ? ಹಾಗಾದರೆ, ನೀವು ಮಿನುಗಲು ಪ್ರಜಾವಾಣಿ ಕ್ವಿಜ್ ಅತ್ಯುತ್ತಮ ವೇದಿಕೆ!

7ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಅವಕಾಶ.

ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ. ನಿಮ್ಮ ಜ್ಞಾನ ಹಾಗೂ ಸ್ಪರ್ಧಾ ಸಾಮರ್ಥ್ಯವನ್ನು ಒರೆಗೆ ಹಚ್ಚಿ. ಆಕರ್ಷಕ ಬಹುಮಾನಗಳನ್ನು ಗೆಲ್ಲಿ ಹಾಗೂ ಚಾಂಪಿಯನ್‌ಗಳು ಅಪೂರ್ವ ಅವಕಾಶಗಳನ್ನು ಅನಾವರಣಗೊಳಿಸುವ ವಿಶೇಷ ಅನ್ವೇಷಣಾ ಕಾರ್ಯಾಗಾರಕ್ಕೆ ಆಹ್ವಾನಿತರಾಗಿ.

ದಿನಾಂಕ	ದಿನ	ಸ್ಥಳ
ಡಿಸೆಂಬರ್ 16, ಬೆಳಿಗ್ಗೆ 9 ಕ್ಕೆ	ಸೋಮವಾರ	ವಿವೇಕ ಸಭಾಂಗಣ, ಯುವಪಥ, #4, 31ನೇ ಕ್ರಾಸ್ ರಸ್ತೆ, 4ನೇ ಟಿ ಬ್ಲಾಕ್ ಈಸ್ಟ್, 4ನೇ ಬ್ಲಾಕ್, ಜಯನಗರ, ಬೆಂಗಳೂರು, ಕರ್ನಾಟಕ 560011.

ರಾಜ್ಯಮಟ್ಟದ ಹಣಾಹಣಿಗೆ ತಲುಪಲು ವಿಜಯದ ಮೆಟ್ಟಿಲು ಏರುವಿರಾ?

ನೋಂದಾಯಿಸಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.prajavani.net/pvquiz-2024 ಗೆ ಭೇಟಿ ನೀಡಿ | ಸಂಪರ್ಕಿಸಿ: 73380 18541

ಈಗಲೇ ನೋಂದಾಯಿಸಿ **ಉಚಿತ ಪ್ರವೇಶ!!!**

Associate sponsors: WONDERLA PARKS AND RESORTS | ಪೂರ್ವಿಕಾ | VIBGYOR GROUP OF SCHOOLS | SIR MV | ಮಾರ್ಗದರ್ಶಿ | HAL
Special partner: BHIMA | TV partner: | Knowledge partner: QURIOSITY

ಒಂದು ಲಕ್ಷ ಮನೆ ಮೂರು ಸಾವಿರ ಜನರಿಗೆ ಸಾಲ

ಬೆಂಗಳೂರು: ಸಿ.ಎಂ ಅವರ ಒಂದು ಲಕ್ಷ ಮನೆ ಯೋಜನೆ ಫಲಾನುಭವಿಗಳಲ್ಲಿ 3 ಸಾವಿರ ಮಂದಿಗೆ ತಲಾ ₹5 ಲಕ್ಷ ಸಾಲ ನೀಡಲು ಬ್ಯಾಂಕ್ ಮುಖ್ಯಸ್ಥರು ಸಮ್ಮತಿಸಿದ್ದಾರೆ ಎಂದು ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್ ಮುಖ್ಯಸ್ಥರ ಜತೆ ನಡೆಸಿದ ಸಭೆ ಫಲಪ್ರದವಾಗಿದೆ. ಮೊದಲ ಹಂತದಲ್ಲಿ ಮೂರು ಸಾವಿರ ಜನರಿಗೆ ಸಾಲ ನೀಡಲು ಸಮ್ಮತಿ ಸೂಚಿಸಿದ್ದಾರೆ ಎಂದರು.

'ಹಂತ ಹಂತವಾಗಿ 45,125 ಫಲಾನುಭವಿಗಳಿಗೆ ಸಾಲ ಮಂಜೂರಾದರೆ ನಾವು ಯೋಜನೆ ಪೂರ್ಣ ಗೊಳಿಸಿ ಹಂಚಿಕೆ ಮಾಡಲಿದ್ದೇವೆ' ಎಂದರು. ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಯೆಸ್ ಬ್ಯಾಂಕ್, ಇಂಡಿಯನ್ ಒವರ್ ಸೀಸ್ ಬ್ಯಾಂಕ್, ಐಐಎಫ್‌ಎಲ್ ಬ್ಯಾಂಕ್ ವತಿಯಿಂದ ₹15.80 ಕೋಟಿ ಮೊತ್ತದ ಚೆಕ್ ಸಚಿವರಿಗೆ ಬ್ಯಾಂಕ್ ಪ್ರತಿನಿಧಿಗಳು ಹಸ್ತಾಂತರಿಸಿದರು. ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ, ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಉಪಸ್ಥಿತರಿದ್ದರು.

ಕಿದ್ವಾಯಿ ಬೋನ್ ಮ್ಯಾರೊ ಘಟಕದಲ್ಲಿ ನೂರಕ್ಕೂ ಅಧಿಕ ರಕ್ತ ಕ್ಯಾನ್ಸರ್ ಪೀಡಿತರಿಗೆ ನೆರವು

ಅಸ್ಥಿಮಜ್ಜೆ ಕಸಿಗೆ ಹೆಚ್ಚಿದ ಬೇಡಿಕೆ

● ವರುಣ ಹೆಗಡೆ

ಬೆಂಗಳೂರು: ರಕ್ತದ ಕ್ಯಾನ್ಸರ್ ಎದುರಿಸುತ್ತಿರುವವರ ಚೇತರಿಕೆಗೆ ಅಸ್ಥಿಮಜ್ಜೆ ಕಸಿ (ಬೋನ್ ಮ್ಯಾರೊ) ಸಹಕಾರಿಯಾಗಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ₹ 50 ಲಕ್ಷದವರೆಗೂ ವೆಚ್ಚವಾಗುವ ಈ ಕಸಿಗೆ ಉಚಿತ ಚಿಕಿತ್ಸೆಗಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಬೇಡಿಕೆ ಹೆಚ್ಚಿದೆ.

ಸಂಸ್ಥೆಯಲ್ಲಿ 2022ರ ಏಪ್ರಿಲ್‌ನಲ್ಲಿ ಬೋನ್ ಮ್ಯಾರೊ ಘಟಕ ಕಾರ್ಯಾರಂಭ ಮಾಡಿದೆ. ರಾಜ್ಯದಲ್ಲಿ ಅಸ್ಥಿಮಜ್ಜೆ ಘಟಕ ಹೊಂದಿರುವ ಏಕೈಕ ಸರ್ಕಾರಿ ಆಸ್ಪತ್ರೆ ಕಿದ್ವಾಯಿ ಗಂಥಿ ಸಂಸ್ಥೆ. ಈ ಘಟಕವನ್ನು ₹ 10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 13 ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದೆ. 17 ಹಾಸಿಗೆಗಳನ್ನು ಒಳಗೊಂಡಿದೆ. ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ವಯಸ್ಕರು ಹಾಗೂ ಮಕ್ಕಳಿಗೆ ಇಲ್ಲಿ ಅಸ್ಥಿಮಜ್ಜೆ ಕಸಿ ಮಾಡಲಾಗುತ್ತದೆ. ಘಟಕದ



ಸಾಂದರ್ಭಿಕ ಚಿತ್ರ

ಎಲ್ಲ ಹಾಸಿಗೆಗಳು ಭರ್ತಿಯಾಗಿದ್ದು, ದುಬಾರಿ ಕಸಿಯನ್ನು ವಿವಿಧ ಸರ್ಕಾರಿ ಯೋಜನೆಗಳು, ದಾನಿಗಳ ನೆರವಿನಿಂದ ಉಚಿತವಾಗಿ ನಡೆಸುತ್ತಿರುವುದರಿಂದ ಸಾವಿರಾರು ಮಂದಿ ಈ ಕಸಿಗೆ ಎದುರು ನೋಡುತ್ತಿದ್ದಾರೆ.

ಥಲಸ್ಸೇಮಿಯಾ, ಲ್ಯುಕೇಮಿಯಾದಂತಹ ರಕ್ತದ ಕ್ಯಾನ್ಸರ್ ಇರುವವರಿಗೆ ಕಸಿ ಪರಿಹಾರವಾಗಿದೆ. ಸಂಸ್ಥೆಯ ಘಟಕದಲ್ಲಿ ರೋಗಿಯೊಬ್ಬರಿಗೆ ಅವರದೇ ದೇಹದ ಆರೋಗ್ಯವಂತ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು ನಡೆಸುವ ಕಸಿಗೆ ₹

> ದುಬಾರಿಯಾದ ಅಸ್ಥಿಮಜ್ಜೆ ಕಸಿಯನ್ನು ಕಿದ್ವಾಯಿ ಸಂಸ್ಥೆಯಲ್ಲಿ ಅರ್ಹರಿಗೆ ಉಚಿತವಾಗಿ ನಡೆಸಲಾಗುತ್ತಿದೆ. ಇದರಿಂದ ರಕ್ತದ ಕ್ಯಾನ್ಸರ್ ಪೀಡಿತರ ಜೀವನ ಬದಲಾಗುತ್ತಿದೆ
> **ಡಾ.ಶರಣಪ್ರಕಾಶ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

7 ಲಕ್ಷ ವೆಚ್ಚವಾದರೆ, ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿ ಕೊಳ್ಳುವ ಮಜ್ಜೆಯನ್ನು ಬೇರೆಯ ವರಿಂದ ಪಡೆದು, ಕಸಿ ಮಾಡಿದಲ್ಲಿ ₹ 21 ಲಕ್ಷದವರೆಗೆ ಚಿಕಿತ್ಸಾ ವೆಚ್ಚವಾಗಲಿದೆ. ಇಷ್ಟು ದುಬಾರಿ ಮೊತ್ತದ ಚಿಕಿತ್ಸೆಯನ್ನು ಬಹುತೇಕ ಎಲ್ಲ ಪ್ರಕರಣಗಳಲ್ಲಿ ಉಚಿತವಾಗಿ ಒದಗಿಸಲಾಗಿದೆ.

101 ಮಂದಿಗೆ ಕಸಿ: ಘಟಕದಲ್ಲಿ ಈವರೆಗೆ 101 ಮಂದಿಗೆ ಅಸ್ಥಿಮಜ್ಜೆ ಕಸಿ ನಡೆಸಲಾಗಿದೆ. ಈ ಕಸಿಗಳಲ್ಲಿ ಯಶಸ್ಸಿನ ಪ್ರಮಾಣ ಶೇ 99ರಷ್ಟಿದೆ. ಮಕ್ಕಳಲ್ಲಿ ರಕ್ತದ ಕ್ಯಾನ್ಸರ್ ಹೆಚ್ಚುತ್ತಿರುವುದರಿಂದ ಮಕ್ಕಳ ಅಸ್ಥಿಮಜ್ಜೆ ಕಸಿಗೂ ಘಟಕದಲ್ಲಿ ಆದ್ಯತೆ ನೀಡಲಾಗುತ್ತಿದೆ. ಸಂಸ್ಥೆಯ ಮಕ್ಕಳ ಗಂಥಿ ವಿಜ್ಞಾನ ವಿಭಾಗದ ದಾಖಲಾತಿ ಪ್ರಕಾರ ಕ್ಯಾನ್ಸರ್ ಪೀಡಿತ ಮಕ್ಕಳಲ್ಲಿ ಹೆಚ್ಚಿನವರು ರಕ್ತದ ಕ್ಯಾನ್ಸರ್ (ಲ್ಯುಕೇಮಿಯಾ ಮತ್ತು ಲಿಂಪೋಮಾ), ಮಿದುಳು ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಮಕ್ಕಳ ಕ್ಯಾನ್ಸ ವಿಭಾಗದಲ್ಲಿ ಪ್ರತಿ ವರ್ಷ ಸರಾಸರಿ 400ರಿಂದ 500 ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಇದರಿಂದಾಗಿ ನಡೆಸಲಾದ ಅಸ್ಥಿಮಜ್ಜೆ ಕಸಿಯಲ್ಲಿ 28 ಮಕ್ಕಳೂ ಸೇರಿದ್ದಾರೆ.

'ಸಂಸ್ಥೆಯ ಘಟಕದಲ್ಲಿ ಅಸ್ಥಿಮಜ್ಜೆ ಕಸಿಗೆ ಬೇಡಿಕೆ ಹೆಚ್ಚುತ್ತಿದ್ದು, ಈ ಕಸಿಯನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ರೋಗಿಗಳಿಗೆ ಗಗನ ಕುಸುಮವಾಗಿದ್ದ ಈ ಕಸಿಯನ್ನು, ಉಚಿತವಾಗಿ ನಡೆಸುವ ಮೂಲಕ ನೂರಕ್ಕೂ ಅಧಿಕ ಮಂದಿಗೆ ಘಟಕ ನೆರವಾಗಿದೆ' ಎಂದು ಸಂಸ್ಥೆಯ ಆಡಳಿತಾಧಿಕಾರಿ ನವೀನ್ ಭಟ್ ತಿಳಿಸಿದರು.

ಎರಡು ವಿಧದಲ್ಲಿ ಅಸ್ಥಿಮಜ್ಜೆ ಕಸಿ

'ಅಸ್ಥಿಮಜ್ಜೆ ಕಸಿ ಘಟಕದಲ್ಲಿ ವ್ಯಕ್ತಿಯ ದೇಹದ ಭಾಗದಲ್ಲಿ ಸಕ್ರಿಯವಾಗಿರುವ ಕ್ಯಾನ್ಸರ್ ಕಣಗಳನ್ನು ನಾಶಮಾಡಲಾಗುತ್ತದೆ. ಎರಡು ವಿಧಗಳಲ್ಲಿ ಈ ಕಸಿ ನಡೆಸಲಾಗುತ್ತದೆ. ಅವರದೇ ದೇಹದ ಆರೋಗ್ಯವಂತ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು, ಕ್ಯಾನ್ಸರ್ ಕಣಗಳು ನಾಶವಾದ ಜಾಗದಲ್ಲಿ ನಡೆಸುವ ಕಸಿಗೆ ಚಿಕಿತ್ಸಾ ವೆಚ್ಚ ಕಡಿಮೆಯಾಗಲಿದೆ. ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳುವ ಮಜ್ಜೆಯನ್ನು ಬೇರೆಯವರಿಂದ ಪಡೆದು, ಕಸಿ ಮಾಡಿದಲ್ಲಿ ವೆಚ್ಚ ಅಧಿಕವಾಗುತ್ತದೆ' ಎಂದು ಸಂಸ್ಥೆಯ ವೈದ್ಯರು ತಿಳಿಸಿದರು.


ಸುದ್ದಿ 2 ನಿಮಿಷ

'ಅದಾನಿ ಕಂಪನಿ ವಿರುದ್ಧ ಪ್ರಕರಣ ದಾಖಲಿಸಬೇಕು'

ಬೆಂಗಳೂರು: 'ಬೇಲೆಕೇರಿ ಅಕ್ರಮ ಗಣಿ ಅದಿರು ಕಳ್ಳ ಸಾಗಣೆಗೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ಅನುಸಾರ ಅದಾನಿ ಕಂಪನಿ ವಿರುದ್ಧ ಪ್ರಕರಣ ದಾಖಲಿಸಬೇಕು. ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿ, 'ಪ್ರಕರಣದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಸುಮಾರು 8.06 ಲಕ್ಷ ಟನ್ ಅದಿರು ಮುಟ್ಟುಗೋಲು ಹಾಕಿಕೊಂಡಿದ್ದರು. ಈ ಅದಿರನ್ನು ಅದಾನಿ ಕಂಪನಿಯವರು ಕಳ್ಳ ಸಾಗಣೆ ಮಾಡಿದ್ದಾರೆ' ಎಂದರು.

'ಅದಿರನ್ನು ಮಲ್ಲಿಕಾರ್ಜುನ ಶಿಪ್ಪಿಂಗ್, ಅದಾನಿ ಎಂಟರ್



ಪ್ರೈಸಸ್, ಸಲ್ಗಾಂವಕರ್ ಮೈನಿಂಗ್ ಇಂಡಸ್ಟ್ರಿ ಮತ್ತು ರಾಜ್ ಮಹಲ್ ಕಂಪನಿಗಳು ವಿದೇಶಕ್ಕೆ ಕಳ್ಳಸಾಗಣೆ ಮಾಡಿರುವುದು ಲೋಕಾಯುಕ್ತ ತನಿಖೆಯಲ್ಲಿ ಪತ್ತೆಯಾಗಿತ್ತು. ಎಲ್ಲ ಕಂಪನಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆಯೂ ಲೋಕಾಯುಕ್ತ ಶಿಫಾರಸು ಮಾಡಿತ್ತು. ಅದಾನಿ ಕಂಪನಿ ಹೊರತಾಗಿ ಇತರೆ ಮೂರು ಕಂಪನಿ ವಿರುದ್ಧ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದ್ದು, ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಶಾಸಕ ಸತೀಶ್ ಸೈಲ್ ಅವರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿದೆ. ಈ ಶಿಕ್ಷೆಯನ್ನು ಹೈಕೋರ್ಟ್ ಸದ್ಯ ಅಮಾನತಿನಲ್ಲಿಟ್ಟಿದೆ' ಎಂದರು.

'ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳಿಗೆ ಅದಾನಿ ಕಂಪನಿ ಲಂಚ ನೀಡಿ ಈ ಅಕ್ರಮ ಅದಿರು ಸಾಗಣೆ ಮಾಡುತ್ತಿತ್ತು ಎಂಬ ಆರೋಪದ ಬಗ್ಗೆಯೂ ವಿಚಾರಣೆ ನಡೆದಿಲ್ಲ. ಹೀಗಾಗಿ ಕರ್ನಾಟಕದಲ್ಲಿ ತನಿಖೆಯಾಗಿರುವ ವರದಿ ಮೇಲೆ ಮುಖ್ಯಮಂತ್ರಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜ.5ಕ್ಕೆ ಚಿತ್ರಸಂತೆ: ಕಲಾಕೃತಿಗಳ ಪ್ರದರ್ಶನ, ಮಾರಾಟ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ಜನವರಿ 5ರಂದು ಕುಮಾರ ಕೃಪ ರಸ್ತೆಯಲ್ಲಿ 22ನೇ ಚಿತ್ರಸಂತೆ ಹಮ್ಮಿಕೊಂಡಿದೆ.

ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಚಿತ್ರಸಂತೆಯಲ್ಲಿ ಭಾಗವಹಿಸಲು ಕಲಾವಿದರಿಂದ ಕಳೆದ ತಿಂಗಳು ಪರಿಷತ್ತು ಅರ್ಜಿ ಆಹ್ವಾನಿಸಿತ್ತು. ಈ ಬಾರಿ ಮೂರು ಸಾವಿರಕ್ಕೂ ಅಧಿಕ ಕಲಾವಿದರು ಅರ್ಜಿ ಸಲ್ಲಿಸಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಸಂತೆಯಲ್ಲಿ ಭಾಗವಹಿಸುತ್ತಾರೆ. ವೃತ್ತಿನಿರತ ಕಲಾವಿದರ ಜತೆಗೆ ಹವ್ಯಾಸಿ ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳು ಪಾಲ್ಗೊಂಡು, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ.

ಮೈಸೂರು ಸಾಂಪ್ರದಾಯಿಕ ಶೈಲಿ, ರಾಜಸ್ಥಾನಿ ಶೈಲಿ, ಮಧುಬನಿಯ ಶೈಲಿ, ತೈಲ ಮತ್ತು ಜಲ ವರ್ಣದ ಕಲಾಕೃತಿಗಳು ಲಭ್ಯವಿರುತ್ತವೆ. ಇವಲ್ಲದೆ, ಅಕ್ರಲಿಕ್, ಕೊಲಾಜ್, ಲಿಥೋಗ್ರಾಫ್ ಮೊದಲಾದ ಪ್ರಕಾರಗಳ ಕಲಾಕೃತಿಗಳು ದೊರೆಯುತ್ತವೆ. ವ್ಯಂಗ್ಯಚಿತ್ರಗಳ ಪ್ರದರ್ಶನಕ್ಕೂ ಅವಕಾಶ ಇರುತ್ತದೆ. ಕುಂಚ ಹಾಗೂ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲೇ ರಚಿಸಿ ಕೊಡುವ ಕಲಾವಿದರು ಇರುತ್ತಾರೆ. ₹ 100 ರಿಂದ ಲಕ್ಷಾಂತರ ರೂ. ಮೌಲ್ಯದ ಕಲಾಕೃತಿಗಳು ಇರಲಿವೆ.



ಪಿಇಎಸ್ ವಿಶ್ವವಿದ್ಯಾಲಯದ ಒಂಬತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಫೆಸ್ಟೊ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ರಶ್ಮಿಕಾಂತ್ ಜೋಶಿ, ಪಿಇಎಸ್ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಜಯ್ ಕುಮಾರ್, ಸಹ ಕುಲಾಧಿಪತಿ ಡಿ.ಜವಾಹರ್ ಕುಲಪತಿ ಜೆ.ಸೂರ್ಯಪ್ರಸಾದ್ ಪದವಿ ಪ್ರದಾನ ಮಾಡಿದರು

'ನಿಮ್ಮದೇ ನವಮಾರ್ಗ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದು ಪದವಿ ಪಡೆದು ನಿರ್ಗಮಿಸುತ್ತಿರುವ ವಿದ್ಯಾರ್ಥಿಗಳು ನಿಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ನಿಮ್ಮದೇ ಹೊಸಮಾರ್ಗವನ್ನು ಕಂಡುಕೊಂಡು ಮುನ್ನಡೆದು ಸಾಧನೆ ಮಾಡಿ' ಎಂದು ಫೆಸ್ಟೊ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ರಶ್ಮಿಕಾಂತ್ ಜೋಶಿ ಸಲಹೆ ನೀಡಿದರು.

ಶನಿವಾರ ನಡೆದ ಪಿಇಎಸ್ ವಿಶ್ವವಿದ್ಯಾಲಯದ ಒಂಬತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ವೃತ್ತಿ ಜೀವನವನ್ನು ರೂಪಿಸಲು ಮುಂದಿನ ಐದಾರು ವರ್ಷಗಳವರೆಗೆ ಕ್ರಿಯಾಯೋಜನೆಯನ್ನು ತಯಾರು ಮಾಡಿಕೊಂಡಿರಬೇಕು. ಪ್ರಜ್ಞಾಪೂರ್ವಕವಾಗಿ ಮಾಡುವ ಈ ಯೋಜನೆಯು ಜೀವನಕ್ಕೆ ಗಟ್ಟಿಯಾದ ಅಡಿಪಾಯವನ್ನು ಸಿದ್ಧಪಡಿಸುತ್ತದೆ. ಯಶಸ್ಸಿನ ದಾರಿಯಲ್ಲಿ ಕೊಂಡೊಯ್ಯುತ್ತದೆ ಎಂದು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ದೊರೆಸ್ವಾಮಿಯವರ ಅಧ್ಯಕ್ಷೀಯ ಭಾಷಣವನ್ನು ಪಿಇಎಸ್ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಜಯ್ ಕುಮಾರ್ ವಾಚಿಸಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೂರದೃಷ್ಟಿಯನ್ನು ಹೊಂದಿರಬೇಕು ಮತ್ತು ರಾಷ್ಟ್ರ ನಿರ್ಮಾಣ ಚಟುವಟಿಕೆಯ ಭಾಗವಾಗಬೇಕು. ಸಮಕಾಲೀನ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಆತ್ಮವಿಶ್ವಾಸದೊಂದಿಗೆ ಸಜ್ಜುಗೊಳಿಸಲು ಶೈಕ್ಷಣಿಕ ಸಾಮರ್ಥ್ಯ ನೆರವಾಗುತ್ತದೆ ಎಂದು ದೊರೆಸ್ವಾಮಿ ತಿಳಿಸಿದರು.

ಸಹ ಕುಲಾಧಿಪತಿ ಡಿ.ಜವಾಹರ್ ಗೌರವ ಸೂಚಕ ಫಲಕವನ್ನು ಅನಾವರಣಗೊಳಿಸಿ, ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು. ಕುಲಪತಿ ಜೆ.ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್.ಶ್ರೀಧರ್ ಭಾಗವಹಿಸಿದ್ದರು.

4,402 ವಿದ್ಯಾರ್ಥಿಗಳು ಪದವಿ ಪಡೆದಿದ್ದು, ಇದರಲ್ಲಿ 16 ಪಿಎಚ್.ಡಿ ಪುರಸ್ಕೃತರು, 3 ಎಂ.ಟೆಕ್ ಸಂಶೋಧನಾ ಪ್ರಶಸ್ತಿ ಪುರಸ್ಕೃತರು ಮತ್ತು 91 ಉನ್ನತ ಶ್ರೇಣಿ ವಿಜೇತರು ಚಿನ್ನದ ಪದಕ ಮತ್ತು ಪ್ರಮಾಣಪತ್ರಗಳನ್ನು ಪಡೆದರು.



ಗುರುವಾರ ನಡೆದ ಸ್ಟಾರ್ಟ್‌ಅಪ್ ಶೃಂಗದಲ್ಲಿ ನ್ಯೂಮೋಸಿಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವಿಕಿರಣ್ ಅಣ್ಣಾಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಜೋಸ್ ಆಲುಕ್ಕಾಸ್ ವ್ಯವಸ್ಥಾಪಕ ನಿರ್ದೇಶಕ ವರ್ಗೀಸ್ ಆಲ್ಲುಕ್ಕಾಸ್, ಪಿ. ಶ್ಯಾಮರಾಜು ಉಪಸ್ಥಿತರಿದ್ದರು.

'ಸ್ಟಾರ್ಟ್‌ಅಪ್ ಪ್ರಾರಂಭಿಸುವ ಮುನ್ನ ಸ್ಪಷ್ಟತೆ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸುವ ಮುನ್ನ ಅದರ ಬಗ್ಗೆ ಸ್ಪಷ್ಟತೆ ಇರಬೇಕು' ಎಂದು ನ್ಯೂಮೋಸಿಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವಿಕಿರಣ್ ಅಣ್ಣಾಸ್ವಾಮಿ ಹೇಳಿದರು.

ರೇವಾ ವಿಶ್ವವಿದ್ಯಾಲಯ ಹಾಗೂ ಯೂನಿವರ್ಸಿಟಿ–ಇಂಡಸ್ಟ್ರಿ ಇಂಟರಾಕ್ಷನ್ ಸೆಂಟರ್ (ಯುಐಐಸಿ) ಗುರುವಾರ ಆಯೋಜಿಸಿದ್ದ 'ರೇವಾ ಸ್ಟಾರ್ಟ್‌ಅಪ್ ಶೃಂಗಸಭೆ'ಯಲ್ಲಿ ಅವರು ಮಾತನಾಡಿದರು.

'ಮುಂದಿನ ಪೀಳಿಗೆ ನಾವೀನ್ಯತೆ ಉದ್ಯಮಿಗಳನ್ನು ಪೋಷಿಸುವುದು ಹಾಗೂ ಸಂಪರ್ಕಿಸುವುದಕ್ಕೆ ಇದೊಂದು ಒಳ್ಳೆಯ ವೇದಿಕೆಯಾಗಿದೆ. ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ವಿಶಾಲ ದೃಷ್ಟಿಕೋನವನ್ನು ರೂಢಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಿಶ್ವವಿದ್ಯಾಲಯದ ಕುಲಪತಿ ಪಿ. ಶ್ಯಾಮರಾಜು ಮಾತನಾಡಿ, 'ಈ ಶೃಂಗಸಭೆಯು ಸಾವಿರಾರು ವಿದ್ಯಾರ್ಥಿಗಳಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸುವ ವೇದಿಕೆಯಾಗಿ ಕೆಲಸ ಮಾಡುತ್ತಿದೆ. ವಿದ್ಯಾರ್ಥಿಗಳು ಉದ್ಯೋಗಗಳನ್ನು ಹುಡುಕುವುದಕ್ಕಿಂತ ಉದ್ಯೋಗಗಳನ್ನು ನೀಡುವ ಗುರಿ ಹೊಂದಿರಬೇಕು' ಎಂದು ಕರೆ ನೀಡಿದರು.

ಶೃಂಗ ಸಭೆಯಲ್ಲಿ 35ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿಂದ ಉತ್ಪನ್ನಗಳ ಪ್ರದರ್ಶನ ನಡೆಯಿತು. ಜೋಸ್ ಅಲುಕ್ಕಾಸ್ ವ್ಯವಸ್ಥಾಪಕ ನಿರ್ದೇಶಕ ವರ್ಗೀಸ್ ಅಲ್ಲುಕ್ಕಾಸ್, ವಿಶ್ವವಿದ್ಯಾಲಯ ಉಪಕುಲಪತಿ ಸಂಜಯ್ ಆರ್ ಚಿಟ್ನಿಸ್, ಆರ್.ಸಿ. ಬಿರಾದಾರ್ ಉಪಸ್ಥಿತರಿದ್ದರು.

ನಿರ್ವಾಹಕ ಹುದ್ದೆ ನೇಮಕ ಆದೇಶ ವಿತರಣೆ

ಬೆಂಗಳೂರು: ಬಿಎಂಟಿಸಿ ನಿರ್ವಾಹಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ 371 ಜೆ (ಕಲ್ಯಾಣ ಕರ್ನಾಟಕ) ಮೀಸಲಾತಿಯಡಿ 212 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಅವರಿಗೆ ಶನಿವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇಮಕಾತಿ ಆದೇಶಪತ್ರ ವಿತರಿಸಿದರು.

ಬಿಎಂಟಿಸಿಯಲ್ಲಿ 2,500 ನಿರ್ವಾಹಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಅದರಲ್ಲಿ 214 ಹುದ್ದೆಗಳು 371 'ಜೆ'ಗೆ ಮೀಸಲಾಗಿದ್ದವು. 5,410 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. 1334 ಅಭ್ಯರ್ಥಿಗಳು ನಿಗದಿತ ಅಂಕಕ್ಕಿಂತ ಅಧಿಕ ಗಳಿಸಿದ್ದರು. ಮೂಲದಾಖಲೆ ಪರಿಶೀಲನೆ, ದೇಹದಾರ್ಢ್ಯ ಪರೀಕ್ಷೆಯ ಬಳಿಕ 212 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ನಿರ್ದೇಶಕ (ಭದ್ರತಾ ಮತ್ತು ಜಾಗೃತ) ಅಬ್ದುಲ್ ಅಹದ್, ನಿರ್ದೇಶಕಿ (ಮಾಹಿತಿ ತಂತ್ರಜ್ಞಾನ) ಶಿಲ್ಪಾ ಎಂ., ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಭಾಕರ್ ರೆಡ್ಡಿ ಭಾಗವಹಿಸಿದ್ದರು.

ಕೋವಿಡ್ ಬಳಿಕ ರಾಜ್ಯದ 80ಕ್ಕೂ ಅಧಿಕ ಚಿತ್ರಮಂದಿರಗಳಿಗೆ ಬಾಗಿಲು

ಮಾರಾಟಕ್ಕಿದೆ ಸಂಪಿಗೆ ಚಿತ್ರಮಂದಿರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷ ನಗರದ ಪ್ರಸಿದ್ಧ ಚಿತ್ರಮಂದಿರ 'ಕಾವೇರಿ' ಬಾಗಿಲು ಮುಚ್ಚಿತ್ತು. ಈಗ ಮತ್ತೊಂದು ಏಕಪರದೆಯ ಮಲ್ಲೇಶ್ವರದ 'ಸಂಪಿಗೆ' ಚಿತ್ರಮಂದಿರ ಮಾರಾಟಕ್ಕೆ ಸಿದ್ಧವಾಗಿದೆ. ಕೋವಿಡ್ ಬಳಿಕ ರಾಜ್ಯದಾದ್ಯಂತ 80ಕ್ಕೂ ಹೆಚ್ಚು ಏಕಪರದೆ ಚಿತ್ರಮಂದಿರಗಳು ಬಾಗಿಲು ಮುಚ್ಚಿವೆ.

1975ರಲ್ಲಿ ಪ್ರಾರಂಭಗೊಂಡಿದ್ದ ಸಂಪಿಗೆ ಚಿತ್ರಮಂದಿರ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಸಂಪಿಗೆ ಮತ್ತು ಸವಿತಾ ಎರಡು ಚಿತ್ರಮಂದಿರಗಳು ಒಟ್ಟಿಗಿವೆ. ಕಳೆದ ಕೆಲ ವರ್ಷಗಳಿಂದ ಸಂಪಿಗೆಯಲ್ಲಿ ತಮಿಳು, ತೆಲುಗು ಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದು, ಸವಿತಾದಲ್ಲಿ ಹೆಚ್ಚಿನ ಕನ್ನಡ ಸಿನಿಮಾಗಳು ಪ್ರದರ್ಶನಗೊಳ್ಳುತ್ತಿದ್ದವು.

'ಇತ್ತೀಚೆಗೆ ಉತ್ತಮ ಸಿನಿಮಾಗಳು ಬರುತ್ತಿಲ್ಲ. ಹೀಗಾಗಿ ವಹಿವಾಟು ಸಹ ಉತ್ತಮವಾಗಿಲ್ಲ. ಒಳ್ಳೆಯ ದರಕ್ಕೆ ಖರೀದಿಸುವವರು ಸಿಕ್ಕರೆ ಮಾರಾಟ ಮಾಡಲು ಆಲೋಚಿಸಿದ್ದೇವೆ' ಎನ್ನುತ್ತಾರೆ ಸಂಪಿಗೆ ಚಿತ್ರಮಂದಿರದ ಮಾಲೀಕ ರಮೇಶ್.



ಸಂಪಿಗೆ ಚಿತ್ರಮಂದಿರ ಪ್ರಜಾವಾಣಿ ಚಿತ್ರ

'ಹತ್ತು ವರ್ಷಗಳಲ್ಲಿ ನಗರದ ಮೂವಿಲ್ಯಾಂಡ್, ಮೇನಕಾ, ಮೈಸೂರಿನ ಲಕ್ಷ್ಮಿ, ಶಾಂತಲಾ, ಸರಸ್ವತಿ, ಮಾರುತಿ, ರಂಜಿತ್, ಒಪೇರಾ, ಶಾಲಿಮಾರ್, ವಿದ್ಯಾರಣ್ಯ, ರತ್ನ, ಸ್ಟರ್ಲಿಂಗ್, ಶಿವಮೊಗ್ಗದ ವಿನಾಯಕ, ಲಕ್ಷ್ಮಿ, ಮಾಡ್ರನ್, ಹೊನ್ನಾಳಿಯ ಶಾಂತ, ತರಿಕೆರೆಯ ಭಾರತ್, ಮುರುಡೇಶ್ವರದ ವಿಜಯಾ, ಮಂಗಳೂರಿನ ಜ್ಯೋತಿ ಸೇರಿದಂತೆ, ಉತ್ತರ ಕರ್ನಾಟಕದ ಕೆಲವು ಚಿತ್ರಮಂದಿರಗಳು ಬಾಗಿಲು ಹಾಕಿವೆ. ಇವೆಲ್ಲವೂ ಕೋವಿಡ್ ಬಳಿಕ ಮುಚ್ಚಿದ ಚಿತ್ರಮಂದಿರಗಳು. ಕೋವಿಡ್ ಪೂರ್ವದಲ್ಲಿಯೂ 'ಕಪಾಲಿ'ಯಂತಹ ಒಂದಷ್ಟು ದೊಡ್ಡ ಚಿತ್ರಮಂದಿರಗಳು ಬಾಗಿಲು ಹಾಕಿದ್ದವು ಎನ್ನುತ್ತಾರೆ' ವೀರೇಶ್ ಚಿತ್ರಮಂದಿರದ ಮಾಲೀಕ ಕುಶಾಲ್ ಎಲ್.ಸಿ.

ದೊಡ್ಡ ನಾಯಕರ ಸಿನಿಮಾಗಳು ಬಂದಾಗ ಮಾತ್ರ ಬಾಗಿಲು ತೆರೆಯುವ ಏಕಪರದೆ ಚಿತ್ರಮಂದಿರಗಳ ಸಂಖ್ಯೆ 100ಕ್ಕೂ ಅಧಿಕವಿದೆ. ಚಿತ್ರಮಂದಿರವನ್ನು ಲೀಸ್‌ಗೆ ಪಡೆದವರು ಒಂದೊಂದೇ ಚಿತ್ರಮಂದಿರವನ್ನು ಕೈಬಿಡುತ್ತಿದ್ದಾರೆ. ಭೂಮಿಯನ್ನು ಲೀಸ್‌ಗೆ ಪಡೆದು, ಬಾಡಿಗೆ ನೀಡಿ ಚಿತ್ರಮಂದಿರ ನಡೆಸುತ್ತಿರುವವರು ಕೂಡ ಬಾಡಿಗೆ ಕಟ್ಟಲಾಗದೆ ಬಾಗಿಲು ಹಾಕುತ್ತಿದ್ದಾರೆ.

ಖರ್ಚು ಹೆಚ್ಚು, ಆದಾಯವಿಲ್ಲ

'ಉತ್ತಮ ಚಿತ್ರಗಳು ಬರುತ್ತಿಲ್ಲ. 'ಪುಷ್ಪ-2' ಎರಡನೇ ದಿನಕ್ಕೆ ಗಳಿಕೆ ಕುಸಿದು ಹೋಯ್ತು. ವರ್ಷಕ್ಕೆ ಮೂರರಿಂದ ನಾಲ್ಕು ಹಿಟ್ ಚಿತ್ರಗಳಿಲ್ಲ. ಲಾಭ ಬದಿಗಿರಲಿ, ಅಸಲು ಪಡೆಯುವುದೇ ಕಷ್ಟವಾಗಿದೆ' ಎಂದು ರಮೇಶ್ ವಿವರಿಸಿದರು.

'ಕರೆಂಟ್ ಬಿಲ್, ಚಿತ್ರಮಂದಿರ ನಿರ್ವಹಣೆ, ನೀರು ಮೊದಲಾದ ವ್ಯವಸ್ಥೆಗಳಿಗೆ ತಿಂಗಳಿಗೆ ₹7 ಲಕ್ಷದಿಂದ ₹8 ಲಕ್ಷ ಖರ್ಚಾಗುತ್ತಿದೆ. ಚಿತ್ರಮಂದಿರದ ಪರವಾನಗಿ ನವೀಕರಣಕ್ಕೆ ಸುಮಾರು ₹80 ಸಾವಿರ. ಕಟ್ಟಡ ಬಾಡಿಗೆಯದ್ದಾದರೆ ಅದರ ಖರ್ಚು ವಿಪರೀತ. ಹೀಗಾಗಿ ಇಂದು ಚಿತ್ರಮಂದಿರ ನಿರ್ವಹಣೆ ಲಾಭದಾಯಕವಲ್ಲ' ಎನ್ನುತ್ತಾರೆ ರಮೇಶ್.



ಕ್ಷಯ ರೋಗವನ್ನು ನಿರ್ಮೂಲನೆ ಮಾಡಲು 100 ದಿನದ ಅಭಿಯಾನಕ್ಕೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ಡಾ. ನವೀನ್ ಭಟ್ ಅವರು ಶನಿವಾರ ಚಾಲನೆ ನೀಡಿದರು

ಕ್ಷಯ ನಿರ್ಮೂಲನೆಗೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕ್ಷಯ ರೋಗವನ್ನು ನಿರ್ಮೂಲನೆ ಮಾಡಲು 100 ದಿನದ ಅಭಿಯಾನಕ್ಕೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ಡಾ. ನವೀನ್ ಭಟ್ ಅವರು ಶನಿವಾರ ಚಾಲನೆ ನೀಡಿದರು.

ಕರ್ನಾಟಕ ಸರ್ಕಾರವು ರಾಷ್ಟ್ರೀಯ ಟಿಬಿ ನಿರ್ಮೂಲನೆ ಕಾರ್ಯಕ್ರಮದಡಿ (ಎನ್‌ಟಿಇಪಿ) ಆಯೋಜಿಸಲಾಗಿರುವ ಅಭಿಯಾನದಲ್ಲಿ ಕ್ಷಯ ರೋಗ (ಟಿಬಿ) ಸಂಬಂಧಿತ ಮರಣವನ್ನು ಗಣನೀಯವಾಗಿ ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದರು.

'2025ರ ವೇಳೆಗೆ 'ಟಿಬಿ-ಮುಕ್ತ ಭಾರತ'ವನ್ನಾಗಿಲು ರಾಷ್ಟ್ರವ್ಯಾಪಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಅಪಾಯದ ವ್ಯಕ್ತಿಗಳನ್ನು ಗುರುತಿಸುವುದು, ಸಮಗ್ರ ಆರೈಕೆಯನ್ನು ಒದಗಿಸುವುದು ಮತ್ತು ರಾಜ್ಯದಾದ್ಯಂತ ಸಮುದಾಯ ತೊಡಗಿಸಿಕೊಳ್ಳುವಿಕೆಯನ್ನು ಅಭಿಯಾನದಲ್ಲಿ ಉತ್ತೇಜಿಸಲಾಗುತ್ತದೆ' ಎಂದು ಹೇಳಿದರು.

ಸಕ್ರಿಯ ಟಿಬಿಯ ಹೆಚ್ಚಿನ ಅಪಾಯವನ್ನು ಹೊಂದಿರುವ ವ್ಯಕ್ತಿಗಳಿಗೆ 'ಟಿಬಿ ಪ್ರಿವೆಂಟಿವ್ ಥೆರಪಿ' (ಟಿಪಿಟಿ) ಒದಗಿಸಲು ಅಭಿಯಾನವು ಆದ್ಯತೆ ನೀಡುತ್ತದೆ. ಇದರಿಂದ ಹೊಸ ಪ್ರಕರಣಗಳನ್ನು ತಡೆಗಟ್ಟಲು ಸಹಾಯಕವಾಗಲಿದೆ. ರೋಗಲಕ್ಷಣದ ವ್ಯಕ್ತಿಗಳಿರುವ ಮನೆಗಳು, ಕಾರಾಗೃಹಗಳು, ವೃದ್ಧಾಶ್ರಮಗಳು, ಅನಾಥಾಶ್ರಮಗಳು ಮತ್ತು ಕೊಳೆಗೇರಿ ಪ್ರದೇಶಗಳು, ಗಣಿಗಾರಿಕೆ ಪ್ರದೇಶಗಳು ಮತ್ತು ಚಹಾ ಅಥವಾ ಕಾಫಿ ಕಾರ್ಖಾನೆಗಳಲ್ಲಿ ತಪಾಸಣೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಕೇಂದ್ರ ಕ್ಷಯರೋಗ ವಿಭಾಗದ ಹೆಚ್ಚುವರಿ ಆಯುಕ್ತ ಡಾ.ಪವನ್ ಕುಮಾರ್, ಕರ್ನಾಟಕ ಸರ್ಕಾರದ ಕ್ಷಯರೋಗ ವಿಭಾಗದ ಜಂಟಿ ನಿರ್ದೇಶಕ ಡಾ.ಶಿವಯೋಗಪ್ಪ, ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ ಡಾ.ಸಿ-ರಾಜುದ್ದೀನ್ ಮದನಿ ಉಪಸ್ಥಿತರಿದ್ದರು.

'ವಿಪ್ರೋತ್ಸವ'ದಲ್ಲಿ ಆರ್‌.ವಿ. ದೇಶಪಾಂಡೆ ಬೇಸರ

'ಬ್ರಾಹ್ಮಣರಲ್ಲಿ ಸಂಘಟನೆ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣ ಸಮುದಾಯದವರು ರಾಷ್ಟ್ರದ ಒಳಿತಿಗಾಗಿ ತ್ಯಾಗ, ಬಲಿದಾನ ಮಾಡಿದ್ದು, ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ ನೀಡಿದ್ದಾರೆ. ಸಮುದಾಯದಲ್ಲಿ ಈಗ ಸಂಘಟನೆಯ ಕೊರತೆ ಕಾಣಿಸುತ್ತಿದೆ' ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್‌.ವಿ. ದೇಶಪಾಂಡೆ ಬೇಸರ ವ್ಯಕ್ತಪಡಿಸಿದರು.

ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡ 'ವಿಪ್ರೋತ್ಸವ' ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಬ್ರಾಹ್ಮಣ ಸಮುದಾಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬುದ್ಧಿವಂತರಿದ್ದಾರೆ. ಸಮಾಜದಲ್ಲಿ ಸಮುದಾಯದವರಿಗೆ ಗೌರವವಿದೆ. ಆದರೆ, ಸಂಘಟಿತರಾಗುತ್ತಿಲ್ಲ. ನಾನು ಪ್ರತಿನಿಧಿಸುವ ಹಳಿಯಾಳ ವಿಧಾನಸಭೆ ಕ್ಷೇತ್ರದಲ್ಲಿ 1.80 ಲಕ್ಷ ಮತಗಳಿವೆ. ಇವುಗಳಲ್ಲಿ ಸುಮಾರು ಎರಡು ಸಾವಿರದಷ್ಟು ಬ್ರಾಹ್ಮಣರ ಮತವಿದ್ದು, ಅದೇ ಸಮುದಾಯದ ನನಗೆ ಈ ಮತಗಳು ಬರುವ ಖಚಿತತೆಯಿಲ್ಲ. ಸಂಘಟನೆಯಾಗುವುದು ಬೇರೆ ಸಮುದಾಯದ ಮೇಲೆ ದ್ವೇಷ ಸಾಧಿಸಲಿಕ್ಕಲ್ಲ' ಎಂದರು.

'ಬ್ರಾಹ್ಮಣರು ಸರ್ಕಾರದಿಂದ ಯಾವುದೇ ಅಪೇಕ್ಷೆ ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ ಸಮುದಾಯದವರನ್ನು ಅನಗತ್ಯವಾಗಿ ದೂಷಿಸುವುದನ್ನು ಬಿಡಬೇಕು. ಆರ್ಥಿಕವಾಗಿ ಸದೃಢರಾಗಿರುವವರು ಸಮಾಜಕ್ಕೆ ಕೊಡುಗೆ ನೀಡಬೇಕು. ನೂರಾರು ವರ್ಷಗಳ ಹಳೆಯ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಬೇಕು' ಎಂದು ಹೇಳಿದ ಅವರು, ಸಮುದಾಯದ ಬಡವರಿಗೆ ವಿತರಿಸಲು ಸಂಘಕ್ಕೆ ನೂರು ಹೊಲಿಗೆ ಯಂತ್ರಗಳನ್ನು ನೀಡುವುದಾಗಿ ಘೋಷಿಸಿದರು.

ಮಹಾಸಂಘದ ಅಧ್ಯಕ್ಷ ಜಿ.ಆರ್. ಪ್ರದೀಪ, 'ಬ್ರಾಹ್ಮಣ ಸಮುದಾಯದಲ್ಲಿ ಹಲವಾರು ಸಾಧಕರಿದ್ದು, ಪದ್ಮ ಪ್ರಶಸ್ತಿಗೆ ಅರ್ಹರಾದವರೂ ಇದ್ದಾರೆ. ಸರ್ಕಾರಗಳು ಅಂತಹವರನ್ನು ಗುರುತಿಸಿ, ಗೌರವಿಸಬೇಕು' ಎಂದರು.

ಇದಕ್ಕೂ ಮೊದಲು ವಿಪ್ರ ಭಜನಾ ಮಂಡಳಿಗಳಿಂದ ಭಕ್ತಿಸಾರ ಹಾಗೂ ಮೇಘ ಶಿವಕುಮಾರ್ ಮತ್ತು ತಂಡದಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು.



ಸಮಾರಂಭದಲ್ಲಿ ಬಾಬು ಕೃಷ್ಣಮೂರ್ತಿ, ಶ್ರೀಧರ, ರವಿ ಹೆಗಡೆ, ಡಾ.ಬಿ.ಎಸ್ ಶ್ರೀನಾಥ್ ಮತ್ತು ಡಾ. ಸುಧೀರ್ ಹೆಗಡೆ ಅವರಿಗೆ 'ಭಾರ್ಗವ ಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗೋವಿಂದ ಕುಲಕರ್ಣಿ, ಅಸಗೋಡು ಜಯಸಿಂಹ, ಸಿ.ಕೆ. ರಾಮಮೂರ್ತಿ, ಆರ್‌.ವಿ. ದೇಶಪಾಂಡೆ ಹಾಗೂ ಜಿ.ಆರ್. ಪ್ರದೀಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಐವರಿಗೆ 'ಭಾರ್ಗವ ಭೂಷಣ' ಪ್ರದಾನ

ಚಲನಚಿತ್ರ ನಟ ಶ್ರೀಧರ, ಸಾಹಿತಿ ಬಾಬು ಕೃಷ್ಣಮೂರ್ತಿ, 'ಕನ್ನಡಪ್ರಭ' ಸಂಪಾದಕ ರವಿ ಹೆಗಡೆ, ವೈದ್ಯರಾದ ಬಿ.ಎಸ್. ಶ್ರೀನಾಥ್ ಹಾಗೂ ಸುಧೀರ್ ಹೆಗಡೆ ಅವರಿಗೆ 'ಭಾರ್ಗವ ಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಸಿ.ಕೆ. ರಾಮಮೂರ್ತಿ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ರಾಷ್ಟ್ರೀಯ ಅಧ್ಯಕ್ಷ ಗೋವಿಂದ ಕುಲಕರ್ಣಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಕನ್ನಡ ಮಾತಾಡೋ ಬಾಯಿಗೆ ಮಿಠಾಯಿ': ಅತಿಥಿಗಳು: ಹಂಸಲೇಖ, ಕೃಷ್ಣೇಗೌಡ, ಆಯೋಜನೆ: ಸ್ಪಂದನ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ, ಸ್ಥಳ: ಕಾವೇರಿನಗರ ಬಸ್ ತಂಗುದಾಣ, ಕುರುಬರಹಳ್ಳಿ, ಬೆಳಿಗ್ಗೆ 9



ಹಂಸಲೇಖ

ಶಾಂತಲಾ ನೃತ್ಯ ವೈಭವ: ಪ್ರಸ್ತುತಿ: ಶರಣ್ಯ, ಸಾಹಿತ್ಯ ನಾಗೇಶ್, ಗೌರಿ ಬಡಿಗೇರ್, ಅನೂಷ್ಯ, ಆಯೋಜನೆ: ಶಾಂತಲ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ನೃತ್ಯ ಧ್ವನಿ: ಭರತನಾಟ್ಯ ಪ್ರದರ್ಶನ: ಅತಿಥಿಗಳು: ಮಾಲ ಶಶಿಕಾಂತ್, ಬಿ.ವಿ. ಶೇಷಾ, ಆಯೋಜನೆ: ಕಲಾಪ್ರಕಾಶಂ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10

ನಾ. ಮೊಗಸಾಲೆ ಅವರ 'ವಿಶ್ವಾಂಬರ' ಪುಸ್ತಕ ಬಿಡುಗಡೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ, ಕೆ. ಕೃಷ್ಣಸ್ವಾಮಿ, ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ್, ಪ್ರಕಾಶ್ ಬೆಳವಾಡಿ, ಅಧ್ಯಕ್ಷತೆ: ಮಧು ಪಂಡಿತ್ ದಾಸ, ಆಯೋಜನೆ: ಇಸ್ಕಾನ್ ಬೆಂಗಳೂರು, ಸ್ಥಳ: ಇಸ್ಕಾನ್ ಹರೇಕೃಷ್ಣ ಹಿಲ್, ರಾಜಾಜಿನಗರ, ಬೆಳಿಗ್ಗೆ 10.30

'ಪತ್ರಿಕೋದ್ಯಮ' ಕುರಿತು ವಿಚಾರಸಂಕಿರಣ: ಉದ್ಘಾಟನೆ: ಮೋಹನ್‌ದೇವ್ ಆಳ್ವ, ಅತಿಥಿ: ಹುಣಸವಾಡಿ ರಾಜನ್, ಅಧ್ಯಕ್ಷತೆ: ಪಿ.ವಿ. ನಾರಾಯಣ, ವಿಚಾರಗೋಷ್ಠಿ: ಇಂದೂಧರ್ ಹೊನ್ನಾಪುರ, ರವೀಂದ್ರ ರೇಷ್ಮೆ, ಮಾಲತಿ ಭಟ್, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್‌.ಆರ್. ಕಾಲೊನಿ, ಬೆಳಿಗ್ಗೆ 10.30

ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ರು. ಬಸಪ್ಪ, ಉದ್ಘಾಟನೆ: ಶ್ರೀಲತಾ ಎ., ಅಧ್ಯಕ್ಷತೆ: ವಿ. ರೇಣುಕಾಪ್ರಸನ್ನ, ಪ್ರಶಸ್ತಿ ಪುರಸ್ಕೃತರು: ಸಿ.ಕೆ. ರಾಮೇಗೌಡ, ಕೆ.ಜಿ. ಲಿಂಗದೇವರು, ಭಾಗ್ಯಲಕ್ಷ್ಮಿ ಮಗ್ಗೆ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಪ್ರೊ.ಎಸ್.ಜಿ.ಎಸ್.78': ಉದ್ಘಾಟನೆ: ಹಂಸಲೇಖ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಪ್ರಾಸ್ತಾವಿಕ ನುಡಿ: ಅಗ್ರಹಾರ ಕೃಷ್ಣಮೂರ್ತಿ, 'ಎಸ್.ಜಿ.ಎಸ್. ಸಮಗ್ರ ನಾಟಕಗಳು', 'ಅನಾದಿಯ ಗೆಜ್ಜೆಧ್ವನಿ' ಪುಸ್ತಕಗಳ ಬಿಡುಗಡೆ: ಆಯೋಜನೆ: ಭಾಗವತರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

'ಅನುಪಮಾ ಮತ್ತು ಎಚ್.ವಿ. ಸಾವಿತ್ರಮ್ಮ' ಪ್ರಶಸ್ತಿ ಪ್ರದಾನ: ಹೇಮಲತಾ ಮಹಿಷಿ, ಅತಿಥಿಗಳು: ಬಂಜಗೆರೆ ಜಯಪ್ರಕಾಶ್, ದೇವು ಪತ್ತಾರ್, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಪ್ರಶಸ್ತಿ ಪುರಸ್ಕೃತರು: ವಿಜಯಾ ಸುಬ್ಬರಾಜ್, ಡಾ. ವಸುಂಧರಾ ಭೂಪತಿ, ಸಬಿಹಾ ಭೂಮಿಗೌಡ, ಕೆ.ಆರ್. ಸಂಧ್ಯಾರೆಡ್ಡಿ, ಲತಾ ಗುತ್ತಿ, ಅಲಕಾ ಕಟ್ಟೆಮನೆ, ಎಲ್‌.ವಿ. ಶಾಂತಕುಮಾರಿ, ಎಚ್.ಆರ್. ಸುಜಾತಾ, ಅನುಪಮಾ ಪ್ರಸಾದ್, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ಬಂಜಗೆರೆ ಜಯಪ್ರಕಾಶ್

ಕುಂ.ವೀ ಅವರು ಅನುವಾದಿಸಿದ 'ಗುರಜಾಡ ವೇಂಕಟ ಅಪ್ಪಾರಾವು' ಪುಸ್ತಕ ಬಿಡುಗಡೆ, ಎಂ.ಎಸ್. ನರಸಿಂಹಮೂರ್ತಿ ಅವರಿಗೆ ಸಾ.ಕೃ. ಪ್ರಶಸ್ತಿ ಪ್ರದಾನ: ಅತಿಥಿಗಳು: ಬಾಬು ಕೃಷ್ಣಮೂರ್ತಿ, ಶ್ರೀನಿವಾಸ ಪ್ರಭು, ಕೊವ್ವಲಿ ಗೋಪಾಲಕೃಷ್ಣ, ಆಯೋಜನೆ: ವಿಕ್ರಮ್ ಪ್ರಕಾಶನ, ಸ್ಥಳ: ನ್ಯಾಷನಲ್ ಕಾಲೇಜಿನ ಸಭಾಂಗಣ, ಉತ್ತರಾದಿಮಠದ ಎದುರು, ಬಸವನಗುಡಿ, ಬೆಳಿಗ್ಗೆ 11

'ಕುವೆಂಪು ಸಾಹಿತ್ಯದ ಪ್ರಸ್ತುತತೆ' ವಿಚಾರಕ್ರಾಂತಿಗೆ ಆಹ್ವಾನ: 'ಕುವೆಂಪು ವೈಚಾರಿಕತೆ' ಕುರಿತು: ರವಿಕುಮಾರ್ ಬಾಗಿ, 'ಕುವೆಂಪು ಕವಿತೆ ಮತ್ತು ಆತ್ಮಕತೆ' ಕುರಿತು: ಅಕ್ಷತಾ ಹುಂಚದಕಟ್ಟೆ, ಸಂಯೋಜನೆ: ವಿ.ಎಲ್. ನರಸಿಂಹಮೂರ್ತಿ, 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಆಯ್ದ ಭಾಗಗಳ ಓದು: ಸಂತೋಷ್ ದಿಂಡಗೂರು, 'ಕುವೆಂಪು ಸಾಹಿತ್ಯದ ತಾತ್ವಿಕನೋಟ': ಬಂಜಗೆರೆ ಜಯಪ್ರಕಾಶ್, ಸಂಯೋಜನೆ: ಹುಲಿಕುಂಟೆಮೂರ್ತಿ, ಆಯೋಜನೆ: ಜಂಗಮ ಕಲೆಕ್ಟಿವ್ ಬೆಂಗಳೂರು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11ರಿಂದ

'ಸಿದ್ಧಾರ್ಥ ಬುದ್ಧನಾದ ಬಗೆ' ಉಪನ್ಯಾಸ: ಮೂಡ್ನಾಕೂಡು ಚಿನ್ನಸ್ವಾಮಿ, ಆಯೋಜನೆ: ಪರಸ್ಪರ ಎಂಟನೇ ಮೈಲಿ, ಸ್ಥಳ: ಭೂಮಿಕಾ ಸೇವಾ ಫೌಂಡೇಷನ್, ಅಸೆಂಟರ್ ಕಾಲೇಜು ಎದುರು, ಹೆಸರಘಟ್ಟ ರಸ್ತೆ, ಬೆಳಿಗ್ಗೆ 11

ಚಂದ್ರಶೇಖರ ಕಂಬಾರ ಅವರಿಗೆ ಫೆಲೋಶಿಪ್ ಪ್ರದಾನ, ಸಂವಾದ ಕಾರ್ಯಕ್ರಮ: ಫೆಲೋಶಿಪ್ ಪ್ರದಾನ: ಮಾಧವ್ ಕೌಶಿಕ್, ಸಂವಾದ ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಭಾಷಣಕಾರರು: ಎಚ್.ಎಸ್. ಶಿವಪ್ರಕಾಶ್, ಬಸವರಾಜ ಸಾದರ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿಯ ಸಭಾಂಗಣ, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಮಧ್ಯಾಹ್ನ 2.30

'ಮಾಸದ ಕಥೆಗಳು': ಭಾಗವಹಿಸುವವರು: ಅನಂತ ಚಿನಿವಾರ್, ಶಾಂತರಾಜು, ಪ್ರಮೋದ್ ಶಿಗ್ಗಾಂವ್, ಗೋವಿಂದಸ್ವಾಮಿ, ಆಯೋಜನೆ ಮತ್ತು ಸ್ಥಳ: ತಾರಾಅರೇನಾ, ಚುಂಚಘಟ್ಟ, ಸಂಜೆ 4

ಸ್ವರ ಮಾಲಾ: ಗಾಯನ: ಅನಿರುದ್ಧ ಐತಾಳ್, ತಬಲಾ: ಸುಮಿತ್ ನಾಯಕ್, ಹಾರ್ಮೋನಿಯಂ: ತೇಜಸ್ ಕಟೋಟಿ, ಆಯೋಜನೆ ಮತ್ತು ಸ್ಥಳ: ಕೋಬಾಲ್ಟ್, ರಾಜರಾಜೇಶ್ವರಿನಗರ, ಸಂಜೆ 5

ವಿರಳ ವಾದ್ಯವೈಭವ: ಅಖಿಲೇಶ್ ಗುಂಡೇಚಾ, ಜ್ಞಾನೇಶ್ವರ್ ದೇಶಮುಖ್, ಅನುಜಾ ಬಿ.ಎಸ್., ಸಾರಂಗಿ ಲೆಹ್ರಾ: ಸರ್ಫರಾಜ್ ಖಾನ್, ಸುರ್‌ಬಹಾರ್: ಬಿಸ್ವಜೀತ್ ಸರ್ಕಾರ್, ತಬಲಾ: ಕಿರಣ್ ಯಾವಗಲ್, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಸಂಜೆ 5.30

ಸ್ವರನಮನ: ಅತಿಥಿಗಳು: ಡಾ.ಸಿ.ಆರ್. ಚಂದ್ರಶೇಖರ್, ಶುಭಾ ಧನಂಜಯ, ಪೂರ್ಣಾ ಆಚಾರ್ಯ, ಸಂಗೀತ ಕಛೇರಿ: ಸತೀಶ್ ಹಂಪಿಹೊಳಿ, ಕಾಶೀನಾಥ್ ಪತ್ತಾರ್, ಶಿವಕುಮಾರ್ ಮಹಾಂತ್, ಅಮೃತೇಶ್ ಕುಲಕರ್ಣಿ, ನಾಗೇಂದ್ರ ರಾಣಾಪೂರ್, ವಿನೀತ್ ರಾಣಾಪೂರ್, ಪುನೀತ್ ರಾಣಾಪೂರ್, ಅಮಿತ್ ಭಟ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್, ದತ್ತಾತ್ರೇಯ ದೇವಸ್ಥಾನಂ ಟ್ರಸ್ಟ್, ಸ್ಥಳ: ದತ್ತಾತ್ರೇಯ ದೇವಸ್ಥಾನ, ಮೂರನೇ ಬ್ಲಾಕ್ ತ್ಯಾಗರಾಜನಗರ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಿಚಾರಣೆಗೆ ಸಿಗದ ಅನುಮತಿ

ದರ್ಶನ್‌ಗೆ ವಿಶೇಷ ಆತಿಥ್ಯ ಪ್ರಕರಣ • ಪ್ರತಿಕ್ರಿಯೆ ನೀಡದ ಸಕ್ಷಮ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಟ ದರ್ಶನ್ ಹಾಗೂ ಇತರೆ ಆರೋಪಿಗಳಿಗೆ ವಿಶೇಷ ಆತಿಥ್ಯ ಸೇರಿದಂತೆ ಮೂರು ಪ್ರತ್ಯೇಕ ಪ್ರಕರಣಗಳ ಸಂಬಂಧ ಜೈಲು ಅಧಿಕಾರಿಗಳ ವಿರುದ್ಧ ತನಿಖೆ ಹಾಗೂ ವಿಚಾರಣೆ ನಡೆಸಲು ಆಗ್ನೇಯ ವಿಭಾಗದ ಡಿಸಿಪಿ ಸಕ್ಷಮ ಪ್ರಾಧಿಕಾರದ (ಪ್ರಾಸಿಕ್ಯೂಷನ್) ಅನುಮತಿ ಕೋರಿ ಪತ್ರ ಬರೆದಿದ್ದು, ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಪ್ರಕರಣದಲ್ಲಿ ಜೈಲಿನ ಒಂಬತ್ತಕ್ಕೂ ಹೆಚ್ಚು ಅಧಿಕಾರಿಗಳು ಶಾಮೀಲಾಗಿರುವುದು ಸಾಬೀತಾದ ಬೆನ್ನಲ್ಲೇ ಅವರ ವಿರುದ್ಧ ತನಿಖೆ ಹಾಗೂ ವಿಚಾರಣೆ ನಡೆಸಬೇಕಿದ್ದು, ಅನುಮತಿ ನೀಡುವಂತೆ

ಮುಖ್ಯಾಂಶಗಳು

- 90 ದಿನ ಕಳೆದರೂ ಸಲ್ಲಿಕೆಯಾಗದ ಆರೋಪ ಪಟ್ಟಿ
- ಮೂರು ಪ್ರತ್ಯೇಕ ಪ್ರಕರಣಗಳು ದಾಖಲು

ಕಾರಾಗೃಹ ಇಲಾಖೆ ಮಹಾನಿರ್ದೇಶಕರು ಮತ್ತು ಗೃಹ ಇಲಾಖೆಗೆ ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತೀಮಾ ಪತ್ರ ಬರೆದಿದ್ದಾರೆ.

ಸಕ್ಷಮ ಪ್ರಾಧಿಕಾರದ ಅನುಮತಿ ಬಂದ ಬಳಿಕ ವಿಚಾರಣೆ ನಡೆಸಿ, ಆರೋಪ ಪಟ್ಟಿ ಸಲ್ಲಿಸಲಾಗುತ್ತದೆ. ಈ ವಿಚಾರವನ್ನು ಕೋರ್ಟ್ ಗಮನಕ್ಕೂ ತರಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣ ದಾಖಲಾದ 90



ದರ್ಶನ್

ದಿನ ದೊಳಗೆ ದೋಷಾರೋಪ ಪಟ್ಟಿ ಸಲ್ಲಿಸಬೇಕು. ಆದರೆ, ದರ್ಶನ್‌ಗೆ ಜೈಲಿನಲ್ಲಿ ಆತಿಥ್ಯ, ಮೊಬೈಲ್ ಬಳಕೆ ಹಾಗೂ ಕಾರ್ಯಾಚರಣೆಗೆ ಬಂದ ಸಿಸಿಬಿ ಅಧಿಕಾರಿಗಳನ್ನು ತಡೆದು, ಆರೋಪಿಗಳಿದ್ದ ಬ್ಯಾರಕ್‌ನಿಂದ ಕೆಲ ವಸ್ತುಗಳನ್ನು ಪೆಟ್ಟಿಗೆಯಲ್ಲಿ ಕೊಂಡೊಯ್ದ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಆ.26ರಂದು ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಾಗಿತ್ತು. ಎರಡು ಪ್ರಕರಣದಲ್ಲಿ ದರ್ಶನ್ ಪ್ರಮುಖ ಆರೋಪಿ. ಮತ್ತೊಂದು ಪ್ರಕರಣದಲ್ಲಿ ಜೈಲಿನ ಅಧಿಕಾರಿಗಳು ಆರೋಪಿಗಳಾಗಿದ್ದಾರೆ.

ಪ್ರಕರಣಗಳ ವಿಚಾರಣೆಗಾಗಿ ಎಸಿಪಿ ನೇತೃತ್ವದಲ್ಲಿ ತನಿಖೆಗೆ ಸೂಚಿಸಲಾಗಿತ್ತು. ದರ್ಶನ್, ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನಾ, ದರ್ಶನ್ ಮ್ಯಾನೇಜರ್ ನಾಗರಾಜ್, ಮತ್ತೊಬ್ಬ ರೌಡಿಶೀಟರ್ ಜಾನಿ ಅಲಿಯಾಸ್ ಜನಾರ್ಧನ್ ಹಾಗೂ ಜೈಲಿನ ಅಧಿಕಾರಿಗಳ ಹೇಳಿಕೆ ಪಡೆಯಲಾಗಿದೆ.

ಆದರೆ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ, ಕಾರಾಗೃಹ ಇಲಾಖೆಗೆ ವ್ಯಾಪ್ತಿಗೆ ಬರುವುದರಿಂದ 'ಸಿ' ಮತ್ತು 'ಡಿ' ದರ್ಜೆಯ ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೋರಿ ಕಾರಾಗೃಹ ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆಯಲಾಗಿದೆ. ಜೈಲಿನ ಮುಖ್ಯ ಅಧೀಕ್ಷಕರು, ಅಧೀಕ್ಷಕರು, ಡಿವೈಎಸ್ಪಿ ಹಂತದ ಅಧಿಕಾರಿಗಳ ವಿಚಾರಣೆಗೆ ಗೃಹ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್' ಸಮ್ಮೇಳನದಲ್ಲಿ ಕೆ.ಎನ್. ಹರಿಕುಮಾರ್

'ನಕಲಿ ಸುದ್ದಿಗಳಿಂದ ಸಮಸ್ಯೆಯಾಗುತ್ತಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳಿಗಿಂತ ಪತ್ರಿಕೆಗಳು ವಿಭಿನ್ನವಾಗಿದ್ದು, ಅವುಗಳ ಪಾತ್ರವೂ ಬೇರೆಯದ್ದೇ ಆಗಿದೆ. ಮಾಧ್ಯಮ ಎಂದಿಗೂ ಸಂಕಷ್ಟದ ವೃತ್ತಿಯಾಗಿದ್ದು, ನಕಲಿ ಸುದ್ದಿಗಳಿಂದ (ಫೇಕ್ ನ್ಯೂಸ್) ಸಮಸ್ಯೆಯಾಗುತ್ತಿವೆ' ಎಂದು 'ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್' ಮಾಜಿ ಸಂಪಾದಕ ಕೆ.ಎನ್. ಹರಿಕುಮಾರ್ ಹೇಳಿದರು.

ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಮತ್ತು ಸ್ಕೂಲ್ ಆಫ್ ಕಮ್ಯುನಿಕೇಷನ್ ಆ್ಯಂಡ್ ಮೀಡಿಯಾ ಸ್ಟಡೀಸ್ ಆಫ್ ಸೇಂಟ್ ಜೋಸೆಫ್ಸ್ ಯುನಿವರ್ಸಿಟಿ ಶನಿವಾರ ಆಯೋಜಿಸಿದ್ದ 'ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್' ಸಮ್ಮೇಳನದಲ್ಲಿ 'ಡಿಜಿಟಲ್ ಯುಗದಲ್ಲಿ ಪತ್ರಿಕೋದ್ಯಮ: ಹೊಸ ಸವಾಲುಗಳು, ನಕಲಿ ಸುದ್ದಿಗಳು ಮತ್ತು ಮಾಧ್ಯಮ ನೈತಿಕತೆ' ಕುರಿತ ವಿಷಯವಾಗಿ ಅವರು ಮಾತನಾಡಿದರು.



'ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್' ಸಮ್ಮೇಳನದಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಮಾಜಿ ಸಂಪಾದಕ ಕೆ.ಎನ್. ಹರಿಕುಮಾರ್ ಮಾತನಾಡಿದರು. ಸ್ವರಾಜ್ಯದ ಸಂಪಾದಕೀಯ ನಿರ್ದೇಶಕ ಆರ್.ಜಗನ್ನಾಥನ್, ಇಂಡಿಯಾ ಟುಡೇ ಸಂಪಾದಕೀಯ ನಿರ್ದೇಶಕ ರಾಜ್ ಚೆಂಗಪ್ಪ ಭಾಗವಹಿಸಿದ್ದರು

'ಮಾಧ್ಯಮ ನೀತಿಗೆ ಸಂಬಂಧಿಸಿದಂತೆ ಸರ್ಕಾರದ ಜವಾಬ್ದಾರಿ' ಕುರಿತ ವಿಷಯದ ಬಗ್ಗೆ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ನಕಲಿ ಸುದ್ದಿಗಳ ಅಪಾಯ ಅತಿಯಾಗಿದ್ದು, ಸತ್ಯ ಮತ್ತು ವಾಕ್ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಸಮತೋಲಿತ ಸುದ್ದಿಗಳನ್ನು ನೀಡುವುದು ಅಗತ್ಯವಾಗಿದೆ' ಎಂದರು.

'ಸರ್ಕಾರ 'ಫ್ಯಾಕ್ಟ್ ಚೆಕ್' ಘಟಕವನ್ನು ಸ್ಥಾಪಿಸುವುದರಿಂದ ನಕಲಿ ಸುದ್ದಿಗಳನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಪತ್ರಕರ್ತರು ಜವಾಬ್ದಾರಿಯುತವಾಗಿರಬೇಕು' ಎಂದು ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಹುತೇಕ ಗಣ್ಯರು ಅಭಿಪ್ರಾಯಪಟ್ಟರು.

ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾದ ಅಧ್ಯಕ್ಷ ಅನಂತ್ ನಾಥ್, ಸೇಂಟ್ ಜೋಸೆಫ್ಸ್ ವಿವಿ ಡೀನ್ ಫಾದರ್ ರಿಚರ್ಡ್ ರೆಗೊ, ರಾಷ್ಟ್ರೀಯ ಕಾನೂನು ಶಾಲೆಯ ಕುಲಪತಿ ಡಾ. ಸುಧೀರ್ ಕೃಷ್ಣಸ್ವಾಮಿ ಅವರು ಭಾಗವಹಿಸಿದ್ದರು.



ನಿವೃತ್ತ ಅಧಿಕಾರಿಗಳಿಗೆ ಸನ್ಮಾನ

ನಗರದ ಅರಣ್ಯ ಭವನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಅರಣ್ಯ ಅಧಿಕಾರಿಗಳಾದ (ಎಡದಿಂದ ಕುಳಿತವರು) ಎ.ಸಿ ಲಕ್ಷ್ಮಣ್, ಪರಮೇಶ್ವರ್, ಎ.ಎನ್.ಯಲ್ಲಪ್ಪ ರೆಡ್ಡಿ, ಎಂ.ಕೆ.ಅಪ್ಪಯ್ಯ , ಆರ್. ಎಂ.ಪಾಲಣ್ಣ ಅವರನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸನ್ಮಾನಿಸಿದರು. (ಎಡದಿಂದ ನಿಂತವರು) ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲ ಎನ್.ಕೆ., ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎ.ಕೆ.ಸಿಂಗ್, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, 'ಮೈ ಫಾರೆಸ್ಟ್' ನಿಯತಕಾಲಿಕೆಯ ಪ್ರಧಾನ ಸಂಪಾದಕ ಕೇಶವಮೂರ್ತಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ. ಕೆ.ದೀಕ್ಷಿತ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯ ಮಾಪನ, ಕಾರ್ಯಯೋಜನೆ, ಸಂಶೋಧನೆ) ಬಿ. ಪಿ.ರವಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಧಾ ದೇವಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮಣ್ಣಿನ ಫಲವತ್ತತೆ ಕಾರ್ಡ್ ವಿತರಣೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ರೈತರು ತಮ್ಮ ಜಮೀನಿನ ಮಣ್ಣನ್ನು ಎರಡು ಮೂರು ವರ್ಷಕ್ಕೆ ಒಂದು ಸಲ ಪರೀಕ್ಷೆಗೆ ಒಳಪಡಿಸಬೇಕು. ಇದರಿಂದ ಮಣ್ಣಿನಲ್ಲಿ ಏನಾದರೂ ನ್ಯೂನತೆಗಳಿವೆಯೇ ಎನ್ನುವುದನ್ನು ತಿಳಿದು, ಪೋಷಕಾಂಶ ನೀಡಲು ಸಹಾಯಕವಾಗುತ್ತದೆ ಎಂದು ಬೆಂಗಳೂರು ಕೃಷಿ ವಿವಿ ಪ್ರಾಧ್ಯಾಪಕ ಸುರೇಶ್ ತಿಳಿಸಿದರು

ನೆಲಮಂಗಲ ತಾಲ್ಲೂಕು ಕೃಷಿ ಇಲಾಖೆ ವತಿಯಿಂದ ನಿಜಗಲ್ ಕೆಂಪೋಹಳ್ಳಿಯಲ್ಲಿ ನಡೆದ 2024-25ನೇ ಸಾಲಿನ 'ತಾಲ್ಲೂಕು ಮಟ್ಟದ ವಿಶ್ವ ಮಣ್ಣು ದಿನಾಚರಣೆ, ಮಣ್ಣು ಫಲವತ್ತತೆಯ ನಿರ್ವಹಣೆ ಮತ್ತು ಸಾವಯವ ಕೃಷಿ' ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

ನೆಲಮಂಗಲ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ವಿನೋದಮ್ಮ ಮಾತನಾಡಿ, 'ಮನುಷ್ಯನ ದುರಾಸೆಯಿಂದ ಮಣ್ಣು ನಾನಾ ರೀತಿಯಲ್ಲಿ ಮಲೀನವಾಗುತ್ತಿದೆ. ಮಣ್ಣಿಗೆ ವಿಷದ ರೂಪದಲ್ಲಿ ರಾಸಾಯನಿಕ ಸೇರಿಸಿ ಉಪಯೋಗಿಸಲು ಯೋಗ್ಯವಲ್ಲದ ಮಣ್ಣಾಗಿ ಮಾಡಿದ್ದೇವೆ. ಇನ್ನಾದರೂ ಮಣ್ಣನ್ನು ಸಾಧ್ಯವಾದಷ್ಟು ರಕ್ಷಿಸೋಣ' ಎಂದರು.

ಕೃಷಿ ಅಧಿಕಾರಿಗಳಾದ ಸೋಂಪುರ ಹೋಬಳಿಯ ರವಿಕುಮಾರ್, ತ್ಯಾಮಗೊಂಡ್ಲುವಿನ ಜಿ.ಅಂಜನಾ, ಕಸಬಾ ಹೋಬಳಿಯ ನವೀನಾ ಉಪಸ್ಥಿತರಿದ್ದರು.

ಕೆರೆಪಾಳ್ಯ: ಬೋನಿಗೆ ಬಿದ್ದ ಚಿರತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನರಸೀಪುರ ಪಂಚಾಯಿತಿ ವ್ಯಾಪ್ತಿಯ ಕೆರೆಪಾಳ್ಯ ಹತ್ತಿರ ಬಂಡೆ ಮೇಲೆ ಎರಡು ದಿನ ಕಾಣಿಸಿಕೊಂಡು ಆತಂಕ ಮೂಡಿಸಿದ್ದ 7 ವರ್ಷದ ಹೆಣ್ಣು ಚಿರತೆ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಶನಿವಾರ ಬಿದ್ದಿದೆ.

ನ.27ರ ಸಂಜೆ 4.30ರ ಸಮಯದಲ್ಲಿ ಬಂಡೆಯ ಮೇಲೆ ಚಿರತೆ ಕಾಣಿಸಿಕೊಂಡಿತ್ತು. ಬೋನು ಇಟ್ಟ ಎರಡು ದಿನಗಳ ನಂತರ ಚಿರತೆ ಬೋನಿಗೆ ಸಿಕ್ಕಿ ಬಿದ್ದಿದೆ. 'ಚಿರತೆ ಸೆರೆಗೆ ಸಿಲುಕಿಸಲು ಬೋನಿನಲ್ಲಿ ನಾಯಿ ಕಟ್ಟಿದ್ದೆವು. ನಾಯಿ ತಿನ್ನಲು ಬಂದು ಚಿರತೆ ಬೋನಿಗೆ ಸಿಕ್ಕಿ ಬಿದ್ದಿದೆ. ಇದನ್ನು ಕಾವೇರಿ ವನ್ಯಜೀವಿ ಅಭಯಾರಣ್ಯಕ್ಕೆ ರವಾನೆ ಮಾಡಲಾಗಿದೆ' ಎಂದು ಅರಣ್ಯಾಧಿಕಾರಿಗಳು ತಿಳಿಸಿದರು.



ಬೋನಿಗೆ ಬಿದ್ದಿರುವ ಚಿರತೆ

'ಜನರು ಹೇಳುವಂತೆ ಹೆಗ್ಗುಂದ ಬೆಟ್ಟದ ತಪ್ಪಲಿನಲ್ಲಿ ಎರಡು ಮೂರು ಚಿರತೆ ಇವೆ. ಈಗ ಒಂದು ಬೋನಿಗೆ ಬಿದ್ದಿದೆ. ಅರಣ್ಯ ಇಲಾಖೆ ಇನ್ನೊಂದು ಬಾರಿ ಬೋನಿಟ್ಟು ಉಳಿದವನ್ನು ಹಿಡಿದು ಜನ ನೆಮ್ಮದಿಯಿಂದ ಓಡಾಡುವಂತೆ ಮಾಡಬೇಕು' ಎಂದು ಸ್ಥಳೀಯರಾದ ಬಿ.ಕೆ. ರಮೇಶ್ ಒತ್ತಾಯಿಸಿದರು.



ಎಂಇಜಿ ಆಂಡ್ ಸೆಂಟರ್ ತಂಡವು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಜ್ಯ ಅಸೋಸಿಯೇಷನ್ ಬ್ಯಾಸ್ಕೆಟ್‌ಬಾಲ್ ಕಪ್‌ನ ಫೈನಲ್‌ನಲ್ಲಿ 91–70ರಿಂದ ಕೆಎಸ್‌ಪಿ ತಂಡವನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. (ಕುಳಿತವರು) ಎಡದಿಂದ; ಸೆಬಿನ್ ಸೆಬಾಸ್ಟಿನ್, ಮುಶಾಲ್, ರಾಜಾ ಮತ್ತು ಧರಣ್ (ನಿಂತವರು) ಬೋನಿ, ದೀಪಕ್, ಮಯೂರ್, ಬಾಬು (ಕೋಚ್), ಮನು, ಟೀನು, ನಿತೇನ್ ಮತ್ತು ಜುಯಾಲ್

ನೆಟ್ಟಕಲ್ಲಪ್ಪ ಈಜು ಕೇಂದ್ರಕ್ಕೆ ಆರು ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಈಜುಪಟುಗಳು ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ದಿನವಾದ ಶನಿವಾರ ಆರು ಚಿನ್ನದ ಪದಕಗಳನ್ನು ಗೆದ್ದುಕೊಂಡರು.

ಇಲ್ಲಿನ ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ ಕೂಟದಲ್ಲಿ ಎನ್‌ಎಸಿಯ ರಾಘವ್ ಸ್ವಚ್ಛಂದಮ್ (ಬಾಲಕರ 400 ಮೀ ಮೆಡ್ಲೆ, ಗುಂಪು 1), ಶರಣ್ಯಾ ಪಿ.ವಿ (ಬಾಲಕಿಯರ 200 ಮೀ ಮೆಡ್ಲೆ, ಗುಂಪು 3), ನೈಶಾ ಶೆಟ್ಟಿ (ಮಹಿಳೆಯರ 50 ಮೀ ಬಟರ್‌ಫ್ಲೈ, ಗುಂಪು 3), ಹಿತಾಶ್ರೀ ಎನ್. (ಬಾಲಕಿಯರ 400 ಮೀ ಮೆಡ್ಲೆ, ಗುಂಪು 2), ರಕ್ಷಿತ್ ಅನಿರುದ್ಧ ಕೋರೆ (ಬಾಲಕರ 25 ಮೀ ಫ್ರೀಸ್ಟೈಲ್, ಗುಂಪು 3) ಅವರು ವೈಯಕ್ತಿಕ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಅಲ್ಲದೆ, ಬಾಲಕರ 4x25 ಮೀ ಫ್ರೀಸ್ಟೈಲ್ ರಿಲೇನಲ್ಲಿ (ಗುಂಪು 3) ಎನ್‌ಎಸಿ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಎರಡು ಕೂಟ ದಾಖಲೆ: ಬಸವನಗುಡಿ ಈಜು ಕೇಂದ್ರದ ಯಶ್ ಎಚ್. ಪಾಲ್ ಅವರು ಬಾಲಕರ 200 ಮೀ. ಬ್ರೆಸ್ಟ್‌ಸ್ಟ್ರೋಕ್ (ಗುಂಪು 2) ಸ್ಪರ್ಧೆಯಲ್ಲಿ ಮತ್ತು ಪುತ್ತೂರು ಈಜು ಕೇಂದ್ರದ ಪ್ರತೀಕ್ಷಾ ಎನ್. ಶೆಣೈ ಅವರು ಬಾಲಕಿಯರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್ (ಗುಂಪು 1) ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.





ಬಾಲಕಿಯರ 400 ಮೀಟರ್ ಮಿಡ್ಲೆ (ಗುಂಪು 2) ಸ್ಪರ್ಧೆಯಲ್ಲಿ ಚಿನ್ನ ಗೆದ್ದ ನೆಟ್ಟಕಲ್ಲಪ್ಪ ಈಜು ಕೇಂದ್ರದ ಹಿತಶ್ರೀ ಎನ್. (ಎಡಚಿತ್ರ). ಬಾಲಕರ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ (ಗುಂಪು 2) ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದ ಬಸವನಗುಡಿ ಈಜು ಕೇಂದ್ರದ ಯಶ್ ಎಚ್.ಪಾಲ್ ಪ್ರಜಾವಾಣಿ ಚಿತ್ರಗಳು: ಎಸ್.ಕೆ.ದಿನೇಶ್

ಫಲಿತಾಂಶ: ಚಿನ್ನ ವಿಜೇತರು: ಪುರುಷರು: 50 ಮೀ ಬ್ರೆಸ್ಟ್‌ಸ್ಟ್ರೋಕ್: ಪೃಥ್ವಿ ಎಂ (ಬಿಎಸಿ); 50 ಮೀ. ಬಟರ್‌ಫ್ಲೈ: ಪೃಥ್ವಿ ಎಂ. (ಬಿಎಸಿ). ಮಹಿಳೆಯರು: 50 ಮೀ. ಬ್ರೆಸ್ಟ್ ಸ್ಟ್ರೋಕ್: ಮೇಘಾಂಜಲಿ (ಜಿಎಸ್‌ಸಿ); 50 ಮೀ. ಬಟರ್‌ಫ್ಲೈ: ನೈಶಾ ಶೆಟ್ಟಿ (ಎನ್‌ಎಸಿ).

ಬಾಲಕರು (ಗುಂಪು 1): 50 ಮೀ ಬ್ರೆಸ್ಟ್‌ಸ್ಟ್ರೋಕ್: ಆಯುಷ್ ಶಿವರಾಜು ಮಾಗನಹಳ್ಳಿ (ಡಾಲ್ಫಿನ್ ಅಕ್ವಾಟಿಕ್ಸ್), 200 ಮೀ ಬ್ರೆಸ್ಟ್‌ಸ್ಟ್ರೋಕ್: ಸಾಯೇಶ್ ಕಿಣಿ (ಜಿಎಸ್‌ಸಿ); 50 ಮೀ. ಬಟರ್‌ಫ್ಲೈ: ಸ್ವರೂಪ ಧನುಚೆ (ಬಿಎಸಿ); 25 ಮೀ. ಫ್ರೀಸ್ಟೈಲ್: ಸೂರ್ಯ ಜೆ.ಟಿ (ಬಿಎಸಿ); 400 ಮೀ. ಮೆಡ್ಲೆ: ರಾಘವ ಸ್ವಚಂದಂ (ಎನ್‌ಎಸಿ); 4x50 ಮೀ ಫ್ರೀಸ್ಟೈಲ್ ರಿಲೆ: ಬಿಎಸಿ. ಬಾಲಕಿಯರು (ಗುಂಪು 1): 50 ಮೀ ಬ್ರೆಸ್ಟ್‌ಸ್ಟ್ರೋಕ್: ಪ್ರತೀಕ್ಷಾ ಎನ್. ಶೆಣೈ (ಪಿಎಸಿ); 200 ಮೀ ಬ್ರೆಸ್ಟ್‌ಸ್ಟ್ರೋಕ್: ಇ.ಎಸ್.ಸಮನ್ವಿ (ಬಿಎಸಿ); 50 ಮೀ. ಬಟರ್‌ಫ್ಲೈ: ರಿಷಿಕಾ ಯು.ಎಂ. (ಬಿಎಸಿ); 25 ಮೀ. ಫ್ರೀಸ್ಟೈಲ್: ರಿಷಿಕಾ ಯು.ಎಂ. (ಬಿಎಸಿ); 400 ಮೀ. ಮೆಡ್ಲೆ: ಅಂಜಲಿ ಹೊಸ್ಕೆರೆ (ಬಿಎಸಿ). ವಾಟರ್ ಪೋಲೊ: 15 ವರ್ಷದೊಳಗಿನ ಬಾಲಕರು: ಸ್ಟಾರ್ ಅಕ್ವಾಟಿಕ್ಸ್–1, ನೆಟ್ಟಕಲ್ಲಪ್ಪ ಈಜು ಕೇಂದ್ರ–2, ಸ್ವಿಮ್‌ಲೈಫ್–3. 15 ವರ್ಷದೊಳಗಿನ ಬಾಲಕಿಯರು: ಬಸವನಗುಡಿ ಈಜು ಕೇಂದ್ರ–1, ನೆಟ್ಟಕಲ್ಲಪ್ಪ ಈಜು ಕೇಂದ್ರ–2, ಸ್ವಿಮ್‌ಲೈಫ್–3.

ಗೌರವ ಸಂಭಾವನೆ, ಮಾಸಾಶನ ಹೆಚ್ಚಿಸಿ: ಕಲಾವಿದರ ಸಂಘ

ಬೆಂಗಳೂರು: ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ಕಲಾ ತಂಡಗಳ ಗೌರವ ಸಂಭಾವನೆ ಕನಿಷ್ಠ ₹40 ಸಾವಿರ ನಿಗದಿ, ಕಲಾವಿದರ ಮಾಸಾಶನ ₹5 ಸಾವಿರಕ್ಕೆ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಸಾಂಸ್ಕೃತಿಕ ಕಲಾವಿದರ ಒಕ್ಕೂಟವು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಒಕ್ಕೂಟವು ಮುಖ್ಯಮಂತ್ರಿ ಅವರಿಗೆ ಪತ್ರದ ಮೂಲಕ ಮನವಿ ಸಲ್ಲಿಸಿದೆ. 'ಮಾಸಾಶನದ ವಯೋಮಿತಿ ಹಾಗೂ ಪ್ರಶಸ್ತಿಯ ವಯೋಮಿತಿಯನ್ನು 50 ವರ್ಷಕ್ಕೆ ಇಳಿಸಬೇಕು. ಕಾರ್ಯಕ್ರಮಗಳಿಗೆ ತೆರಳಲು ಉಚಿತ ಬಸ್‌ಪಾಸ್ ನೀಡಬೇಕು. ಎರಡು ತಿಂಗಳಿಗೊಮ್ಮೆ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆ ನಡೆಸಬೇಕು' ಎಂದು ಒಕ್ಕೂಟದ ಅಧ್ಯಕ್ಷ ಜಯಸಿಂಹ ಎಸ್. ಒತ್ತಾಯಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Multiple Locations

REQUIRED 2400- 3000 Sqfeet, sites near R.T. Nagar, Sanjay Nagar TATA Nagar. Owners Contact:- 9606949809.

Nagarabhavi

"WANTED 30X40, 40x60, 50x80 BDA Sites Nagarabhavi, NGEF, MPM, D-Group, Vishveshwaraiah, Genuine Owners/ Sellers Contact: 8660869009"

"WANTED SITES Any measurement Vishveshwaraiah Layut, Nagarabhavi, RHBCS, MPM, Sorrounding, Genuine Sellers/ Oweners Contact: 7259675150"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

FACTORY SHED with 40HP, 5500 sft available for RENT in Kumbalgodu Industrial area, Mysore`Road. Call:9448139894

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Flats

JP-NAGAR 3RD Phase 2 BHK Flat 1250 Sqft 3rd Floor West Door For Lease Krishna: 9845059328

House

KASTURINAGAR PENHOUSE 1+11/2BHK+Den, Second Floor with private terrace access. Like new, modern design with upgrades. Great for single and small family living in desirable neighborhood. Next to Machaxi swimming, badminton sports center. Rent only Rs 25,0000 per month. Contact @ 919880413134 / 6362718455

FOR RENT- 2BHK, 2nd Block, 8th Phase, Semi furnishe , Car-parking,Veg Only, No brokers. Call-8073535816

HBR LAYOUT. House for Rent 2BHK 800sqft Frist Floor ONLY for VEG.18k 1lakh adv No car park. Ready for occupying Call:9880062962

BANNERGHATTA ROAD Rent-3-BHK Luxurious Independent House 2200Sq.ft 5-Balconies, CarPark #857 3rd Cross Vijaya Bank Layout. Dr.Murthy- 9811907711

Commercial

COMMERCIAL SPACE FOR RENT 3200sqft Ground Floor, 2500sqft First Floor, Koramangala 1st Block and 8000sqft Commercial Space Kudlu Main Road. Contact: 9845539612/ 9900997733.

OFFICE SPACE For Rent16,000 sqft HBR layout 4th Block Facing Ring Road 8861817913 / 9008025761

PUBLIC NOTICE

PUBLIC NOTICE

It is brought to the notice of the general public that out client **Smt. Trapti Agrawal. W/o Rajiv Sharma.** has negotiated and decided to purchase the property Site No. 180/78 &180/79 (more fully described in the schedule) from **Mr. B. V. Raghu S/o Mr. B.R. Venkata Swamy Reddy.** aged 40 years.

All persons having any claim against or to the schedule property or any part thereof by way of inheritance, mortgage, sale, conveyance, MOU, Agreement to Sell, transfer lease deed, tenancy, maintenance, easement, gift, exchange, possession, adverse possession or otherwise howsoever are hereby required to submit the same in writing along with documentary proof to the undersigned within 15 days from the date of publication hereof, failing which our client shall proceed without any reference to such claim and the same, if any, will be considered as waived. Pls reach out to mob. 9535157959/ 9886436000, if any objection.

SCHEDULE PROPERTY

All that piece and parcel of the land open space, Lank Mark bearing House No. 78 & 79, Property No. 180/78,180/79, As per form No. 9, Serial No. 1347, As per form No. 11, Serial No. 190/180/79, 591/180/78 situated at Dommasandra Village & Grama Panchayathi, Sarjapura Hobli, Anekal Tq, Vinayaka Nagar, Dommasandra -Chandapura Road Muthanallur Cross Bengaluru Urban Dist. (EAST)- 562125 Khatha no. 150200100900102783-591/180/78 & 150200100900103352-591/180/79. In all measuring 3600 Square Feet therein and bounded on the: **EAST BY:** House No. 77, **WEST BY:** Govt Road, **NORTH BY:** House No. 80, 81 & **SOUTH BY:** Panchayathi Road

Address For Service:
Mithun G LLB.
Advocate. Door No 4
Chowdeshwari Complex Near Lions Eye Hospital Vinayaka Nagara Muthanallur Cross Dommasandra Bengaluru 562125

JOB OPPORTUNITIES

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

Domestic Helpers / Housekeeping

WANTED HOUSING Keeping staff & Manager for holiday Homes in Bandipur call 9740110001

Wanted

ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ನೋಂದಣಿ ಕ್ರಮಾಂಕ:ಜೆ.ಆರ್.ಬಿ:ಆರ್.ಜಿ.ಎನ್.ಸೌಕಾ:36:159:05–06)
ನಂ. 658/2ಎ, ಎರಡನೇ ಮಹಡಿ, ಶ್ರೀಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿ ಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು–560 053.
ದೂರವಾಣಿ: 22280566, 22375507, 74117 52827
ಇ–ಮೇಲ್: supraja_souhardha@rediffmail.com, supraja.souhardha@gmail.com

ನೇಮಕಾತಿ ಪ್ರಕಟಣೆ

ಮೇಲ್ಕಂಡ ಸಂಸ್ಥೆಯಲ್ಲಿ ಈ ಕೆಳಗೆ ನಮೂದಿಸಿರುವ ಹುದ್ದೆಗಳಿಗಾಗಿ ಅಂಗೀಕೃತ ವಿಶ್ವ ವಿದ್ಯಾಲಯದಿಂದ ಪದವಿ/ಸಹಕಾರಿ ಪದವಿ (DCBM) ಪಡೆದ ಕಂಪ್ಯೂಟರ್ ಜ್ಞಾನವಿರುವ ಹಾಗೂ ಕನ್ನಡ ಭಾಷೆಯ ಪೂರ್ಣ ಜ್ಞಾನ ಹೊಂದಿರುವ ಸೂಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವಿವರವಾದ ಅರ್ಜಿಯನ್ನು ಸಹಕಾರಿಯ, ಕಛೇರಿ ವೇಳೆಯಲ್ಲಿ ಪಡೆಯುವುದು.

ಕ್ರ. ಸಂ.	ಹುದ್ದೆಗಳ ಹೆಸರು	ವಯೋಮಿತಿ	ಹುದ್ದೆಗಳ ಸಂಖ್ಯೆ	ಕ್ರೋಢೀಕೃತ ವೇತನ
01	ವ್ಯವಸ್ಥಾಪಕರು	32	01	25000/–
02	ಕಿರಿಯ ಸಹಾಯಕರು	28	01	15000/–

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಹಕಾರಿಯ ಮುಖ್ಯಕಾರ್ಯ–ನಿರ್ವಾಹಕರನ್ನು ಖುದ್ದು ಸಂಪರ್ಕಿಸಿ ಅರ್ಜಿಯನ್ನು ಪಡೆದು ಅಗತ್ಯ ದಾಖಲೆಯೊಂದಿಗೆ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಅವಧಿ ಪ್ರಾರಂಭ ದಿನಾಂಕ 09.12.2024 (ಬೆಳಿಗ್ಗೆ 10.30 ರಿಂದ) ಕೊನೆಯ ದಿನಾಂಕ 31.12.2024 (ಸಂಜೆ 5.30 ಘಂಟೆಯೊಳಗೆ)
ಸ್ಥಳ: ಬೆಂಗಳೂರು ಸಹಿ/–
ದಿನಾಂಕ: 06.12.2024 ಸದಸ್ಯ ಕಾರ್ಯದರ್ಶಿ

Teachers / Professors

SRI SARASWATHI VIDYANIKETANA
COLLEGE OF SCIENCE AND MANAGEMENT (Proposed)
Dommasandra, Bangalore-562125 Ph: 8971967886
Affiliated to Bangalore University

REQUIRED
Experienced faculty to teach UG programmes (B.Com, BBA, BCA)

- **PRINCIPAL:** 10 years experience & PhD in Commerce/ Management discipline
- **TEACHING FACULTY:** PG Degree in relevant subject, priority will be given to NET/ SET/ SLET/ Ph.D. & Experience to teach English, Kannada, Sanskrit, Commerce, Computer Science, Management, Economics, Statistics, Physical Education and Librarian.
- **NON TEACHING FACULTY REQUIRED-** Accountant, Computer Lab Technician, Attendar and Clerk.

Eligibility: As per UGC Norms, please email your application to jobs.ssvndms@gmail.com or call 8971967886 to apply.
Sd/- Secretary

Accounts & Finance

WANTED: CHARTERED ACCOUNTANTS/CA INTER/ ARTICLES COMPLETED; Experienced AUDIT OFFICERS; Graduates with working knowledge of Tally, MS-Word and MS-Excel for a Chartered Accountants' firm. Apply: rangaraju.associates@gmail.com; nkrishnappa@rangaraju-associates.com . Contact-7338454835 .

WE ARE hiring Accountant B.Com with 3-4 yrs experience knowledge of Tally, GST, TDS. hr.vestaconsultant.in call: 9731406584

General

WALKIN INTERVIEW Bus Captain-Intercity Smart Bus Interview Timings -4pm to 7pm10th, 12th, Graduate candidates can apply Salary-15K to 20K Whatsapp- 9962345676

EARN MORE than Rs 50,000/- per month, Part/ Full time, Age above 30 Years, 9343616020

Drivers

WANTED (YOUNGSTER) DRIVER CUM OFFICE ASSISTANT, FOR REAL ESTATE DEVELOPER OFFFICE LOCATED AT SANJAYNAGAR RMV 2ND STAGE: 9035883017

WANTED: DRIVERS staying around Hebbal & Yeshwanthpur, Basic English and Google Maps, minimum of 5+ yrs exp, for Japanese travels(company duty) Salary CTC-30000+ benefits, PF, ESIC, Bonus, Gratuity, and lunch* Call:9606968866/9606490968.

OTHERS

For Sale

FOR SALE Antique German made up right PIYANO, Moris car 1951 modal, Raleh England cyc moped, Antique COAT made of Brass, All good condition: 9341720024.

EDUCATIONAL

ADMISSIONS OPEN MBA PGDBM All Specialisations BBA BCom BCA AMIIE B.Tech Diploma 12th 10th: 9341273990

BUSINESS

Business Offers

General

WE NEED DRT Advocates, Recovery Officers, Retired bank officers with experience in Bank NPA_Loans and Loan_settlements to work as Consultants. Arun Ex-Banker. 9945699789.



25g ಮತ್ತು 50g ದೊರೆಯುತ್ತದೆ
Buy online @ www.biopharmgroup.co.in / Amazon / Flipkart or from a Chemist near you. For more information. Call/ 9901364160 / 9845570506

MATRIMONIAL

Grooms Wanted

SC/ ST

WANTED GROOM
Looking bridegroom for a girl, 30 years, MSC Biotech. Madiga (sc).
9148833532 / 8050519100

PERSONAL

Lost

DOCUMENT LOST
I, Gayathri Jois have lost the following original SBI Smart Privilege Insurance Policy bearing number 2B536674304. If found, please contact:
8971559486

Change of Name

CHANGE OF NAME
I, R. MANJUNATHA S/o. Late Revanna R/a #180 EWS, 5th Main Road, Near Raghavendra Temple, Kengeri Upanagar, Bangalore South, Bangalore-560060 have changed my Name to **R. MANJUNATH** vide affidavit dated 6.12.2024 Sworn before Notary Manjula Jangam, Bangalore.

MORE Classifieds Ads on Subsequent Pages

ಬಳ್ಳಾರಿ ಜಿಲ್ಲಾಸ್ಪತ್ರೆ, ಔಷಧ ಉಗ್ರಾಣ, ವಿಮ್ಸ್ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ • ಶೀಘ್ರ ವರದಿ ಸಲ್ಲಿಕೆ

ವೈದ್ಯಕೀಯ ದಾಖಲೆ, ಔಷಧ ಮಾದರಿ ವಶ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಜಿಲ್ಲಾ ಆಸ್ಪತ್ರೆ ಮತ್ತು ಬಳ್ಳಾರಿ ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ವಿಮ್ಸ್) ಮೂರು ಸ್ಥಳಗಳ ಮೇಲೆ ಶನಿವಾರ ಏಕಕಾಲಕ್ಕೆ ದಾಳಿ ನಡೆಸಿದ ಜಿಲ್ಲಾ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ದಾಖಲೆಪತ್ರಗಳು ಮತ್ತು ಔಷಧಿಗಳ ಮಾದರಿಗಳನ್ನು ಸಂಗ್ರಹಿಸಿದರು.

ಮೃತ ಬಾಣಂತಿಯರು ಮತ್ತು ರೋಗಿಗಳಿಗೆ ನೀಡಲಾಗಿದ್ದ 'ಪಶ್ಚಿಮ ಬಂಗಾ ಫಾರ್ಮಸ್ಯುಟಿಕಲ್ ಕಂಪನಿ'ಯ ರಿಂಗರ್ ಲ್ಯಾಕ್ಟೇಟ್ (ಐವಿ ದ್ರಾವಣ) ಮಾದರಿಗಳನ್ನು ಲೋಕಾಯುಕ್ತ ಅಧಿಕಾರಿಗಳು ಸಂಗ್ರಹಿಸಿದರು. ಬಾಣಂತಿಯರ ಕೇಸ್ ಶೀಟ್, ವೈದ್ಯಕೀಯ ದಾಖಲೆ, ಪರೀಕ್ಷಾ ವರದಿ, ವಿವರಗಳನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದರು. ಅಂದು ಬಾಣಂತಿಯರಿಗೆ ಯಾವೆಲ್ಲ ಔಷಧಗಳನ್ನು ನೀಡಲಾಗಿತ್ತೋ, ಅವೆಲ್ಲದರ ಮಾದರಿಗಳನ್ನೂ ಪಡೆದರು.

'ಬಾಣಂತಿಯರ ಸಾವಿಗೆ ಸಂಬಂಧಿಸಿದ ದಾಖಲೆ, ಮಾದರಿಗಳನ್ನು ಸಂಗ್ರಹಿಸಿ ವರದಿ ನೀಡುವಂತೆ ಲೋಕಾಯುಕ್ತ ಕೇಂದ್ರ ಕಚೇರಿಯಿಂದ ಶುಕ್ರವಾರ ವಾರೆಂಟ್ ಜಾರಿಯಾಗಿತ್ತು. ಅದರಂತೆ ಕಾರ್ಯಾಚರಣೆ ನಡೆಸಿ, ಶೀಘ್ರವೇ ವರದಿ ಸಲ್ಲಿಸುತ್ತೇವೆ' ಎಂದು ಲೋಕಾಯುಕ್ತ ಅಧೀಕ್ಷಕ ಸಿದ್ದರಾಜು ಸಿ. 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲಾಸ್ಪತ್ರೆಗೆ ನೋಟಿಸ್: 'ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಹೊರಗಿನಿಂದ ಯಾವುದೆಲ್ಲ ಔಷಧಿ ಖರೀದಿಸಿ, ಬಳಸಲಾಗಿದೆ ಎಂಬುದರ ಮಾಹಿತಿ ನೀಡುವಂತೆ ರಾಜ್ಯ ಔಷಧ ನಿಯಂತ್ರಕರು ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಗೊತ್ತಾಗಿದೆ.

ರಾಜ್ಯದ ಇತರ ಜಿಲ್ಲೆಗಳಿಗೆ ಪೂರೈಸಲಾಗಿದ್ದ ಔಷಧ, ಐವಿ ಫ್ಲುಯಿಡ್‌ಗಳನ್ನೇ ಬಳ್ಳಾರಿಗೂ ಪೂರೈಸಲಾಗಿತ್ತು. ಆದರೆ, ಬೇರೆಲ್ಲೂ ಆಗದ ಸಮಸ್ಯೆ ಬಳ್ಳಾರಿಯಲ್ಲಿ ಮಾತ್ರವೇ ಆಗಲು ಕಾರಣವೇನು ಎಂಬುದನ್ನು ಪತ್ತೆ ಮಾಡಲು ಔಷಧ ನಿಯಂತ್ರಕರು ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

'ಸಾಕ್ಷ್ಯ ಸಂಗ್ರಹಿಸಿ ಕಂಪನಿ ವಿರುದ್ಧ ಹೋರಾಟ'



ಬಣ್ಣಾಪುರ ಗ್ರಾಮದ ಮೃತ ಬಾಣಂತಿ ಹೂಗಾರ ನಂದಿನಿ ಮನೆಗೆ ಭೇಟಿ ನೀಡಿದ ಸಚಿವ ದಿನೇಶ್ ಗುಂಡೂರಾವ್ ಕುಟುಂಬದವರಿಗೆ ಸಾಂತ್ವನ ಹೇಳಿದರು

ಬಳ್ಳಾರಿ: 'ಕಳಪೆ ಔಷಧಗಳನ್ನು ಪೂರೈಸುವ ಕಂಪನಿಗಳ ವಿರುದ್ಧ ದೇಶದಲ್ಲಿ ಈವರೆಗೆ ಶಿಕ್ಷೆಯಾದ ಉದಾಹರಣೆಗಳಿಲ್ಲ. ಎಲ್ಲಾ ಕಾನೂನು ಕಂಪನಿಗಳ ಪರ ಇವೆ. ಬಳ್ಳಾರಿ ಘಟನೆಯನ್ನು ಗಂಭೀರವಾಗಿ ತನಿಖೆ ಮಾಡಿ ಸಾಕ್ಷಿ ಸಂಗ್ರಹಿಸಿ, ಕಂಪನಿ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬಾಣಂತಿಯರ ಸರಣಿ ಸಾವು ಸಂಭವಿಸಿದ ಬಳ್ಳಾರಿ ಜಿಲ್ಲಾಸ್ಪತ್ರೆಗೆ ಶನಿವಾರ ಭೇಟಿ ನೀಡಿದ್ದ ಅವರು, ಹೆರಿಗೆ ಕೋಣೆಗೆ ತೆರಳಿ, ಅಲ್ಲಿನ ಬಾಣಂತಿಯರ ಆರೋಗ್ಯ ಕ್ಷೇಮ ವಿಚಾರಿಸಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

'ಬಾಣಂತಿಯರ ಸಾವಿನ ಕುರಿತು ತನಿಖೆ ನಡೆಸಿದ್ದ ಸಮಿತಿ ವೈದ್ಯರ ನಿರ್ಲಕ್ಷ್ಯ ಇಲ್ಲ ಎಂದಿದೆ. ಐವಿ ದ್ರಾವಣದ ಮೇಲೆ ಅನುಮಾನ ವ್ಯಕ್ತವಾಗಿದೆ. ಇದೇ ಮಾದರಿಯ ಘಟನೆ ಮಾರ್ಚ್‌ನಲ್ಲಿ ನಡೆದಿತ್ತು. ಆಗ ಐ.ವಿ ದ್ರಾವಣಗಳನ್ನು ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಪರೀಕ್ಷೆಗೆ ಒಳಪಡಿಸಿತ್ತು. ಪಶ್ಚಿಮ ಬಂಗಾ ಫಾರ್ಮಸ್ಯುಟಿಕಲ್ ಕಂಪನಿಯ 22 ಬ್ಯಾಚ್‌ಗಳು ಕಳಪೆಯೆಂದು ಪರೀಕ್ಷೆಯಿಂದ ಗೊತ್ತಾಗಿತ್ತು. ಕೂಡಲೇ ದ್ರಾವಣದ ಬಳಕೆ ನಿರ್ಬಂಧಿಸಿದ್ದೆವು. ಕಂಪನಿ ಕೋರ್ಟ್‌ಗೆ ಹೋಗಿತ್ತು. ಬಳಿಕ ಸೆಂಟ್ರಲ್ ಡ್ರಗ್ಸ್ ಲ್ಯಾಬ್ (ಸಿಡಿಎಲ್) ಬಳಕೆಗೆ ಅನುಮತಿ ನೀಡಿತ್ತು. ಆದರೂ ನಾವು ಬಳಸಿರಲಿಲ್ಲ. ಡೆಂಗೆ ಪ್ರಕರಣಗಳು ಹೆಚ್ಚಾದಾಗ ದೋಷವಿದ್ದ 22 ಬ್ಯಾಚ್‌ಗಳನ್ನು ಹೊರತುಪಡಿಸಿ ಉಳಿದವನ್ನು ಬಳಕೆಗೆ ನೀಡಲಾಗಿತ್ತು. ಆಗ ಬಳ್ಳಾರಿಗೂ ದ್ರಾವಣ ಬಂದಿದೆ.

ಅವುಗಳ ಬಳಕೆ ಇಷ್ಟೆಲ್ಲ ಕಾರಣವಾಗಿದೆ' ಎಂದರು.

'ಕೇಂದ್ರ ಪ್ರಯೋಗಾಲಯಗಳ ವರದಿಗಳನ್ನೇ ನ್ಯಾಯಾಲಯಗಳು ಎತ್ತಿಹಿಡಿಯುತ್ತವೆ. ಬಳಕೆ ಮಾಡಿದಾಗ ಇಂಥ ಘಟನೆಗಳು ನಡೆಯುತ್ತವೆ. ಇದನ್ನು ಇಲ್ಲಿಗೇ ಬಿಡದೇ ತಾರ್ಕಿಕ ಅಂತ್ಯ ಕಾಣಿಸಬೇಕಿದ್ದು, ಅದಕ್ಕಾಗಿ ಪ್ರಾಸಿಕ್ಯೂಷನ್ ಮೂಲಕ ಸಾಕ್ಷ್ಯ ಸಂಗ್ರಹಿಸುವ ಕಾರ್ಯವನ್ನು ಸರ್ಕಾರ ಮಾಡಲಿದೆ' ಎಂದು ದಿನೇಶ್ ತಿಳಿಸಿದರು.

'ಪಶ್ಚಿಮ ಬಂಗಾ ಫಾರ್ಮಸ್ಯುಟಿಕಲ್ ಕಂಪನಿ'ಯ ದ್ರಾವಣ ಬಳಕೆ ನಿರ್ಬಂಧಿಸಿದ್ದು, ಪರ್ಯಾಯ ದ್ರಾವಣ ಖರೀದಿಗೆ ಈಗಾಗಲೇ ಎಲ್ಲ ಕಡೆ ತಿಳಿಸಲಾಗಿದೆ. ಹೊಸ ಖರೀದಿಗೆ ಟೆಂಡರ್ ಆಹ್ವಾನಿಸಲಾಗಿದೆ. ಮೃತರ ಕುಟುಂಬಗಳಿಗೆ ಈಗಾಗಲೇ 2 ಲಕ್ಷ ಪರಿಹಾರ ಘೋಷಿಸಲಾಗಿದೆ. ಇನ್ನೂ ಹೆಚ್ಚಿನ ಪರಿಹಾರಕ್ಕೆ ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ಜನ ಸರ್ಕಾರಿ ಆಸ್ಪತ್ರೆಗಳಿಗೆ ಬರಬೇಕು. ಭಯ ಪಡುವ ಅಗತ್ಯವಿಲ್ಲ' ಎಂದು ಅವರು ಮನವಿ ಮಾಡಿದರು.

ವರದಿ ಬಳಿಕ ಕ್ರಮ ಸಿ.ಎಂ ಸಿದ್ದರಾಮಯ್ಯ



ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): 'ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ನಡೆದ ಬಾಣಂತಿಯರ ಸರಣಿ ಸಾವಿನ ಪ್ರಕರಣದ ವಿಚಾರಣೆಗೆ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ವರದಿ ಸಲ್ಲಿಕೆಯಾದ ಬಳಿಕ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ತಾಲ್ಲೂಕಿನ ಸತ್ತೇಗಾಲದಲ್ಲಿ ಲಕ್ಷ್ಮಮ್ಮ ಸೋಸಯ್ಯನ ಸಿದ್ದಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, 'ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೇರಿ ಹಿರಿಯ ಅಧಿಕಾರಿಗಳ ತಂಡ ಆಸ್ಪತ್ರೆಗೆ ಭೇಟಿ ನೀಡಿದ್ದು ಮಾಹಿತಿ ಪಡೆದುಕೊಂಡಿದೆ. ಪ್ರಕರಣದಲ್ಲಿ ಈಗಾಗಲೇ ಜಿಲ್ಲಾ ಔಷಧ ನಿಯಂತ್ರಕರನ್ನು ಅಮಾನತುಗೊಳಿಸಲಾಗಿದ್ದು, ಆಸ್ಪತ್ರೆಗೆ ಔಷಧ ಪೂರೈಸಿದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಸಚಿವ ಸಂಪುಟ ಸಭೆಯಲ್ಲೂ ಚರ್ಚಿಸಲಾಗಿದೆ' ಎಂದರು.



ಬಳ್ಳಾರಿ ಜಿಲ್ಲಾಸ್ಪತ್ರೆಯ ಔಷಧಿ ಉಗ್ರಾಣದ ಮೇಲೆ ಶನಿವಾರ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಐವಿ ದ್ರಾವಣವನ್ನು ಪರಿಶೀಲಿಸಿದರು

327 ಬಾಣಂತಿಯರ ಸಾವಿನ ಕಾರಣ ತಿಳಿಯಲು ಯತ್ನ: ದಿನೇಶ್ ಗುಂಡೂರಾವ್

ಕೂಡ್ಲಿಗಿ (ವಿಜಯನಗರ ಜಿಲ್ಲೆ): 'ಬಳ್ಳಾರಿ ಆಸ್ಪತ್ರೆಯಲ್ಲಿ ಬಾಣಂತಿಯರ ಸಾವಿಗೆ ಆದ ತಪ್ಪನ್ನು ಸರಿಪಡಿಸುವ ಕೆಲಸ ಸರ್ಕಾರ ಮಾಡಲಿದೆ. ಜತೆಗೆ ಈ ವರ್ಷ ರಾಜ್ಯದಲ್ಲಿ 327 ಮಂದಿ ಬಾಣಂತಿಯರು ಮೃತಪಟ್ಟಿದ್ದು, ಅದರ ಕಾರಣ ತಿಳಿಯಲು ತನಿಖೆ ಮಾಡುವಂತೆ ಸೂಚಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬಳ್ಳಾರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದ ಬಳಿಕ ಬಹು ಅಂಗಾಂಗ ವೈಫಲ್ಯದಿಂದ ಈಚೆಗೆ ಮೃತಪಟ್ಟ ಸುಮಯ್ಯ ಬಾನು ಅವರ ಇಲ್ಲಿನ ಮನೆಗೆ ಶನಿವಾರ ಭೇಟಿ ನೀಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು.

'ಮೃತರ ಕುಟುಂಬದವರಿಗೆ ಬೇಕಾದ ಎಲ್ಲ ಸಹಾಯ ಮಾಡುತ್ತೇವೆ. ಪರಿಹಾರ ನೀಡುವ ಬಗ್ಗೆ ಮುಖ್ಯಮಂತ್ರಿ ಜತೆಗೆ ಚರ್ಚಿಸಿ ನಿರ್ಧರಿಸುತ್ತೇವೆ. ಇನ್ನೊಂದು ತಂಡವನ್ನು ಸಹ ಕಳುಹಿಸುತ್ತೇವೆ. ಎಲ್ಲಿ ತಪ್ಪಾಗಿದೆ ಅದನ್ನು ಸರಿ ಮಾಡುವ ಕೆಲಸ ಮಾಡಬೇಕಿದೆ. ನಾವು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತಗೆದುಕೊಂಡಿದ್ದೇವೆ, ಬೇರೆ ಆಸ್ಪತ್ರೆಗಳಲ್ಲಿ ಸಹ ಪರಿಸ್ಥಿತಿ ಹೇಗಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆದಿದೆ. ವಿರೋಧ ಪಕ್ಷದವರು ಪ್ರತಿಭಟಿಸವುದು ತಪ್ಪಲ್ಲ, ಮಾಡಲಿ' ಎಂದರು.



ನಿಷೇಧಿತ ಐವಿ ದ್ರಾವಣವನ್ನು ಬಳಸಿದ್ದು ಏಕೆ? ಬಾಣಂತಿಯರ ಸಾವಿಗೆ ಸರ್ಕಾರವೇ ನೇರ ಕಾರಣ. ಅಧಿವೇಶನ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ಆಸ್ಪತ್ರೆಗೆ ಭೇಟಿ ನೀಡಿದ್ದಾರೆ
ಶ್ರೀರಾಮುಲು,
ಮಾಜಿ ಸಚಿವ

ಬಾಣಂತಿಯರ ಸಾವು ಸರ್ಕಾರಿ ಪ್ರಾಯೋಜಿತ ಕೊಲೆ. ತಾಯಿ ಕಳೆದುಕೊಂಡ ಶಿಶುಗಳ ಹೆಸರಲ್ಲಿ ಸರ್ಕಾರ ₹50 ಲಕ್ಷ ಠೇವಣಿ ಇಡಬೇಕು. ದತ್ತು ಪಡೆದು ಭವಿಷ್ಯ ರೂಪಿಸಬೇಕು
ಮಂಜುಳಾ ಸಿ.
ಅಧ್ಯಕ್ಷೆ, ಬಿಜೆಪಿ ಮಹಿಳಾ ಮೋರ್ಚಾ

ಸುದ್ದಿ 2 ನಿಮಿಷ

'ಕಾಂಗ್ರೆಸ್‌ಗೆ ಬಳ್ಳಾರಿ ಬೇಡವಾಯಿತೇ?'

ಬೆಂಗಳೂರು: 'ಕಾಂಗ್ರೆಸ್ ನಾಯಕರು ಅಧಿಕಾರಕ್ಕೆ ಬರುವ ಮುನ್ನ ಬಳ್ಳಾರಿ ಜಪ ಮಾಡುತ್ತಿದ್ದರು. ಈಗ ಅಲ್ಲಿ ಸಾಲು ಸಾಲು ಬಾಣಂತಿಯರು ಸಾಯುತ್ತಿದ್ದರೂ ಸುಳಿಯುತ್ತಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶನಿವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಳ್ಳಾರಿಯಲ್ಲಿ ಐವರು ಬಾಣಂತಿಯರು ಮೃತಪಟ್ಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಸ್ತುವಾರಿ ಸಚಿವ, ಆರೋಗ್ಯ ಸಚಿವರು ಅಲ್ಲಿಗೆ ತೆರಳುವ ಸೌಜನ್ಯ ತೋರಲಿಲ್ಲ. ಮಹಿಳೆಯರ ಜೀವ ರಕ್ಷಣೆ ಇವರಿಗೆ ಬೇಡವಾಯಿತೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರು ಹಲವು ಹಗರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಅವುಗಳಿಂದ ಬಿಡಿಸಿಕೊಳ್ಳಲೇ ಅವರು ಒದ್ದಾಡುತ್ತಿದ್ದಾರೆ. ಅತ್ತಲೇ ಗಮನವಿದ್ದು, ರಾಜ್ಯದ ಆಡಳಿತವನ್ನು ಕಡೆಗಣಿಸಿದ್ದಾರೆ' ಎಂದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಇಲಾಖೆಯ ಆಡಳಿತ ಅವರ ಕೈತಪ್ಪಿದೆ. ಅವರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು. 'ಜನರ ಜೀವದ ಬಗ್ಗೆ ಸರ್ಕಾರಕ್ಕಿರುವ ಬೇಜವಾಬ್ದಾರಿ ಮತ್ತು ಭ್ರಷ್ಟಾಚಾರದ ಕಾರಣದಿಂದಲೇ ಇಂತಹ ಅವಘಡಗಳು ಸಂಭವಿಸಿವೆ. ರಾಜ್ಯ ಸರ್ಕಾರವು ಜನರ ಜೀವದ ಜತೆಗೆ ಚೆಲ್ಲಾಟ ಆಡುತ್ತಿದೆ' ಎಂದರು.

ತುಂಗಭದ್ರಾಗೆ ಕ್ರಸ್ಟ್ ಗೇಟ್: ಚರ್ಚೆ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಗೆ ಯಾವ ವಿನ್ಯಾಸದ ಕ್ರಸ್ಟ್‌ಗೇಟ್ ಅಳವಡಿಸಲು ಸಾಧ್ಯವಿದೆ ಎಂದು ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಶನಿವಾರ ಇಲ್ಲಿ ಚರ್ಚೆ ಆರಂಭಿಸಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಅನಿಲ್ ಜೈನ್ ಮತ್ತು ಗೇಟ್ ವಿಭಾಗದ ನಿರ್ದೇಶಕ ರಾಹುಲ್ ಕುಮಾರ್ ಸಿಂಗ್ ಅವರು ಮಧ್ಯಾಹ್ನದ ಬಳಿಕ ಇಲ್ಲಿಗೆ ಬಂದು ತುಂಗಭದ್ರಾ ಮಂಡಳಿ ಹಾಗೂ ನೀರಾವರಿ ಇಲಾಖೆಗಳ ಅಧಿಕಾರಿಗಳು, ಎಂಜಿನಿಯರ್‌ಗಳ ಜೊತೆ ಚರ್ಚಿಸಿದರು.

'ಶನಿವಾರ ಅಣೆಕಟ್ಟೆಗೆ ತೆರಳಿ ಕೆಲ ಗೇಟ್‌ಗಳನ್ನು ಪರಿಶೀಲಿಸಿದ ಪ್ರಾಧಿಕಾರದ ಸದಸ್ಯರು, ಭಾನುವಾರ ಮತ್ತೊಮ್ಮೆ ಭೇಟಿ ನೀಡಿ ಎಲ್ಲ ಗೇಟ್‌ಗಳ ಸ್ಥಿತಿಗತಿ ಅವಲೋಕಿಸುವರು. ಬಳಿಕ ಯಾವ ಮಾದರಿಯ ಗೇಟ್ ಅಳವಡಿಕೆ ಸೂಕ್ತ ಎಂಬುದು ನಿರ್ಧಾರವಾಗಲಿದೆ' ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಬೆಂಗಳೂರಿನ ಅಣೆಕಟ್ಟೆ ಸುರಕ್ಷತಾ ಸಂಸ್ಥೆಯ ಮುಖ್ಯ ಎಂಜಿನಿಯರ್ ಕೆ. ಶ್ರೀನಾಥ್, ಹೈದರಾಬಾದ್‌ನ ಮುಖ್ಯ ಎಂಜಿನಿಯರ್ ಎನ್. ಮುಖರ್ಜಿ, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್. ಕೆ. ರೆಡ್ಡಿ ಇತರರು ಇದ್ದರು.

ಮುಡಾ: ವರ್ಷದ ಹಿಂದೆಯೇ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಅವರಿಗೆ ಮುಡಾ ಜಿಪಿಎ ಹೆಸರಿನಲ್ಲಿ 33 ಬದಲಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದೆ. ಈ ಬಗ್ಗೆ ಸಾಮಾಜಿಕ ಕಾರ್ಯಕರ್ತ ಕೃಷ್ಣ ಅವರು ವರ್ಷದ ಹಿಂದೆಯೇ ಇಲ್ಲಿನ ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಿದ್ದರು. ಇದುವರೆಗೂ ಲೋಕಾಯುಕ್ತ ಕ್ರಮ ಕೈಗೊಂಡಿಲ್ಲ' ಎಂದು ದೂರುದಾರರ ಪರ ವಕೀಲ ರವಿಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು.

ಈ ಕುರಿತು ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿ, '2023ರ ಏಪ್ರಿಲ್‌ನಲ್ಲಿ ಮುಡಾ ಒಟ್ಟು 33 ನಿವೇಶನಗಳನ್ನು ಬದಲಿ ನಿವೇಶನದ ರೂಪದಲ್ಲಿ ಮಂಜುನಾಥ್ ಅವರಿಗೆ ಹಂಚಿದೆ. ವಿಜಯನಗರ 3 ಹಾಗೂ 4ನೇ ಹಂತದ ಬಡಾವಣೆಯಲ್ಲಿ ಈ ನಿವೇಶನಗಳಿದ್ದು, ಪ್ರತಿ ನಿವೇಶನವೂ ಕೋಟ್ಯಂತರ ರೂಪಾಯಿ ಮೌಲ್ಯದ್ದು. ಮೂಲ ಮಾಲೀಕರ ಹೆಸರು ಕೈ ಬಿಟ್ಟು ಜಿಪಿಎ ಪ್ರತಿನಿಧಿಗೆ ನೇರವಾಗಿ ಕ್ರಯ ಮಾಡಿಕೊಡಲಾಗಿದೆ. ಮುಡಾ ಅಧಿಕಾರಿಗಳು ಉದ್ಯಮಿ ಜೊತೆ ಶಾಮೀಲಾಗಿದ್ದಾರೆ. ಮುಡಾದ ಅಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ವಿಶೇಷ ತಹಶೀಲ್ದಾರ್ ಶಿವಕುಮಾರ್, ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಾವ್ಯಾ, ಉದ್ಯಮಿ ಎನ್.ಮಂಜುನಾಥ್ ವಿರುದ್ಧ ದೂರು ನೀಡಲಾಗಿತ್ತು' ಎಂದು ವಿವರಿಸಿದರು.

'ವರ್ಷವಾದರೂ ಲೋಕಾಯುಕ್ತ ಅಧಿಕಾರಿಗಳು ಪ್ರಕರಣದ ತನಿಖೆ ಕೈಗೊಂಡಿಲ್ಲ. ಇನ್ನಾದರೂ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಪ್ರಧಾನಿ ಕಚೇರಿಗೂ ದೂರು: 'ಈ ಪ್ರಕರಣ ಸಂಬಂಧ, 296 ಪುಟಗಳ ದಾಖಲೆ ಸಮೇತ ಪ್ರಧಾನಮಂತ್ರಿ ಕಚೇರಿಗೆ ಜುಲೈ 19ರಂದೇ ದೂರು ನೀಡಿದ್ದೇವೆ. ಸೇಲ್ ಡೀಡ್ ಮತ್ತು ಸೆಟ್ಲ್‌ಮೆಂಟ್ ಡೀಡ್ ಹೆಸರಿನಲ್ಲಿ ದೊಡ್ಡ ಭ್ರಷ್ಟಾಚಾರವಾಗಿದೆ. ಮಾಜಿ ಆಯುಕ್ತರಾದ ಜಿ.ಟಿ. ದಿನೇಶ್‌ಕುಮಾರ್ ಹಾಗೂ ಡಿ.ಬಿ. ನಟೇಶ್ ಅವರು ಬೇನಾಮಿ ವಹಿವಾಟು ನಡೆಸಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಪ್ರಧಾನಿಮಂತ್ರಿ ಅವರನ್ನು ಕೋರಿದ್ದೇವೆ' ಎಂದು ತಿಳಿಸಿದರು.

'ಬೆಳಗಾವಿಯಲ್ಲಿ ಮಾದಿಗರ ಸಮಾವೇಶ'

ಬೆಂಗಳೂರು: 'ಒಳಮೀಸಲಾತಿಗೆ ಒತ್ತಾಯಿಸಿ 16ರಂದು ಬೆಳಗಾವಿಯಲ್ಲಿ ಮಾದಿಗ ಸಂಘಟನೆಯ ಸಮಾವೇಶ ನಡೆಸುತ್ತೇವೆ' ಎಂದು ಮಾಜಿ ಕೇಂದ್ರ ಸಚಿವ ಆನೇಕಲ್ ನಾರಾಯಣಸ್ವಾಮಿ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ನಡೆದ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಲವು ಸಂಘಟನೆ ಭಾಗಿಯಾಗಲಿವೆ' ಎಂದರು. 'ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಹೋರಾಟಕ್ಕೆ ಬೆಂಬಲ ಯಾಚಿಸಿ ಮತ್ತು ಸಮಾವೇಶಕ್ಕೆ ಬರುವಂತೆ ಆಗ್ರಹಿಸಿ ಎಲ್ಲ ಸಚಿವರು ಮತ್ತು ಎಲ್ಲ ಪಕ್ಷದ ಶಾಸಕರ ಮನೆಗಳ ಮುಂದೆ ಇದೇ 14ರಂದು ತಮಟೆ ಚಳವಳಿ ನಡೆಸಲಾಗುತ್ತದೆ' ಎಂದು ತಿಳಿಸಿದರು. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ, ಎ.ನಾರಾಯಣಸ್ವಾಮಿ, ಶಾಸಕ ಮಾನಪ್ಪ ವಜ್ಜಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಪರಿಶಿಷ್ಟ ಜಾತಿಗಳ ಮೋರ್ಚಾ ಉಪಾಧ್ಯಕ್ಷ ಮಂಜುನಾಥ್ ಸಭೆಯಲ್ಲಿ ಭಾಗಿಯಾಗಿದ್ದರು.



ಮಹಾ ರಥೋತ್ಸವ

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಬೆಳಿಗ್ಗೆ ದೇವರ ಮಹಾರಥೋತ್ಸವ ಜರುಗಿತು

ಪ್ರಜಾವಾಣಿ ಚಿತ್ರ: ಲೋಕೇಶ್ ಸುಬ್ರಹ್ಮಣ್ಯ

ವಿಜಯೇಂದ್ರ ಬದಲಾವಣೆ ಇಲ್ಲ

ಒಂದನೇ ಪುಟದಿಂದ...

ಬಣ ಜಗಳದ ತೇಪೆ: ವಿಜಯೇಂದ್ರ ಅವರ ಪದಚ್ಯುತಿಗೆ ಪಟ್ಟು ಹಿಡಿದಿರುವ ಯತ್ನಾಳ ಬಣ, ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕುಟುಂಬದ ವಿರುದ್ಧ ಟೀಕಾ ಪ್ರಹಾರ ನಡೆಸುತ್ತಲೇ ಇತ್ತು. ವಕ್ಫ್ ಹೋರಾಟದ ಹೆಸರಿನಲ್ಲಿ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದ್ದ ಯತ್ನಾಳ ಬಣದ ಸದಸ್ಯರು, ರಾಜ್ಯ ನಾಯಕತ್ವದ ವಿರುದ್ಧ ಹರಿಹಾಯ್ದಿದ್ದರು.

ಇದಕ್ಕೆ ಪ್ರತಿರೋಧ ಎಂಬಂತೆ ವಿಜಯೇಂದ್ರ ಬೆನ್ನಿಗೆ ನಿಂತ ಮಾಜಿ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಎಂ.ಪಿ. ರೇಣುಕಾಚಾರ್ಯ ಮೊದಲಾದವರು, ಯತ್ನಾಳರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂಬ ಅಭಿಯಾನ ಆರಂಭಿಸಿದ್ದರು. ಈ ಬೆನ್ನಲ್ಲೇ, ದೆಹಲಿಗೆ ತೆರಳಿದ್ದ ವಿಜಯೇಂದ್ರ, ಯತ್ನಾಳ ವಿರುದ್ಧ ದೂರು ನೀಡಿದ್ದರು. ಯತ್ನಾಳರಿಗೆ ವಿವರಣೆ ಕೇಳಿ ನೋಟಿಸ್ ನೀಡಿದ್ದ ಪಕ್ಷದ ಶಿಸ್ತುಸಮಿತಿ, ಉತ್ತರ ನೀಡಲು 10 ದಿನ ಸಮಯ ಕೊಟ್ಟಿತ್ತು. ತಮ್ಮ ಬಣದ ಸದಸ್ಯರೊಂದಿಗೆ ದೆಹಲಿಗೆ ತೆರಳಿದ್ದ ಯತ್ನಾಳ, ವಿವರಣೆ ನೀಡುವ ಜತೆಗೆ, ವರಿಷ್ಠರನ್ನು ಭೇಟಿ ಮಾಡಿ ಯಡಿಯೂರಪ್ಪ ಕುಟುಂಬದ ವಿರುದ್ಧ ದೂರನ್ನೂ ಸಲ್ಲಿಸಿದ್ದರು.

'ಪಕ್ಷದ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್ ಧೋರಣೆಯೂ ಸರಿಯಿಲ್ಲ' ಎಂದು ಯತ್ನಾಳ ಬಣ ಆಪಾದಿಸಿತ್ತು.

ಬಿಜೆಪಿಯಲ್ಲಿ ಬಣ ಜಗಳ ಎರಡು ತಿಂಗಳಿನಿಂದ ತೀವ್ರಗೊಂಡಿದ್ದು, ನಾಯಕರು ಬೀದಿ ಕಚ್ಚಾಟಕ್ಕೆ ತೊಡಗಿದ್ದರು. ಹಾಗಿದ್ದರೂ, ಉಸ್ತುವಾರಿ ಅಗರ್‌ವಾಲ್ ಕರ್ನಾಟಕಕ್ಕೆ ಬಂದಿರಲಿಲ್ಲ. ಏತನ್ಮಧ್ಯೆ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರನ್ನು, ರಾಜ್ಯಕ್ಕೆ ಕಳುಹಿಸಿದ್ದ ಬಿಜೆಪಿ ವರಿಷ್ಠರು ವರದಿಯನ್ನು ತರಿಸಿಕೊಂಡಿದ್ದರು.

ರಾಜ್ಯಕ್ಕೆ ಶನಿವಾರ ಬಂದ ಅಗರ್‌ವಾಲ್, ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿದರು. ಸಭೆಗೆ ಮುನ್ನ ಅವರನ್ನು ಭೇಟಿ ಮಾಡಿದ ವಿಜಯೇಂದ್ರ ಬಣದ ಸದಸ್ಯರು, ಯತ್ನಾಳ ಬಣದ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಜತೆಗೆ, ವಿಜಯೇಂದ್ರ ಅವರನ್ನು ಮುಂದಿನ ಚುನಾವಣೆಯವರೆಗೂ ಬದಲಾವಣೆ ಮಾಡಬಾರದು ಎಂದು ಒತ್ತಡ ಹೇರಿದರು.

ಯಡಿಯೂರಪ್ಪ ನಿವಾಸಕ್ಕೆ ತೆರಳಿದ ವಿಜಯೇಂದ್ರ ಬಣದ ಸದಸ್ಯರು ತಮ್ಮ ನಾಯಕನ ಜತೆ ಸಮಾಲೋಚನೆ ನಡೆಸಿದರು. ಈ ವೇಳೆ ಸಂಸದ ಜಗದೀಶ ಶೆಟ್ಟರ್ ಉಪಸ್ಥಿತರಿದ್ದರು. ಯತ್ನಾಳರನ್ನು ಉಚ್ಚಾಟಿಸುವ ಬೇಡಿಕೆ ಮುಂದಿಟ್ಟು ದೆಹಲಿಗೆ ನಿಯೋಗ ತೆರಳುವ ಬಗ್ಗೆಯೂ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

ಉಸ್ತುವಾರಿ ರಾಜ್ಯಕ್ಕೆ ಬಂದಿದ್ದರೂ ಯತ್ನಾಳ ಬಣದ ಯಾರೊಬ್ಬರು, ಅವರನ್ನು ಭೇಟಿಯಾಗಲಿಲ್ಲ.

'ಪಕ್ಷದ ನಾಯಕತ್ವ ಮತ್ತು ಪಕ್ಷದ ನಿರ್ಧಾರವನ್ನು ಪ್ರಶ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಇದರಿಂದ ಪಕ್ಷ ಸಂಘಟನೆಗೆ ಮತ್ತು ರಾಜ್ಯ ಸರ್ಕಾರದ ವಿರುದ್ಧದ ಹೋರಾಟಕ್ಕೆ ಅನುಕೂಲವಾಗಲಿದೆ' ಎಂಬ ಅಭಿಪ್ರಾಯ ಪ್ರಮುಖರ ಸಮಿತಿಯ ಸಭೆಯಲ್ಲಿ ವ್ಯಕ್ತವಾಯಿತು' ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಸಂಸದರಾದ ಜಗದೀಶ ಶೆಟ್ಟರ್, ಗೋವಿಂದ ಕಾರಜೋಳ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್, ಶಾಸಕ ಸಿ.ಎನ್.ಅಶ್ವತ್ಥನಾರಾಯಣ್ ಭಾಗಿಯಾಗಿದ್ದರು.

'ಸೋಮಶೇಖರ್, ಹೆಬ್ಬಾರ್ ಉಚ್ಚಾಟನೆಗೆ ಶಿಫಾರಸು'

ಒಂದನೇ ಪುಟದಿಂದ...

ಯತ್ನಾಳ ಮತ್ತು ಬಣದವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಪ್ರಶ್ನಿಸಿದಾಗ, 'ಈ ಬಗ್ಗೆ ನಾನು ಏನೂ ಹೇಳುವುದಿಲ್ಲ. ಈ ವಿಷಯ ವರಿಷ್ಠರ ಮುಂದೆ ಇದೆ. ಅವರೇ ಕ್ರಮ ತೆಗೆದುಕೊಳ್ಳುತ್ತಾರೆ' ಎಂದಷ್ಟೇ ಉತ್ತರಿಸಿದರು.

'ಕಾಂಗ್ರೆಸ್ ಜತೆಗೆ ಸೇರಿಕೊಂಡು ಬಿಜೆಪಿ ವಿರುದ್ಧ ಕೆಲಸ ಮಾಡುತ್ತಿರುವ ಸೋಮಶೇಖರ್ ಮತ್ತು ಹೆಬ್ಬಾರ್ ಅವರನ್ನು ಪಕ್ಷದಿಂದ ಹೊರಹಾಕಬೇಕು, ಅವರ ಶಾಸಕತ್ವ ಅನರ್ಹಗೊಳಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಡಿ.ವಿ. ಸದಾನಂದಗೌಡ ಅವರು ಪ್ರಮುಖರ ಸಮಿತಿ ಸಭೆಯಲ್ಲಿ ಆಗ್ರಹಿಸಿದರು' ಎಂದು ಮೂಲಗಳು ತಿಳಿಸಿವೆ.

ಗೃಹಲಕ್ಷ್ಮಿಯರಿಗೆ ಉಳಿಯುವ ಗ್ಯಾರಂಟಿ ಇಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಹಿಳೆಯರಿಗೆ ಗೃಹಲಕ್ಷ್ಮಿ ಗ್ಯಾರಂಟಿ ಕೊಟ್ಟು ಆರ್ಥಿಕವಾಗಿ ಸಬಲೀಕರಣ ಮಾಡುತ್ತಿದ್ದೇವೆ ಎನ್ನುವ ರಾಜ್ಯದ ಕಾಂಗ್ರೆಸ್ ಸರ್ಕಾರ, ಆಸ್ಪತ್ರೆಗಳಲ್ಲಿ ಅದೇ ಗೃಹಲಕ್ಷ್ಮಿಯರ ಜೀವಹರಣ ಮಾಡುತ್ತಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಹೆರಿಗೆಗಾಗಿ ಸರ್ಕಾರಿ ಆಸ್ಪತ್ರೆಗೆ ವಿಶ್ವಾಸದಿಂದ ತೆರಳುವ ಗೃಹಲಕ್ಷ್ಮಿಯರಿಗೆ ಜೀವಸಮೇತ ಮರಳಿ ಮನೆಗೆ ಬರುವ ಗ್ಯಾರಂಟಿಯೇ ಇಲ್ಲ! ಇದೇನಾ ಮಹಿಳೆಯರ ಸಬಲೀಕರಣ' ಎಂದೂ ಪ್ರಶ್ನಿಸಿದ್ದಾರೆ.

ಮಾಧ್ಯಮ ಹೇಳಿಕೆಯಲ್ಲಿ ಅವರು, 'ಈ ವರ್ಷ 327 ಬಾಣಂತಿಯರು ಆಸ್ಪತ್ರೆಗಳಲ್ಲಿ ಸಾವನ್ನಪ್ಪಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೇ ನೀಡಿರುವ ಈ ಮಾಹಿತಿ ನನಗೆ ಆಘಾತ ಮೂಡಿಸಿದೆ. ಈ ಬಗ್ಗೆ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಂದ ಸಮಗ್ರ ತನಿಖೆ ಮಾಡಿಸಬೇಕು' ಎಂದು ಆಗ್ರಹಿಸಿದರು. 'ಕಳಪೆ ಔಷಧ ಪೂರೈಕೆ ವಿಷಯ ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೇ? ಸಚಿವರಿಗೆ ಈ ಮಾಹಿತಿ ಇರಲಿಲ್ಲವೇ? ವೈದ್ಯ ಕ್ಷೇತ್ರದಲ್ಲಿ ಅಗಾಧ ಮುನ್ನಡೆ ಸಾಧಿಸಿರುವ ಈ ಕಾಲದಲ್ಲಿಯೂ ಮಹಿಳೆಯರು ಆಸ್ಪತ್ರೆಗಳಲ್ಲಿ ಜೀವ ಚೆಲ್ಲುತ್ತಿರುವುದು ರಾಜ್ಯಕ್ಕೆ ಗೌರವ ತರುವ ವಿಚಾರವಲ್ಲ' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ ಸರ್ಕಾರಿ ಆರೋಗ್ಯ ವ್ಯವಸ್ಥೆ ಹದಗೆಟ್ಟಿದೆ. ಆಸ್ಪತ್ರೆಗಳು ಸಾವಿನ ಕೂಪಗಳಾಗಿವೆ. ಕಳಪೆ ಗ್ಲೂಕೋಸ್, ಔಷಧಗಳಿಂದ ಬಾಣಂತಿಯರು ಬಲಿಯಾಗುತ್ತಿದ್ದಾರೆ. ಬಳ್ಳಾರಿ ಆಸ್ಪತ್ರೆಯಲ್ಲಿ ಐವಿ ದ್ರಾವಣ ಪಡೆದ ಎರಡೇ ಗಂಟೆಯಲ್ಲಿ ಬಾಣಂತಿಯರು ಅಸ್ವಸ್ಥರಾದರು ಎಂಬುದು ಕಳವಳಕಾರಿ. ಈ ದ್ರಾವಣ ಪೂರೈಸಿದ ಕಂಪನಿ ಯಾವುದು? ಅದು ಯಾರದ್ದು' ಎಂದು ಪ್ರಶ್ನಿಸಿದ್ದಾರೆ.

'ನನ್ನ ತಪ್ಪಿದ್ದರೆ ರಾಜೀನಾಮೆ ಕೊಡುವೆ' ಎಂಬ ಸಚಿವರ ಹೇಳಿಕೆ ಅನಪೇಕ್ಷಿತ. ಜವಾಬ್ದಾರಿ ಇರುವುದು ಕೈ ತೊಳೆದುಕೊಂಡು ಪಾರಾಗ ಲಿಕ್ಕಲ್ಲ. ರೋಗಗ್ರಸ್ತ ಆರೋಗ್ಯ ಇಲಾಖೆಗೆ ಸೂಕ್ತ ಚಿಕಿತ್ಸೆ ಅಗತ್ಯವಿದೆ. ಪಲಾಯನಕ್ಕಿಂತ ಪ್ರಾಯಶ್ಚಿತ್ತ ಮುಖ್ಯ. ಇಲಾಖೆಯನ್ನು ಸರಿ ಮಾಡುವುದು ಅವರ ಹೊಣೆ. ಗೃಹಲಕ್ಷ್ಮಿಯರ ಪಾಪ ಅವರನ್ನು ಸುಮ್ಮನೆ ಬಿಡದು' ಎಂದೂ ಟೀಕಿಸಿದರು.

'ಬಾಡೂಟ ಯಾಕಿಲ್ಲ ಸ್ವಾಮಿ?'

ಒಂದನೇ ಪುಟದಿಂದ..

'ಸಸ್ಯಾಹಾರ–ಮಾಂಸಾಹಾರ ನಡುವಿನ ಮೇಲು–ಕೀಳು ತಾರತಮ್ಯ ಮನೋಭಾವವನ್ನು ವಿನಾಶಗೊಳಿಸಬೇಕು' ಎಂದು ಪೋಸ್ಟರ್ ಹಿಡಿದು ಒತ್ತಾಯಿಸಿದ್ದಾರೆ.

'ಬಾಡೇ ನಮಗೆ ಗಾಡು ಕಣಣ್ಣ' ಎಂದು ಕೆಲವರು ಧ್ವನಿ ಎತ್ತಿರುವುದಕ್ಕೆ, 'ಇದುವರೆಗೆ ನಡೆದ 86 ಸಾಹಿತ್ಯ ಸಮ್ಮೇಳನಗಳಲ್ಲಿ ಮಾಂಸಾಹಾರ ಹಾಕಿದ್ದಾರಾ? ಲಕ್ಷಾಂತರ ಜನರಿಗೆ ಬಾಡೂಟ ಹಾಕಲು ಸಾಧ್ಯವೇ' ಎಂದು ಕೆಲವು ನೆಟ್ಟಿಗರು ಬಾಡೂಟಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಪರ–ವಿರೋಧ ಚರ್ಚೆಗಳು ಜೋರಾಗಿ ನಡೆಯುತ್ತಿವೆ. 'ಸಮ್ಮೇಳನದಲ್ಲಿ ಮಾಂಸಾಹಾರ ನೀಡುವ ಮೂಲಕ ಮಂಡ್ಯ ಜನರ ಆಹಾರ ಸಂಸ್ಕೃತಿಯನ್ನು ಗೌರವಿಸಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರು (ಶಿವರಾಮೇಗೌಡ ಬಣ) ಹೆಚ್ಚುವರಿ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಸಸ್ಯಾಹಾರ– ಮಾಂಸಾಹಾರ ಎರಡೂ ಇರಲಿ: ಮನವಿ

ಬೆಂಗಳೂರು: 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರ, ಮಾಂಸಾಹಾರ ಎರಡನ್ನು ಕೊಡಬೇಕು' ಎಂದು ಆಗ್ರಹಿಸಿ, ಆಹಾರ ಸಂರಕ್ಷಣಾ ಜನಜಾಗೃತಿ ಅಭಿಯಾನ ಸಂಘಟನೆಯ ಸದಸ್ಯರು, ಮಂಡ್ಯ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

'ವೈಜ್ಞಾನಿಕ ಮನೋಭಾವ ಬೆಳೆಸಲು, ಮಾಂಸಾಹಾರ ಮತ್ತು ಸಸ್ಯಾಹಾರದ ನಡುವಿನ ಮೇಲು ಕೀಳು ಹಾಗೂ ಶ್ರೇಷ್ಠತೆಯ ವ್ಯಸನ ಹೋಗಲಾಡಿಸಲು ಸಮ್ಮೇಳನದ ಪಟ್ಟಿಯಲ್ಲಿ ಎರಡೂ ಆಹಾರ ಕ್ರಮವನ್ನು ಸೇರಿಸಬೇಕು. ಆಹಾರ ಹಕ್ಕು ಮತ್ತು ಸ್ವಾತಂತ್ರ್ಯದ ಬಗ್ಗೆ ವಿಚಾರಸಂಕಿರಣ ಏರ್ಪಡಿಸಬೇಕು' ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

'ನಾನೇಕೆ ಮುಖ್ಯಮಂತ್ರಿ ಆಗಬಾರದು?'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ನಾನು ಮುಖ್ಯಮಂತ್ರಿ ಯಾಕೆ ಆಗಬಾರದು. ಏನು ಕೊರತೆ ಇದೆ. ಪ್ರಾಮಾಣಿಕರನ್ನು ಆಯ್ಕೆ ಮಾಡಲು ಮುಂದಾದರೆ ಅಥವಾ ಒಳ್ಳೆಯ ಮನುಷ್ಯ ಬೇಕೆಂದು ದೇವರು ಆದೇಶಿಸಿದರೆ, ನನ್ನ ಹೆಸರು ಮೊದಲು ಬರುತ್ತದೆ. ನಾನೇ ಮುಖ್ಯಮಂತ್ರಿ ಆಗುವೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಸವಣ್ಣನ ಬಗ್ಗೆ ಹೇಳಿಕೆ ನೀಡಿರುವುದಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಆಕ್ಷೇಪ ವ್ಯಕ್ತಪಡಿಸಿರುವುದರ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಶಾಮನೂರು ಶಿವಶಂಕರಪ್ಪನವರ ಡೇಟ್ ಎಕ್ಸ್‌ಪೈರಿ ಆಗಿದೆ' ಎಂದರು. ಇದಕ್ಕೂ ಮುನ್ನ ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಸಂತ್ರಸ್ತರ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಅಹೋರಾತ್ರಿ ಧರಣಿಯಲ್ಲಿ ಮಾತನಾಡಿದ ಅವರು, 'ಯುಕೆಪಿ ಕುರಿತು ಸೋಮವಾರದಿಂದ ಆರಂಭವಾಗಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಯೋಜನೆ ಲಾಭ ಪಡೆಯುವ ಏಳು ಜಿಲ್ಲೆಗಳ ಜನಪ್ರತಿನಿಧಿಗಳು ಒಮ್ಮೆಲೇ ಹೋರಾಟ ಆರಂಭಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಹೆದರುತ್ತಾರೆ' ಎಂದರು.

ಶಾಸಕ ಸ್ಥಾನದಿಂದ ವಜಾಕ್ಕೆ ಒತ್ತಾಯ

ಬೆಳಗಾವಿ: ಬಸವೇಶ್ವರರ ಕುರಿತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವಹೇಳನಕಾರಿಯಾಗಿ ಹೇಳಿಕೆ ಕೊಟ್ಟಿದ್ದಾರೆ' ಎಂದು ಆರೋಪಿಸಿ, ನಗರದಲ್ಲಿ ವಿವಿಧ ಲಿಂಗಾಯತ ಸಂಘಟನೆಗಳ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು. ಯತ್ನಾಳ ಪ್ರತಿಕೃತಿ ದಹಿಸಿ, ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಶಂಕರ ಗುಡಸ್ ಮಾತನಾಡಿ, 'ಶರಣರ ನಾಡಿನಲ್ಲಿರುವ ಬಸನಗೌಡ ಪಾಟೀಲ ಅವರಿಗೆ ಲಿಂಗಾಯತ ಧರ್ಮದ ಸಂಸ್ಕಾರ ಮತ್ತು ವಚನ ಸಾಹಿತ್ಯದ ಬಗ್ಗೆ ಎಳ್ಳಷ್ಟು ಗೊತ್ತಿಲ್ಲ. ವಿಧಾನಮಂಡಲ ಚಳಿಗಾಲದ ಅಧಿವೇಶನ ದೊಳಗೆ, ಅವರು ಕ್ಷಮೆ ಕೇಳದಿದ್ದರೆ ಉಗ್ರಹೋರಾಟ ಮಾಡಬೇಕಾಗುತ್ತದೆ' ಎಂದರು. ಬೀದರ್‌ನ ಬಸವಧರ್ಮ ಪೀಠದ ಸತ್ಯಕ್ಕ ಮಾತಾಜಿ ಮಾತನಾಡಿ, 'ಬಸವಣ್ಣನವರು ಹೊಳೆಗೆ ಹಾರಿದ್ದನ್ನು ಬಸನಗೌಡ ಪಾಟೀಲ ಯತ್ನಾಳ ನೋಡಿದ್ದಾರೆಯೇ? ಇದಕ್ಕೆ ಪುರಾವೆ ತೆಗೆದುಕೊಂಡು ಬರಬೇಕು. ಇಲ್ಲದಿದ್ದರೆ ತಮ್ಮ ನಾಲಿಗೆ ಕತ್ತರಿಸಿಕೊಳ್ಳಬೇಕು' ಎಂದರು.

'ಅಧ್ಯಕ್ಷರ ವಿರುದ್ಧ ಮಾತನಾಡುವವರ ಮೇಲೆ ಶಿಸ್ತುಕ್ರಮ ಅಗತ್ಯ'

ಯತ್ನಾಳ ವಿರುದ್ಧ ಕ್ರಮಕ್ಕೆ ಬಿವೈವಿ ಬಣ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ನಾಯಕತ್ವದ ವಿರುದ್ಧ ನಿಂತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಬಣದವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಣದ ನಾಯಕರು, ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್ ಅವರನ್ನು ಒತ್ತಾಯಿಸಿದೆ.

ಬಿಜೆಪಿ ಕಚೇರಿಯಲ್ಲಿ ನಡೆದ ಪ್ರಮುಖರ ಸಮಿತಿ ಸಭೆಗೆ ಬಂದಿದ್ದ ರಾಧಾಮೋಹನ್ ಅವರನ್ನು ವಿಜಯೇಂದ್ರ ಬಣದ ನಾಯಕರು ಭೇಟಿ ಮಾಡಿದರು. ನಂತರ ಸುದ್ದಿಗಾರರ ಜತೆ ಮಾತನಾಡಿದ ಎಂ.ಪಿ. ರೇಣುಕಾಚಾರ್ಯ, 'ವಿಜಯೇಂದ್ರ ಪಕ್ಷ ಸಂಘಟನೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂದಿನ ಚುನಾವಣೆವರೆಗೆ ಅವರನ್ನೇ ಮುಂದುವರೆಸಬೇಕೆಂದು ಮನವಿ ಮಾಡಿದ್ದೇವೆ' ಎಂದರು.



ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್ ಅವರನ್ನು ಬಿ.ವೈ.ವಿಜಯೇಂದ್ರ ಬಣದ ನಾಯಕರು ಭೇಟಿ ಮಾಡಿ, ಚರ್ಚಿಸಿದರು

'ರಾಜ್ಯ ನಾಯಕತ್ವದ ವಿರುದ್ಧ ಬೆರಳೆಣಿಕೆ ಶಾಸಕರು, ನಾಯಕರು ಅನಗತ್ಯವಾಗಿ ಮಾತನಾಡುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮತೆಗೆದುಕೊಂಡು, ಸಂದೇಶ ರವಾನಿಸಬೇಕು. ಕೆಲವರಷ್ಟೇ ಅವರ ಬಣದಲ್ಲಿ ಇದ್ದು, ಉಳಿದವರು ವಿಜಯೇಂದ್ರ ಪರ ಇದ್ದಾರೆ ಎಂದು ಮನವರಿಕೆ ಮಾಡಿಕೊಟ್ಟಿದ್ದೇವೆ' ಎಂದರು.

ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾತನಾಡಿ, 'ರಾಜ್ಯ ಸರ್ಕಾರದ ವಿರುದ್ಧ ಹೋರಾಡಲು ಸಮಾವೇಶ ಆಯೋಜಿಸಲಾಗುತ್ತದೆ. ಈ ವಿಚಾರವನ್ನೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅವರಿಗೆ ತಿಳಿಸಲಾಗಿದೆ. ಭಿನ್ನರ ವಿರುದ್ಧ ವರಿಷ್ಠರಿಗೆ ದೂರು ನೀಡಲು ದೆಹಲಿಗೆ ಹೋಗುತ್ತೇವೆ' ಎಂದರು.

ಮಾಜಿ ಶಾಸಕರಾದ ವೈ.ಸಂಪಂಗಿ, ಜಗಳೂರುರಾಮಚಂದ್ರಪ್ಪ, ಎನ್.ಡಿ. ಲಕ್ಷ್ಮಿನಾರಾಯಣ ಅವರು ರಾಧಾಮೋಹನ್ ಅವರನ್ನು ಭೇಟಿ ಮಾಡಿದ ನಿಯೋಗದಲ್ಲಿ ಇದ್ದರು.

ವಾರದಲ್ಲಿ ಎರಡು ದಿನ ಮೀಸಲು: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಕಿತ್ತೂರು–ಕಲ್ಯಾಣ ಕರ್ನಾಟಕ ಸಮಸ್ಯೆ ಚರ್ಚೆ

ಪ್ರಜಾವಾಣಿ ವಾರ್ತೆ



ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶನಿವಾರ ಭೇಟಿ ನೀಡಿ ವ್ಯವಸ್ಥೆ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಬೆಳಗಾವಿ: 'ಈ ಬಾರಿ ವಿಧಾನಮಂಡಲ ಚಳಿಗಾಲದ ಎರಡು ವಾರದ ಅಧಿವೇಶನದಲ್ಲಿ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಮತ್ತು ಬುಧವಾರ ಪ್ರಶ್ನೋತ್ತರ ವೇಳೆ ನಂತರ, ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕುರಿತು ಚರ್ಚಿಸಲಾಗುವುದು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಹಲವು ವಿಷಯಗಳ ಕುರಿತು ಚರ್ಚೆಗೆ ಸಮಯ ಮೀಸಲಿಟ್ಟಿದ್ದೇವೆ. ಆಯಾ ದಿನಗಳಂದು ಕಿತ್ತೂರ-ಕಲ್ಯಾಣ ಪ್ರಾಂತಗಳ ಅಭಿವೃದ್ಧಿ ಕುರಿತು ಚಿಂತನೆ ನಡೆಸುವಂತೆ ಸದಸ್ಯರಿಗೂ ಸಲಹೆ ಕೊಟ್ಟಿದ್ದೇವೆ' ಎಂದರು.

'ಈ ಭಾಗದ ಸಮಸ್ಯೆಗಳ ಚರ್ಚೆಗೆ ಸಮಯ ಮೀಸಲಿಟ್ಟ ಅವಧಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ–ಕಳಸಾ ಬಂಡೂರಿ ಯೋಜನೆ ಅನುಷ್ಠಾನ, ಅರಣ್ಯಭೂಮಿ ಅತಿಕ್ರಮಣದಾರರು ಮತ್ತು ಸಂತ್ರಸ್ತರ ಸಮಸ್ಯೆ, ಕಬ್ಬು ಬೆಳೆಗಾರರ ಸಮಸ್ಯೆಗಳು, ಶೈಕ್ಷಣಿಕ ಸಂಕಷ್ಟಗಳು ಮತ್ತಿತರ ವಿಷಯಗಳ ಕುರಿತ ಚರ್ಚೆಗೆ ಒತ್ತು ಕೊಡಲಾಗುವುದು' ಎಂದು ಹೇಳಿದರು.

'ಈ ಸಲ ಪರಿಷತ್ತಿನಲ್ಲಿ 150 ಚುಕ್ಕೆ ಗುರುತಿನ, 1,247 ಚುಕ್ಕೆ ರಹಿತ ಸೇರಿದಂತೆ 1,397 ಪ್ರಶ್ನೆ ಸ್ವೀಕರಿಸಲಾಗಿದೆ. 81 ಗಮನಸೆಳೆಯುವ ಸೂಚನೆ ಬಂದಿವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ವಸತಿ ವ್ಯವಸ್ಥೆ ಕಲ್ಪಿಸು-ವುದಕ್ಕೆ ಹೆಚ್ಚಿನ ಹಣ ಖರ್ಚಾಗುತ್ತಿದೆ. ಶಾಸಕರ ಭವನ ನಿರ್ಮಾಣಕ್ಕೆ ಕೆಲವು ಪ್ರಸ್ತಾವ ಬಂದಿವೆ. ತಾಜ್ ಗ್ರೂಪ್, ಕೆಎಲ್‌ಇ ಸಂಸ್ಥೆ ಸೇರಿ ಹಲವು ಸಂಸ್ಥೆಯವರು ಶಾಸಕರ ಭವನ ನಿರ್ಮಾಣಕ್ಕೆ ಸಂಬಂಧಿಸಿ ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯಮಂತ್ರಿ ಜತೆ ಚರ್ಚಿಸಿ ಸೂಕ್ತ ನಿರ್ಧಾರಕ್ಕೆ ಬರಲಾಗುವುದು' ಎಂದು ಹೇಳಿದರು.

ಬೆಳಗಾವಿ ಜಿಲ್ಲೆ ವಿಭಜನೆ ಏಕೆ ಆಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಹೊರಟ್ಟಿ, 'ಬೆಳಗಾವಿ ಜಿಲ್ಲೆಯಲ್ಲಿ 18 ಶಾಸಕರಿದ್ದಾರೆ. ಇಬ್ಬರು ಸಂಸದರಿದ್ದಾರೆ. ಜತೆಗೆ, ರಾಜ್ಯಸಭಾ ಸದಸ್ಯರಿದ್ದಾರೆ. ಅವರೆಲ್ಲರೂ ಸರ್ಕಾರದ ಮುಂದೆ ಹೋಗಿ ಕುಳಿತರೆ, ಒಂದೇ ದಿನದಲ್ಲಿ ಜಿಲ್ಲಾ ವಿಭಜನೆಯ ಆದೇಶ ತರಬಹುದು. ಆ ಶಕ್ತಿ ಇವರಿಗಿದೆ. ಇದಕ್ಕೆ ಒಗ್ಗಟ್ಟು ಬೇಕು' ಎಂದರು.

ಉತ್ತರ ಕರ್ನಾಟಕ ಭಾಗದ ಚರ್ಚೆಗೆ ಮೊದಲ ಆದ್ಯತೆ ನೀಡಿ: ಯತ್ನಾಳ

ವಿಜಯಪುರ: 'ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಚರ್ಚೆಗೆ ಮೊದಲ ದಿನದಿಂದಲೇ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಅವರಿಗೆ ಪತ್ರ ಬರೆದಿದ್ದಾರೆ.

'ಉತ್ತರ ಮತ್ತು ದಕ್ಷಿಣ ಕರ್ನಾಟಕ ಭಾಗಗಳ ಅಭಿವೃದ್ಧಿ ಮತ್ತು ಸ್ಥಾನಮಾನಗಳ ಹಂಚಿಕೆಯಲ್ಲಿ ಪ್ರಾದೇಶಿಕ ತಾರತಮ್ಯ ನಿವಾರಣೆ ಅತ್ಯವಶ್ಯ. ಆದರೆ, ಪ್ರತಿ ಸಲ ಅಧಿವೇಶನ ಜರುಗಿದಾಗ ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಕೊನೆಯ ದಿನಗಳಲ್ಲಿ ಚರ್ಚೆಗೆ ಅವಕಾಶ ನೀಡುವುದರಿಂದ ಕೊನೆಯ ದಿನಗಳಲ್ಲಿ ಶಾಸಕರ ಹಾಜರಾತಿ ಕಡಿಮೆಯಾಗಿ ಚರ್ಚೆಯೇ ನಡೆಯುವುದಿಲ್ಲ' ಎಂದಿದ್ದಾರೆ.

'ಸಮಗ್ರ ಉತ್ತರ ಕರ್ನಾಟಕದ ನೀರಾವರಿ ಯೋಜನೆ, ರೈತರ ಸಮಸ್ಯೆ, ಕೈಗಾರಿಕೆಗಳು, ಶೈಕ್ಷಣಿಕ ಇತ್ಯಾದಿಗಳ ಅಭಿವೃದ್ಧಿಯ ಕುರಿತು ಅಧಿವೇಶನದ ಪ್ರಾರಂಭಿಕ ಹಂತದಲ್ಲಿಯೇ ಚರ್ಚೆಗೆ ಅವಕಾಶ ಕಲ್ಪಿಸಿ, ಆದ್ಯತೆ ನೀಡಬೇಕು' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ಇನ್‌ಸ್ಟಾಗ್ರಾಮ್'ನಲ್ಲಿ ಪರಿಚಯ ಗೃಹಿಣಿ ಬರ್ಬರ ಹತ್ಯೆ ಮಾಡಿದ ಪ್ರಿಯಕರ

ಪ್ರಜಾವಾಣಿ ವಾರ್ತೆ



ತೃಪ್ತಿ



ಚಿರಂಜೀವಿ

ಬಾಳೆಹೊನ್ನೂರು (ಚಿಕ್ಕಮಗಳೂರು): 'ಇನ್‌ಸ್ಟಾಗ್ರಾಮ್'ನಲ್ಲಿ ಪರಿಚಯ ಆಗಿದ್ದ ಗೃಹಿಣಿಯನ್ನು ಮಕ್ಕಳ ಎದುರೇ ಪ್ರಿಯಕರ ಕತ್ತರಿಯಿಂದ ಇರಿದು, ಕೆರೆಗೆ ಬಿಸಾಡಿ ಬರ್ಬರ ಹತ್ಯೆ ಮಾಡಿರುವ ಘಟನೆ ಸಮೀಪದ ಕಿಚ್ಚಬ್ಬಿಯಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಇದೇ ಗ್ರಾಮದ ರಾಜೇಶ್ ಅವರ ಪತ್ನಿ ತೃಪ್ತಿ (26) ಕೊಲೆಯಾದವರು. ಆರೋಪಿ ಚಿರಂಜೀವಿಯನ್ನು ಪೊಲೀಸರು ಸಂಜೆ ವೇಳೆಗೆ ಬಂಧಿಸಿದ್ದಾರೆ.

ಕೊಪ್ಪ ತಾಲ್ಲೂಕಿನ ಹೇರೂರು ಸಮೀಪದ ಸ್ಥಿರೂರಿನ ತೃಪ್ತಿಯನ್ನು ಕಿಚ್ಚಬ್ಬಿಯ ರಾಜೇಶ್ ವಿವಾಹವಾಗಿದ್ದರು. ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಚನ್ನಗಿರಿಯ ಚಿರಂಜೀವಿ ಬೆಂಗಳೂರಿನಲ್ಲಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದಾನೆ. ಕೆಲ ತಿಂಗಳ ಹಿಂದೆ ಇನ್‌ಸ್ಟಾಗ್ರಾಮ್‌ನಲ್ಲಿ ತೃಪ್ತಿಯ ಪರಿಚಯವಾಗಿ, ಅದು ಪ್ರೀತಿಗೆ ತಿರುಗಿತ್ತು. ತೃಪ್ತಿ ಮಕ್ಕಳನ್ನು ಬಿಟ್ಟು ತಿಂಗಳ ಹಿಂದೆ ಚಿರಂಜೀವಿಯೊಂದಿಗೆ ನಾಪತ್ತೆಯಾಗಿದ್ದರು. ಪತಿ ರಾಜೇಶ್ ಅವರು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತೃಪ್ತಿ ಮತ್ತು ಚಿರಂಜೀವಿಯನ್ನು ವಿಜಯಪುರದಲ್ಲಿ ಪೊಲೀಸರು ಪತ್ತೆ ಹಚ್ಚಿ ಠಾಣೆಗೆ ಕರೆತಂದಿದ್ದರು. ಪೊಲೀಸರು ಮನವೊಲಿಸಿ ಪತಿಯೊಂದಿಗೆ ತೃಪ್ತಿಯನ್ನು ಕಳುಹಿಸಿದ್ದರು.

ರಾಜೇಶ್ ಅವರು ಕೆಲಸಕ್ಕೆ ಹೋಗಿದ್ದಾಗ ಮನೆಗೆ ಬಂದ ಚಿರಂಜೀವಿ, ಎರಡೂವರೆ ವರ್ಷದ ಮಗಳ ಎದುರಿಗೇ ತೃಪ್ತಿಗೆ ಇರಿದಿದ್ದಾನೆ. ಆಕೆ ಕೂಗಿಕೊಂಡರೂ ಬಿಡದೆ ಸುಮಾರು 500 ಮೀಟರ್ ದೂರ ಕಾಫಿ ತೋಟದಲ್ಲಿ ಎಳೆದೊಯ್ದು ಕೆರೆಯಲ್ಲಿ ಎಸೆದು ಪರಾರಿ ಆಗಿದ್ದಾನೆ. ಎರಡು ತಿಂಗಳಿಂದ ತೃಪ್ತಿ ಸಂಪರ್ಕಕ್ಕೆ ಸಿಗದಿದ್ದರಿಂದ ಕುಪಿತಗೊಂಡಿದ್ದ ಚಿರಂಜೀವಿ ಈ ಕೊಲೆ ಮಾಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಎಸ್ಪಿ ಕೃಷ್ಣಮೂರ್ತಿ, ಡಿವೈಎಸ್ಪಿ ಬಾಲಾಜಿ ಸಿಂಗ್, ವೃತ್ತ ನಿರೀಕ್ಷಕ ಗುರುದತ್ ಕಾಮತ್, ಬಾಳೆಹೊನ್ನೂರು ಪಿಎಸೈ ರವೀಶ್, ನರಸಿಂಹರಾಜಪುರ ಪಿಸೈ ನಿರಂಜನಗೌಡ ಬೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ.

'ನಕ್ಸಲರ ಶರಣಾಗತಿಗೆ ಪ್ರಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಕ್ಸಲರಿಗೆ ಶರಣಾಗಲು ಕರೆ ನೀಡಿದ್ದು, ಕೆಲವು ಇಲಾಖೆಯವರು ನಕ್ಸಲರನ್ನು ಸಂಪರ್ಕಿಸಿ ಶರಣಾಗತಿ ಮಾಡಿಸಲು ಯತ್ನಿಸುತ್ತಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಡಿಜಿಪಿ ಪ್ರಣವ್ ಮೊಹಂತಿ ತಮ್ಮನ್ನು ಭೇಟಿಯಾದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಕ್ಸಲರ ಶರಣಾಗುವ ಬಗ್ಗೆ ಮಾತನಾಡಲು ಅವರು ಬಂದಿದ್ದರು. ಅವರಿಗೆ ಕೆಲವು ಸೂಚನೆಗಳನ್ನು ನೀಡಿದ್ದೇನೆ' ಎಂದರು.

'ಶರಣಾಗತಿ ಮಾಡಿಸುವುದೇ ಉತ್ತಮ. ಅವರು ಗುಂಡು ಹಾರಿಸುತ್ತಾರೆ, ನಮ್ಮವರು ಗುಂಡು ಹಾರಿಸುತ್ತಾರೆ. ಅದನ್ನು ಬದಿಗಿಟ್ಟು ಶರಣಾಗಲು ಈಗಾಗಲೇ ಮುಕ್ತ ಆಹ್ವಾನ ನೀಡಿದ್ದೇವೆ' ಎಂದು ಹೇಳಿದರು.

ಕಲಬುರಗಿ ಜೈಲಿನಲ್ಲಿ ಅವ್ಯವಸ್ಥೆ ಕುರಿತು ಮಾತನಾಡಿ, 'ಈ ಬಗ್ಗೆ ಸಂಬಂಧಪಟ್ಟವರ ಜೊತೆ ಮಾತನಾಡುತ್ತೇನೆ. ಜೈಲರ್, ಅಧಿಕಾರಿಗಳ ತಪ್ಪಿದ್ದರೆ ಅವರ ಮೇಲೆ ಕ್ರಮ ಖಚಿತ' ಎಂದರು.

'ಬಿಬಿಎಂಪಿ ವ್ಯಾಪ್ತಿ: 1.08 ಕೋಟಿ ಕೊರೊನಾ ಪರೀಕ್ಷೆ!'

ಒಂದನೇ ಫ್ಲ್ಯಾಪ್ ಪುಟದಿಂದ..

'ಆಯೋಗದ ಶಿಫಾರಸಿನಂತೆ ಕಾನೂನು ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧವೂ ವಿಚಾರಣೆ ನಡೆಯಲಿದೆ. ಕೆಲವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಶಿಫಾರಸು ಮಾಡಲಾಗಿದೆ. ವಿಚಾರಣೆ ನಡೆಸುವ ಸಂಪೂರ್ಣ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಿದ್ದೇವೆ. ಆ ಪ್ರಕ್ರಿಯೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.

ಮಾರ್ಗದರ್ಶನಕ್ಕೆ ಸಮಿತಿ: 'ಆಯೋಗದ ವರದಿಗಳನ್ನು ಪರಿಶೀಲಿಸಿ, ಮಾರ್ಗ ದರ್ಶನ ನೀಡಲು ನಿವೃತ್ತ ಅಧಿಕಾರಿಗಳನ್ನು ಒಳಗೊಂಡ ಅಧಿಕಾರಿಗಳ ಮಟ್ಟದ ಸಮಿತಿ ರಚಿಸಲಾಗುವುದು. ಈ ಪ್ರಕರಣದಲ್ಲಿ ಯಾರಿಗೂ ಅನಗತ್ಯವಾಗಿ ತೊಂದರೆ ಮಾಡಬಾರದೆಂಬ ಕಾರಣಕ್ಕೆ ಸಮಿತಿ ರಚಿಸಿದ್ದೇವೆ' ಎಂದು ಅವರು ಹೇಳಿದರು.

'ಕೋವಿಡ್ ತನಿಖೆ ರಾಜಕೀಯ ಪಿತೂರಿ' ಎಂದು ಮಾಜಿ ಆರೋಗ್ಯ ಸಚಿವ ಕೆ. ಸುಧಾಕರ್ ಹೇಳಿಕೆ ಪ್ರತಿಕ್ರಿಯಿಸಿದ ಅವರು, 'ಕುಂಬಳಕಾಯಿ ಕಳ್ಳ ಎಂದಾಗ ಹೆಗಲು ಮುಟ್ಟಿ ನೋಡಿಕೊಂಡಂತೆ ಅವರೇಕೆ ಮಾತನಾಡುತ್ತಿದ್ದಾರೆ. ಅವರ ವಿಷಯವನ್ನೇ ನಾವು ಮಾತನಾಡಿಲ್ಲ' ಎಂದು ಪ್ರತಿಕ್ರಿಯಿಸಿದರು.

> **ಕೋವಿಡ್ ನಿರ್ವಹಣೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಡಿಕುನ್ಹ ಆಯೋಗದ ಶಿಫಾರಸಿನಂತೆ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು, ಹಣ ತಿಂದವರನ್ನು ಬಿಡುವುದಿಲ್ಲ**
> **ಡಿ.ಕೆ. ಶಿವಕುಮಾರ್**
> ಉಪ ಮುಖ್ಯಮಂತ್ರಿ

ವರದಿಯ ಪ್ರಮುಖ ಅಂಶಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಅಕ್ರಮದಲ್ಲಿ ಭಾಗಿಯಾಗಿರುವ ಆಯುಕ್ತರು, ಅಧಿಕಾರಿಗಳು, ರಾಜಕಾರಣಿಗಳು, ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ವರದಿ ಶಿಫಾರಸು ಮಾಡಲಾಗಿದೆ' ಎಂದರು.

'ಡಿಕುನ್ಹ ಆಯೋಗದ ವರದಿ ಆಧಾರದಲ್ಲಿ ಎಸ್‌ಐಟಿ ರಚನೆ ಆಗಿದೆಯೇ' ಎಂದು ಕೇಳಿದಾಗ, 'ಆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಂತಿಮವಾದ ಬಳಿಕ ಮಾಹಿತಿ ನೀಡುತ್ತೇವೆ. ಈ ವಿಚಾರವಾಗಿ ಬಿಜೆಪಿಯವರಿಗೆ ನಾವು ಉತ್ತರ ನೀಡುವ ಅವಶ್ಯಕತೆ ಇಲ್ಲ' ಎಂದರು.

'ಆಕ್ಸಿಜನ್ ದುರಂತ: ಮರು ತನಿಖೆ'

'ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದ ಆಕ್ಸಿಜನ್ ದುರಂತ ಪ್ರಕರಣಕ್ಕೆ ಸಂಬಂಧಿಸಿ ಯಾವುದೇ ತಪ್ಪು ನಡೆದಿಲ್ಲ ಎಂದು ವರದಿ ನೀಡಿರುವುದನ್ನು ನಮ್ಮ ಸರ್ಕಾರ ಒಪ್ಪುವುದಿಲ್ಲ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'ಈ ಪ್ರಕರಣದ ಬಗ್ಗೆ ಮತ್ತೆ ತನಿಖೆಯಾಗಬೇಕು. ನಾನು ಮತ್ತು ಸಿದ್ದರಾಮಯ್ಯ ಅವರೇ ಆಸ್ಪತ್ರೆಗೆ ಹೋಗಿ ಪರಿಸ್ಥಿತಿ ನೋಡಿದ್ದೇವೆ. ಅಲ್ಲಿ 36 ಜನ ಸತ್ತರೆ, ಅಂದಿನ ಆರೋಗ್ಯ ಸಚಿವರು ಕೇವಲ ಮೂವರು ಸತ್ತಿದ್ದಾರೆ ಎಂದಿದ್ದರು' ಎಂದು ಅವರು ತಿಳಿಸಿದರು.

ನಿಖಿಲ್‌ಗೆ ಅಧ್ಯಕ್ಷ ಪಟ್ಟ: ಸುಳಿವು

ಸೋಲು, ಗೆಲುವು ಪ್ರಜಾಪ್ರಭುತ್ವದ ಭಾಗ – ದೇವೇಗೌಡ

ಪ್ರಜಾವಾಣಿ ವಾರ್ತೆ



ನಿಖಿಲ್

ನವದೆಹಲಿ: 'ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಜೆಡಿಎಸ್ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರ-ನ್ನಾಗಿ ಮಾಡಲಾಗುವುದು' ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಶನಿವಾರ ಸುಳಿವು ನೀಡಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸದ್ಯ ಕುಮಾರಸ್ವಾಮಿ ಪಕ್ಷದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅವರು ಕೇಂದ್ರ ಸಚಿವರಾಗಿದ್ದು, ಪಕ್ಷದ ವ್ಯವಹಾರಗಳ ಮೇಲೆ ಕೇಂದ್ರೀಕರಿಸಲು ಸಾಧ್ಯವಾಗುತ್ತಿಲ್ಲ. ಮುಂದೆ ನಿಖಿಲ್ ಅವರು ಪಕ್ಷದ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ' ಎಂದು ಹೇಳಿದರು.

> **ಮುಖ್ಯಾಂಶಗಳು**
> - ಕುಮಾರಸ್ವಾಮಿಗೆ ಪಕ್ಷದ ವ್ಯವಹಾರಗಳ ಮೇಲೆ ಕೇಂದ್ರೀಕರಿಸಲಾಗುತ್ತಿಲ್ಲ
> - ನಿಖಿಲ್ ನಾಯಕತ್ವದಲ್ಲಿ ಬೇರು ಮಟ್ಟದಲ್ಲಿ ಪಕ್ಷ ಸಂಘಟನೆ– ಮಾಜಿ ಪ್ರಧಾನಿ

'ನಿಖಿಲ್ ಯುವ ನಾಯಕ ಮತ್ತು ಉಜ್ವಲ ಭವಿಷ್ಯ ಹೊಂದಿದ್ದಾರೆ. ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡುತ್ತೇವೆ ಮತ್ತು ಅವರ ನಾಯಕತ್ವದಲ್ಲಿ ಪಕ್ಷ ಬೇರು ಮಟ್ಟದಲ್ಲಿ ಬಲಪಡಿಸುತ್ತೇವೆ' ಎಂದರು.

ಸ್ಪರ್ಧಿಸಿರುವ ಎಲ್ಲ ಚುನಾವಣೆಗಳಲ್ಲಿ ನಿಖಿಲ್ ಸೋತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಗೆಲುವು ಮತ್ತು ಸೋಲು ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿದೆ. ಚುನಾವಣೆಯಲ್ಲಿ ಸೋತ ಕೂಡಲೇ ಅವರ ರಾಜಕೀಯ ಜೀವನ ಅಂತ್ಯವಾಗಿದೆ ಎಂದಲ್ಲ' ಎಂದರು.

ದೇವೇಗೌಡರು ರಾಜಕೀಯದಿಂದ ನಿವೃತ್ತಿಯಾಗಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ಹಿಂದೆ ಹಲವಾರು ಜನರು ನನ್ನನ್ನು ಮುಗಿಸಲು ಪ್ರಯತ್ನಿಸಿದ್ದರು. ಆದರೂ, ನಾನು ಇನ್ನೂ ಜೀವಂತವಾಗಿದ್ದೇನೆ' ಎಂದರು.

'ರಾಜಕೀಯದಲ್ಲಿ ಏರಿಳಿತಗಳು ಸಹಜ. ಹಾಸನ ಜಿಲ್ಲೆಯಲ್ಲಿ ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸುತ್ತೇವೆ ಎಂದು ಹಲವಾರು ನಾಯಕರು ಸವಾಲು ಹಾಕಿದ್ದಾರೆ. ದೇವೇಗೌಡರ ಕುಟುಂಬದ ಕೊಡುಗೆ ಏನು ಎಂಬುದು ಹಾಸನದ ಜನರಿಗೆ ತಿಳಿದಿದೆ' ಎಂದರು.

ಕಂಠೀರವ ಸ್ಟುಡಿಯೊದಿಂದ ಒಟಿಟಿ ವೇದಿಕೆ: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಕಂಠೀರವ ಸ್ಟುಡಿಯೊ ವತಿಯಿಂದ ಸಿನಿಮಾ ವಿತರಣೆಯನ್ನು ಒಟಿಟಿ (ಓವರ್ ದಿ ಟಾಪ್) ಮೂಲಕ ಆರಂಭಿಸಲು ನಿರ್ದೇಶಕರ ಸಭೆ ನಿರ್ಣಯಿಸಿದ್ದು, ಇದಕ್ಕೆ ಸರ್ಕಾರ ನೆರವು ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಶ್ರೀ ಕಂಠೀರವ ಸ್ಟುಡಿಯೊ ವಾಣಿಜ್ಯೋದ್ಯಮಕ್ಕೆ ಪ್ರವೇಶಿಸಿ, ಚಲನಚಿತ್ರ ಮತ್ತು ಕಿರುಚಿತ್ರಗಳ ನಿರ್ಮಾಣ ಸೇರಿದಂತೆ ಚಲನಚಿತ್ರೋದ್ಯಮದ ಎಲ್ಲ ವಾಣಿಜ್ಯ ಚಟುವಟಿಕೆಗಳನ್ನು ಪ್ರಾರಂಭಿಸಲು 310ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಇದಕ್ಕಾಗಿ, 'ಮೆಮೊರಂಡಮ್ ಆಫ್ ಅಸೋಸಿಯೇಷನ್'ನಲ್ಲಿ ತಿದ್ದುಪಡಿಯನ್ನೂ ಮಾಡಲಾಗಿದೆ ಎಂದು ಶ್ರೀ ಕಂಠೀರವ ಸ್ಟುಡಿಯೊ ಅಧ್ಯಕ್ಷ ಮಹಬೂಬ್ ಪಾಷ ಅವರು ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಕೇರಳ ರಾಜ್ಯ ಸರ್ಕಾರ 'ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್' ನಡೆಸುತ್ತಿದ್ದು, ಅಲ್ಲಿ ಒಟಿಟಿ ಲಾಭದಾಯಕವಾಗಿದೆ. ನಮ್ಮ ನಿಗಮದಿಂದ ಒಟಿಟಿ ಅಭಿವೃದ್ಧಿಪಡಿಸಿ, ಕನ್ನಡ ಸಿನಿಮಾಗಳ ಜೊತೆಗೆ ಬೇರೆ ಭಾಷೆಯ ಸಿನಿಮಾಗಳನ್ನು ಖರೀದಿಸಿ ಪ್ರದರ್ಶಿಸಲು ಉದ್ದೇಶಿಸಲಾಗಿದೆ. ಇದರಿಂದ ನಿಗಮಕ್ಕೆ ಲಾಭವಾಗುವುದಲ್ಲದೆ, ಕಲಾವಿದರು, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬಹುದಾಗಿದೆ. ಹೀಗಾಗಿ, ಒಟಿಟಿ ಅಭಿವೃದ್ಧಿಪಡಿಸಲು ಸಹಾಯ ಹಾಗೂ ಕ್ರಮ ಜರುಗಿಸಲು ಸಂಬಂಧಿಸಿದವರಿಗೆ ನಿರ್ದೇಶನ ನೀಡಬೇಕು' ಎಂದು ಪಾಷ ಅವರು ಮುಖ್ಯಮಂತ್ರಿ ಅವರನ್ನು ಕೋರಿದ್ದಾರೆ.

ಸಿಡಿಲು ಬಡಿದು ಯುವಕ ಸಾವು

ಕಾರವಾರ/ಯಲ್ಲಾಪುರ: ಜಿಲ್ಲೆಯ ಹಲವೆಡೆ ಮಳೆ ಮುಂದುವರಿದಿದ್ದು, ಭತ್ತ, ಅಡಿಕೆ ಕೊಯ್ಲು ಸಮಯದಲ್ಲೇ ಮಳೆ ಸುರಿಯುತ್ತಿರುವುದು ಕೃಷಿಕರನ್ನು ಚಿಂತೆಗೀಡುಮಾಡಿದೆ. ಸಿದ್ದಾಪುರ ಭಾಗದಲ್ಲಿ ಎರಡು ದಿನದಿಂದ ಮಳೆಯಾಗುತ್ತಿದ್ದು, ಹೊನ್ನಾವರ, ಯಲ್ಲಾಪುರ ಸೇರಿ ಹಲವೆಡೆ ಶನಿವಾರ ನಸುಕಿನಲ್ಲಿ ಮಳೆಯಾಗಿದೆ.

ಯಲ್ಲಾಪುರ ತಾಲ್ಲೂಕಿನ ನಂದೊಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಗೋಡು ಗ್ರಾಮದ ಬಾಳೆಗದ್ದೆಯಲ್ಲಿ ಶುಕ್ರವಾರ ರಾತ್ರಿ ಸಿಡಿಲು ಬಡಿದು ಹರೀಶ ಅರ್ಜುನ ಸಿದ್ದಿ (27) ಎಂಬುವರು ಮೃತಪಟ್ಟಿದ್ದಾರೆ.



ಕೊಡಗಿನ ಕೆಲವೆಡೆ ಬಿರುಸಿನ ಮಳೆ (ಮಡಿಕೇರಿ ವರದಿ): ತಾಲ್ಲೂಕಿನ ಬಲ್ಲಮಾವಟಿ ಗ್ರಾಮ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆಯಲ್ಲಿ ಶನಿವಾರ 30 ನಿಮಿಷಗಳಿಗೂ ಅಧಿಕ ಕಾಲ ಬಿರುಸಿನಿಂದ ಮಳೆಯಾಗಿದೆ.

ರಾಜ್ಯ ಒಕ್ಕಲಿಗರ ಸಂಘ,
ಕೃ. ರಾ. ರಸ್ತೆ, ಬೆಂಗಳೂರು 560 004.

ನಂ.ರಾಒಸ:ಆಡಳಿತ:1414:2024-2025 | **ಪ್ರಕಟಣೆ** | ದಿನಾಂಕ: 07-12-2024

ವಿಷಯ: ದಿನಾಂಕ: 15-12-2024ರ ಭಾನುವಾರ ಬೆಳಗ್ಗೆ 10-00 ಗಂಟೆಗೆ ನಡೆಯಲಿರುವ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಸಭೆ.
ಉಲ್ಲೇಖ: 1. ದಿನಾಂಕ: 24-11-2024ರಂದು ನಡೆದ ಅವಿಶ್ವಾಸ ನಿರ್ಣಯದ ಸಭೆಯ ನಡಾವಳಿಯಂತೆ.
2. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: ಎಂ.ಎಫ್.ಎ 7024/2024ಕ್ಕೆ ಜಂಟಿಯಾಗಿ ಎಂ.ಎಫ್.ಎ 7025/2024ರಲ್ಲಿ ದಿನಾಂಕ: 06-12-2024ರ ಆದೇಶದಂತೆ.

ದಿನಾಂಕ: 24-11-2024ರಂದು ನಡೆದ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯದ ಬಗ್ಗೆ ನಿರ್ಣಯಿಸಲಾಗಿರುತ್ತದೆ. ರಾಜ್ಯ ಒಕ್ಕಲಿಗರ ಸಂಘದ ಇನ್ನುಳಿದ ಅವಧಿಗೆ ಪದಾಧಿಕಾರಿಗಳ ಆಯ್ಕೆಗಾಗಿ ಕಾರ್ಯಕಾರಿ ಸಮಿತಿಯ ಸಭೆಯನ್ನು ದಿನಾಂಕ: 15-12-2024ರ ಭಾನುವಾರ ಬೆಳಗ್ಗೆ 10-00 ಗಂಟೆಗೆ ಸಂಘದ ಆವರಣದಲ್ಲಿರುವ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ (B.I.T) 7ನೇ ಮಹಡಿಯ ಎ.ಐ & ಎಂ.ಎಲ್ (AI&ML) ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳು ಸಭೆಗೆ ಆಗಮಿಸಬೇಕಾಗಿ ಕೋರಿದೆ. ಪದಾಧಿಕಾರಿಗಳ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವವರು ಈ ಕೆಳಗೆ ನಮೂದಿಸಿರುವ ಚುನಾವಣಾ ವೇಳಾಪಟ್ಟಿಯಂತೆ ನಾಮಪತ್ರವನ್ನು ಸಲ್ಲಿಸಬಹುದು. ನಾಮಪತ್ರವನ್ನು ಚುನಾವಣಾ ದಿನಾಂಕದಂದು ಸಭೆಯಲ್ಲಿ ಪಡೆಯಬಹುದಾಗಿರುತ್ತದೆ. ಆಡಳಿತ ಮಂಡಳಿಯ ಇನ್ನುಳಿದ ಅವಧಿಗೆ ಸೀಮಿತವಾಗಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ.

ಚುನಾವಣಾ ವೇಳಾಪಟ್ಟಿ

1. ನಾಮಪತ್ರಗಳ ಸಲ್ಲಿಕೆ	ದಿನಾಂಕ: 15-12-2024ರ ಬೆಳಗ್ಗೆ 10-30 ರಿಂದ 11-30 ಗಂಟೆಯವರೆಗೆ.
2. ನಾಮಪತ್ರಗಳ ಪರಿಶೀಲನೆ	ದಿನಾಂಕ: 15-12-2024ರ ಬೆಳಗ್ಗೆ 11-30 ರಿಂದ 11-45 ಗಂಟೆಗೆ.
3. ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ	ದಿನಾಂಕ: 15-12-2024ರ ಬೆಳಗ್ಗೆ 11-45 ಗಂಟೆಗೆ.
4. ನಾಮಪತ್ರ ಹಿಂಪಡೆಯುವುದು	ದಿನಾಂಕ: 15-12-2024ರ ಬೆಳಗ್ಗೆ 11-50 ರಿಂದ 12-00 ಗಂಟೆಯವರೆಗೆ.
5. ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ	ದಿನಾಂಕ: 15-12-2024ರ ಮಧ್ಯಾಹ್ನ 12-10 ಗಂಟೆಗೆ.
6. ಚುನಾವಣೆ ರಹಸ್ಯ ಮತದಾನದ ಮೂಲಕ (ಅವಶ್ಯಕತೆ ಇದ್ದರೆ)	ದಿನಾಂಕ: 15-12-2024ರ ಮಧ್ಯಾಹ್ನ 12-30 ರಿಂದ 1-30ರ ವರೆಗೆ.
7. ಮತಗಳ ಎಣಿಕೆ	ದಿನಾಂಕ: 15-12-2024ರಂದು ಮತದಾನ ಮುಗಿದ ನಂತರ.
8. ಫಲಿತಾಂಶ ಪ್ರಕಟಣೆ	ದಿನಾಂಕ: 15-12-2024ರಂದು ಮತ ಎಣಿಕೆ ಮುಗಿದ ನಂತರ.

ತಮ್ಮ ವಿಶ್ವಾಸಿಗಳು
ಸಹಿ/-

1. ಬಿ.ಕೆಂಚಪ್ಪಗೌಡ 2. ಎಲ್.ಶ್ರೀನಿವಾಸ್ 3. ಸಿ.ಎಂ ಮಾರೇಗೌಡ 4. ಡಿ.ಹನುಮಂತಯ್ಯ
5. ವೆಂಕಟರಾಮೇಗೌಡ 6. ಬಿ.ಪಿ ಮಂಜೇಗೌಡ 7. ಹೆಚ್.ಎನ್ ಅಶೋಕ(ತಮ್ಮಾಜಿ) 8. ಕೆ.ಎಸ್ ಸುರೇಶ್
9. ಬಿ.ವಿ ರಾಜಶೇಖರಗೌಡ 10. ಡಾ|| ವಿ.ನಾರಾಯಣಸ್ವಾಮಿ 11. ಆರ್.ಹನುಮಂತರಾಯಪ್ಪ 12. ಎನ್.ಬಾಲಕೃಷ್ಣ (ನಲ್ಲಿಗೆರೆ ಬಾಲು)
13. ಎ.ಪೂರ್ಣೇಶ್ 14. ಎನ್.ರಮೇಶ್ 15. ಸಿ.ಜಿ ಗಂಗಾಧರ್ 16. ಟಿ.ಕೋನಪ್ಪರೆಡ್ಡಿ
17. ಅಶೋಕ್ ಎಸ್.ಡಿ ಜಯರಾಮ್ 18. ಎಸ್.ಕೆ ಧರ್ಮೇಶ್ ಸಿರಿಬೈಲ್ 19. ಜೆ.ರಾಜು 20. ಡಾ|| ಕೆ.ವಿ ರೇಣುಕಾಪ್ರಸಾದ್

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಎಸ್‌ಟಿಎಲ್/ಟಿಎನ್‌ಡಿ/2024–25 ದಿನಾಂಕ: 05.12.2024

ಟೆಂಡರ್ ಪ್ರಕಟಣೆ

ಕರ್ನಾಟಕದಾದ್ಯಂತ ಇರುವ ಕೆಆರ್‌ಐಡಿಎಲ್(ಕೆಎಲ್‌ಎಸಿ) ಉಪ ವಿಭಾಗಗಳಿಗೆ ಐಎಸ್ 1786 ಎಫ್‌ಇ 550 ಅನ್ವಯ ಟಿಎಂಟಿ ಸ್ಟೀಲ್ ಬಾರ್‌ಗಳ ಸರಬರಾಜಿಗಾಗಿ ಕಳೆದ 3 ಹಣಕಾಸಿನ ವರ್ಷಗಳಲ್ಲಿ ಕೆಳಗೆ ತಿಳಿಸಿರುವ ತಃಖ್ತೆಯಲ್ಲಿ ನಿಗದಿಪಡಿಸಿರುವ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರುಗಳು/ಪ್ರಾಥಮಿಕ ತಯಾರಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯು ಕಳೆದ ಮೂರು ಹಣಕಾಸಿನ ವರ್ಷಗಳಲ್ಲಿ ಸರ್ಕಾರದ ಇಲಾಖೆಗಳು/ಅರೆ ಸರ್ಕಾರಿ ಇಲಾಖೆಗಳು/ ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು/ಕಂಪನಿಗಳಿಗೆ 1000 ಎಂಟಿಯ ಇದೇ ರೀತಿಯ ಸರಬರಾಜನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಆಸಕ್ತಿಯುಳ್ಳ ತಯಾರಕರು ಟೆಂಡರ್‌ನಲ್ಲಿ ಭಾಗವಹಿಸಬಹುದು ಮತ್ತು ಇ–ಆಡಳಿತ ಕಾರ್ಯಾಲಯದ ವೆಬ್‌ಸೈಟ್: www.kppp.karnataka.gov.in ಮೂಲಕ ಮಾತ್ರ ವಿವರಗಳನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಸಂಪರ್ಕ ಸಂಖ್ಯೆ: +91–8046010000 +91–8068948777.

ಕ್ರ. ಸಂ.	ಟೆಂಡರ್‌ನ ವಿವರ	ಪ್ರಮಾಣ ಎಂ.ಟಿ ಗಳಲ್ಲಿ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ. ಲಕ್ಷಗಳಲ್ಲಿ
1	ಟೆಂಡರ್ ಭಾಗ–1 ಬೆಂಗಳೂರು ಮತ್ತು ಬಿಬಿಎಂಪಿ ವಲಯ	501	281.81	4.24	900.00
2	ಟೆಂಡರ್ ಭಾಗ–II ಮೈಸೂರು ವಲಯ	619	350.66	5.26	1122.00
3	ಟೆಂಡರ್ ಭಾಗ–III ಸೆಂಟ್ರಲ್ (ಚಿತ್ರದುರ್ಗ) ವಲಯ	780	446.55	6.70	1429.00
4	ಟೆಂಡರ್ ಭಾಗ–IV ಬೆಳಗಾವಿ ವಲಯ	715	406.47	6.10	1300.00
5	ಟೆಂಡರ್ ಭಾಗ–V ಕಲಬುರಗಿ ವಲಯ	385	218.87	3.28	700.00

ಒಂದು ಸಂಸ್ಥೆಯು ಮೇಲಿನ ತಃಖ್ತೆಯಲ್ಲಿ ಉಲ್ಲೇಖಿಸಿರುವ 5 ಭಾಗಗಳಲ್ಲಿ ಗರಿಷ್ಠ ಮೂರು ಭಾಗಗಳಲ್ಲಿ ಭಾಗವಹಿಸಲು ಅರ್ಹವಾಗಿದೆ.
ಸರಬರಾಜು ಮಾಡುವ ಅವಧಿ: ಸರಬರಾಜು ಆದೇಶ ನೀಡಿದ ದಿನಾಂಕದಿಂದ ಮೂರು ತಿಂಗಳು.
ವಿಚಾರಣೆಗೆ ಕಡೆಯ ದಿನಾಂಕ ಮತ್ತು ಸಮಯ: **04.01.2025 ರಂದು ಮಧ್ಯಾಹ್ನ 2.00 ಗಂಟೆವರೆಗೆ.**
ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **04.01.2025 ರಂದು ಮಧ್ಯಾಹ್ನ 3.00 ಗಂಟೆವರೆಗೆ.**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.01.2025 ರಂದು ಮಧ್ಯಾಹ್ನ 3.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.01.2025 ರಂದು ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಬೆಂಗಳೂರು)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09. ದೂರವಾಣಿ: 080–28015604,
ಇ–ಮೇಲ್: ddworkskridl@gmail.com ಮಾಹಿತಿಗಾಗಿ www.kridl.org.in ಇಲ್ಲಿಗೆ ಲಾಗಾನ್ ಆಗಿ.
ಸಹಿ/–ಮುಖ್ಯ ಅಭಿಯಂತರರು (ಬೆಂಗಳೂರು)

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ ಕಲಬುರಗಿ
(ಉಗ್ರಾಣ ಇಲಾಖೆ)

ಸಂ. ಕಕರಸಾ/ಕೇಕ/ಉ&ಮಖಿನಿ/ 09 /2024–25 ದಿನಾಂಕ 06.12.2024

:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ) ::

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಅಲ್ಪಾವದಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Tender No. & date	Tender Nomenclature	Value	Last date for submission of tender
1	G-42/ 06.12.24	Procurement of Lubricants	Rs. 7.01 Crores	31.12.2024 at 15:00 hrs.
2	G-43/ 06.12.24	Procurement of SMF Batteries for UPS	Rs. 0.83 Crores	31.12.2024 at 15:00 hrs.
3	G-44/ 06.12.24	Procurement of Automotive Batteries	Rs. 1.94 Crores	31.12.2024 at 15:00 hrs.
4	G-45/ 06.12.24	Selection of an agency for providing Technical Assistants to KKRTC	Rs. 15.73 Crores	31.12.2024 at 15:00 hrs.
5	G-46/ 06.12.24	Procurement of ERW GI Tubes	Rs. 02.05 Crores	31.12.2024 at 15:00 hrs.
6	G-47/ 06.12.24	Procurement of Automotive Glasses	Rs. 02.64 Crores	31.12.2024 at 15:00 hrs.

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/ ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ –ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ/ಕಲಬುರಗಿ/700/ಕೆ.ಎಸ್.ಎಂ.ಸಿ.&ಎ/2024–25

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 05122024-259184
CG - DL - E -05122024-259184
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 4839] नई दिल्ली, बृहस्पतिवार, दिसंबर 5, 2024 / अग्रहायण 14, 1946
No. 4839] NEW DELHI, THURSDAY, DECEMBER 5, 2024/AGRAHAYANA 14, 1946

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 4ನೇ ಡಿಸೆಂಬರ್, 2024

ಎಸ್.ಓ. ನಂ. 5232(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.150ಎ ರಲ್ಲಿ in the stretch of land from design Km 410.600 (Existing Km 413.740) to design Km 441.900 (Existing Km 447.610)** (ಹಿರಿಯೂರು–ಹುಳಿಯಾರ್ ಸೆಕ್ಷನ್) ರಸ್ತೆ ನಿರ್ಮಾಣ (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–150ಎ, ಪಿ.ಡಬ್ಲ್ಯು.ಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.150ಎ ರಲ್ಲಿ in the stretch of land from design Km 410.600 (Existing Km 413.740) to design Km 441.900 (Existing Km 447.610) (ಹಿರಿಯೂರು–ಹುಳಿಯಾರ್ ಸೆಕ್ಷನ್) ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ | ಜಿಲ್ಲೆಯ ಹೆಸರು : ಚಿತ್ರದುರ್ಗ

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ಹಿರಿಯೂರು					
ಗ್ರಾಮ : ಯಲ್ಲದಕೆರೆ					
1	90	ಖಾಸಗಿ	ಖುಷ್ಕಿ	0.10117	0.10117
2	91/1	ಖಾಸಗಿ	ಭಾಗಾಯ್ತು	0.030351	0.030351
				ಒಟ್ಟು	0.131521

[F. No. 12037/57/2016-KNT(P-6)/3A]
ಅಭಯ್ ಜೈನ್, ನಿರ್ದೇಶಕರು



‘ಪರ್ಯಾಯ ಆದಾಯದ ದಾರಿ ಹುಡುಕಲೇಬೇಕು’

ನಿರ್ಮಾಪಕರು ಅನ್ನದಾತರು. ಅವರೇ ಸಂಕಷ್ಟದಲ್ಲಿದ್ದಾರೆ ಎಂದರೆ ಉಳಿದವರೆಲ್ಲರೂ ಕಷ್ಟದಲ್ಲಿ ಇರುತ್ತಾರೆ. ಈಗ ಕಲಾವಿದರ ಸಂಖ್ಯೆ ಹೆಚ್ಚಾಗಿದೆ. ಜೊತೆಗೆ ಮೊದಲಿನಷ್ಟು ಅವಕಾಶಗಳು ಸಿಗುತ್ತಿಲ್ಲ. ಹೀಗಾಗಿ ಪರ್ಯಾಯ ಆದಾಯದ ಮೂಲ ಹುಡುಕಿಕೊಳ್ಳುವುದು ಅನಿವಾರ್ಯ. ನಾನು ವೈಯಕ್ತಿಕವಾಗಿ ಕಲೆಯಿಂದಲೇ ಜೀವನ ನಡೆಸಬಲ್ಲೆ ಎಂಬಷ್ಟು ಆರ್ಥಿಕವಾಗಿ ಸದೃಢನಾಗುವವರೆಗೂ ಕೆಲಸ ಬಿಟ್ಟಿರಲಿಲ್ಲ. ಜನಪ್ರಿಯ ಕಲಾವಿದರೊಬ್ಬರು ಅವಕಾಶ ಕಡಿಮೆಯಾದಾಗ ರಾತ್ರಿ ಕ್ಯಾಂಟೀನ್ ನಡೆಸುತ್ತಿದ್ದರು. ಇವತ್ತು 12 ಶಾಖೆಗಳನ್ನು ಮಾಡಿದ್ದಾರೆ. ಬದುಕಲು ಸಾವಿರಾರು ದಾರಿಗಳಿವೆ. ಕಲೆ ಬಿಟ್ಟು ಬೇರೇನು ಗೊತ್ತಿಲ್ಲ ಎಂಬ ಮನೋಭಾವವಿದ್ದರೆ ಉಸಿರುಗಟ್ಟುತ್ತದೆ. ಗುಣಮಟ್ಟದ ಚಿತ್ರಗಳು ಬರುವುದೇ ಇದಕ್ಕೆ ಪರಿಹಾರ. ಒಂದು ಐಯ್ಯರ್ ಹೋಟೆಲ್‌ನಲ್ಲಿ ದಿನಕ್ಕೆ 50,000 ಇಡ್ಲಿ ಮಾರಾಟವಾಗುತ್ತದೆ ಎಂಬ ವಿಡಿಯೊವನ್ನು ಇತ್ತೀಚೆಗೆ ನೋಡಿ ನಾನು ತಿನ್ನಲು ಹೋದೆ. ದೊಡ್ಡ ಸರತಿ ಸಾಲು ಇತ್ತು. ಅದ್ಭುತ ರುಚಿ. ಆರು ಇಡ್ಲಿ ತಿಂದು ಬಂದೆ. ಗುಣಮಟ್ಟವಿದ್ದರೆ ಜನ ಹುಡುಕಿಕೊಂಡು ಬರುತ್ತಾರೆ. ರಾಜ್‌ಕುಮಾರ್, ಪುಟ್ಟಣ್ಣ, ಸಿದ್ಧಲಿಂಗಯ್ಯನವರ ಕಾಲದ ಚಿತ್ರಗಳು ಮತ್ತೆ ಬರಬೇಕು

ದೊಡ್ಡಣ್ಣ, ನಟ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದ ಖಜಾಂಚಿ



‘ಬಡ್ಡಿ ಸಾಲದಲ್ಲಿ ಸಿಲುಕಿದರೆ ಮುಗಿಯಿತು’

ನಿರ್ಮಾಣ ಗೊತ್ತಿಲ್ಲದೆ ಚಿತ್ರರಂಗಕ್ಕೆ ಬರುತ್ತಾರೆ. ಎಲ್ಲಿಂದಲೋ ದುಡ್ಡು ತಂದು ಹಾಕುತ್ತಾರೆ. ಒಂದು ಸಲ ಬಡ್ಡಿ ಸಾಲದಲ್ಲಿ ಸಿಲುಕಿಕೊಂಡರೆ ಕಥೆ ಮುಗಿಯಿತು. ಮೊದಲಿನಂತೆ ನೆಗೆಟೀವ್ ಮೇಲೆ ಈಗ ಸಾಲ ಕೊಡುವುದಿಲ್ಲ. ಜೊತೆಗೆ ಆಸ್ತಿ, ಮನೆಗಳನ್ನು ಬರೆಸಿಕೊಂಡಿರುತ್ತಾರೆ. ಬಡ್ಡಿ ಕಟ್ಟಲಾಗದೆ ಪರದಾಡಿ ಕೆಲವೊಮ್ಮೆ ಆತ್ಮಹತ್ಯೆ ಹಂತ ತಲುಪಿ-ಬಿಡುತ್ತಾರೆ. ಗಾಂಧಿನಗರದಲ್ಲಿ ಈಗ ಮೊದಲಿನಂತೆ ಸಿನಿಮಾಗೆ ಸಾಲ ಕೊಡುವವರು ಕಡಿಮೆಯಾಗಿದ್ದಾರೆ. ಆರ್.ಎಸ್.ಗೌಡರು, ನಿರಂಜನ್, ಮೈಸೂರು ರಮೇಶ್, ಕೆವಿಎನ್ ಸಂಸ್ಥೆ ಈಗಲೂ ಸಿನಿಮಾಗಳಿಗೆ ಫೀಡಿಂಗ್ ಮಾಡುತ್ತಿವೆ. ಆದರೆ ಸಿನಿಮಾದ ಜೊತೆಗೆ ಸಂಬಂಧಿತ ದಾಖಲೆಗಳೊಂದಿಗೆ ಅಡಮಾನ ಸಾಲದಂತೆ ನೀಡುತ್ತಾರೆ

ಬಾ.ಮ.ಗಿರೀಶ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿ



‘ಆರೋಗ್ಯಕರ ಅಭ್ಯಾಸ ರೂಢಿಸಿಕೊಳ್ಳಬೇಕು’

ತಾರೆಯರು ಹೊರಗಿನಿಂದ ನೋಡಲು ಆದರ್ಶ ವ್ಯಕ್ತಿಗಳಂತೆ ಕಾಣಬಹುದಾದರೂ, ಅವರ ಜೀವನದ ಒತ್ತಡಗಳು ತೀವ್ರವಾಗಿರುತ್ತವೆ. ಅದು ಸಾರ್ವಜನಿಕವಾಗಿ ಗೋಚರಿಸುವುದಿಲ್ಲ. ಅವರ ಜೀವನ ಶೈಲಿಯ ಹಿಂದೆ ತೀವ್ರವಾದ ಒತ್ತಡ ಇರುತ್ತದೆ. ತಾವು ಸಾಧಿಸಿರುವ ಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಹೆಚ್ಚು ಸಾಧಿಸಲು ನಿರಂತರವಾಗಿ ಪ್ರಯತ್ನಿಸುತ್ತಾರೆ. ಇದು ಒತ್ತಡ ಇನ್ನಷ್ಟು ಹೆಚ್ಚಲು ಕಾರಣ. ಸೆಲೆಬ್ರಿಟಿಗಳು ತಮ್ಮ ಮಾನಸಿಕ ಆರೋಗ್ಯವನ್ನು ನಿರ್ವಹಿಸಲು ಯೋಗ, ಧ್ಯಾನ, ವ್ಯಾಯಾಮ ಮತ್ತು ಆರೋಗ್ಯಕರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಒತ್ತಡಕ್ಕೆ ಒಳಗಾದಾಗ ವೃತ್ತಿಪರ ಮಾನಸಿಕ ಆರೋಗ್ಯ ತಜ್ಞರ ಸಹಾಯವನ್ನು ಪಡೆಯುವುದು ಬಹಳ ಮುಖ್ಯ. ಇದರೊಂದಿಗೆ ತಾವು ವ್ಯಕ್ತಿಯಾಗಿ ಸಹ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ಕುಟುಂಬ ಹಾಗೂ ಸ್ನೇಹಿತರ ಬೆಂಬಲವನ್ನು ಪಡೆಯುವುದರ ಜತೆಗೆ, ಉದ್ಯಮದ ಒತ್ತಡದಿಂದ ಹೊರಬರಲು ಪ್ರತ್ಯೇಕ ಸಮಯವನ್ನು ಮೀಸಲಿಡಬೇಕು.

ಡಾ.ನೇಹಾ ಕಡಬಂ, ಕಡಬಮ್ಸ್ ಆಸ್ಪತ್ರೆಯ ಹಿರಿಯ ಮನೋವೈದ್ಯೆ ಮತ್ತು ಕಾರ್ಯನಿರ್ವಾಹಕ ನಿರ್ದೇಶಕಿ



‘ವೃತ್ತಿ, ಖಾಸಗಿ ಜೀವನ ಪ್ರತ್ಯೇಕಿಸಿಕೊಳ್ಳಲಿ’

ಖಿನ್ನತೆ ಸೇರಿ ವಿವಿಧ ಮಾನಸಿಕ ಸಮಸ್ಯೆಗಳು ಕಾಣಿಸಿಕೊಂಡಾಗ ಅದನ್ನು ಬಹಿರಂಗಪಡಿಸಲು ಹಿಂಜರಿಯಬಾರದು. ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಅವರು ತಾವು ಎದುರಿಸಿದ ಮಾನಸಿಕ ಸಮಸ್ಯೆಯನ್ನು ಬಹಿರಂಗವಾಗಿ ಘೋಷಿಸಿ, ಚಿಕಿತ್ಸೆ ಪಡೆದುಕೊಂಡರು. ಅವರ ನಡೆ ಶ್ಲಾಘನೀಯ. ಕೆಲವರು ವೃತ್ತಿ ಜೀವನದಲ್ಲಿ ಅತ್ಯುನ್ನತ ಘಟ್ಟದಲ್ಲಿ ಇದ್ದರೆ, ಖಾಸಗಿ ಜೀವನ ದಿನದಿಂದ ದಿನಕ್ಕೆ ಹದಗೆಡುತ್ತಾ ಇರುತ್ತದೆ. ಎರಡನ್ನೂ ಸಮಾನವಾಗಿ ನಿರ್ವಹಣೆ ಮಾಡುವುದು ಮುಖ್ಯ. ಇತ್ತೀಚೆಗೆ ದಾಂಪತ್ಯ ಜೀವನದಲ್ಲಿ ಬಿರುಕು ಕಾಣಿಸಿಕೊಂಡು, ವಿಚ್ಛೇದನ ಹೆಚ್ಚುತ್ತಿದೆ. ಮಾನಸಿಕ ಸಮಸ್ಯೆಗಳು ಕಾಣಿಸಿಕೊಂಡಾಗ ಮುಕ್ತವಾಗಿ ಆಪ್ತರೊಂದಿಗೆ ಹಂಚಿಕೊಳ್ಳಬೇಕು. ವ್ಯಾವಹಾರಿಕ ಜೀವನದಲ್ಲಿ ಕಷ್ಟಗಳು ಕಾಣಿಸಿಕೊಂಡಾಗಲೂ ಅದನ್ನು ಹಂಚಿ-ಕೊಳ್ಳುವುದರಲ್ಲಿ ತಪ್ಪಿಲ್ಲ. ಆರ್ಥಿಕ ಸಂಕಷ್ಟದಿಂದ ಪಾರಾಗಲು ಉಪಾಯಗಳನ್ನು ಸ್ನೇಹಿತರು ಸೂಚಿಸಬಹುದು. ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಸಂಬಂಧಗಳನ್ನು ಸಮರ್ಪಕವಾಗಿ ನಿಭಾಯಿಸಬೇಕು. ಮದ್ಯ, ಮಾದಕ ದ್ರವ್ಯ ಸೇವನೆಯಂತಹ ವ್ಯಸನಗಳು ಜೀವನದ ದಾರಿಯನ್ನು ತಪ್ಪಿಸುತ್ತವೆ. ಯೋಗ, ವ್ಯಾಯಾಮದಂತಹ ಸಕಾರಾತ್ಮಕ ಹವ್ಯಾಸಗಳು ಸಮಸ್ಯೆಗಳನ್ನು ಎದುರಿಸುವ ಶಕ್ತಿ ನೀಡುತ್ತವೆ.

ಡಾ.ಶಶಿಧರ್ ಎಚ್.ಎನ್., ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ

ಒತ್ತಡದ ಬದುಕು ಭಾರವಾದಾಗ..



ಫ್ಲ್ಯಾಪ್ ಮೊದಲ ಪುಟದಿಂದ...

ನಟರಾಗಿ ಜನಪ್ರಿಯರಾಗುತ್ತಿದ್ದ ಸುಶಾಂತ್ ಸಿಂಗ್ ರಜಪೂತ್ ಅವರ ದಿಢೀರ್ ಸಾವು (2000ರ ಜೂನ್ 14) ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಸದ್ದು ಮಾಡಿತ್ತು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಸಿಬಿಐ ಇನ್ನೂ ಪ್ರಕರಣದ ತನಿಖೆ ನಡೆಸುತ್ತಿದೆ. ಆದರೆ, ಈ ಪ್ರಕರಣವು ಬಾಲಿವುಡ್‌ನಲ್ಲಿನ ಹುಳುಕುಗಳ ಬಗ್ಗೆ, ಚಿತ್ರೋದ್ಯಮದಲ್ಲಿ ನಟ ನಟಿಯರು ಬೇರೂರಲು ಪಡುತ್ತಿರುವ ಕಷ್ಟ, ಅವರು ಎದುರಿಸುತ್ತಿ-ರುವ ಒತ್ತಡಗಳ ಬಗ್ಗೆ ಬೆಳಕು ಚೆಲ್ಲಿತ್ತು.

ಜನರು ಆತ್ಮಹತ್ಯೆ ಮಾಡಿಕೊಳ್ಳುವುದ-ಕ್ಕೆ ಹಲವು ಕಾರಣಗಳು ಇವೆ. ಆದರೆ, ಈವರೆಗೆ ಸಾವಿಗೆ ಶರಣಾಗಿರುವ ಬಹುತೇಕ ಸೆಲೆಬ್ರೆಟಿಗಳು, ಚಿತ್ರ ನಿರ್ಮಾಪರು, ನಿರ್ದೇಶಕರು ಹಣಕಾಸಿನ ವಿಚಾರ, ಅನಾರೋಗ್ಯ, ಕೌಟುಂಬಿಕ ಸಮಸ್ಯೆ, ಪ್ರೇಮ ವೈಫಲ್ಯದಿಂದಾಗಿ ಖಿನ್ನತೆಗೆ ಜಾರಿ ಒತ್ತಡ ತಾಳಲಾರದೇ ಬದುಕನ್ನು ಕೊನೆಗೊಳಿಸಿಕೊಂಡಿದ್ದಾರೆ.

ಬದಲಾದ ಚಿತ್ರರಂಗ, ಕಡಿಮೆಯಾದ ಗೆಲುವು: ಚಿತ್ರೋದ್ಯಮದಲ್ಲಿ ಗುರುತಿಸಿಕೊಂಡವರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರವೃತ್ತಿ ಇತ್ತೀಚಿನ ವರ್ಷಗಳಲ್ಲಿ ಜಾಸ್ತಿಯಾಗುತ್ತಿದೆ ಎಂಬುದು ಉದ್ಯಮದಲ್ಲಿ ತೊಡಗಿಕೊಂಡಿರುವವರ ಹೇಳಿಕೆ.


ಚಿತ್ರರಂಗದಲ್ಲಿ ಗೆಲುವು ಕಡಿಮೆಯಾಗಿದ್ದು ನಿರ್ಮಾಪಕರ ಸ್ಥಿತಿ ದಯನೀಯವಾಗಿದೆ. ಸಾಕಷ್ಟು ಕಲಾವಿದರು, ತಂತ್ರಜ್ಞರು ಕೂಡ ಸರಿಯಾಗಿ ಕೆಲಸವಿಲ್ಲದೆ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಸಿನಿಮಾವನ್ನೇ ನಂಬಿಕೊಂಡು ಬದುಕುತ್ತಿರುವ ಸಹ ನಿರ್ದೇಶಕರು, ಸಹಾಯಕ ನಿರ್ದೇಶಕರು, ಛಾಯಾಚಿತ್ರ ಗ್ರಾಹಕರು ಮತ್ತಿತರ ತಾಂತ್ರಿಕ ವರ್ಗದವರ ಬದುಕು ಕೂಡ ಶೋಚನೀಯವಾಗಿದೆ ಎಂದು ಹೇಳುತ್ತಾರೆ ಚಿತ್ರೋದ್ಯಮವನ್ನು ಬಲ್ಲವರು.


ಚಿತ್ರರಂಗದಲ್ಲಿ ಒಂದು ಕಾಲಕ್ಕೆ ಚೆನ್ನಾಗಿ ಸಂಪಾದಿಸಿ, ಬಳಿಕ ಸಾಕಷ್ಟು ಕಳೆದುಕೊಂಡು ಸುಮ್ಮನಾದ ವೃತ್ತಿಪರ ನಿರ್ಮಾಪಕರ ಪಟ್ಟಿ ದೊಡ್ಡದಿದೆ. ಬಹುತೇಕ ಆರ್ಥಿಕ ಸಂಕಷ್ಟವನ್ನು ತಡೆದುಕೊಂಡು ಬದುಕನ್ನು ಲಯಕ್ಕೆ ತಂದುಕೊಂಡು ಬದುಕಿದ್ದಾರೆ. ನಿರ್ಮಾಪಕ ದ್ವಾರಕೀಶ್ ಸತತ 18 ಸಿನಿಮಾಗಳಲ್ಲಿ ಸೋಲು ಕಂಡು ಸಾಕಷ್ಟು ಆಸ್ತಿ ಕಳೆದುಕೊಂಡಿದ್ದರು. ಎಚ್2ಒ ಸಿನಿಮಾದ ನಿರ್ಮಾಪಕರ ಧನರಾಜ್ ನಷ್ಟದ ಕಾರಣಕ್ಕೆ ಚಿತ್ರರಂಗ-ವನ್ನೇ ಬಿಟ್ಟುಹೋದರು. ಕೆಸಿಎನ್ ಮೂವೀಸ್, ಕ್ರಿಸ್ಟಲ್ ಪಾರ್ಕ್ ಸಿನಿಮಾಸ್‌ನಂಥ ಸಂಸ್ಥೆಗಳು ನಿರ್ಮಾಣವನ್ನೇ ಸ್ಥಗಿತಗೊಳಿಸಿದವು. ವರ್ಷಕ್ಕೆ 200 ಸಿನಿಮಾಗಳು ನಿರ್ಮಾಣಗೊಂಡರೂ, ಪುನರಾವರ್ತನೆಗೊಳ್ಳುವ ನಿರ್ಮಾಪಕರ ಸಂಖ್ಯೆ 10ಕ್ಕಿಂತಲೂ ಕಡಿಮೆ.

‘ಯಾವುದೇ ಉದ್ಯಮದಲ್ಲಿ ಲಾಭ, ನಷ್ಟ, ಸೋಲು, ಗೆಲುವು ಇರುತ್ತದೆ. ಆದರೆ, ಸಿನಿಮಾದಲ್ಲಿ ಸುಳ್ಳು ಲೆಕ್ಕ, ನಕಲಿ ಪ್ರಚಾರದಿಂದ ಸಾಕಷ್ಟು ನಿರ್ಮಾಪಕರು ಹಾದಿ ತಪ್ಪುತ್ತಿದ್ದಾರೆ. ಈ ವರ್ಷ ಇಲ್ಲಿ ತನಕ ಬಿಡುಗಡೆಗೊಂಡ 200 ಚಿತ್ರಗಳಲ್ಲಿ 185 ಚಿತ್ರಗಳಿಗೆ ಒಂದು ಲಕ್ಷ ರೂಪಾಯಿ ಮರಳಿ ಬಂದಿಲ್ಲ. ಕೋಟಿಗಟ್ಟಲೇ ಹೂಡಿಕೆ ಮಾಡಿದ ನಿರ್ಮಾಪಕ ಬೀದಿಗೆ ಬಾರದೇ ಇರುತ್ತಾನೆಯೇ? ಬಹಳಷ್ಟು ಜನ ಮರ್ಯಾದೆಗೆ ಅಂಜಿ ಆದ ನಷ್ಟವನ್ನು ಹೇಳಿಕೊಳ್ಳುತ್ತಿಲ್ಲ. ನಾನು ಹಿಂದಿನ ಸಿನಿಮಾಗಳಿಂದ ಮನೆ, ಸೈಟು ಕಳೆದುಕೊಂಡಿದ್ದನ್ನು ಮುಕ್ತವಾಗಿ ಹೇಳಿಕೊಂಡಿದ್ದೆ. ಆರ್ಥಿಕವಾಗಿ ಜಯಿಸಿಕೊಳ್ಳುವ ಶಕ್ತಿ ಇಲ್ಲದವರಿಗೆ ಚಿತ್ರರಂಗ ಸೂಕ್ತ ಜಾಗವಲ್ಲ’ ಎನ್ನುವುದು ಚಿತ್ರ ನಿರ್ಮಾಪಕ ನಾಗೇಶ್ ಕುಮಾರ್ ಯು.ಎಸ್. ಅವರ ಅನುಭವದ ಮಾತು.

ಕೌಟುಂಬಿಕ ಸಮಸ್ಯೆಯೇ ಮುಖ್ಯ ಕಾರಣ

ಕರ್ನಾಟಕ ಸೇರಿದಂತೆ ದೇಶದಾದ್ಯಂತ ವರ್ಷದಿಂದ ವರ್ಷಕ್ಕೆ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ವರ್ಷ ಕೇಂದ್ರ ಗೃಹ ಸಚಿವಾಲಯ ಬಿಡುಗಡೆ ಮಾಡಿದ್ದ ಅಂಕಿ ಅಂಶಗಳ ಪ್ರಕಾರ, 2022ರಲ್ಲಿ ದೇಶದಲ್ಲಿ 1,70,924 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2021ರಲ್ಲಿ ಈ 1,64,033 ಮಂದಿ ಆತ್ಮಹತ್ಯೆಗೆ ಶರಣಾಗಿದ್ದರು. ಕರ್ನಾಟಕದಲ್ಲಿ ಈ ಸಂಖ್ಯೆ ಕ್ರಮವಾಗಿ 13,606 ಮತ್ತು 13,056 ರಷ್ಟಿತ್ತು. ಜನರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ 13ಕ್ಕೂ ಹೆಚ್ಚು ಕಾರಣಗಳನ್ನು ಪಟ್ಟಿ ಮಾಡಲಾಗಿದ್ದು, ಅದರಲ್ಲಿ ಕೌಟುಂಬಿಕ ಸಮಸ್ಯೆಗಳು, ಅನಾರೋಗ್ಯ (ಮಾನಸಿಕ ಸಮಸ್ಯೆ ಸೇರಿ), ಮಾದಕ ದ್ರವ್ಯ, ಕುಡಿತದ ಚಟ, ದಾಂಪತ್ಯ ಕಲಹ, ಪ್ರೇಮ ವೈಫಲ್ಯ, ಆರ್ಥಿಕ ನಷ್ಟ/ಸಾಲ ಪ್ರಮುಖವಾದುವು.





ಆಧಾರ: ಎನ್‌ಸಿಬಿಆರ್‌ನ ಭಾರತದಲ್ಲಿ ಅಪಘಾತದಿಂದ ಸಾವು ಮತ್ತು ಆತ್ಮಹತ್ಯೆ–2022ರ ವರದಿ

‘ಸ್ಟಾರ್ ನಟರೊಬ್ಬರನ್ನು ನಂಬಿಕೊಂಡು ₹6 ಕೋಟಿ ಬಂಡವಾಳ ಹಾಕಿ ‘ಉಸಿರೇ ಉಸಿರೇ’ ಎಂಬ ಚಿತ್ರ ನಿರ್ಮಾಣ ಮಾಡಿದೆ. ಚಿತ್ರದಿಂದ ಈವರೆಗೆ ಒಂದು ರೂಪಾಯಿ ಕಾಯಿನ್ ಕೂಡ ಮರಳಿ ಬಂದಿಲ್ಲ. ಅನ್ನದಾತರೇ, ಸಾರ್ ಎಂದೆಲ್ಲ ಗೌರವ ಕೊಟ್ಟು, ಹಾಕಿದ ಹಣ ಮರಳಿ ಬರುವಂತೆ ಮಾಡುತ್ತೇನೆ ಎಂದು ಸಿನಿಮಾ ಪ್ರಾರಂಭಿಸುವಾಗ ಭರವಸೆ ನೀಡಿದ್ದ ಆ ಸ್ಟಾರ್ ನಟ ಈಗ ವರಸೆ ಬದಲಿಸಿದ್ದಾರೆ. ಮಗಳ ಶಾಲೆ ಶುಲ್ಕ ಕಟ್ಟಲಾಗದಷ್ಟು ದುಃಸ್ಥಿತಿಯ-ಲ್ಲಿರುವೆ. ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂಬುದನ್ನು ಬಿಟ್ಟರೆ ಬದುಕಿನಲ್ಲಿ ಏನೂ ಉಳಿದಿಲ್ಲ’ ಎಂದು ಹೇಳುತ್ತಾರೆ ಆ ಚಿತ್ರದ ನಿರ್ಮಾಪಕ ಪ್ರದೀಪ್ ಹೊಸಕೋಟೆ.

ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ಮಹತ್ವಾ-ಕಾಂಕ್ಷೆಯುಳ್ಳ ಪ್ರತಿಭಾವಂತ ನಿರ್ದೇಶಕರು, ತಂತ್ರಜ್ಞರು ನಿರ್ಮಾಪಕರು ಸಿಗದೇ ಇದ್ದಾಗ, ನಂಬಿಕಸ್ಥರ ಸಹಾಯವನ್ನು ಪಡೆದು ಮತ್ತು ತಾವು ಕೂಡ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡು ಸ್ವತಃ ಚಿತ್ರ ನಿರ್ಮಾಣಕ್ಕೆ ಹೊರಡುತ್ತಿದ್ದಾರೆ. ಚಿತ್ರ ಬಿಡುಗಡೆ ಸೇರಿದಂತೆ ಇತರ ವ್ಯವಹಾರದ ತಂತ್ರಗಾರಿಕೆ ತಿಳಿಯದೇ ಕೈಸುಟ್ಟುಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ಚೇತ-ರಿಸಿಕೊಳ್ಳಲಾಗದ ಹೊಡೆತ ನೀಡಿದಾಗ ಮರ್ಯಾದೆಗೆ ಅಂಜಿ ಸಾವಿನತ್ತ ಮುಖ ಮಾಡುತ್ತಿದ್ದಾರೆ.

‘ನೇಮು– ಫೇಮು’ ಉಳಿಸಿಕೊಳ್ಳುವ ಸವಾಲು: ನಿರ್ಮಾಪಕ, ನಿರ್ದೇಶಕರ ಕಥೆ ಹೀಗಿದ್ದರೆ, ನಟ ನಟಿಯರದ್ದು ಮತ್ತೊಂದು ಕಥೆ. ಒಂದೆರಡು ಸಿನಿಮಾಗಳಲ್ಲಿ, ಧಾರಾವಾಹಿಗಳಲ್ಲಿ, ರಿಯಾಲಿಟಿ ಶೋಗಳಲ್ಲಿ ಮಿಂಚಿ ನಂತರ ಅವಕಾಶ ಇಲ್ಲದೆ ಮೂಲೆಗುಂಪಾದ ಕಲಾವಿದರು ದೊಡ್ಡ ಸಂಖ್ಯೆಯಲ್ಲಿದ್ದಾರೆ.

ವಾಹಿನಿಯೊಂದರ ಟಿವಿ ರಿಯಾಲಿಟಿ ಶೋನಿಂದಾಗಿ ಖ್ಯಾತಿ ಗಳಿಸಿದ್ದ ರಾಜೇಶ್ ಎಂಬ ಆದಿವಾಸಿ ಸಮುದಾಯದ ಮುಗ್ಧ ಯುವಕ ಕಿರುತೆರೆಯಿಂದ ಗಳಿಸಿದ ಜನಪ್ರಿಯತೆಯನ್ನು ಉಳಿಸಿಕೊಳ್ಳಲಾಗದೆ, ಚಿತ್ರವೊಂದ-ರಲ್ಲಿ ನಟಿಸಿಯೂ ಚಿತ್ರರಂಗದಲ್ಲಿ ಬೆಳೆಯಲು ಸಾಧ್ಯವಾಗದೆ ಕೊನೆಗೆ ಆತ್ಮಹತ್ಯೆಗೆ ಶರಣಾದ ಘಟನೆ ನೆನಪಿರಬಹುದು.

ತಳಕು ಬಳಕಿನ ಸಿನಿಮಾ ಲೋಕದಲ್ಲಿ ಹೆಸರು ಮಾಡಬೇಕು ಎಂಬ ಉದ್ದೇಶದಿಂದ ಕಷ್ಟಪಟ್ಟು ಧಾರಾವಾಹಿ ಸಿನಿಮಾಗಳಲ್ಲಿ ಅವಕಾಶ ಗಿಟ್ಟಿಸಿಕೊಳ್ಳುವ ಯುವಕ ಯುವತಿಯರು, ಮುಂದೆ ಹೆಚ್ಚಿನ ಅವಕಾಶ ಸಿಕ್ಕದೇ ಇದ್ದಾಗ ಅಥವಾ ಯಶಸ್ಸು ಗಳಿಸದೇ ಇದ್ದಾಗ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ. ಒಂದೆರಡು ಸಿನಿಮಾ ಗೆದ್ದ ತಕ್ಷಣ ನಟ ನಟಿಯರಿಗೆ ಹೆಸರೂ ಬರುತ್ತದೆ. ಸಿನಿಪ್ರಿಯರ ನಡುವೆ ಜನಪ್ರಿಯವೂ ಆಗುತ್ತಾರೆ. ಈ ‘ನೇಮು –ಫೇಮು’ ಅನ್ನು ಉಳಿಸಿಕೊಳ್ಳುವುದು ಕಲಾವಿದರ ಮುಂದಿರುವ ದೊಡ್ಡ ಸವಾಲು. ಸೆಲೆಬ್ರಿ-ಟಿಯಾಗುತ್ತಿದ್ದಂತೆ ಅವರು ಹೊರ ಜಗತ್ತಿಗೆ ಆದರ್ಶ ವ್ಯಕ್ತಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಅಲ್ಲದೇ ಅವರ ಪ್ರತಿ ನಡೆಯನ್ನೂ ಜನರು, ಮಾಧ್ಯಮಗಳು, ಚಿತ್ರರಂಗದವರು ಅವರನ್ನು ವಿಮರ್ಶೆಗೆ ಒಳಪಡಿಸುತ್ತಾರೆ. ಇದು ಕಲಾವಿದರ ಮೇಲೆ ತೀವ್ರ ಒತ್ತಡವನ್ನು ಉಂಟು ಮಾಡುತ್ತದೆ. ಈ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗುವವರು ಬದುಕು-ಳಿಯುತ್ತಾರೆ. ಆಗದೇ ಇದ್ದವರು ಚಿತ್ರರಂಗದಿಂದ ದೂರ ಉಳಿಯುತ್ತಾರೆ ಇಲ್ಲವೇ ಖಿನ್ನತೆಗೆ ಜಾರಿ ಪ್ರಾಣತ್ಯಾಗದಂ-ತಹ ದುಡುಕಿನ ನಿರ್ಧಾರ ಕೈಗೊಳ್ಳುತ್ತಾರೆ.


ಒತ್ತಡ ನಿರ್ವಹಣೆಯ ಪ್ರಾಮುಖ್ಯ: ಒತ್ತಡ ಎಲ್ಲ ಕ್ಷೇತ್ರಗಳಲ್ಲೂ ಇದ್ದದ್ದೇ. ಚಿತ್ರರಂಗವೂ ಇದಕ್ಕೆ ಹೊರತಲ್ಲ. ಅದನ್ನು ನಿರ್ವಹಿಸುವುದನ್ನು ಸಿನಿಮಾ ಮಂದಿ ರೂಢಿಸಿಕೊಳ್ಳಬೇಕು. ಆಗ ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳುವುದನ್ನು ತಪ್ಪಿಸಬಹುದು ಎಂಬುದು ಮನೋವೈದ್ಯರ ಅಭಿಪ್ರಾಯ.

‘ಚಿತ್ರರಂಗದ ಗಣ್ಯರು ಸಾರ್ವಜನಿಕ ಕಣ್ಗಾವ-ಲಿನಲ್ಲಿ ಇರುವುದರಿಂದ, ಅವರ ಖಾಸಗಿ ಜೀವನಕ್ಕೆ ಸಮಯ ಅಷ್ಟಾಗಿ ಇರುವುದಿಲ್ಲ. ಇದು ಅವರನ್ನು ಒಂಟಿತನ, ನಿರಾಸೆ ಮತ್ತು ಖಿನ್ನತೆಗೆ ಒಳಪಡಿಸುತ್ತದೆ. ಸಾಮಾಜಿಕ ಮಾಧ್ಯಮದಲ್ಲಿನ ಹೋಲಿಕೆಗಳು ಮತ್ತು ಅಪನಿಂದೆಗಳಿಗೆ ಒಳಗಾಗುವುದು ಸಹ ಮಾನಸಿಕ ಅನಾರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಖಿನ್ನತೆ, ಆತಂಕ, ಮಾದಕ ವ್ಯಸನ ಮತ್ತು ನಿದ್ರಾಹೀನತೆ ಇವರಲ್ಲಿ ಸಾಮಾನ್ಯವಾಗಿ ಕಂಡುಬರುವ ಸಮಸ್ಯೆಗಳಾಗಿವೆ. ತಮ್ಮ ಖಾಸಗಿ ಜೀವನವನ್ನು ಕಳೆದುಕೊಳ್ಳುವ ಭಯ, ನಿರಂತರ ಒತ್ತಡ ಮತ್ತು ಅತಿಯಾದ ಕೆಲಸದ ಹೊರೆಗಳಿಂದಾಗಿ ಮಾನಸಿಕವಾಗಿ ಕುಸಿಯುತ್ತಾರೆ. ಈ ಸಮಸ್ಯೆಗಳು ತೀವ್ರಗೊಂಡಾಗ, ಆತ್ಮಹತ್ಯೆಯಂತಹ ನಿರ್ಧಾರವನ್ನು ತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಪ್ಪಿಸಲು ಅವರು ಜೀವನದಲ್ಲಿ ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸಬೇಕು’ ಎಂದು ಹೇಳುತ್ತಾರೆ ಬೆಂಗಳೂರಿನ ಕಡಬಮ್ಸ್ ಆಸ್ಪತ್ರೆಯ ಹಿರಿಯ ಮನೋವೈದ್ಯೆ ಮತ್ತು ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ನೇಹಾ ಕಡಬಂ.

‘ಎಲ್ಲ ವೃತ್ತಿಯವರಿಗೂ ಒತ್ತಡ ಇರುತ್ತದೆ. ಸಾರ್ವಜನಿಕ ಜೀವನದಲ್ಲಿ ಇರುವವರು ಅದನ್ನು ತೋರಿಸಿಕೊಳ್ಳಲು ಹಿಂಜರಿಯುತ್ತಾರೆ. ಜ್ವರದಂತಹ ಕೆಲವು ಸಾಮಾನ್ಯ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಾಗ ನಾವೇ ಆರೈಕೆ ಮಾಡಿಕೊಳ್ಳುತ್ತೇವೆ. ಪರಿಸ್ಥಿತಿ ಬಿಗಡಾಯಿಸಿದಾಗ ಬೇರೆಯವರನ್ನು ಅವಲಂಬಿಸಬೇಕಾಗುತ್ತದೆ. ಅದೇ ರೀತಿ, ಒತ್ತಡ ಸೇರಿ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಾಗ, ಅದನ್ನು ತಮ್ಮಲ್ಲಿ ಅದುಮಿಟ್ಟುಕೊ-ಳ್ಳದೆ ಇನ್ನೊಬ್ಬರ ನೆರವು ಪಡೆಯಬೇಕು’ ಎಂಬುದು ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ ಡಾ.ಶಶಿಧರ್ ಎಚ್. ಎನ್. ಅವರ ಸಲಹೆ.

ಪೂರಕ ಮಾಹಿತಿ: ವಿನಾಯಕ ಕೆ.ಎಸ್., ವರುಣ್ ಹೆಗಡೆ, ಆದಿತ್ಯ ಕೆ.ಎ

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 08-12-1999

● **ಸಚಿವರ ಕೈಬಿಡಲು ಪ್ರಧಾನಿ ನಕಾರ**

ಪ್ರಜಾವಾಣಿ ವಾರ್ತೆ, ನವದೆಹಲಿ, ಡಿ.7 (ಪಿಟಿಐ)- ಬಾಬ್ರಿ ಮಸೀದಿ ಉರುಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ನಿನ್ನೆಯಿಂದ ಆಗುತ್ತಿರುವ ಗದ್ದಲದ ಹಿನ್ನಲೆಯಲ್ಲಿ ಕೇಂದ್ರ ಮಂತ್ರಿಗಳಾದ ಎಲ್.ಕೆ. ಅಡ್ವಾಣಿ ಮತ್ತು ಮುರಳಿ ಮನೋಹರ ಜೋಷಿ ರಾಜೀನಾಮೆ ಕೊಡಲು ಇಂದು ಮುಂದೆ ಬಂದರೂ ಅದನ್ನು ಪ್ರಧಾನಿ ವಾಜಪೇಯಿ ಒಪ್ಪಲಿಲ್ಲ.

ಅಡ್ವಾಣಿ ಮತ್ತು ಜೋಷಿ ಸದನದಲ್ಲೇ ರಾಜೀನಾಮೆ ಕೊಡಲು ಮುಂದಾದರು. ವಾಜಪೇಯಿ ‘ಬೇಡ ಬೇಡ’ ಎಂದು ತಲೆ ಅಲ್ಲಾಡಿಸುತ್ತಿದುದನ್ನು ಸಹ ಅನೇಕರು ಗಮನಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 08-12-1974

● **ಸಕ್ಕರೆ ಕೈಗಾರಿಕೆ ರಾಷ್ಟ್ರೀಕರಣಕ್ಕೆ ಕರೆ**

ನವದೆಹಲಿ, ಡಿ.7– ಸಂಸತ್ತಿನ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಸದಸ್ಯರು ಇಂದು ಪ್ರಧಾನಿ ಇಂದಿರಾ ಗಾಂಧಿಯವರಿಗೆ ಸಲ್ಲಿಸಿದ ಮನವಿಯಲ್ಲಿ ಸಕ್ಕರೆ ಕೈಗಾರಿಕೆ ರಾಷ್ಟ್ರೀಕರಣಕ್ಕೆ ಒತ್ತಾಯಪಡಿಸಿದ್ದಾರೆ.

ಸೂಕ್ತ ಆಧಾರದ ಮೇಲೆ ಸಕ್ಕರೆ ಉದ್ಯಮವನ್ನು ಪುನರ್ ವ್ಯವಸ್ಥೆಗೊಳಿಸಲು ರಾಷ್ಟ್ರೀಕರಣ ಅಗತ್ಯವೆಂದು ಅವರ ಮನವಿಯಲ್ಲಿ ತಿಳಿಸಿದ್ದಾರೆ.

ಸಕ್ಕರೆ ಉತ್ಪಾದನೆ ಏರಿಕೆ, ರಫ್ತು, ಮಾರುಕಟ್ಟೆ ಅಭಿವೃದ್ಧಿ ಮತ್ತು ಕಬ್ಬು ಬೆಳೆಗಾರರಿಗೆ ಲಾಭದಾಯಕ ಬೆಲೆ ನೀಡಿಕೆ– ಈ ಎಲ್ಲ ದೃಷ್ಟಿಯಿಂದ ಇಂಥ ಕ್ರಮ ಅವಶ್ಯಕವೆಂದು ವಿವರಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಡಿಸೆಂಬರ್ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಸಪ್ತಮಿ ಗಂ. 09-45 ನಕ್ಷತ್ರ: ಶತಭಿಷ ಗಂ. 16-03 ಯೋಗ: ವಜ್ರ ಗಂ. 27-53 ಕರಣ: ವಣಿಜ ಗಂ. 09-45, ವೃಶ್ಚಿಕ ಮಾಸದ 22 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 2.

ರಾಹುಕಾಲ: ಸಾಯಂಕಾಲ 04-30 – 06-00

ಸೂರ್ಯೋದಯ: 06-45 ಸೂರ್ಯಾಸ್ತ: 06-00

ಮುಸ್ಲಿಂ ದಿನಾಂಕ: 05 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 8, 6

ಮೇಷ: ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಮಗೆ ಎಲ್ಲರ ಮೆಚ್ಚುಗೆ ಸಿಗುವುದು. ಹಿರಿಯರ ಆಶೀರ್ವಾದವು ಎಲ್ಲಾ ಕಾರ್ಯಗಳಲ್ಲೂ ಜಯವನ್ನು ತಂದುಕೊಡಲಿದೆ. ಹಣದ ವಿಷಯದಲ್ಲಿ ಜಾಗೃತರಾಗಿರಿ.

ವೃಷಭ: ಸುಖದ ಸಾಂಸಾರಿಕ ಜೀವನದಿಂದ ಕುಟುಂಬದ ಹಿರಿಯರಿಗೆ ಸಂತೋಷ, ನೆಮ್ಮದಿ ಉಂಟಾಗಲಿದೆ. ಪ್ರಯಾಣ ಮತ್ತು ಹೊಸಬರ ಪರಿಚಯ ಅನುಕೂಲಕರವಾಗಲಿದೆ. ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯ.

ಮಿಥುನ: ಸಹೋದರರಲ್ಲಿ ಉಂಟಾದ ಸಮಸ್ಯೆ ಹೆಚ್ಚಿನ ವಿವಾದಕ್ಕೆ ಆಸ್ಪದವಾಗದಂತೆ ಬಗೆಹರಿಸಿಕೊಳ್ಳಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ತೃಪ್ತಿ ಸಿಗಲಿದೆ. ಮನೆಯಲ್ಲಿ ಶಾಂತ ವಾತಾವರಣವಿರುವುದು.

ಕರ್ಕಾಟಕ: ಪೆಟ್ರೋಲಿಯಂ ವಸ್ತುಗಳ ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ. ವಿದ್ಯಾರ್ಥಿಗಳ ಅಭ್ಯಾಸಕ್ಕೆ ವಿಶೇಷ ರೀತಿಯ ಸೌಲಭ್ಯಗಳು ದೊರೆಯಲಿವೆ. ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಲಾಭವಾಗುವುದು.

ಸಿಂಹ: ಸಹವರ್ತಿಗಳ ಅಭಿಪ್ರಾಯಗಳನ್ನು ತಿರಸ್ಕರಿಸುವುದು ಸರಿಯಲ್ಲ, ಆಲಿಸಿ ಉಪಯೋಗಕ್ಕೆ ಬರುವ ಅಂಶವನ್ನು ಸ್ವೀಕರಿಸಿ. ಪರಿವರ್ತನೆಗೆ ಸಕಾಲ. ಮಕ್ಕಳು ಸಾಂಕ್ರಾಮಿಕ ರೋಗಕ್ಕೆ ತುತ್ತಾಗಬಹುದು.

ಕನ್ಯಾ: ಜಮೀನಿನಲ್ಲಿ ವಿಷಜಂತುಗಳಿಂದ ಭಯದ ಸನ್ನಿವೇಶ ಉಂಟಾಗಬಹುದು. ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಲು ಪ್ರಾರಂಭಿಸಿ. ನಿತ್ಯದ ಜೀವನ ಕ್ರಮವನ್ನು ಬದಲಿಸದೆ ಮುಂದುವರೆಸಿರಿ.

ತುಲಾ: ಕಫ ಸಮಸ್ಯೆ ಹೊಂದಿರುವವರು ಆರೋಗ್ಯದ ಬಗ್ಗೆ ಜಾಗ್ರತೆ ವಹಿಸಿ. ಕೆಲಸದಲ್ಲಿ ಹೊಸ ಅಭ್ಯಾಸದಿಂದ ಪರಿವರ್ತನೆಯನ್ನು ಕಾಣುವಿರಿ. ಗಣೇಶನ ದರ್ಶನದಿಂದ ಮನಸ್ಸಿಗೆ ನೆಮ್ಮದಿ ದೊರಕುತ್ತದೆ.

ವೃಶ್ಚಿಕ: ಗುಡಿ ಕೈಗಾರಿಕೆ ವಸ್ತುಗಳಿಗೆ ಪ್ರದರ್ಶನ ಮಾರಾಟದಲ್ಲಿ ಬೇಡಿಕೆ ಹೆಚ್ಚುವುದು. ಪ್ರಳಯಾಂತಕ ಜನರ ಸಹವಾಸದಿಂದ ಅಪವಾದ ಕೇಳಬೇಕಾಗಬಹುದು. ನಾಳೆಯ ಕಾರ್ಯಕ್ರಮಗಳಿಗೆ ಇಂದಿನಿಂದಲೇ ತಯಾರಿ ನಡೆಸಿ.

ಧನು: ಕ್ರಿಯಾತ್ಮಕ ಯೋಚನೆಗಳೊಂದಿಗೆ ಸಂಪೂರ್ಣ ಚಟುವಟಿಕೆಯಿಂದ ಇರುವಿರಿ. ಹಾಲು ಉತ್ಪನ್ನ ಪದಾರ್ಥ ಮಾರಾಟದಿಂದ ವರಮಾನ ಹೆಚ್ಚುವುದು. ಇಂದು ನೀವು ಇಚ್ಛಿಸಿದ ಕಾರ್ಯಗಳೆಲ್ಲಾ ನೆರವೇರುತ್ತವೆ.

ಮಕರ: ಸ್ನೇಹಿತರ ಆತ್ಮೀಯ ಮಾತುಗಳು ಜೀವನದಲ್ಲಿ ಧೈರ್ಯ ತಂದುಕೊಡಲಿವೆ. ಮನೋರಂಜನೆಗಾಗಿ ಹೆಚ್ಚು ಖರ್ಚು ಮಾಡುವಿರಿ. ವಾಹನಾದಿ ಯಂತ್ರಗಳಿಂದ ಧನ ಮತ್ತು ಸಮಯ ವ್ಯಯವಾಗಬಹುದು.

ಕುಂಭ: ಕಾನೂನು ನಿಯಮಗಳಿಗೆ ವಿರುದ್ಧವಾಗಿ ನೆಡೆದುಕೊಳ್ಳುವುದು ಸರಿಯಲ್ಲ. ಸಂಪರ್ಕ ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಉತ್ತಮವಾದ ದಿನ. ಸಿಹಿ ತಿಂಡಿಯ ಅತಿಯಾದ ಸೇವನೆಗೆ ಕಡಿವಾಣ ಹಾಕಿ. ಮಾತಿನಲ್ಲಿ ಹಿಡಿತವಿರಲಿ.

ಮೀನ: ಬಿಡುವಿನ ಸಮಯದಲ್ಲಿ ನಿಮ್ಮ ಇಷ್ಟಕಾರ್ಯವನ್ನು ಮಾಡುವಿರಿ. ಸುತ್ತಮುತ್ತಲಿನ ಜನರು ನಾಟಕ ಮಾಡುತ್ತಿದ್ದಾರೆ ಎಂದು ತಿಳಿದರೂ , ಏನೂ ಮಾಡದ ಪರಿಸ್ಥಿತಿಯನ್ನು ಹೊಂದುವಿರಿ.

ಪದಬಂಧ 5885


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಂದೋಳನ ಅಥವಾ ದಂಗೆ ಇಲ್ಲಿ ಕಾಣುತ್ತಿದೆ (3)
3.ಇಂಪಾದ ಧ್ವನಿ(3)
5.ಜನಪ್ರಿಯನಾದವ ಕೊನೆಗೆ ರಾಗಿ ಹಿಡಿದಿದ್ದಾನಲ್ಲಾ? (5)
7.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ (2)
9.ನೆನಪಿನಿಂದ ಮಾಸದ ತಿಂಗಳು (2)
10.ಕಾವಡಿ ತರುವ ಸಮಯದಲ್ಲಿ ಆವರಿಸಿದ ಕತ್ತಲೆ (3)
11.ಅಡಕೆಲೆಯ ಚೀಲ (3)
12.ಹಾವುಗೆ ಬಳಿಯಿರುವ ಉರಗ (2)
13.ಕನಸು ಕಾಣುತ್ತಲೇ ತೋರಿದ ಬಲ (2)
16.ಇದು ಅಂತರಂಗಸ್ಪರ್ಶಿಯಾದುದು (5)
18.ಅಡುಗೆ ಮಾಡುವ ಪಾತ್ರೆ (3)
19.ಈತ ಚರ್ಮದ ಕೆಲಸಗಾರ (3)

ಮೇಲಿಂದ ಕೆಳಕ್ಕೆ

1.ಕೊನೆಗೆ ಯೋಗ ಮಾಡುತ್ತಿರುವಾಗಿನ ವೆಚ್ಚ (4)
2.ವಜನು ಎತ್ತುವಾಗ ತೆಗೆದುಹಾಕುವಿಕೆ! (2)
3.ಅಭಿಪ್ರಾಯವನ್ನು ಹೀಗೆನ್ನಿ (3)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
6.ನಾರಿ ಹಿಡಿದಿರುವ ತೆಂಗಿನ ಕಾಯಿ (4)
8. ಕಾವು ಇರುವ ಬಾಹ್ಯ ಸೌಂದರ್ಯ (3)
9. ಅಳೆಯುವ ಸಾಧನ (3)
11.ವಾದದಲ್ಲಿ ಕೊನೆಯಾಗಿರುವ ತರ್ಜುಮೆ (4)
12. ಹೊಳೆ ದಾಟುವ ಸ್ಥಳ (4)
14. ಕೋಮಲವಾದ ಶರೀರವುಳ್ಳವನು (4)
15. ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
17.ಕಚಕ್ಕನೆ ಕತ್ತರಿಸಿದ ತಲೆಗೂದಲು (2)



5884ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಆಗಂತುಕ 4.ಬದು 6.ಸಹಾಯ 7.ವರ್ತಮಾನ 9.ಯಮಭಾರ 11.ಮಿಕ 13.ತತ್ತಿ 14.ಅಂತರಂಗ 16.ಅನುರಾಗ 18.ತಕ್ಕಡಿ 19.ದುಡಿ 20.ಗಡಿಯಾರ

ಮೇಲಿಂದ ಕೆಳಕ್ಕೆ:

1.ಕೊಸರು 2.ಆಯವ್ಯಯ 3.ಕಳೇವರ 5.ದುರ್ದಾನ 8.ಮಾವುತ 10.ಭಾರತ 12.ಕಮಾನು 14.ಅಂಗರಾಗ 15.ಗತ್ಯಂತರ 16.ಆಮದು 17.ಗಡಿಗೆ

ಸುಡೊಕು 6270

3		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6269 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾರಾಷ್ಟ್ರ ಗೃಹ ಖಾತೆಗೆ ಶಿವಸೇನಾ ಪಟ್ಟು

ಮುಂಬೈ (ಪಿಟಿಐ): ಖಾತೆ ಹಂಚಿಕೆ ವಿಚಾರವಾಗಿ ಮಹಾರಾಷ್ಟ್ರದ 'ಮಹಾಯುತಿ ಮೈತ್ರಿಕೂಟ'ದಲ್ಲಿ ಚರ್ಚೆಗಳು ಜೋರಾಗಿ ನಡೆದಿವೆ, ತನಗೆ ಗೃಹ ಖಾತೆಯೇ ಬೇಕು ಎಂದು ಶಿವಸೇನಾ ಪಟ್ಟು ಹಿಡಿದಿದೆ. ಸಚಿವ ಸಂಪುಟದಲ್ಲಿ ಯಾರಿರುತ್ತಾರೆ, ಯಾವ ಖಾತೆಯನ್ನು ಯಾರಿಗೆ ನೀಡಲಾಗುತ್ತದೆ ಎಂಬ ಬಗ್ಗೆ ಭಾನುವಾರದ ವೇಳೆಗೆ ಸ್ಪಷ್ಟ ಚಿತ್ರಣ ಸಿಗಬಹುದು ಎಂದು ಮೂಲಗಳು ಹೇಳಿವೆ.

ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರವು ಡಿಸೆಂಬರ್ 11ರಂದು ಸಂಪುಟ ವಿಸ್ತರಣೆ ಮಾಡುವ ನಿರೀಕ್ಷೆ ಇದೆ.

ಫಡಣವೀಸ್ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಏಕನಾಥ ಶಿಂದೆ ಅವರು ಒಪ್ಪಿಕೊಂಡ ನಂತರ, ಉದಯ್ ಸಾಮಂತ್ ಮತ್ತು ಸಂಜಯ್ ಶಿರಸಾಟ್ ಅವರಂತಹ ಮುಖಂಡರು ಶಿವಸೇನಾ ಪಕ್ಷಕ್ಕೆ ಗೃಹ ಖಾತೆಯನ್ನೇ ನೀಡಬೇಕು ಎಂದು ಬಹಿರಂಗವಾಗಿ ಆಗ್ರಹಿಸಿದ್ದಾರೆ.

ಸಂಪುಟದಲ್ಲಿ ಯಾರಿರಬೇಕು, ಯಾವ ಖಾತೆಯನ್ನು ಯಾರಿಗೆ ಹಂಚಿಕೆ ಮಾಡಬೇಕು ಎಂಬ ಬಗ್ಗೆ 'ಮಹಾಯುತಿ ಮೈತ್ರಿಕೂಟ'ದ ಪಕ್ಷಗಳ ನಾಯಕರು ಮಾತುಕತೆ ನಡೆಸಿದ್ದಾರೆ ಎಂದು ಬಿಜೆಪಿ ಮತ್ತು ಎನ್‌ಸಿಪಿ ಮೂಲಗಳು ಮಾಹಿತಿ ನೀಡಿವೆ.

'ಮಹಾಯುತಿ ಮೈತ್ರಿಕೂಟ'ದ ಅತಿದೊಡ್ಡ ಪಕ್ಷವಾಗಿರುವ ಬಿಜೆಪಿಯು ಸಂಪುಟದಲ್ಲಿ ಮುಖ್ಯಮಂತ್ರಿ ಸ್ಥಾನ ಸೇರಿ 21–22 ಸ್ಥಾನಗಳನ್ನು ಇರಿಸಿಕೊಳ್ಳುವ ನಿರೀಕ್ಷೆ ಇದೆ. ಶಿವಸೇನಾ ಪಕ್ಷಕ್ಕೆ 11–12 ಹಾಗೂ ಎನ್‌ಸಿಪಿಗೆ 9–10 ಸ್ಥಾನಗಳು ಸಿಗಬಹುದು ಎನ್ನಲಾಗಿದೆ. ಮಹಾರಾಷ್ಟ್ರ ಸಂಪುಟದಲ್ಲಿ ಮುಖ್ಯಮಂತ್ರಿ ಸೇರಿ 43 ಸದಸ್ಯರು ಇರಬಹುದು.

ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಎಷ್ಟು ಮಂದಿ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬ ತೀರ್ಮಾನವನ್ನು ಇನ್ನು ಎರಡು ಅಥವಾ ಮೂರು ದಿನಗಳಲ್ಲಿ ಕೈಗೊಳ್ಳಲಾಗುತ್ತದೆ ಎಂದು ಬಿಜೆಪಿಯ ನಾಯಕರೊಬ್ಬರು ಮಾಹಿತಿ ನೀಡಿದ್ದಾರೆ.

ಬಿಜೆಪಿ, ಆದಾಯ ತೆರಿಗೆ ಇಲಾಖೆ ವಿರುದ್ಧ ವಿರೋಧ ಪಕ್ಷಗಳ ವಾಗ್ದಾಳಿ

ಸಾವಿರ ಕೋಟಿ ಮೌಲ್ಯದ ಆಸ್ತಿ ಅಜಿತ್‌ಗೆ ವಾಪಸ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಅವರ ಕುಟುಂಬಕ್ಕೆ ಸೇರಿದ ಸುಮಾರು ₹1,000 ಕೋಟಿ ಮೌಲ್ಯದ ಆಸ್ತಿಯನ್ನು ಅವರಿಗೆ ಮರಳಿಸಿದ ಆದಾಯ ತೆರಿಗೆ (ಐಟಿ) ಇಲಾಖೆಯ ಕ್ರಮವನ್ನು ಟೀಕಿಸಿ ರುವ ಮಹಾ ವಿಕಾಸ್ ಆಘಾಡಿಯು (ಎಂವಿಸಿ) ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದೆ.

ಅಜಿತ್ ಪವಾರ್

ಪವಾರ್ ಮತ್ತು ಅವರ ಕುಟುಂಬಕ್ಕೆ ಸೇರಿದ್ದ ಈ ಆಸ್ತಿಯನ್ನು ಆದಾಯ ತೆರಿಗೆ ಇಲಾಖೆ 2021ರಲ್ಲಿ ವಶಕ್ಕೆ ಪಡೆದುಕೊಂಡಿತ್ತು.

ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾನಾ ಪಟೋಲೆ, 'ಪ್ರಧಾನಿ ನರೇಂದ್ರ ಮೋದಿ ಅವರು ತಾನು ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲ, ಇತರರಿಗೂ ಅದಕ್ಕೆ ಅವಕಾಶ ನೀಡುವುದಿಲ್ಲ ಎನ್ನುತ್ತಾರೆ. ಆದರೆ ಅವರ ಈ ಘೋಷಣೆ ಅವರ ಸ್ವಂತ ಜನರಿಗೆ ಅನ್ವಯಿಸದು. ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುವ ನಾಯಕರ ಭ್ರಷ್ಟ ವ್ಯವಹಾರವನ್ನು ಮುಚ್ಚಿಹಾಕುವ ಪ್ರಯತ್ನ ಇದಾಗಿದೆ' ಎಂದು ಆರೋಪಿಸಿದ್ದಾರೆ.

> ಬಿಜೆಪಿಯ ಹೊಸ ಘೋಷವಾಕ್ಯವೆಂದರೆ ಮೋದಿ ಅವರ ಜತೆ ಬನ್ನಿ, ನಿಮ್ಮ ಎಲ್ಲ ಕಲೆಗಳನ್ನು ಅಳಿಸಿಕೊಳ್ಳಿ ಮತ್ತು ಸಾಕಷ್ಟು ಹಣ ಸಂಪಾದಿಸಿ
> **ಜೈರಾಮ್ ರಮೇಶ್**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

'ದೇಶದಲ್ಲಿ ಏನಾಗುತ್ತಿದೆ. ಸಿಬಿಐ, ಇ.ಡಿ, ಐ.ಟಿ ಹೇಗೆ ವರ್ತಿಸುತ್ತಿದೆ ನೋಡಿ. ಈಗ ಅಜಿತ್ ಪವಾರ್, ಹಿಂದೆ ಪ್ರಫುಲ್ ಪಟೇಲ್, ನವಾಬ್ ಮಲಿಕ್ ಅವರಿಗೆ ಕ್ಲೀನ್ ಚೀಟ್ ಸಿಕ್ಕಿತ್ತು' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಟೀಕಿಸಿದ್ದಾರೆ.

ಇದರ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಅಜಿತ್ ಪವಾರ್, 'ನಾನು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದು ಯಾವಾಗ? ಸುಮಾರು ಒಂದೂವರೆ ವರ್ಷವಾಗಿದೆ. ಈ ರೀತಿಯ ಆರೋಪಗಳನ್ನು ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಎಲ್ಲರಿಗೂ ಮೇಲ್ಮನವಿ ಸಲ್ಲಿಸುವ ಹಕ್ಕು ಇದೆ. ನಾನು ಈ ಆರೋಪಗಳ ಬಗ್ಗೆ ಮಾತನಾಡಲು ಬಯಸುವುದಿಲ್ಲ' ಎಂದಿದ್ದಾರೆ.

ಅಜಿತ್ ಪವಾರ್, ಅವರ ಪತ್ನಿ ಸುನೇತ್ರಾ ಪವಾರ್, ಪುತ್ರ ಪಾರ್ಥ್ ಪವಾರ್ ವಿರುದ್ಧ ಸತಾರಾದ ಜರಂದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ (ಜೆಎಸ್‌ಎಸ್‌ಕೆ) ಮತ್ತು ಇತರ ಮೂರು ನಕಲಿ ಸಾಲದ ಪ್ರಕರಣಗಳು ಹಾಗೂ ಬೇನಾಮಿ ಆಸ್ತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿನ ಆರೋಪಗಳನ್ನು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ ವಜಾಗೊಳಿಸಿತು. ಅದರ ಬೆನ್ನಲ್ಲೇ ಆದಾಯ ತೆರಿಗೆ ಇಲಾಖೆಯು ಪವಾರ್ ಅವರಿಗೆ ಸಂಬಂಧಿಸಿದ ₹ 1,000 ಕೋಟಿ ಮೌಲ್ಯದ ಆಸ್ತಿಯನ್ನು ಮರಳಿಸಿದೆ.

ಅಂಡಮಾನ್– ನಿಕೋಬಾರ್; ಹಲವೆಡೆ ಐ.ಟಿ ಶೋಧ

ಪೋರ್ಟ್ ಬ್ಲೇರ್ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಹಲವೆಡೆ ಆದಾಯ ತೆರಿಗೆ ಇಲಾಖೆಯ(ಐ.ಟಿ) 120ಕ್ಕೂ ಹೆಚ್ಚು ಅಧಿಕಾರಿಗಳು ಶೋಧ ಕಾರ್ಯ ನಡೆಸುತ್ತಿದ್ದಾರೆ.

'ಕೆಲ ಉದ್ಯಮಿಗಳು ಆದಾಯ ತೆರಿಗೆ ಪಾವತಿಯಲ್ಲಿ ಅಕ್ರಮ ಎಸಗಿರುವ ಶಂಕೆಯಿದ್ದು, ಈ ಕಾರಣಕ್ಕೆ ಡಿಸೆಂಬರ್ 4ರಿಂದ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಐ.ಟಿ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ಚರ್ಚ್ ರಸ್ತೆ, ಫಿನಿಕ್ಸ್ ಬೇ, ಮರೀನಾ ಹಿಲ್ಸ್, ಅಬೇರ್ಡೀನ್ ಬಜಾರ್ ಮತ್ತು ದಿಲಾನಿಪುರದಲ್ಲಿರುವ ಕಚೇರಿಗಳಲ್ಲಿ ಕೋಲ್ಕತ್ತದ ಅಧಿಕಾರಿಗಳ ತಂಡ ಶೋಧ ನಡೆಸಿದೆ. ಬಬು ಲೇನ್, ಎಂ.ಜಿ ರೋಡ್, ಗುರುದ್ವಾರ ಲೇನ್ ಮತ್ತು ಜಂಗ್ಲಿಘಾಟ್ ಪ್ರದೇಶಗಳಲ್ಲಿ ಶೋಧ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶೋಧ ಕಾರ್ಯದ ಬಗ್ಗೆ ಶೀಘ್ರದಲ್ಲಿ ಪೂರ್ಣ ಮಾಹಿತಿ ನೀಡುತ್ತೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಲ್ಕತ್ತದ ಅಧಿಕಾರಿಗಳ ತಂಡವು ಡಿ.4ರಂದು ವೀರ ಸಾವರ್ಕರ್ ವಿಮಾನ ನಿಲ್ದಾಣಕ್ಕೆ ತೆರಳಿತ್ತು. ಶೋಧ ನಡೆಯಲಿರುವ ಕಚೇರಿಯ ಮಾಲೀಕರು ಪೋರ್ಟ್ ಬ್ಲೇರ್‌ನಿಂದ ನಿರ್ಗಮಿಸಲು ಅವಕಾಶ ನೀಡದಂತೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು ಎಂದು ಇಲಾಖೆಯ ಮೂಲಗಳು ತಿಳಿಸಿವೆ.



ದಕ್ಷಿಣ ಕೊರಿಯಾ ಅಧ್ಯಕ್ಷರ ಪದಚ್ಯುತಿಗೆ ಆಗ್ರಹಿಸಿ ರಾಜಧಾನಿ ಸೋಲ್‌ನಲ್ಲಿನ ರಾಷ್ಟ್ರೀಯ ಅಸೆಂಬ್ಲಿ ಎದುರು ಶನಿವಾರ ನಡೆದ ಪ್ರತಿಭಟನೆಯಲ್ಲಿ ಸೇರಿದ್ದ ಜನಸಮೂಹ ಎಎಫ್‌ಪಿ ಚಿತ್ರ

ಸೇನಾಡಳಿತ: ಕ್ಷಮೆಯಾಚನೆ

ದಕ್ಷಿಣ ಕೊರಿಯಾ: ವಾಗ್ದಂಡನೆಯಿಂದ ಪಾರಾದ ಯೋಲ್

ಸೋಲ್ (ದಕ್ಷಿಣ ಕೊರಿಯಾ) (ಎಪಿ): ದೇಶದಾದ್ಯಂತ ಜನರಿಂದ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನ ಹಿಂದೆಯೇ ದೇಶದಲ್ಲಿ ಮಿಲಿಟರಿ ಆಡಳಿತವನ್ನು ಹೇರಿದ್ದ ನಿರ್ಧಾರಕ್ಕಾಗಿ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ಶನಿವಾರ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದಾರೆ.

'ಮಿಲಿಟರಿ ಆಡಳಿತ ಹೇರಿದ್ದ ನಿರ್ಧಾರ ನನ್ನ ಅಧಿಕಾರವಧಿ ಕುರಿತ ಚರ್ಚೆಗೂ ಗ್ರಾಸವಾಗಿದೆ. ಈ ಕುರಿತ ನಿರ್ಧಾರವನ್ನು ನನ್ನ ಪಕ್ಷದ ವಿವೇಚನೆಗೆ ಬಿಡುತ್ತೇನೆ' ಎಂದು ಹೇಳಿದ್ದಾರೆ.

ಟಿ.ವಿಯಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಾನು ಹೊಣೆಯಿಂದ ನುಣುಚಿಕೊಳ್ಳುವುದಿಲ್ಲ. ಮತ್ತೆ, ಮಿಲಿಟರಿ ಆಡಳಿತ ಹೇರವುದಿಲ್ಲ. ನನ್ನ ನಿರ್ಧಾರ, ಅದರಿಂದ ಜನರಿಗಾದ ಅನನುಕೂಲತೆಗಳಿಗೆ ಕ್ಷಮೆಯಾಚಿಸುತ್ತೇನೆ' ಎಂದು ಹೇಳಿದ್ದಾರೆ.

ಮಿಲಿಟರಿ ಆಡಳಿತದ ನಿರ್ಧಾರಕ್ಕಾಗಿ ಅಧ್ಯಕ್ಷರಿಗೆ ವಾಗ್ದಂಡನೆಗೆ ವಿಧಿಸಲು ಕೋರಿದ್ದ ನಿರ್ಣಯ ಕುರಿತು ರಾಷ್ಟ್ರೀಯ ಅಸೆಂಬ್ಲಿ ಚರ್ಚಿಸಿತು. ಆದರೆ, ಯೋಲ್ ಪ್ರತಿನಿಧಿಸುವ ಕನ್ಸರ್ವೇಟಿವ್ ಪೀಪಲ್ ಪವರ್ ಪಾರ್ಟಿ (ಪಿಪಿಪಿ) ಸದಸ್ಯರು ಸಭಾತ್ಯಾಗ ಮಾಡಿದ್ದು, ಯೋಲ್ ವಾಗ್ದಂಡನೆ ಕ್ರಮದಿಂದ ಪಾರಾದರು.

ನಿರ್ಣಯವನ್ನು ಮತಕ್ಕೆ ಹಾಕಿದಾಗ ಪಿಪಿಪಿ ಪಕ್ಷದ ಅನೇಕ ಸದಸ್ಯರು ಸಭಾತ್ಯಾಗ ಮಾಡಿದರು. ನಿರ್ಣಯ ಬಿದ್ದುಹೋಗಿರುವುದು, ದೇಶದಲ್ಲಿ ಈಗಾಗಲೇ ಯೋಲ್ ವಿರುದ್ಧ ವ್ಯಕ್ತವಾಗುತ್ತಿರುವ ಪ್ರತಿಭಟನೆ, ಆಕ್ರೋಶ ಇನ್ನಷ್ಟು ಹೆಚ್ಚಲು ಅಸ್ಪದವಾಗಬಹುದು ಎಂದು ಹೇಳಲಾಗಿದೆ.

ರಾಷ್ಟ್ರೀಯ ಅಸೆಂಬ್ಲಿ ಸದಸ್ಯ ಬಲ 300. ವಾಗ್ದಂಡನೆಗೆ ಗುರಿಪಡಿಸಲು ಕನಿಷ್ಠ 200 ಸದಸ್ಯರ ಬೆಂಬಲ ಅಗತ್ಯ. ನಿರ್ಣಯ ತಂದಿರುವ ಪ್ರತಿಪಕ್ಷಗಳ ಸದಸ್ಯ ಬಲ 192 ಆಗಿದೆ. ಇದರ ಅಂಗೀಕಾರಕ್ಕೆ ಯೋಲ್ ಪ್ರತಿನಿಧಿಸುವ ಪೀಪಲ್ ಪವರ್ ಪಾರ್ಟಿಯ (ಪಿಪಿಪಿ) ಕನಿಷ್ಠ 8 ಸದಸ್ಯರ ಬೆಂಬಲವು ಅಗತ್ಯವಾಗಿತ್ತು.

ಪ್ರತಿಪಕ್ಷಗಳ ನಿರ್ಣಯಕ್ಕೆ ಮೂರನೇ ಎರಡರಷ್ಟು ಬೆಂಬಲ ಲಭ್ಯವಾಗಲಿಲ್ಲ.

ರಾಷ್ಟ್ರೀಯ ಅಸೆಂಬ್ಲಿ ಸ್ಪೀಕರ್ ವೂ ವೊನ್ ಶಿಕ್ ಅವರು, ಈ ಫಲಿತಾಂಶವು 'ಅತ್ಯಂತ ವಿಷಾದಕರ'. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇರಿಸುಮುರಿಸಿನ ಕ್ಷಣ' ಎಂದು ಬಣ್ಣಿಸಿದ್ದಾರೆ.

ಡಿ.21 ವಿಶ್ವ ಧ್ಯಾನ ದಿನ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಡಿಸೆಂಬರ್ 21 ಅನ್ನು 'ವಿಶ್ವ ಧ್ಯಾನ ದಿನ'ವಾಗಿ ಆಚರಿಸಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಶುಕ್ರವಾರ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿದೆ.

ಭಾರತದ ಮುಂದಾಳತ್ವದಲ್ಲಿ ಶ್ರೀಲಂಕಾ, ನೇಪಾಳ, ಮೆಕ್ಸಿಕೊ ಮತ್ತು ಅಂಡೋರಾ ಇದ್ದ ಸಮೂಹ ನಿರ್ಣಯ ಪ್ರಸ್ತಾಪಿಸಿದ್ದವು. ಎಲ್ಲ 193 ಸದಸ್ಯ ರಾಷ್ಟ್ರಗಳು ನಿರ್ಣಯವನ್ನು ಅನುಮೋದಿಸಿದವು.

'ಸಮಗ್ರ ಯೋಗಕ್ಷೇಮ ಮತ್ತು ಆಂತರಿಕ ರೂಪಾಂತರಕ್ಕಾಗಿ ಒಂದು ದಿನ. ನಿರ್ಣಯ ಅಂಗೀಕರಿಸಲು ಭಾರತ ವಿದ್ದ ರಾಷ್ಟ್ರಗಳ ಸಮೂಹ ಕಾರಣ ಆಗಿರುವುದು ಸಂತೋಷದ ಸಂಗತಿ' ಎಂದು ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಇಡೀ ಮನುಕುಲದ ಕ್ಷೇಮಕ್ಕಾಗಿ ಭಾರತ ಮುಂದಾಳತ್ವ ವಹಿಸುವುದು ನಮ್ಮ 'ವಸುಧೈವ ಕುಟುಂಬಕಂ'ನ ಚಿಂತನೆಯ ಮೂಲ ಧಾತುವಾಗಿದೆ' ಎಂದು ಅವರು ವ್ಯಾಖ್ಯಾನಿಸಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನವನ್ನು ಜೂನ್ 21ರಂದು ಆಚರಿಸ ಲಾಗುತ್ತಿದೆ. ಸರಿಯಾಗಿ ಆರು ತಿಂಗಳ ಬಳಿಕ 'ವಿಶ್ವ ಧ್ಯಾನ ದಿನ' ನಿಗದಿಯಾಗಿದೆ. ಯೋಗ ದಿನ ಆಚರಣೆಗೂ ಭಾರತ ಮುಂದಾಳತ್ವ ವಹಿಸಿತ್ತು.

ಇಸ್ಲಾಮಿಕ್ ಬಂಡುಕೋರರ ದಾಳಿ; ಮನೆಯಿಂದ ಹೊರಗೆ ಹೋಗದಿರಿ

ಸಿರಿಯಾಗೆ ಪ್ರಯಾಣಿಸದಿರಿ; ಎಚ್ಚರಿಕೆ

ನವದೆಹಲಿ (ಪಿಟಿಐ): ಇಸ್ಲಾಂ ಬಂಡುಕೋರರ ದಾಳಿಗೆ ತುತ್ತಾಗಿರುವ ಸಿರಿಯಾಕ್ಕೆ ಪ್ರಯಾಣಿಸದಂತೆ ಭಾರತವು ತನ್ನ ನಾಗರಿಕರಿಗೆ ಸೂಚನೆ ನೀಡಿದೆ.

ಅಲ್ಲದೇ ಸಿರಿಯಾದಲ್ಲಿರುವ ಭಾರತೀಯರೂ ಎಚ್ಚರಿಕೆಯಿಂದ ಇರುವಂತೆ ಹಾಗೂ ಮನೆಯಿಂದ ಹೊರಗೆ ತಮ್ಮ ಚಲನವಲನಗಳನ್ನು ಆದಷ್ಟು ಕಡಿಮೆ ಮಾಡುವ ಮೂಲಕ ಮುನ್ನೆಚ್ಚರಿಕೆ ವಹಿಸುವಂತೆ ಸರ್ಕಾರ ಸಲಹೆ ನೀಡಿದೆ.

ಸಿರಿಯಾದಲ್ಲಿರುವ ಭಾರತೀಯರು ಸಾಧ್ಯವಾದರೆ ಲಭ್ಯವಿರುವ ವಿಮಾನಗಳ ಮೂಲಕ ಭಾರತಕ್ಕೆ ಹಿಂದಿರುಗುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

ಡಮಾಸ್ಕಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರುವಂತೆಯೂ ತಿಳಿಸಲಾಗಿದ್ದು ತುರ್ತು ಸಹಾಯವಾಣಿ ಸಂಖ್ಯೆಯನ್ನು ನೀಡಲಾಗಿದೆ.

'ಭಾರತವು ಸಿರಿಯಾದಲ್ಲಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಿರಿಯಾದಲ್ಲಿ ಸುಮಾರು 90 ಜನ ಭಾರತೀಯರಿದ್ದಾರೆ. ಇದರಲ್ಲಿ 14 ಮಂದಿ ವಿಶ್ವಸಂಸ್ಥೆಯ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.



ಸಿರಿಯಾದ ಹಮಾ ನಗರವನ್ನು ವಶಪಡಿಸಿಕೊಂಡ ಬಳಿಕ ಇಸ್ಲಾಮಿಕ್ ಬಂಡುಕೋರರು ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು ಎಎಫ್‌ಪಿ ಚಿತ್ರ

ಎಲ್ಲರ ಸುರಕ್ಷತೆ ನಮ್ಮ ಆದ್ಯತೆಯಾಗಿದೆ' ಎಂದು ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದರು.

ದೇಶದ ಅತಿದೊಡ್ಡ ನಗರವಾದ ಅಲೆಪ್ಪೊವನ್ನು ವಶಪಡಿಸಿಕೊಂಡಿದ್ದ ಇಸ್ಲಾಂ ಬಂಡುಕೋರರು ಗುರುವಾರ ಕೇಂದ್ರ ಸಿರಿಯಾದ ಹೋಮ್ಸ್ ನಗರವನ್ನು ಬಹುತೇಕ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ.

ಗಾಜಾ ಆಸ್ಪತ್ರೆ ಮೇಲೆ ದಾಳಿ 29 ಜನರ ಸಾವು

ಜರುಸಲೇಂ (ಎಪಿ): ಉತ್ತರ ಗಾಜಾದ ಆಸ್ಪತ್ರೆ ಮೇಲೆ ಇಸ್ರೇಲ್‌ಸೇನೆ ನಡೆಸಿದ ಕ್ಷಿಪಣಿ ದಾಳಿಯಲ್ಲಿ ನಾಲ್ವರು ವೈದ್ಯಕೀಯ ಸಿಬ್ಬಂದಿ ಸೇರಿ ಕನಿಷ್ಠ 29 ಮಂದಿ ಮೃತಪಟ್ಟಿದ್ದಾರೆ.

ಕಮಲ್ ಅದ್ವಾನ್ ಆಸ್ಪತ್ರೆ ಗುರಿಯಾಗಿಸಿ ದಾಳಿ ನಡೆದಿದೆ. ಆಸ್ಪತ್ರೆಯ ಒಳಗೆ, ಹೊರಗಿನ ಸ್ಥಿತಿ ಘೋರವಾಗಿದೆ ಎಂದು ಆಸ್ಪತ್ರೆ ನಿರ್ದೇಶಕ ಡಾ.ಹಸಮ್ ಅಬು ಸಫಿಯಾ ತಿಳಿಸಿದ್ದಾರೆ.

ಮೃತರಲ್ಲಿ ತಲಾ ಐವರು ಮಕ್ಕಳು, ಮಹಿಳೆಯರು ಇದ್ದಾರೆ ಎಂದು ಆಸ್ಪತ್ರೆಯ ಮಾಹಿತಿ ಆಧರಿಸಿ ಪ್ಯಾಲೆಸ್ಟೀನಿಯನ್ ಅಧಿಕಾರಿಗಳು ತಿಳಿಸಿದ್ದಾರೆ.

ಸೇನೆ ಆಸ್ಪತ್ರೆ ಒಳಗಿನಿಂದಲೇ ಕಾರ್ಯಾಚರಣೆ ನಡೆಸುತ್ತಿದೆ ಎಂಬ ಆರೋಪವನ್ನು ಇಸ್ರೇಲ್ ಸೇನೆಯು ಅಲ್ಲಗಳೆದಿದೆ.

14ರಿಂದ ಅಸಹಕಾರ ಚಳವಳಿ; ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): 'ಸರ್ಕಾರದ ವಿರುದ್ಧ ಇದೇ 14ರಿಂದ ನಾಗರಿಕ ಅಸಹಕಾರ ಚಳವಳಿ ನಡೆಸಲು ಕರೆ ನೀಡಲಾಗುವುದು' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಎಚ್ಚರಿಸಿದ್ದಾರೆ.

ಪಕ್ಷದಿಂದ ನಡೆದ ಪ್ರತಿಭಟನೆ ವೇಳೆ ಪ್ರತಿಭಟನಕಾರರನ್ನು ಪೊಲೀಸ್ ಬಲ ಬಳಸಿ ಬಲವಂತವಾಗಿ ಚದುರಿಸಿದ ಬೆನ್ನಲ್ಲೇ ಈ ಎಚ್ಚರಿಕೆಯ ಮಾತು ಆಡಿದ್ದಾರೆ.

'ಮೇ 9ರ ಹಿಂಸಾಚಾರ ಕುರಿತು ನ್ಯಾಯಾಂಗ ತನಿಖೆಗೆ ಆಗ್ರಹ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸಲು ಐವರು ಸದಸ್ಯರ ಸಮಿತಿ ರಚಿಸಲಾಗುವುದು' ಎಂದು ಪಿಟಿಐ ಅಧ್ಯಕ್ಷರಾದ, ಅವರು ಅವರು 'ಎಕ್ಸ್' ಮೂಲಕ ತಿಳಿಸಿದ್ದಾರೆ.

'ವಕ್ಫ್ ಮಸೂದೆ: ಕ್ರೈಸ್ತರು ಮುಸ್ಲಿಮರ ಪರ ಇರಲಿ'

ನವದೆಹಲಿ: ವಿವಾದಾತ್ಮಕ ವಕ್ಫ್ ಮಸೂದೆ ತಿದ್ದುಪಡಿಯನ್ನು ಕ್ರೈಸ್ತ ಸಮುದಾಯವು ವಿರೋಧಿಸುವಂತೆ ಹಾಗೂ ಮುಸ್ಲಿಂ ವಿರೋಧಿ ಭಾವನೆಗಳನ್ನು ಉತ್ತೇಜಿಸದಂತೆ ವಿರೋಧ ಪಕ್ಷಗಳಲ್ಲಿರುವ ಕ್ರೈಸ್ತ ಸಂಸದರು, ಕ್ಯಾಥೋಲಿಕ್ ಚರ್ಚ್ ನಾಯಕತ್ವವನ್ನು ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಡಿ.3ರಂದು ದೆಹಲಿಯಲ್ಲಿ ನಡೆದ ಭಾರತೀಯ ಕ್ಯಾಥೋಲಿಕ್ ಬಿಷಪ್‌ಗಳ ಮಹಾಸಂಸ್ಥೆಯ (ಸಿಬಿಸಿಐ) ಸಭೆಯಲ್ಲಿ ಕ್ರೈಸ್ತ ಸಂಸದರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಭೆಯಲ್ಲಿ 20 ಜನ ಕ್ರೈಸ್ತ ಸಮುದಾಯದ ಸಂಸದರು ಭಾಗವಹಿಸಿದ್ದರು.

ವಕ್ಫ್ ಮಸೂದೆಯಿಂದ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಕ್ರೈಸ್ತ ಸಮುದಾಯವು ಈ ಕುರಿತು ಮುಸ್ಲಿಂ ಸಮುದಾಯದ ಪರ ನಿಲುವು ತಾಳಬೇಕು. ಮುಸ್ಲಿಂ ವಿರೋಧಿ ನೀತಿಯ ಭಾಗವಾಗದಂತೆ ಚರ್ಚ್ ಖಚಿತಪಡಿಸಿಕೊಳ್ಳಬೇಕು ಎಂದು ಸಭೆಯಲ್ಲಿ ಚರ್ಚಿಸಲಾಗಿದೆ ಎನ್ನಲಾಗಿದೆ.

ಟಿಎಂಸಿಯ ಸಂಸದೀಯ ಸಮಿತಿಯ ನಾಯಕ ಡೆರೆಕ್ ಒಬ್ರಯಾನ್, ಹೈಬಿ ಈಡೆನ್, ಡೀನ್ ಕುರ್ಯಾಕೋಸ್, ಆಂಟೊ ಆಂಟೊನಿ, ಸಿಪಿಐ(ಎಂ) ಸಂಸದ ಜಾನ್ ಬಿಟ್ಟಾಸ್ ಸಭೆಯಲಿದ್ದರು.

ಸಿಬಿಸಿಐ ಅಧ್ಯಕ್ಷ ಆರ್ಚ್‌ಬಿಷಪ್ ಆಂಡ್ರ್ಯೂಸ್ ಥಾಜತ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಚಿವ ಜಾರ್ಜ್ ಕುರಿಯನ್ ಅವರು ಸಭೆಗೆ ಬರುವ ವೇಳೆಗಾಗಲೇ ವಕ್ಫ್ ಕುರಿತು ಚರ್ಚೆ ನಡೆದಿತ್ತು ಎಂದು ತಿಳಿದು ಬಂದಿದೆ. ಬಿಜೆಪಿಯ ಇಬ್ಬರು ಕ್ರೈಸ್ತ ಸಂಸದರು ಸಭೆಗೆ ಗೈರಾಗಿದ್ದರು ಎನ್ನಲಾಗಿದೆ.

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ: ಮನಪಾವಿ/ಲೋವಿ/ಕಾಅ/2024–25/3987 ದಿನಾಂಕ:03.12.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಹಾನಗರ ಪಾಲಿಕೆ ವಿಜಯಪುರ ದಲ್ಲಿ ಬಿಡುಗಡೆಯಾದ 1) 2024–25 ನೇ ಸಾಲಿನ ಸಾಮಾನ್ಯ ಅನುದಾನದಲ್ಲಿ 03 ಕಾಮಗಾರಿಗಳು ಮತ್ತು 2) 15 ನೇ ಹಣಕಾಸು 2020–21 (ಉಳಿತಾಯ) ದಲ್ಲಿನ 01 ಕಾಮಗಾರಿಗೆ ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ (https://kppp.karnataka.gov.in) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ https://kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.

1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13.12.2024.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/487/ಕೆಎಸ್‌ಎಂಸಿಎ/2024–25

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

3ನೇ ಮಹಡಿ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.

ದೂರವಾಣಿ: 080–22223753 / 22223758

ಸಂಖ್ಯೆ:ಡಿಡಿಯುಟಿಟಿಎಲ್/ತಾ.ವಿ/ಹೋರ್ಡಿಂಗ್, ಜಾ.ಪ್ರ/2024–25 ದಿನಾಂಕ: 03–12–2024

ಅಲ್ಪಾವಧಿ ಟೆಂಡರ್ / ಇ–ಹರಾಜು ಪ್ರಕಟಣೆ

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಗೆ ಸಂಬಂಧಿಸಿದ 08 ಟ್ರಕ್ ಟರ್ಮಿನಲ್‌ಗಳ ಆವರಣದಲ್ಲಿ ಹೋರ್ಡಿಂಗ್ಸ್ / ಜಾಹೀರಾತು ಫಲಕಗಳು ಅಳವಡಿಸುವ ಅಂಶಕ್ಕೆ ವಾರ್ಷಿಕ ಬಾಡಿಗೆ ಗುತ್ತಿಗೆ ಆಧಾರದ ಮೇಲೆ 20 ವರ್ಷಗಳ ಕ್ರಿಯಾತ್ಮಕ ಗುತ್ತಿಗೆ ಅವಧಿಗೆ, 2 ವರ್ಷಕ್ಕೊಮ್ಮೆ ಆಯಾ ವರ್ಷದ ಬಿಡ್ ಮೊತ್ತಕ್ಕೆ 5% ಹೆಚ್ಚಿನ ದರವನ್ನು ಪಾವತಿಸುವ ಕರಾರಿನಂತೆ ಕಾಮಗಾರಿ ನಿರ್ವಹಿಸುವ ಹೋರ್ಡಿಂಗ್ಸ್ / ಜಾಹೀರಾತು ಫಲಕಗಳನ್ನು ಅಳವಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ ನೋಂದಾಯಿತ ಗುತ್ತಿಗೆದಾರರು/ ಅರ್ಹ ಅಭ್ಯರ್ಥಿಗಳಿಂದ ನೂತನ ಇ–ಹರಾಜು ವೇದಿಕೆಯಲ್ಲಿ ವಾರ್ಷಿಕ ಬಾಡಿಗೆ ಆಧಾರದ ಮೇಲೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಹರಾಜಿನಲ್ಲಿ ಭಾಗವಹಿಸುವುದು.

ಇ–ಹರಾಜು ವೇಳಾಪಟ್ಟಿ: 1) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 16–12–2024 ರಂದು 16.30 ಗಂಟೆವರೆಗೆ. 2) ಇ–ಹರಾಜಿನಲ್ಲಿ ಭಾಗವಹಿಸುವಿಕೆ ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 26–12–2024 ರಂದು 17.00 ಗಂಟೆವರೆಗೆ. 3) ಲೈವ್ ಬಿಡ್ಡಿಂಗ್: 27–12–2024 ರಂದು ಬೆಳಿಗ್ಗೆ 10.30 ಗಂಟೆಗೆ ಪ್ರಾರಂಭ ಮತ್ತು ಸಂಜೆ 5.00 ಗಂಟೆಗೆ ಮುಕ್ತಾಯವಾಗುತ್ತದೆ.

ಸಹಿ/–ವ್ಯವಸ್ಥಾಪಕ ನಿರ್ದೇಶಕರು ಡಿಡಿಯುಟಿಟಿಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/3614/ಅಡ್ವರ್ಟೋರ್/2024–25

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂ:ಅಪಜೀ 470 ಇಪಿಸಿ 2024 ದಿನಾಂಕ: 06.12.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ(KSPCB) ಅಧ್ಯಕ್ಷರ ಹುದ್ದೆಗೆ ಜಲ (ಮಾಲಿನ್ಯ ತಡ ಹಾಗೂ ನಿಯಂತ್ರಣ) ಅಧಿನಿಯಮ, 1974ರ ಪ್ರಕರಣ–4ರ ಉಪಪ್ರಕರಣ (2)(ಎ)ರಡಿ ಪೂರ್ಣಕಾಲಿಕವಾಗಿ ನಾಮ ನಿರ್ದೇಶನ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಇದೇ ಮುದ್ರಣ ಮಾಧ್ಯಮದಲ್ಲಿ ಪ್ರಕಟಿಸಲಾದ ಸಾರ್ವಜನಿಕ ಪ್ರಕಟಣೆ ಸಂಖ್ಯೆ:ಅಪಜೀ 470 ಇಪಿಸಿ 2024, ದಿನಾಂಕ:11.11.2024ನ್ನು ಹಿಂಪಡೆಯಲಾಗಿದೆ. ಮುಂದಿನ ಸಾರ್ವಜನಿಕ ತಿಳುವಳಿಕೆಯನ್ನು ಯಥಾಕಾಲದಲ್ಲಿ ಪ್ರಕಟಿಸಲಾಗುವುದು.

ಸಹಿ/– (ಬಿ.ಎನ್.ಪ್ರವೀಣ್) ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಜೀವಿಪರಿಸ್ಥಿತಿ ಮತ್ತು ಪರಿಸರ)

ವಾಸಾಸಂಇ/ವಾಪ್ರ/ಜಿಎ/3684/2024–25

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ, ಗದಗ.

ಕಾರ್ಯನಿರ್ವಾಹಕ ಇಂಜಿನೀಯರ, ಪಂ.ರಾಜ್.ಇಂ. ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2024–25/2492 ದಿನಾಂಕ: 07–12–2024

ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ ಪ್ರಕಟಣೆ

Standard Bid Document KW-3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-3 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 01 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2023–24 ನೇ ಸಾಲಿನ 5054 ಮಾನ್ಯ ಮುಖ್ಯಮಂತ್ರಿಗಳ ವಿಶೇಶ ಅನುದಾನ ಯೋಜನೆ, ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್,(https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos: RDPR/2023-24/WORK_INDENT : 8610/CALL-2,

ಟೆಂಡರಿಗಿಟ್ಟ ಮೊತ್ತ ರೂ. 66.73 ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:– ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 09–12–2024 ರಿಂದ 16–12–2024 ರಂದು 16.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 17–12–2024 ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್.ಇಂಜಿನೀಯರಿಂಗ್ ವಿಭಾಗ, ಗದಗ.

ವಾ.ಸಾ.ಇ/ಗದಗ/452/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯುರಿಟೀಸ್)

ವಿಧಾನ ಸೌಧ, ಬೆಂಗಳೂರು.

No: FD 01 BMB 2024 Dated: 06.12.2024

ಪ್ರಕಟಣೆ

1. ಒಟ್ಟು ಮೊತ್ತ: ರೂ 4000 ಕೋಟಿ (ಮರು ಹಂಚಿಕೆ : ರೂ 2000 ಕೋಟಿ + ರೂ 2000 ಕೋಟಿ)
2. ಹಂಚಿಕೆ ವಿಧಾನ: ಹರಾಜು ಮೂಲಕ, ಪಿಡಿಒ, ಆರ್‌ಬಿಐ, ಮುಂಬೈ (ಫೋರ್ಟ್) ಮುಖಾಂತರ.
3. ಹರಾಜಿನ ದಿನಾಂಕ : ಡಿಸೆಂಬರ್ 10, 2024.

ಕರ್ನಾಟಕ ಸರ್ಕಾರವು ಮೇಲಿನ ಸೆಕ್ಯೂರಿಟಿಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ ಶೇ 10ರ ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.

ಸಹಿ/– ಡಾ. ಎಂ.ಟಿ. ರೆಜು, ಸರ್ಕಾರದ ಕಾರ್ಯದರ್ಶಿ, (ವೆಚ್ಚ) ಹಣಕಾಸು ಇಲಾಖೆ

DIPR/CP/3651/Zen/2024-25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ), ಬನಶಂಕರಿ, ಬೆಂಗಳೂರು–560 070.

ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/32/2024–25 ದಿನಾಂಕ: 07.12.2024

ಟೆಂಡರ್ ಪ್ರಕಟಣೆ ಕೆ.ಪಿ.ಪಿ. ಪೋರ್ಟಲ್ (ಏಕ–ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Viveka Yojane & Deposit Contribution Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಏಕ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 24.12.2024ರ ಸಂಜೆ 4:00 ಗಂಟೆಯುವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ https://www.kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ, ಬೆಂಗಳೂರು.

DIPR/CP/RO3676/AAPL/2024-25

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

Karnataka One State. Many worlds

(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)

ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು–560022.

ದೂರವಾಣಿ: 080–43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co

ಸಂ: ಕರಾಪ್ರಅನಿ/ಪ್ರೋ/18/2024–25/1975 ದಿನಾಂಕ: 06.12.2024

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹೊಸದಾಗಿ ಕ್ರಾಕರಿ ಮತ್ತು ಕಟ್ಲರಿ ಐಟಂಗಳ ಸರಬರಾಜು ಮಾಡಲು ಆಸಕ್ತ, ಅರ್ಹ ಸಂಸ್ಥೆಗಳಿಂದ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ: KSTDC/PROC/18/2024-25 ವಿವರಣೆ: Supply of Crockery and Cutlery items. ಇ.ಎಂ.ಡಿ: ರೂ.1,00,000/–. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 23.12.2024, ಮಧ್ಯಾಹ್ನ 1.00 ಗಂಟೆಗೆ.

ಆಸಕ್ತ/ಅರ್ಹ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ https://kppp.karnataka.gov.inಗೆ ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8494922277, ಇ–ಮೇಲ್: hphelpdesk.blr@intarvo.com ನ್ನು ಸಂಪರ್ಕಿಸುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ರಾ.ಪ್ರ.ಅ.ನಿ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.

ದೂ: ಸಂ: 08194–235464, ಇ–ಮೇಲ್: dhochitradurga@gmail.com

ಸಂಖ್ಯೆ:ಜಿಆಕುಕ/ಚಿ/ಸಿಬ್ಬಂದಿ/01/2024–25 ದಿನಾಂಕ: 06.12.2024

ಪ್ರಕಟಣೆ

ಮಾನ್ಯ ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ:– ರಾ.ಆ.ಸಂ/ಎ.ಎನ್.ಎಂ.ಟಿ.ಸಿ/02/2024–25 ದಿನಾಂಕ: 03.12.2024ರಲ್ಲಿ 2024–25ನೇ ಸಾಲಿಗೆ ಆರೋಗ್ಯ ಸುರಕ್ಷಾಧಿಕಾರಿಗಳ (ಕಿ.ಮ.ಆ.ಸ) ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದ್ದು, www.karhfw.gov.in ವೆಬ್‌ಸೈಟ್‌ನಲ್ಲಿ HOME PAGEನ ಕೆಳಭಾಗದ ಮುಖ್ಯ ಕೊಂಡಿಗಳನ್ನು ವೀಕ್ಷಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ https://hfwcom.karnataka.gov.in ನಿಂದ ಡೌನ್ ಲೋಡ್ ಮಾಡಿ ಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ, ಇಲ್ಲಿಗೆ ದಿನಾಂಕ:18–12–2024ರ ಸಂಜೆ 5–30 ಗಂಟೆಯೊಳಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ಚಿತ್ರದುರ್ಗ, ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು

DIPR/CTA/KSMCA/422/2024-25 ಸಹಿ/– ಅಧ್ಯಕ್ಷರು ಹಾಗೂ ಆಯ್ಕೆ ಸಮಿತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾವೇರಿ ವಿಭಾಗ, ಹಾವೇರಿ

E-Mail: dcfhaveri@gmail.com Tel No: 08375-298936

ಎ3/ಬಿಜಿಟಿ/ಕಟ್ಟಡ/ನಿರ್ಮಾಣ/ಇ–ಟೆಂಡರ್/ಸಿಆರ್–32/2024–25 ದಿನಾಂಕ: 04.12.2024

ಲಕೋಟೆ–1 ರ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ರಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ "2406-04-103-1-06-Others-140-Minor Works (CAMPA Others) (Building)" ಯೋಜನೆಯಡಿ ಹಾವೇರಿ ಪ್ರಾದೇಶಿಕ ವಿಭಾಗದ ಹಾನಗಲ್ಲ & ದುಂಡಶಿ ವಲಯಗಳಲ್ಲಿ ಗಸ್ತು ವನ ಪಾಲಕರ ವಸತಿ ಗೃಹಗಳ ನಿರ್ಮಾಣ ಕಾಮಗಾರಿಯನ್ನು ಕೈಕೊಳ್ಳುವ ಕುರಿತು ಈ ಕೆಳಗಿನ ವೇಳಾಪಟ್ಟಿಯ ದಿನಾಂಕ: 04/12/2024 ರಂದು ಇ–ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು: (1) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ, (ತಾಂತ್ರಿಕ & ಆರ್ಥಿಕ) : 23/12/2024 ಮಧ್ಯಾಹ್ನ 1.00 ಗಂಟೆವರೆಗೆ (2) ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಮಯ 24/12/2024 ಮಧ್ಯಾಹ್ನ 2.00 ಗಂಟೆಗೆ ಹಾಗೂ ಒಂದೊಮ್ಮೆ ಸದರಿ ದಿನಾಂಕದಂದು ಟೆಂಡರ್ ಯಶಸ್ವಿಯಾಗದಿದ್ದಲ್ಲಿ (1) ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04.01.2025 ಮಧ್ಯಾಹ್ನ 1.00 ಗಂಟೆವರೆಗೆ (2) ತಾಂತ್ರಿಕ & ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 06.01.2025 ಮಧ್ಯಾಹ್ನ 2.00 ಗಂಟೆಗೆ ನಿಗದಿಪಡಿಸಿದೆ.

ಉಳಿದ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಸಂಪರ್ಕಿಸಿ ಪಡೆಯಬಹುದು ಹಾಗೂ ಈ ಕಛೇರಿಯ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾವೇರಿ ವಿಭಾಗ, ಹಾವೇರಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027

ಸಂ: KSRTC/2024-25/IND0159(ಟಿ-144) ದಿನಾಂಕ: 07.12.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

(1) ಕ.ರಾ.ರ.ಸಾ. ನಿಗಮಕ್ಕೆ ಅವಶ್ಯವಿರುವ 222" ವ್ಹೀಲ್ ಬೇಸ್ ಬಿಎಸ್–6 ಮಾದರಿಯ 70 ಸಂಖ್ಯೆ ಪೂರ್ಣ ನಿರ್ಮಿತ ಡೀಸೆಲ್ ಹವಾನಿಯಂತ್ರಣರಹಿತ ಸ್ಲೀಪರ್ ಕೋಚಸ್ ಹಾಗೂ 30 ಸಂಖ್ಯೆ ಹವಾನಿಯಂತ್ರಣ ರಹಿತ ಸೀಟರ್ ಕಂ ಸ್ಲೀಪರ್ ಕೋಚಸ್ ವಾಹನಗಳನ್ನು ಸರಬರಾಜು ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

(2) ಟೆಂಡರ್‌ನ ಅಂದಾಜು ಮೌಲ್ಯ ರೂ: 47 ಕೋಟಿಗಳು.

(3) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ:16.12.2024 ಸಂಜೆ 5:30 ಗಂಟೆಯವರೆಗೆ.

ಮುಂದುವರೆದಂತೆ, ಟೆಂಡರ್ ನಿರ್ದಿಷ್ಟತೆ (ಸ್ಪೇಸಿಪಿಕೇಷನ್), ಕಾರ್ಯವ್ಯಾಪ್ತಿ ಟೆಂಡರ್‌ನ ವೇಳಾಪಟ್ಟಿ ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ. ಸೇರ್ಪಡೆ/ತಿದ್ದುಪಡಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ದುದಾರರು ಕೆಪಿಪಿ ಪೋರ್ಟಲ್ ನಲ್ಲಿ ನೊಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ದುದಾರರು ಕೆಪಿಪಿ ಪೋರ್ಟಲ್‌ನ ವೆಬ್‌ಸೈಟ್: https://kppp.karnataka.gov.in ಗೆ ಲಾಗ್ ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: support@eprochelpdesk.com ಇ–ಮೇಲ್ ಮಾಡಿ ಪಡೆಯಬಹುದಾಗಿರುತ್ತದೆ. ಬಿಡ್ದುದಾರರಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಮಾಹಿತಿ ಅಗತ್ಯವಿದ್ದಲ್ಲಿ cmep@ksrtc.org ಗೆ ಇ–ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ. (ಮೊಬೈಲ್ ಸಂಖ್ಯೆ: 7760998870, 7760990773, 7760990073, 7760990054)

ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು, (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/3674/2024–25

ಬಾಬರಿ ಮಸೀದಿ ಧ್ವಂಸ ಸಮರ್ಥನೆಯ ಜಾಹೀರಾತು ಪ್ರಕಟಿಸಿದ ಶಿವಸೇನಾ (ಉದ್ಧವ್ ಬಣ) ನಡೆಗೆ ಆಕ್ಷೇಪ


‘ಎಂವಿಎ’ಯಿಂದ ಹೊರನಡೆದ ಎಸ್‌ಪಿ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಬಾಬರಿ ಮಸೀದಿ ಧ್ವಂಸ ಮಾಡಿದವರಿಗೆ ಶುಭಾಶಯ ಕೋರಿ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾವು ಪತ್ರಿಕೆಗಳಿಗೆ ಜಾಹೀರಾತು ನೀಡಿದನ್ನು ಆಕ್ಷೇಪಿಸಿ ಸಮಾಜವಾದಿ ಪಕ್ಷವು ಮಹಾರಾಷ್ಟ್ರದಲ್ಲಿ ‘ಮಹಾ ವಿಕಾಸ ಆಘಾಡಿ’ (ಎಂವಿಎ) ಮೈತ್ರಿಕೂಟದಿಂದ ಹೊರಬರಲು ನಿರ್ಧರಿಸಿದೆ.

‘ಬಾಬರಿ ಮಸೀದಿ ಧ್ವಂಸ ಮಾಡಿದವರಿಗೆ ಶುಭಾಶಯ ಕೋರುವ ಜಾಹೀರಾತನ್ನು ಶಿವಸೇನಾ (ಉದ್ಧವ್ ಬಣ) ನೀಡಿದೆ. ಉದ್ಧವ್ ಅವರ ಆಪ್ತ ಮಿಲಿಂದ್ ನಾರ್ವೇಕರ್ ಕೂಡ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಆದ್ದರಿಂದ ನಾವು ಮೈತ್ರಿಕೂಟವನ್ನು ತೊರೆಯುತ್ತಿದ್ದೇವೆ. ಈ ಬಗ್ಗೆ ನಮ್ಮ ನಾಯಕ ಅಖಿಲೇಶ್ ಯಾದವ್ ಅವರೊಂದಿಗೂ ಮಾತನಾಡುತ್ತೇನೆ’ ಎಂದು ಸಮಾಜವಾದಿ ಪಕ್ಷದ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಅಬು ಆಜ್ಮಿ ಹೇಳಿದ್ದಾರೆ.

‘ಸಂವಿಧಾನವನ್ನು ಉಳಿಸುವುದು ಮತ್ತು ಜಾತ್ಯತೀತ ತತ್ವಗಳ ಆಧಾರದಲ್ಲಿ ಮಹಾ ವಿಕಾಸ ಆಘಾಡಿ ರೂಪುಗೊಂಡಿತ್ತು. ಈಗ ಆಘಾಡಿ ಯವರೇ ಇಂಥ ಭಾಷೆ ಬಳಸಿದರೆ, ಬಿಜೆಪಿಗೂ ಅವರಿಗೂ ಯಾವ ವ್ಯತ್ಯಾಸ ಇದೆ. ನಾವು ಯಾಕೆ ಅಂಥವರೊಂದಿಗೆ ಇರಬೇಕು. ಇಂಥ ಭಾಷೆ ಬಳಸುವವರ ಜೊತೆ ಮೈತ್ರಿ ಮಾಡಕೊಳ್ಳಬೇಕೇ, ಬೇಡವೇ ಎನ್ನುವ ಕುರಿತು ಕಾಂಗ್ರೆಸ್ ನಿರ್ಧರಿಸಬೇಕು’ ಎಂದು ಆಜ್ಮಿ ಹೇಳಿದ್ದಾರೆ.



ಮಿಲಿಂದ್ ಅವರ ಪೋಸ್ಟ್‌ನಲ್ಲಿ ಬಾಳಾ ಸಾಹೇಬ್ ಠಾಕ್ರೆ ಅವರ ‘ಯಾರು ಇದನ್ನು ಮಾಡಿದ್ದಾರೊ ಅವರ ಬಗ್ಗೆ ಹೆಮ್ಮೆ ಇದೆ’ ಹೇಳಿಕೆ ಇದೆ



ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪಮುಖ್ಯಮಂತ್ರಿಗಳಾದ ಏಕನಾಥ ಶಿಂದೆ, ಅಜಿತ್ ಪವಾರ್ ಸೇರಿದಂತೆ ‘ಮಹಾಯುತಿ’ ಶಾಸಕರು ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಶನಿವಾರ ಗೌರವ ಸಲ್ಲಿಸಿದರು —ಪಿಟಿಐ ಚಿತ್ರ

ಪ್ರಮಾಣವಚನ ಸ್ವೀಕರಿಸದ ಎಂವಿಎ ಶಾಸಕರು

‘ಇವಿಎಂ ಮ್ಯಾಜಿಕ್’ನಿಂದ ಸರ್ಕಾರ ರಚನೆಗೊಂಡಿದೆ. ಆದ್ದರಿಂದ, ಅಧಿವೇಶನದ ಮೊದಲ ದಿನ ಪ್ರಮಾಣವಚನ ಸ್ವೀಕರಿಸುವುದಿಲ್ಲ’ ಎಂದು ಹೇಳಿದ ವಿರೋಧ ಪಕ್ಷದ ‘ಮಹಾ ವಿಕಾಸ ಆಘಾಡಿ’ (ಎಂವಿಎ) ಮೈತ್ರಿಕೂಟದ ಶಾಸಕರು ಶನಿವಾರ ಕಲಾಪದಿಂದ ಹೊರನಡೆದರು. ‘ಇದು ನಮ್ಮ ಪ್ರತಿಭಟನೆ’ ಎಂದು ಎಂವಿಎ ಶಾಸಕರು ಹೇಳಿದ್ದಾರೆ.

ಮುಖ್ಯಮಂತ್ರಿಯಾಗಿ ದೇವೇಂದ್ರ ಫಡಣವೀಸ್, ಉಪಮುಖ್ಯಮಂತ್ರಿಗಳಾಗಿ ಅಜಿತ್ ಪವಾರ್ ಹಾಗೂ ಏಕನಾಥ ಶಿಂದೆ ಅವರು ಪ್ರಮಾಣವಚನ ಸ್ವೀಕರಿಸಿದ ಎರಡು ದಿನಗಳ ಬಳಿಕ, ‘ಮಹಾಯುತಿ’ ಶಾಸಕರು ಶನಿವಾರ ಪ್ರಮಾಣವಚನ ಸ್ವೀಕರಿಸಿದರು.

ಎಂವಿಎ ಶಾಸಕರು ಪ್ರಮಾಣವಚನ ಸ್ವೀಕರಿಸಲು ನಿರಾಕರಿಸಿದರು. ಇವರು ಭಾನುವಾರ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಶನಿವಾರದಿಂದ ಮೂರು ದಿನಗಳವರೆಗೆ ವಿಶೇಷ ಅಧಿವೇಶನ ನಡೆಯಲಿದೆ.

ಅಧಿವೇಶನಕ್ಕೂ ಮುನ್ನ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿ ಬಳಿ ಸೇರಿದ್ದ ಎಂವಿಎ ಶಾಸಕರು ತಮ್ಮ ನಿರ್ಧಾರವನ್ನು ಘೋಷಿಸಿದರು. ಈ ವೇಳೆ ಮಾತನಾಡಿದ ಶಿವಸೇನಾ (ಉದ್ಧವ್ ಬಣ) ಶಾಸಕ ಆದಿತ್ಯ ಠಾಕ್ರೆ, ‘ಭಾರಿ ಬಹುಮತದೊಂದಿಗೆ ಸರ್ಕಾರವು ಅಧಿಕಾರಕ್ಕೆ ಬಂದಿರುವಾಗ ಭಾರಿ ಸಂಭ್ರಮ ಇರುತ್ತದೆ. ಆದರೆ, ಒಂದು ಪ್ರಶ್ನೆ ಮಾತ್ರ ಹಾಗೇ ಉಳಿಯುತ್ತದೆ. ಇಂಥ ಬಹುಮತವನ್ನು ಜನರು ನೀಡಿದ್ದೇ ಅಥವಾ ಇವಿಎಂ ಹಾಗೂ ಚುನಾವಣಾ ಆಯೋಗದ ಸಹಕಾರದಿಂದ ಗಳಿಸಿಕೊಂಡಿದ್ದೇ’ ಎಂದರು.

ಆಘಾಡಿ ತೊರೆಯುವ ಕುರಿತು ಅಖಿಲೇಶ್ ಯಾದವ್ ಅವರು ಈವರೆಗೂ ಯಾವ ಹೇಳಿಕೆಯನ್ನೂ ನೀಡಿಲ್ಲ. ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ 12 ಸ್ಥಾನಗಳನ್ನು ನೀಡುವಂತೆ ಸಮಾಜವಾದಿ ಪಕ್ಷವು ಆಗ್ರಹಿಸಿತ್ತು. ಆದರೆ, ಪಕ್ಷಕ್ಕೆ ಆರು ಸ್ಥಾನಗಳನ್ನು ನೀಡಲಾಗಿತ್ತು. ಈ ಸ್ಥಾನಗಳ ಪೈಕಿ ಎರಡರಲ್ಲಿ ಪಕ್ಷ ಜಯಗಳಿಸಿದೆ.

ರಾಹುಲ್, ಶರದ್ ಪವಾರ್ ಭೇಟಿ

ಇವಿಎಂ ಮೂಲಕ ಹೊರಬಂದ ಫಲಿತಾಂಶವನ್ನು ನಿರಾಕರಿಸಿ, ಮತಪತ್ರದ ಮೂಲಕ ಅಣಕು ಮತದಾನ ಮಾಡಲು ಮುಂದಾಗಿದ್ದ ಸೋಲಾಪುರದ ಮರ್ಕಡವಾಡಿ ಗ್ರಾಮದ ಕೆಲವರನ್ನು ಬಂಧಿಸಿರುವುದು ಮತ್ತು ಗ್ರಾಮದಲ್ಲಿ ನಿಷೇಧಾಜ್ಞೆ ಹೇರಿರುವುದನ್ನು ಎಂವಿಎ ವಿರೋಧಿಸಿದೆ.

‘ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಈ ಗ್ರಾಮಕ್ಕೆ ಸದ್ಯದಲ್ಲಿಯೇ ಭೇಟಿ ನೀಡಲಿದ್ದಾರೆ’ ಎಂದು ಎನ್‌ಸಿಪಿ (ಶರದ್ ಬಣ) ಮುಖಂಡ ಜಿತೇಂದ್ರ ಅವ್ಹಾಡ್ ತಿಳಿಸಿದರು.

‘ಮರ್ಕಡವಾಡಿ ಗ್ರಾಮದ ಜನರ ಅಭಿಪ್ರಾಯವೇ ಇಡೀ ರಾಜ್ಯದ ಜನರ ಅಭಿಪ್ರಾಯವಾಗಿದೆ. ಇದು ಜನರಿಂದ ಆಯ್ಕೆಯಾದ ಸರ್ಕಾರವಲ್ಲ. ಜನರ ಅಭಿಪ್ರಾಯಗಳನ್ನು ಗೌರವಿಸಿ ನಾವು ಪ್ರಮಾಣವಚನ ಸ್ವೀಕರಿಸುತ್ತಿಲ್ಲ’ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟದ ಅಧ್ಯಕ್ಷ ನಾನಾ ಪಟೋಲೆ ತಿಳಿಸಿದರು.

ಬಾಬರಿ ಮಸೀದಿ ಧ್ವಂಸ ಕುರಿತ ನಮ್ಮ ನಿಲುವೇನು ಎಂಬುದು ಸಮಾಜವಾದಿ ಪಕ್ಷಕ್ಕೆ 31 ವರ್ಷಗಳ ಬಳಿಕ ಗೊತ್ತಾಯಿತೇ?
ಭಾಸ್ಕರ್ ಜಾಧವ್, ಶಿವಸೇನಾ (ಉದ್ಧವ್ ಬಣ) ಮುಖಂಡ

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುತ್ವದ ಅಜೆಂಡಾವನ್ನು ತೀವ್ರವಾಗಿ ಪ್ರತಿಪಾದಿಸಬೇಕು ಎಂದು ನಾಯಕರಿಗೆ ಸಭೆಯೊಂದರಲ್ಲಿ ಉದ್ಧವ್ ಹೇಳಿದ್ದಾರಂತೆ
ಅಬು ಆಜ್ಮಿ, ಸಮಾಜವಾದಿ ಪಕ್ಷದ ಮಹಾರಾಷ್ಟ್ರ ಘಟಕದ ಅಧ್ಯಕ್ಷ

ಅಬು ಆಜ್ಮಿ ಅವರು ಎಂವಿಎ ತೊರೆಯುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಸಮಾಜವಾದಿ ಪಕ್ಷದೊಂದಿಗೆ ಮಾತುಕತೆ ನಡೆಸಿ, ಸಮಸ್ಯೆ ಏನು ಎಂಬುದರ ಕುರಿತು ಅರಿತುಕೊಳ್ಳಲಾಗುವುದು
ನಿತಿನ್ ರಾವುತ್, ಕಾಂಗ್ರೆಸ್ ಮುಖಂಡ

ಎಸ್‌ಪಿ ಹೊರನಡೆದರೆ ಮೈತ್ರಿಕೂಟಕ್ಕೆ ನಷ್ಟವಿಲ್ಲ. ಸ್ಥಳೀಯ ಚುನಾವಣೆಗಳ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಂಡಿದೆ
ಅಭಯ್ ದೇಶಪಾಂಡೆ, ರಾಜಕೀಯ ವಿಶ್ಲೇಷಕ

ಸುದ್ದಿ 2 ನಿಮಿಷ

‘ಅಯೋಧ್ಯೆ ತೀರ್ಪಿನಲ್ಲಿ ನ್ಯಾಯದಾನದ ಅಣಕ’

ನವದೆಹಲಿ (ಪಿಟಿಐ): ರಾಮ ಜನ್ಮಭೂಮಿ – ಬಾಬರಿ ಮಸೀದಿ ಪ್ರಕರಣದಲ್ಲಿ ‘ಸುಪ್ರೀಂ’ 2019ರಲ್ಲಿ ನೀಡಿದ ತೀರ್ಪನ್ನು ಟೀಕಿಸಿರುವ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಫ್. ನರಿಮನ್, ಈ ತೀರ್ಪು ‘ನ್ಯಾಯದಾನದ ಬಹುದೊಡ್ಡ ಅಣಕ’ ಎಂದು ಹೇಳಿದ್ದಾರೆ. ತೀರ್ಪಿನಲ್ಲಿ ಧರ್ಮನಿರಪೇಕ್ಷ ತತ್ವಕ್ಕೆ ನ್ಯಾಯ ಸಿಕ್ಕಿಲ್ಲ ಎಂದೂ ಅವರು ಹೇಳಿದ್ದಾರೆ.

ನ್ಯಾಯಮೂರ್ತಿ ಎ.ಎಂ. ಅಹಮದಿ ಸ್ಮಾರಕ ಮೊದಲ ಉಪನ್ಯಾಸ ಕಾರ್ಯಕ್ರಮದಲ್ಲಿ ‘ಧರ್ಮನಿರಪೇಕ್ಷತೆ ಮತ್ತು ಭಾರತೀಯ ಸಂವಿಧಾನ’ ವಿಷಯದ ಬಗ್ಗೆ ಮಾತನಾಡಿದ ನ್ಯಾಯಮೂರ್ತಿ ನರಿಮನ್ ಅವರು, 2019ರ ತೀರ್ಪು ‘ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991’ ಅನ್ನು ಎತ್ತಿಹಿಡಿದಿದ್ದುದು ಭರವಸೆಯ ಬೆಳ್ಳಿರೇಖೆಯಂತೆ ಇದೆ ಎಂದರು.



ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿದಂತೆ ವಿವಾದಗಳು ದೇಶದ ಎಲ್ಲೆಡೆ ಪ್ರತಿದಿನವೂ ಉದ್ಭವ ಆಗುತ್ತಿವೆ. ಇವುಗಳಿಗೆ ಅಂತ್ಯಕಾಣಿಸಬೇಕು ಎಂದಾದರೆ ‘ಪೂಜಾ ಸ್ಥಳಗಳ ಕಾಯ್ದೆ’ಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಅವರು ಹೇಳಿದರು.

ಮಸೀದಿಯನ್ನು ಧ್ವಂಸಗೊಳಿಸಿದ್ದು ಅಕ್ರಮ ಎಂದು ಘೋಷಿಸಿದ ನಂತರವೂ, ವಿವಾದಿತ ಜಮೀನನ್ನು ಒಂದು ಸಮುದಾಯಕ್ಕೆ ನೀಡಿದ್ದಕ್ಕೆ ಉಲ್ಲೇಖಿಸಿರುವ ಕಾರಣವನ್ನು ಒಪ್ಪಲು ಆಗದು ಎಂದು ನರಿಮನ್ ಹೇಳಿದರು.

ಮಸೀದಿ ಧ್ವಂಸ ಪ್ರಕರಣದಲ್ಲಿ ಆರೋಪಿಗಳೆಲ್ಲರನ್ನೂ ದೋಷಮುಕ್ತಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಿಗೆ – ಸುರೇಂದ್ರ ಯಾದವ್ – ನಿವೃತ್ತಿಯ ನಂತರದಲ್ಲಿ ಉತ್ತರ ಪ್ರದೇಶದ ಉಪ ಲೋಕಾಯುಕ್ತ ಹುದ್ದೆ ಸಿಕ್ಕಿದೆ ಎಂದು ನ್ಯಾಯಮೂರ್ತಿ ನರಿಮನ್ ಹೇಳಿದರು. ‘ಈ ದೇಶದಲ್ಲಿನ ವಿದ್ಯಮಾನಗಳು ಹೀಗಿವೆ’ ಎಂದು ಅವರು ಹೇಳಿದರು.

ಮೋದಿಗೆ ಜೀವ ಬೆದರಿಕೆ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿರುವ ಸಂದೇಶವು ಮುಂಬೈ ಪೊಲೀಸರಿಗೆ ಬಂದಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ.

ಬೆದರಿಕೆಯ ಸಂದೇಶ ಕಳುಹಿಸಿದವರ ವಿಳಾಸವನ್ನು ಪತ್ತೆ ಹಚ್ಚಲಾಗಿದೆ. ಶಂಕಿತನನ್ನು ಬಂಧಿಸಲಿಕ್ಕಾಗಿ ರಾಜಸ್ಥಾನದ ಅಜ್ಮೇರ್‌ಗೆ ಪೊಲೀಸರ ತಂಡವನ್ನು ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ಇಬ್ಬರು ಐಎಸ್‌ಐ ಏಜೆಂಟರು ಮತ್ತು ಪ್ರಧಾನಿ ಮೋದಿಯನ್ನು ಗುರಿಯಾಗಿಸಿ ಬಾಂಬ್ ಸ್ಫೋಟಿಸುವುದಾಗಿ’ ಉಲ್ಲೇಖವಿರುವ ಸಂದೇಶವೊಂದು, ಮುಂಬೈ ಸಂಚಾರ ಪೊಲೀಸರ ಸಹಾಯವಾಣಿಗೆ ಶನಿವಾರ ಬಂದಿದೆ.

ಸಂಕ್ಷಿಪ್ತ ಸುದ್ದಿ

ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಿದ ಸಿಕ್ಕಿಂ ವಿ.ವಿ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂ ವಿಶ್ವವಿದ್ಯಾಲಯವು ವಿದ್ಯಾರ್ಥಿನಿಯರಿಗೆ ತಿಂಗಳಿಗೆ ಒಂದು ದಿನ ಮುಟ್ಟಿನ ರಜೆ ನೀಡುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

ಡಿಸೆಂಬರ್ 4ರಂದು ವಿ.ವಿಯ ವಿದ್ಯಾರ್ಥಿ ಸಂಘಟನೆಯು ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡುವ ಕುರಿತು ಮನವಿ ಮಾಡಿತ್ತು. ಇದಕ್ಕೆ ಸ್ಪಂದಿಸಿರುವ ವಿಶ್ವವಿದ್ಯಾಲಯದ ಕುಲಸಚಿವರು, ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ದಿನಗಳನ್ನು ಹೊರತುಪಡಿಸಿ ವಿದ್ಯಾರ್ಥಿನಿಯರು ತಿಂಗಳಲ್ಲಿ ಒಂದು ದಿನ ಮುಟ್ಟಿನ ರಜೆ ತೆಗೆದುಕೊಳ್ಳಬಹುದು. ಆದರೆ ಪರೀಕ್ಷೆಗೆ ಹಾಜರಾಗಲು ಶೇ75ರಷ್ಟು ಹಾಜರಾತಿ ಇರಲೇಬೇಕಾಗುತ್ತದೆ ಎಂದು ವಿ.ವಿ ತಿಳಿಸಿದೆ.

ನಕ್ಸಲರಿಂದ ಅಂಗನವಾಡಿ ಸಹಾಯಕಿ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಅಂಗನವಾಡಿಯ ಸಹಾಯಕಿ ಲಕ್ಷ್ಮಿ ಪದಮ್ (45) ಎಂಬವರನ್ನು ನಕ್ಸಲರು ಹತ್ಯೆ ಮಾಡಿದ್ದಾರೆ. ಮಹಿಳೆಯು ನಕ್ಸಲರ ಚಲನವಲನ ಕುರಿತು ಪೊಲೀಸರಿಗೆ ಮಾಹಿತಿ ನೀಡುತ್ತಿದ್ದರು ಎಂಬ ಅನುಮಾನದಿಂದ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ತಿಮಾಪುರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಏಕಾಏಕಿ ಲಕ್ಷ್ಮಿ ಅವರ ಮನೆಗೆ ನುಗ್ಗಿದ ನಕ್ಸಲರು, ಅವರ ಮನೆ ಮಂದಿಯ ಎದುರೇ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ. ಬಳಿಕ ಮೃತದೇಹವನ್ನು ಮನೆಯ ಅಂಗಳದಲ್ಲಿ ಎಸೆದು ಪರಾರಿಯಾಗಿದ್ದಾರೆ. ಸ್ಥಳದಲ್ಲಿ ನಕ್ಸಲರ ಪತ್ರವೊಂದು ದೊರೆತಿದ್ದು, ಇದರಲ್ಲಿ ‘ಮಹಿಳೆಯು ಪೊಲೀಸರಿಗೆ ಮಾಹಿತಿ ನೀಡುವಂತೆ ವರ್ತಿಸುತ್ತಿದ್ದಾರೆ’ ಎಂದು ಹತ್ಯೆಗೆ ಕಾರಣ ತಿಳಿಸಲಾಗಿದೆ. ಸ್ಥಳದಲ್ಲಿ ನಕ್ಸಲರ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಹತ್ಯೆಯೂ ಸೇರಿದಂತೆ, 7 ಜಿಲ್ಲೆಗಳನ್ನು ಒಳಗೊಂಡಿರುವ ರಾಜ್ಯದ ಬಸ್ತಾರ್ ಪ್ರದೇಶದಲ್ಲಿ ಈ ವರ್ಷ ನಕ್ಸಲರು ಒಟ್ಟು 60 ಮಂದಿಯನ್ನು ಹತ್ಯೆ ಮಾಡಿದ್ದಾರೆ.

ಕೆ.ವಿ.ಗಳಿಗೆ ಒಪ್ಪಿಗೆ: ಮೋದಿ ಸಂತಸ

ನವದೆಹಲಿ (ಪಿಟಿಐ): ದೇಶದಾದ್ಯಂತ ಹೊಸದಾಗಿ 85 ಕೇಂದ್ರೀಯ ವಿದ್ಯಾಲಯಗಳನ್ನು ಆರಂಭಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದ ಕುರಿತು ಪ್ರಧಾನಿ ನರೇಂದ್ರ ಮೋದಿ ಶನಿವಾರ ಸಂತಸ ಹಂಚಿಕೊಂಡಿದ್ದಾರೆ.



‘ನಮ್ಮ ಸರ್ಕಾರದ ಈ ಹೆಜ್ಜೆಯು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳಿಗೆ ಉಪಕಾರಿಯಾಗಲಿದೆ. ಜೊತೆಗೆ, ಇದರಿಂದಾಗಿ ಉದ್ಯೋಗಾವಕಾಶವು ಏರಿಕೆಯಾಗಲಿದೆ’ ಎಂದು ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಸಮಾಜದ ಎಲ್ಲ ವರ್ಗದ ಜನರಿಗೂ ಶಾಲಾ ಶಿಕ್ಷಣ ದೊರೆಯುವಂತೆ ಮಾಡಲು ಸರ್ಕಾರ ಬದ್ಧವಾಗಿದೆ’ ಎಂದೂ ಹೇಳಿದ್ದಾರೆ.

ಸಿಎಪಿಎಫ್: 5 ವರ್ಷಗಳಲ್ಲಿ 730 ಸಿಬ್ಬಂದಿ ಆತ್ಮಹತ್ಯೆ

55,555 ಸ್ವಯಂ ನಿವೃತ್ತಿ ಅಥವಾ ರಾಜೀನಾಮೆ ನೀಡಿದ ಸಿಬ್ಬಂದಿಯ ಒಟ್ಟು ಸಂಖ್ಯೆ

47,891 ಸ್ವಯಂ ನಿವೃತ್ತಿ ಪಡೆದ ಸಿಬ್ಬಂದಿ ಸಂಖ್ಯೆ


7,664 ರಾಜೀನಾಮೆ ನೀಡಿದ ಸಿಬ್ಬಂದಿ ಸಂಖ್ಯೆ


ಕಳೆದ ಐದು ವರ್ಷಗಳಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ (ಸಿಎಪಿಎಫ್) ಸುಮಾರು 730 ಸಿಬ್ಬಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜೊತೆಗೆ, 55 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದಾರೆ ಅಥವಾ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎನ್ನುವ ಮಾಹಿತಿಯನ್ನು ಕೇಂದ್ರ ಗೃಹಸಚಿವಾಲಯವು ರಾಜ್ಯಸಭೆಗೆ ನೀಡಿದೆ. ಈ ಬಗ್ಗೆ ರಾಜಸ್ಥಾನದ ಕಾಂಗ್ರೆಸ್ ಸಂಸದ ಮುಕುಲ್ ಬಾಲಕೃಷ್ಣ ವಾಸ್ನಿಕ್ ಅವರು ಕೇಳಿದ ಪ್ರಶ್ನೆಗೆ ಸಚಿವಾಲಯ ಉತ್ತರಿಸಿದೆ. ‘ಸುದೀರ್ಘ ಕೆಲಸದ ಅವಧಿ, ನಿಯಮಿತವಾಗಿ ವಾರದ ರಜೆ ನೀಡದಿರುವ ಕಾರಣಗಳಿಂದ ಈ ಪಡೆಗಳಲ್ಲಿ ಸ್ವಯಂ ನಿವೃತ್ತಿ, ರಾಜೀನಾಮೆ ಹಾಗೂ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆಯೇ? ಮತ್ತು ಇವೇ ಕಾರಣಗಳಿಂದ ಈ ಪಡೆಗಳಲ್ಲಿನ ಸಿಬ್ಬಂದಿಯಲ್ಲಿ ಕಾರ್ಯಕ್ಷಮತೆ ಕಡಿಮೆ ಆಗಿದೆಯೇ’ ಎಂದು ವಾಸ್ನಿಕ್ ಅವರು ಪ್ರಶ್ನೆ ಕೇಳಿದ್ದರು.

730 ಕಳೆದ 5 ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಸಿಬ್ಬಂದಿ ಸಂಖ್ಯೆ

ಸಿಎಪಿಎಫ್ ಅಂದರೆ ಯಾವುದು?

- ಅಸ್ಸಾಂ ರೈಫಲ್ಸ್ (ಎಆರ್)
- ಗಡಿ ಭದ್ರತಾ ಪಡೆ (ಬಿಎಸ್‌ಎಫ್)
- ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್)
- ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್)
- ಇಂಡೊ–ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ)
- ರಾಷ್ಟ್ರೀಯ ಭದ್ರತಾ ಕಾವಲುಪಡೆ (ಎನ್‌ಎಸ್‌ಜಿ)
- ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ)






ಆಧಾರ: ಕೇಂದ್ರ ಗೃಹ ಸಚಿವಾಲಯ ರಾಜ್ಯಸಭೆಗೆ ನೀಡಿದ ಉತ್ತರ

ಗೃಹ ಸಚಿವಾಲಯ ಉತ್ತರಿಸಿದ್ದು...

- ಪಾರದರ್ಶಕ, ನ್ಯಾಯಯುತ ರಜೆ ವ್ಯವಸ್ಥೆಯನ್ನು ಜಾರಿ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕಠಿಣ/ಸವಾಲಿನ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಿದ್ದರೆ ಅಂಥವರ ಮುಂದಿನ ನಿಯೋಜನೆಯನ್ನು ಅವರ ಇಚ್ಛೆ ಅನುಸಾರವೇ ಮಾಡಲಾಗುವುದು
- ನಿಯಮಿತ ವಿರಾಮ ಸಮಯ ಹಾಗೂ ಕೆಲಸದ ಅವಧಿ ಕಡಿತಕ್ಕೆ ಕ್ರಮ ಕೈಗೊಳ್ಳಲಾಗಿದೆ
- ಮನರಂಜನೆ, ಕ್ರೀಡೆ ಸೇರಿದಂತೆ ಹಲವು ಚಟುವಟಿಕೆಗಳ ಮೂಲಕ ಸಿಬ್ಬಂದಿಯ ಒತ್ತಡ ನಿವಾರಣೆಗೆ ಕ್ರಮ. ಜೊತೆಗೆ ‘ಆರ್ಟ್ ಆಫ್ ಲೀವಿಂಗ್’ ಕೋರ್ಸ್‌ಗಳ ಆಯೋಜನೆ. ಮಹಿಳಾ ಸಿಬ್ಬಂದಿ ಮಕ್ಕಳಿಗಾಗಿ ಶಿಶುವಿಹಾರಗಳ ಸ್ಥಾಪನೆ



ಮಹದೇವ್ ಆ್ಯಪ್ ಬೆಟ್ಟಿಂಗ್ : ₹388 ಕೋಟಿ ಆಸ್ತಿ ಮುಟ್ಟುಗೋಲು

ನವದೆಹಲಿ(ಪಿಟಿಐ): ಮಹದೇವ್ ಆನ್‌ಲೈನ್ ಗೇಮಿಂಗ್ ಹಾಗೂ ಬೆಟ್ಟಿಂಗ್ ಆ್ಯಪ್ ಹಗರಣದಲ್ಲಿ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ) ಹೊಸದಾಗಿ ₹388 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಈ ಪ್ರಕರಣದಲ್ಲಿ ‘ಹವಾಲಾ ಆಪರೇಟರ್’ ಎನ್ನಲಾದ, ದುಬೈನಲ್ಲಿ ನೆಲಸಿರುವ ಕೋಲ್ಕತ್ತದ ಹರಿಶಂಕರ್ ಟಿಬ್ರೇವಾಲ್ ಅವರಿಗೆ ಸೇರಿದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಟಿಬ್ರೇವಾಲ್ ವಿರುದ್ಧ ತನಿಖೆ ನಡೆಸುತ್ತಿರುವ ಇ.ಡಿ, ಈವರೆಗೆ ಪ್ರಕರಣಕ್ಕೆ ಸಂಬಂಧಿಸಿ ಹಲವು ಮಂದಿಗೆ ಸೇರಿದ ಸುಮಾರು ₹ 2,295.61 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡಂತಾಗಿದೆ.

ಟಿಬ್ರೇವಾಲ್‌ಗೆ ಸಂಬಂಧಿಸಿದ ಮಾರಿಷಸ್ ಮೂಲದ ಕಂಪನಿ ಟನೋ ಇನ್ವೆಸ್ಟ್‌ಮೆಂಟ್ ಆಪರ್ಚುನಿಟೀಸ್ ಮೂಲಕ ಛತ್ತೀಸಗಢ, ಮುಂಬೈ ಮತ್ತು ಮಧ್ಯಪ್ರದೇಶದಲ್ಲಿ ಪ್ರವರ್ತಕರ ಹೆಸರಿನಲ್ಲಿ ಅನೇಕ ಬೆಟ್ಟಿಂಗ್ ಅಪ್ಲಿಕೇಷನ್‌ಗಳು, ವೆಬ್‌ಸೈಟ್‌ಗಳು, ಪ್ಯಾನಲ್ ಆಪರೇಟರ್‌ಗಳು ಮತ್ತು ಪ್ರವರ್ತಕರ ಸಹವರ್ತಿಗಳ ಹೆಸರಿನಲ್ಲಿ ಹೂಡಿಕೆ ಮಾಡಲಾಗಿದೆ. ಇವುಗಳಿಗೆ ಸಂಬಂಧಿಸಿದ ಚರ ಆಸ್ತಿಗಳು ಸೇರಿ ಒಟ್ಟು ₹387.99 ಕೋಟಿ ಮೌಲ್ಯದ ಆಸ್ತಿಯನ್ನು ಡಿ.5ರಂದು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ತಾತ್ಕಾಲಿಕ ಆದೇಶ ಹೊರಡಿಸಿ, ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ತಿಳಿಸಿದೆ.

ಛತ್ತೀಸಗಢದ ಪ್ರಭಾವಿ ರಾಜಕಾರಣಿಗಳು ಹಾಗೂ ಸರ್ಕಾರದ ಉನ್ನತ ಅಧಿಕಾರಿಗಳು ಈ ಹಗರಣದಲ್ಲಿ ಶಾಮೀಲಾಗಿದ್ದಾರೆ. ಪ್ರಕರಣ ಸಂಬಂಧ 11 ಮಂದಿಯನ್ನು ಬಂಧಿಸಿ, ನಾಲ್ಕು ಆರೋಪಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದು ಅದು ಹೇಳಿದೆ.

ಮಹದೇವ್ ಆ್ಯಪ್ ಪ್ರವರ್ತಕರೊಂದಿಗೆ ಪಾಲುದಾರಿಕೆ ಜೊತೆಗೆ, ‘ಸ್ಕೈ ಎಕ್ಸ್‌ಚೇಂಜ್’ ಎಂಬ ಅಕ್ರಮ ಬೆಟ್ಟಿಂಗ್ ಆ್ಯಪ್ ಮಾಲೀಕತ್ವ ಹೊಂದಿದ್ದ ಹರಿಶಂಕರ್ ಟಿಬ್ರೇವಾಲ್, ಇದರ ಕಾರ್ಯಾಚರಣೆ ನಡೆಸುತ್ತಿದ್ದ ಎಂದು ಇ.ಡಿ ಆರೋಪಿಸಿದೆ. ಮಹದೇವ್ ಆ್ಯಪ್‌ನ ಇಬ್ಬರು ಪ್ರಮುಖ ಪ್ರವರ್ತಕರಾದ ಸೌರಭ್ ಚಂದ್ರಕರ್ ಮತ್ತು ರವಿ ಉಪ್ಪಳ್ ಛತ್ತೀಸಗಢದವರು.

ಕ್ಷಯರೋಗ: 25 ಕೋಟಿ ಜನರ ಪತ್ತೆಗೆ ಅಭಿಯಾನ ಆರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಶ್ವವನ್ನು 2030ರ ಒಳಗೆ ಕ್ಷಯರೋಗ ಮುಕ್ತ ಮಾಡಬೇಕು ಎಂದು ವಿಶ್ವಸಂಸ್ಥೆ ನಿಗದಿ ಮಾಡಿರುವ ಸುಸ್ಥಿರ ಅಭಿವೃದ್ಧಿ ಗುರಿಯನ್ನು ಭಾರತವು ಐದು ವರ್ಷಗಳ ಮೊದಲೇ ಸಾಧಿಸಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2018ರಲ್ಲಿ ಹೇಳಿದ್ದರು. 2025ರ ಅಂತ್ಯಕ್ಕೆ ಇನ್ನು ಒಂದು ವರ್ಷ ಮಾತ್ರ ಬಾಕಿ ಇರುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ಅಭಿಯಾನವೊಂದನ್ನು ಆರಂಭಿಸಿದೆ.

ಕ್ಷಯರೋಗ ತಗುಲುವ ಅಪಾಯ ಹೆಚ್ಚಿರುವ 25 ಕೋಟಿ ಜನರನ್ನು ಪತ್ತೆ ಮಾಡುವ ಅಭಿಯಾನವನ್ನು ಕೇಂದ್ರ ಸರ್ಕಾರ ಶನಿವಾರ ಆರಂಭಿಸಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳೂ ಸೇರಿದಂತೆ ದೇಶದ 347 ಜಿಲ್ಲೆಗಳಲ್ಲಿ ಈ ಅಭಿಯಾನ ನಡೆಸಲು ಕೇಂದ್ರ ಮುಂದಾಗಿದೆ.

ಕ್ಷಯರೋಗ ಚಿಕಿತ್ಸೆ ಅಪೂರ್ಣಗೊಂಡವರು, ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವವರು, ಧೂಮಪಾನ ಮಾಡುವವರು, ಅಪೌಷ್ಟಿಕತೆಯಿಂದ ಬಳಲುತ್ತಿರುವವರು, 60 ವರ್ಷ ಮೇಲ್ಪಟ್ಟವರು, ಎಚ್‌ಐವಿ ಸೋಂಕಿ ತರು ಈ 25 ಕೋಟಿ ಜನರಲ್ಲಿ ಸೇರಿ ದ್ದಾರೆ. ಇವರನ್ನು ಪತ್ತೆ ಹಚ್ಚಿ, ಚಿಕಿತ್ಸೆ ಕೊಡಿಸುವುದು ಈ ಅಭಿಯಾನದ ಉದ್ದೇಶ. ಇದಕ್ಕಾಗಿ ಚಿಕಿತ್ಸಾ ಉಪಕರಣಗಳು, ಕೃತಕ ಬುದ್ಧಿಮತ್ತೆ ಚಾಲಿತ ಎಕ್ಸ್‌–ರೇ ಉಪಕರಣಗಳೊಂದಿಗೆ ಸಂಚಾರಿ ಕ್ಷಯರೋಗಾಣು ಪತ್ತೆ ಪರೀಕ್ಷೆಯನ್ನು ನಡೆಸಲಾಗುತ್ತದೆ. ಮನೆ ಮನೆಗೆ ತೆರಳಿ ಅಭಿಯಾನ ನಡೆಸಲಾಗುವುದು ಎಂದು ಸಚಿವಾಲಯ ಹೇಳಿದೆ.

ಭಾರತದ ಸ್ಥಿತಿ ಏನು?

ಆರು ವರ್ಷಗಳ ಹಿಂದೆಯೇ ಸುಸ್ಥಿರ ಅಭಿವೃದ್ಧಿ ಗುರಿಯನ್ನು ತಲುಪುವ ಘೋಷಣೆ ಮಾಡಲಾಗಿತ್ತು. ಈ ಸಂಬಂಧ ಕೇಂದ್ರ ಸರ್ಕಾರ ಕೆಲವು ಕೆಲಸಗಳನ್ನು ಮಾಡಿದೆಯಾದರೂ ತಾನೇ ಹಾಕಿಕೊಂಡ ಗುರಿಗಳನ್ನು ಮುಟ್ಟುವಲ್ಲಿ ಸೂಕ್ತ ಪ್ರಮಾಣದಲ್ಲಿ ಕೆಲಸ ನಡೆಸಿಲ್ಲ ಎನ್ನುವುದು ವಿಶ್ವ ಆರೋಗ್ಯ ಸಂಸ್ಥೆಯು ಇತ್ತೀಚೆಗೆ ನೀಡಿದ ವರದಿಯಿಂದ ತಿಳಿದುಬರುತ್ತಿದೆ. ಕ್ಷಯರೋಗ ಸೋಂಕು ತಡೆಗಟ್ಟಲು ಕೇಂದ್ರ ಸರ್ಕಾರವೇ ಹಾಕಿಕೊಂಡ ಗುರಿಗಳಿಗಿಂತ ಎರಡು ಪಟ್ಟು ಹೆಚ್ಚು ಕ್ಷಯರೋಗ ಪ್ರಕರಣಗಳು ದೇಶದಲ್ಲಿ ದಾಖಲಾಗುತ್ತಿವೆ. ಇನ್ನು ಕ್ಷಯರೋಗದಿಂದ ಮೃತಪಡುತ್ತಿರುವವರ ಸಂಖ್ಯೆಯೂ ಮೂರು ಪಟ್ಟು ಹೆಚ್ಚಾಗಿದೆ.

- 1 ಲಕ್ಷ ಜನಸಂಖ್ಯೆಯಲ್ಲಿ ಕ್ಷಯರೋಗಕ್ಕೆ ತುತ್ತಾಗುವವರ ಸಂಖ್ಯೆಯನ್ನು 77ಕ್ಕೆ ಮಿತಿಗೊಳಿಸುವ ಗುರಿಯನ್ನು ವಿಶ್ವಸಂಸ್ಥೆ ಹಾಕಿಕೊಟ್ಟಿತ್ತು. ಆದರೆ, ಭಾರತದಲ್ಲಿ 1 ಲಕ್ಷಕ್ಕೆ 195 ಪ್ರಕರಣಗಳು ದಾಖಲಾಗುತ್ತಿವೆ
- 1 ಲಕ್ಷ ಜನಸಂಖ್ಯೆಯಲ್ಲಿ ಕ್ಷಯರೋಗದಿಂದ ಮೃತಪಡುವ ಪ್ರಕರಣಗಳ ಸಂಖ್ಯೆಯನ್ನು 6ಕ್ಕೆ ಮಿತಿಗೊಳಿಸುವ ಗುರಿಯನ್ನು ವಿಶ್ವಸಂಸ್ಥೆ ಹಾಕಿಕೊಟ್ಟಿತ್ತು. ಆದರೆ, ಭಾರತದಲ್ಲಿ 1 ಲಕ್ಷಕ್ಕೆ 22 ಪ್ರಕರಣಗಳು ದಾಖಲಾಗುತ್ತಿವೆ

ಪೂಜಾ ಸ್ಥಳ ಕಾಯ್ದೆ: ಡಿ. 12ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ – 1991’ರ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ನೇತೃತ್ವದ ಪೀಠವು ಡಿಸೆಂಬರ್ 12ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ರಾಮ ಜನ್ಮಭೂಮಿ ಹೋರಾಟವು ತೀವ್ರವಾಗಿದ್ದ ಸಂದರ್ಭದಲ್ಲಿ ಪಿ.ವಿ. ನರಸಿಂಹರಾವ್ ನೇತೃತ್ವದ ಸರ್ಕಾರವು ಈ ಕಾಯ್ದೆಯನ್ನು ರೂಪಿಸಿತ್ತು. ದೇಶದ ಧಾರ್ಮಿಕ ಸ್ಥಳಗಳ ಸ್ವರೂಪವನ್ನು 1947ರ ಆಗಸ್ಟ್ 15ರಂದು ಹೇಗಿತ್ತೋ ಅದೇ ರೀತಿಯಲ್ಲಿ ಕಾಯ್ದುಕೊಳ್ಳುವುದು ಈ ಕಾಯ್ದೆಯ ಉದ್ದೇಶ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೂ ಒಳಗೊಂಡಿರುವ ಪೀಠವು ಡಿಸೆಂಬರ್ 12ರ ಮಧ್ಯಾಹ್ನ 3.30ಕ್ಕೆ ವಿಚಾರಣೆಗೆ ಎತ್ತಿಕೊಳ್ಳುವ ಸಾಧ್ಯತೆ ಇದೆ.

ಮಸೀದಿ, ದರ್ಗಾಗಳಲ್ಲಿ ಸಮೀಕ್ಷೆ ನಡೆಸಬೇಕು ಎಂಬ ಕೋರಿಕೆ ಇರುವ ಸರಿಸುಮಾರು 20 ಅರ್ಜಿಗಳು ದೇಶದ ಹಲವೆಡೆ ಸಲ್ಲಿಕೆ ಆಗಿರುವ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವುದು ಮಹತ್ವ ಪಡೆಯುತ್ತದೆ.

‘ಇಸ್ಕಾನ್ ದೇಗುಲಕ್ಕೆ ಬೆಂಕಿ’

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿರುವ ಇಸ್ಕಾನ್ ಕೇಂದ್ರಕ್ಕೆ ಶನಿವಾರ ಮುಂಜಾನೆ ಬೆಂಕಿ ಇಡಲಾಗಿದೆ ಎಂದು ಇಸ್ಕಾನ್ ಆರೋಪಿಸಿದೆ.

ಕೋಲ್ಕತ್ತದ ಇಸ್ಕಾನ್‌ನ ಉಪಾಧ್ಯಕ್ಷ ರಾಧಾರಮಣ್ ದಾಸ್ ಅವರು,‘ಸಮುದಾಯದ ಸದಸ್ಯರು ಮತ್ತು ವೈಷ್ಣವರನ್ನು ಗುರಿಯಾಗಿಸಿ ಈ ದಾಳಿ ಮಾಡಲಾಗಿದೆ. ದೇಗುಲದ ಒಳಗೆ ನುಗ್ಗಿ ಮೂರ್ತಿಗಳನ್ನು ವಿರೂಪಗೊಳಿಸಲಾಗಿದೆ ಮತ್ತು ಅವುಗಳಿಗೆ ಬೆಂಕಿ ಹಚ್ಚಲಾಗಿದೆ’ ಎಂದು ಹೇಳಿದ್ದಾರೆ.

‘ಢಾಕಾದಲ್ಲಿರುವ ಇಸ್ಕಾನ್ ದೇಗುಲದ ಶ್ರೀ ಲಕ್ಷ್ಮಿ ನಾರಾಯಣ ಮೂರ್ತಿ ಮತ್ತು ಇತರ ವಸ್ತುಗಳು ಸಂಪೂರ್ಣವಾಗಿ ಭಸ್ಮವಾಗಿವೆ. ಶನಿವಾರ ಮುಂಜಾನೆ 2–3 ಗಂಟೆ ಸುಮಾರಿಗೆ ದುಷ್ಕರ್ಮಿಗಳು ರಾಧಾಕೃಷ್ಣ ಮತ್ತು ಶ್ರೀ ಮಹಾಭಾಗ್ಯ ಲಕ್ಷ್ಮಿ ನಾರಾಯಣ ದೇಗುಲಕ್ಕೆ ಬೆಂಕಿ ಇಟ್ಟಿದ್ದಾರೆ. ಪೆಟ್ರೋಲ್ ಅಥವಾ ಯಾವುದೋ ರಾಸಾಯನಿಕ ಬಳಸಿ ದೇಗುಲಕ್ಕೆ ಬೆಂಕಿ ಇಡಲಾಗಿದೆ’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ದಾಳಿಗಳ ಬಗ್ಗೆ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಗಮನಸೆಳೆಯುತ್ತಿರುವ ನಡುವೆಯೂ ಆಕ್ರಮಣಗಳು ಮುಂದುವರಿದಿವೆ. ಈ ಬಗ್ಗೆ ಪೊಲೀಸ್ ಮತ್ತು ಆಡಳಿತ ವ್ಯವಸ್ಥೆಯು ಬಿಗಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ದೂರಿದ್ದಾರೆ.

‘ಭಾರತದ ಇಸ್ಕಾನ್, ಬಾಂಗ್ಲಾದೇಶದಲ್ಲಿರುವ ಹಿಂದೂಗಳ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿದೆ ಹಾಗೂ ‘ತಿಲಕ’ ಇಡದಂತೆ ಮತ್ತು ಎಚ್ಚರಿಕೆಯಿಂದ ಆಚರಣೆಗಳನ್ನು ಆಚರಿಸುವಂತೆ ಭಕ್ತರು ಮತ್ತು ಅನುಯಾಯಿಗಳಿಗೆ ಕರೆ ನೀಡಿದೆ’ ಎಂದು ಅವರು ಇದಕ್ಕೂ ಮುನ್ನ ಹೇಳಿದ್ದರು.

ವಧು ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಇನ್‌ಸ್ಟಾ ಪ್ರೀತಿ: ಮೋಸ ಹೋದ ವರ!



ಚಂಡೀಗಢ (ಪಿಟಿಐ): ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿದ್ದ ಹುಡುಗಿಯನ್ನು ಒಂದು ಬಾರಿಯೂ ನೋಡದೆ ನೇರವಾಗಿ ಮದುವೆಯಾಗಲು ಜಲಂಧರ್‌ನಿಂದ ದಿಬ್ಬಣದ ಜತೆ ಬಂದಿದ್ದ ವರ, ವಧು ಸಿಗದೆ, ಮಂಟಪವೂ ಸಿಗದೆ ಕಾದು ಕಾದು ಮನೆಗೆ ವಾಪಸಾದ ಘಟನೆ ನಡೆದಿದೆ.

ದೀಪಕ್ ಕುಮಾರ್ ಮದುವೆಗೆ ಸಿದ್ಧವಾಗಿ ಬಂದಿದ್ದ ವರ. ಇವರು ದುಬೈನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿದ್ದ ಮನ್‌ಪ್ರೀತ್ ಕೌರ್ ಜೊತೆ ಕಳೆದ ಮೂರು ವರ್ಷಗಳಿಂದ ಮಾತನಾಡುತ್ತಿದ್ದರು. ನೇರವಾಗಿ ಒಬ್ಬರನ್ನೊಬ್ಬರು ಭೇಟಿ ಮಾಡಿರಲಿಲ್ಲ. ಈ ಮಧ್ಯೆ ಇಬ್ಬರ ಪೋಷಕರು ಫೋನ್ ಮೂಲಕ ಮಾತುಕತೆ ನಡೆಸಿ ಮದುವೆ ನಿಶ್ಚಯ ಮಾಡಿದ್ದರು. ಹೀಗಾಗಿ ದೀಪಕ್ ಒಂದು ತಿಂಗಳ ಹಿಂದೆ ದುಬೈನಿಂದ ಜಲಂಧರ್‌ಗೆ ಬಂದಿದ್ದರು.

ಮುಖ್ಯಾಂಶಗಳು

- ಮದುವೆಗಾಗಿ ದುಬೈನಿಂದ ಜಲಂಧರ್‌ಗೆ ಬಂದಿದ್ದ ದೀಪಕ್
- ₹50 ಸಾವಿರ ನೀಡಿದ್ದ ವರ

ದೀಪಕ್ ಮತ್ತು ಅವರ ಕುಟುಂಬದ 150 ಮಂದಿ ಜಲಂಧರ್‌ನ ಮಂಡಯಾಲಿ ಗ್ರಾಮದಿಂದ ಪಂಜಾಬ್‌ನ ಮೋಗಾ ಜಿಲ್ಲೆಗೆ ದಿಬ್ಬಣದೊಂದಿಗೆ ಬಂದಿದ್ದರು. ‘ಇಲ್ಲಿಗೆ ಬಂದಿಳಿದ ನಂತರ ನಮ್ಮ ಕಡೆಯವರು ‘ರೋಸ್ ಗಾರ್ಡನ್ ಪ್ಯಾಲೆಸ್’ ಕಲ್ಯಾಣ ಮಂಟಪಕ್ಕೆ ಕರೆದುಕೊಂಡು ಬರುತ್ತಾರೆ’ ಎಂದು ವಧು ಕೌರ್ ತಿಳಿಸಿದ್ದರು. ಆದರೆ, ದೀಪಕ್ ಅವರು ಮೋಗಾಕ್ಕೆ ಬಂದಿಳಿದು ಸಂಜೆ 5 ಗಂಟೆವರೆಗೆ ಕಾದರೂ ವಧುವಿನ ಕಡೆಯವರು ಯಾರೂ ಬರಲಿಲ್ಲ. ಕಲ್ಯಾಣ ಮಂಟಪದ ಹೆಸರು ಹೇಳಿ ಸ್ಥಳೀಯರನ್ನು ವಿಚಾರಿಸಿದಾಗ ಮೋಗಾದಲ್ಲಿ ಈ ಹೆಸರಿನ ಯಾವುದೇ ಕಲ್ಯಾಣ ಮಂಟಪ ಇಲ್ಲ ಎಂದು ತಿಳಿಸಿದರು. ನಂತರ ದೀಪಕ್ ಪೊಲೀಸ್ ಠಾಣೆಯಲ್ಲಿ ಕೌರ್ ವಿರುದ್ಧ ದೂರು ನೀಡಿದ್ದಾರೆ ಪೊಲೀಸರು ತಿಳಿಸಿದ್ದಾರೆ.

ಕೌರ್‌ಗೆ ₹50,000 ಹಣವನ್ನು ನೀಡಿರುವುದಾಗಿ ದೀಪಕ್ ತಿಳಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಪರಿವಾರದ 150 ಮಂದಿ ಜೊತೆಗೆ ಮದುವೆಗೆ ಬಂದಿದ್ದೇವೆ. ಅತಿಥಿಗಳಿಗೂ ಆಹ್ವಾನ ನೀಡಿದ್ದೆವು, ಅಡುಗೆಯವರು ಮತ್ತು ವಿಡಿಯೊಗ್ರಾಫರ್‌ಗಳಿಗೂ ಹೇಳಿದ್ದೆವು’ ಎಂದು ದೀಪಕ್ ತಂದೆ ಪ್ರೇಮ್ ಚಂದ್ ಹೇಳಿದ್ದಾರೆ.

ವಧು ಅಥವಾ ಅವರ ಕುಟುಂಬಸ್ಥರು ಸಂಪರ್ಕಕ್ಕೆ ಸಿಗದ ನಂತರ ದೀಪಕ್ ಕುಮಾರ್ ದೂರು ದಾಖಲಿಸಿದ್ದು ತನಿಖೆ ನಡೆಯುತ್ತಿದೆ ಎಂದು ಮೋಗಾದ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಹರ್ಜಿಂದರ್ ಸಿಂಗ್ ತಿಳಿಸಿದ್ದಾರೆ.

ಬಿಜೆಪಿ ಆರೋಪ ಅಲ್ಲಗಳೆದ ಅಮೆರಿಕ

ನವದೆಹಲಿ (ಪಿಟಿಐ): ಅಮೆರಿಕದ ವಿದೇಶಾಂಗ ಸಚಿವಾಲಯದಿಂದ ದೇಣಿಗೆ ಪಡೆಯುವ ಸಂಘಟನೆಗಳು ಹಾಗೂ ಅಮೆರಿಕದಲ್ಲಿ ಸರ್ಕಾರದ ಹೊರತಾಗಿದ್ದೂ ಅಧಿಕಾರದ ಮೇಲೆ ನಿಯಂತ್ರಣ ಇರುವ ಕೂಟಗಳು ಪ್ರಧಾನಿ ನರೇಂದ್ರ ಮೋದಿ ಮತ್ತು ಉದ್ಯಮಿ ಗೌತಮ್ ಅದಾನಿ ಅವರನ್ನು ಗುರಿಯಾಗಿಸಿಕೊಂಡು, ಭಾರತದಲ್ಲಿ ಅಸ್ಥಿರತೆ ಮೂಡಿಸುವ ಯತ್ನಗಳ ಹಿಂದೆ ಇವೆ ಎಂದು ಬಿಜೆಪಿ ಮಾಡಿರುವ ಆರೋಪವನ್ನು ಅಮೆರಿಕ ಶನಿವಾರ ಅಲ್ಲಗಳೆದಿದೆ.

ಆರೋಪಗಳು ‘ಬೇಸರ ತರಿಸುವಂತಿವೆ’ ಎಂದು ಇಲ್ಲಿನ ಅಮೆರಿಕ ರಾಯಭಾರ ಕಚೇರಿಯ ವಕ್ತಾರರೊಬ್ಬರು ಹೇಳಿದ್ದಾರೆ. ಅಮೆರಿಕದ ಸರ್ಕಾರವು ವಿಶ್ವದ ಎಲ್ಲೆಡೆ ಮಾಧ್ಯಮ ಸ್ವಾತಂತ್ರ್ಯಕ್ಕೆ ಬೆಂಬಲ ನೀಡುತ್ತ ಬಂದಿದೆ ಎಂದು ಅವರು ಹೇಳಿದ್ದಾರೆ.

ಅಮೆರಿಕದಲ್ಲಿ ಸರ್ಕಾರದ ಹೊರತಾಗಿದ್ದೂ ಅಧಿಕಾರದ ಮೇಲೆ ನಿಯಂತ್ರಣ ಇರುವ ಕೂಟಗಳು (ಡೀಪ್ ಸ್ಟೇಟ್) ಭಾರತದ ಪ್ರತಿಷ್ಠೆಗೆ ಧಕ್ಕೆ ತರಲು, ಒಸಿಸಿಆರ್‌ಪಿ (ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿಗಾರಿಕೆ ಯೋಜನೆ) ಮಾಧ್ಯಮ ಪೋರ್ಟಲ್ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಜೊತೆ ಕೈಜೋಡಿಸಿವೆ ಎಂದು ಬಿಜೆಪಿಯು ಗುರುವಾರ ಆರೋಪಿಸಿದೆ.

ಒಸಿಸಿಆರ್‌ಪಿ ವರದಿಗಳನ್ನು ಬಳಸಿ ರಾಹುಲ್ ಅವರು ಅದಾನಿ ಸಮೂಹದ ಮೇಲೆ ವಾಗ್ದಾಳಿ ನಡೆಸುವುದನ್ನು, ಸಮೂಹವು ಕೇಂದ್ರ ಸರ್ಕಾರಕ್ಕೆ ಹತ್ತಿರವಾಗಿದೆ ಎಂದು ಆರೋಪಿಸುವುದನ್ನು ಬಿಜೆಪಿಯು ಉಲ್ಲೇಖಿಸಿತ್ತು.

‘ಕಾನೂನು ಸುವ್ಯವಸ್ಥೆ: ರಾಜಕೀಯ ಬೇಡ’

ನವದೆಹಲಿ (ಪಿಟಿಐ): ದೆಹಲಿಯಲ್ಲಿನ ಕಾನೂನು ಸುವ್ಯವಸ್ಥೆ ವಿಷಯವನ್ನು ರಾಜಕೀಯಗೊಳಿಸುವುದರ ಬದಲು, ಜನರ ಸುರಕ್ಷತೆ ಖಾತ್ರಿಪಡಿಸುವತ್ತ ಗಮನಹರಿಸಿ ಎಂದು ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಕೇಂದ್ರ ಸರ್ಕಾರಕ್ಕೆ ತಿರುಗೇಟು ನೀಡಿದ್ದಾರೆ.



ಅರವಿಂದ ಕೇಜ್ರಿವಾಲ್

ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕೇಜ್ರಿವಾಲ್ ವಾಗ್ದಾಳಿ ನಡೆಸಿದ್ದಾರೆ.

ಮುಂಜಾನೆ ವಾಯುವಿಹಾರ ಮಾಡುತ್ತಿದ್ದ ಉದ್ಯಮಿಗೆ ಗುಂಡಿಕ್ಕಿ ಹತ್ಯೆ, ಪಂಚಶೀಲ ಎನ್‌ಕ್ಲೇವ್‌ನಲ್ಲಿ ಹಿರಿಯ ನಾಗರಿಕರೊಬ್ಬರ ಕೊಲೆ, ಸುಲಿಗೆಗಾಗಿ ಬೆದರಿಕೆ ಕರೆಗಳು ಹೆಚ್ಚುತ್ತಿರುವುದರ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ತೊಗರಿ ಇಳುವರಿ ತೀವ್ರ ಕುಸಿತ

ವಿಜಯಪುರ ಜಿಲ್ಲೆಯಲ್ಲಿ ₹4 ಸಾವಿರ ಕೋಟಿ ನಷ್ಟ: ಬೆಳೆಗಾರರು ಕಂಗಾಲು

● ಬಸವರಾಜ್ ಸಂಪಳ್ಳಿ



ವಿಜಯಪುರ ಜಿಲ್ಲೆಯ ನಾಲತವಾಡ ಗ್ರಾಮದಲ್ಲಿ ರೈತರು ಕಟಾವು ಮಾಡಿ ರಾಶಿ ಹಾಕಿರುವ ತೊಗರಿ ಗಿಡ ಪ್ರಜಾವಾಣಿ ಚಿತ್ರ

ವಿಜಯಪುರ: ಹವಾಮಾನ ವೈಪರೀತ್ಯ, ಕಳಪೆ ಬಿತ್ತನೆ ಬೀಜದಿಂದಾಗಿ ಜಿಲ್ಲೆಯಲ್ಲಿ ಈ ವರ್ಷ ತೊಗರಿ ಇಳುವರಿಯು ಶೇ 80ಕ್ಕೂ ಹೆಚ್ಚು ಕುಂಠಿತವಾಗಿದ್ದು, ರೈತರಿಗೆ ₹4 ಸಾವಿರ ಕೋಟಿ ಬೆಳೆ ನಷ್ಟವಾಗಿದೆ.

ಇಂಡಿ, ಸಿಂದಗಿ, ಆಲಮೇಲ, ದೇವರಹಿಪ್ಪರಗಿ, ಮುದ್ದೇಬಿಹಾಳ, ತಾಳಿಕೋಟೆ ಮತ್ತು ವಿಜಯಪುರ ತಾಲ್ಲೂಕು ಸೇರಿ ಜಿಲ್ಲೆಯಲ್ಲಿ 5.34 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆ ಮಾಡಲಾಗಿತ್ತು. ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ರೈತರಿಗೆ ಇಳುವರಿ ಕುಸಿತವು ಆತಂಕ ಮೂಡಿಸಿದೆ.

‘ಎಕರೆಗೆ 7 ಕ್ವಿಂಟಲ್ ಇಳುವರಿ ನಿರೀಕ್ಷೆ ಇತ್ತು. ಆದರೆ, ದಟ್ಟ ಮಂಜು ಆವರಿಸಿದ್ದರಿಂದ ಮತ್ತು ಅಕ್ಟೋಬರ್–ನವೆಂಬರ್‌ನಲ್ಲಿ ಹೂವು–ಕಾಯಿ ಕಟ್ಟುವಾಗ ತೇವಾಂಶ ಕೊರತೆಯಾಗಿ ಹೂವು ಉದುರಿದೆ. ಎಕರೆಗೆ ಮೂರು ಕ್ವಿಂಟಲ್‌ವರೆಗೆ ಮಾತ್ರ ಇಳುವರಿ ಬಂದಿದೆ. ಮಾಡಿದ ಖರ್ಚು ಸಿಗದೇ ದಿಕ್ಕು ತೋಚದಂತಾಗಿದೆ’ ಎಂದು ನಾಲತವಾಡದ ರೈತ ಅಮರಪ್ಪ ಚಳಗೇರಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕೃಷಿ ವಿಜ್ಞಾನಿಗಳಿಂದ ಅಧ್ಯಯನ: ಜಿಲ್ಲೆಯಲ್ಲಿ ಅಪಾರ ಪ್ರಮಾಣದಲ್ಲಿ ತೊಗರಿ ಇಳುವರಿ ನಷ್ಟವಾಗಿದ್ದಕ್ಕೆ ಕಾರಣ ತಿಳಿಯಲು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವು ಜಿಲ್ಲೆಯ ರೈತರ ಹೊಲಗಳಿಗೆ ಭೇಟಿ ನೀಡಿ, ತಾಂತ್ರಿಕ ವರದಿ ಸಿದ್ಧಪಡಿಸಿದೆ.

‘ತೊಗರಿ ಹೂವಾಡುವ ಹಂತದಲ್ಲಿ ಮಂಜಿನ ವಾತಾವರಣ ಇದ್ದ ಕಾರಣ ಹೂವುಗಳು ಉದುರಿ, ಕಾಯಿಗಳು ಕಡಿಮೆ ಆಗಿವೆ. ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗಿದ್ದರಿಂದ ತೇವಾಂಶ ಹೆಚ್ಚಾಗಿ ಎಲೆಗಳು ಉದುರಿ, ದ್ಯುತಿ ಸಂಶ್ಲೇಷಣಾ ಕ್ರಿಯೆಗೆ ತೊಡಕಾಗಿದೆ. ನಿರೀಕ್ಷಿಸಿದ ಪ್ರಮಾಣದಲ್ಲಿ ಹೂವುಗಳ ಬೆಳವಣಿಗೆ ಆಗಿಲ್ಲ’ ಎಂದು ಕೃಷಿ ವಿಜ್ಞಾನಿಗಳು ತಿಳಿಸಿದ್ದಾರೆ.

‘ರೈತರು ಬಿತ್ತನೆ ಮಾಡಿದ ಜಿ.ಆರ್.ಜಿ 152, ಜಿ.ಆರ್.ಜಿ 811 ಮತ್ತು ಟಿ.ಎಸ್. 3ಆರ್ ತೊಗರಿ ತಳಿಗಳಿಗೆ ಎಲೆ ಚುಕ್ಕೆ ರೋಗ ಮತ್ತು ಅಂಗಮಾರಿ ಗೊಡ್ಡು ರೋಗ ತಗುಲಿದ್ದು, ಇಳುವರಿ ಕುಂಠಿತವಾಗಿದೆ’ ಎಂದು ಹೇಳಿದ್ದಾರೆ.

ಬಹುತೇಕ ರೈತರು ತೊಗರಿಯನ್ನು ಗಿಡದಿಂದ ಗಿಡಕ್ಕೆ ದಟ್ಟವಾಗಿ ಬಿತ್ತಿದ್ದಾರೆ. ಯಾವುದೇ ಕವಲುಗಳಿಲ್ಲದೆ ಎತ್ತರಕ್ಕೆ ಬೆಳೆದು, ಎಲೆಗಳು ಸಂಪೂರ್ಣವಾಗಿ ಉದುರಿವೆ’ ಎಂದು ವಿವರಿಸಿದ್ದಾರೆ.


> ಜಿಲ್ಲೆಯಲ್ಲಿ ತೊಗರಿ ಕೊಯ್ಲು ಒಂದೆರಡು ವಾರಗಳಲ್ಲಿ ಮುಗಿಯಲಿದೆ. ಆದರೆ, ಸರ್ಕಾರ ಈವರೆಗೆ ಬೆಳೆ ನಷ್ಟ ಸಮೀಕ್ಷೆಗೆ ಮುಂದಾಗಿಲ್ಲ
> **ಎ.ಎಸ್. ಪಾಟೀಲ ನಡಹಳ್ಳಿ**, ಅಧ್ಯಕ್ಷ, ಬಿಜೆಪಿ ರಾಜ್ಯ ರೈತ ಮೋರ್ಚಾ

> ತೊಗರಿ ಬೆಳೆಗೆ ವಿಮೆ ಮಾಡಿಸಿದ ರೈತರಿಗೆ 1 ಎಕರೆಗೆ ₹20 ಸಾವಿರ ಪರಿಹಾರ ನೀಡಬೇಕು. ವಿಮೆ ಮಾಡಿಸದ ರೈತರಿಗೂ ಪರಿಹಾರ ನೀಡಬೇಕು
> **ಅಮರಪ್ಪ ಚಳಗೇರಿ**, ತೊಗರಿ ಬೆಳೆಗಾರ, ನಾಲತವಾಡ

> ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈಗಾಗಲೇ ಕ್ಷೇತ್ರ ಸಮೀಕ್ಷೆ ಮಾಡಿ ವರದಿ ನೀಡಿದ್ದು, ಸರ್ಕಾರಕ್ಕೆ ಸಲ್ಲಿಸಿದ್ದೇವೆ
> **ರೂಪಾ ಎಲ್.**, ಜಂಟಿ ನಿರ್ದೇಶಕಿ ಕೃಷಿ ಇಲಾಖೆ, ವಿಜಯಪುರ

> ಜಿಲ್ಲೆಯಲ್ಲಿ ತೊಗರಿ ಬೆಳೆ ನಷ್ಟವಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡಬೇಕು. ಈ ಬಗ್ಗೆ ಅಧಿವೇಶನದಲ್ಲಿ ರೈತರ ಪರ ಧ್ವನಿ ಎತ್ತುತ್ತೇನೆ
> **ಯಶವಂತರಾಯಗೌಡ ಪಾಟೀಲ**, ಶಾಸಕ, ಇಂಡಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹635
12 ಕ್ಕೆ ₹82
ಮೈಸೂರು
100ಕ್ಕೆ ₹637

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹250-596
ದ್ವಿತಳಿ (ಬಿ.ವಿ) ₹233-778

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹192
ಆರ್‌ಎಸ್‌ಎಸ್-5 ₹186
ಗುಡ್ ಲಾಟ್ ₹181
(ಪ್ರತಿ ಕೆ.ಜಿಗೆ)

ಪಿಎಂ–ಕಿಸಾನ್ ಹಣ ದ್ವಿಗುಣಗೊಳಿಸಲು ಕೇಂದ್ರಕ್ಕೆ ರೈತರ ಮನವಿ

ಅಗ್ಗದ ಕೃಷಿ ಸಾಲಕ್ಕೆ ಬೇಡಿಕೆ



ನವದೆಹಲಿಯಲ್ಲಿ ಶನಿವಾರ ರೈತ ಸಂಘಟನೆಗಳು ಮತ್ತು ಕೃಷಿ ಅರ್ಥಶಾಸ್ತ್ರಜ್ಞರ ಜೊತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ರೈತರಿಗೆ ದೀರ್ಘಾವಧಿವರೆಗೆ ಅಗ್ಗದ ಕೃಷಿ ಸಾಲ ಸೌಲಭ್ಯ ಕಲ್ಪಿಸಬೇಕು. ಜಿಎಸ್‌ಟಿ ದರ ಕಡಿತಗೊಳಿಸಬೇಕು. ಜೊತೆಗೆ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯಡಿ ನೀಡುತ್ತಿರುವ ಹಣವನ್ನು ದ್ವಿಗುಣಗೊಳಿಸಬೇಕು ಎಂದು ರೈತ ಸಂಘಟನೆಗಳು, ಕೇಂದ್ರ ಸರ್ಕಾರದ ಮುಂದೆ ಬೇಡಿಕೆ ಮಂಡಿಸಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ರೈತ ಸಂಘಟನೆಗಳು ಮತ್ತು ಕೃಷಿ ಅರ್ಥಶಾಸ್ತ್ರಜ್ಞರ ಜೊತೆಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಯಿತು. ಎರಡು ಗಂಟೆ ನಡೆದ ಸಭೆಯಲ್ಲಿ ದೇಶದ ಕೃಷಿ ವಲಯವು ಎದುರಿಸುತ್ತಿರುವ ಬಿಕ್ಕಟ್ಟಿನ ಬಗ್ಗೆ ಸಂಘಟನೆಗಳ ಮುಖಂಡರು ಸರ್ಕಾರದ ಗಮನ ಸೆಳೆದರು.

ಕೃಷಿ ವಲಯಕ್ಕೆ ಹೆಚ್ಚಿನ ಹಣಕಾಸಿನ ನೆರವು, ಮಾರುಕಟ್ಟೆ ಸುಧಾರಣೆ ಹಾಗೂ ಹೊಸ ಹೂಡಿಕೆಗೆ ಪೂರಕ ವಾತಾವರಣ ಕಲ್ಪಿಸಬೇಕು ಎಂದು ಬೇಡಿಕೆ ಮುಂದಿಟ್ಟರು.

ಭಾರತ ಕೃಷಿಕ ಸಮಾಜದ ಅಧ್ಯಕ್ಷ ಅಜಯ್ ವೀರ್ ಜಖರ್ ಮಾತನಾಡಿ, ‘ಕೃಷಿ ಉತ್ಪಾದಕತೆ ಹೆಚ್ಚಳ ಹಾಗೂ ಅನ್ನದಾತರ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ’ ಎಂದು ಒತ್ತಾಯಿಸಿದರು.

ಕೃಷಿ ಸಾಲದ ಮೇಲಿನ ಬಡ್ಡಿದರವನ್ನು ಕಡಿತಗೊಳಿಸಬೇಕು. ಶೇ 1ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಬೇಕು. ಪ್ರಸ್ತುತ ಪಿಎಂ–ಕಿಸಾನ್ ನಿಧಿಯಡಿ ವಾರ್ಷಿಕ ₹6 ಸಾವಿರ ನೀಡಲಾಗುತ್ತಿದೆ. ಇದನ್ನು ₹12 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಕಡಲೆ, ಸೋಯಾಬಿನ್ ಮತ್ತು ಸಾಸಿವೆ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಬೇಕಿದೆ. ಇದಕ್ಕಾಗಿ ಮುಂದಿನ ಎಂಟು ವರ್ಷಗಳವರೆಗೆ ವಾರ್ಷಿಕ ₹1 ಸಾವಿರ ಕೋಟಿ ನೀಡಬೇಕು. ಇದರಿಂದ ಈ ಕೃಷಿ ಹುಟ್ಟುವಳಿಗಳ ಇಳುವರಿ ಹೆಚ್ಚಲಿದ್ದು, ಆಮದು ಅವಲಂಬನೆ ತಗ್ಗಲಿದೆ. ದೇಶದ ಆಹಾರ ಭದ್ರತೆಗೆ ಸಹಕಾರಿಯಾಗಲಿದೆ ಎಂದರು.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಸಣ್ಣ ರೈತರಿಗೆ ಅನುಕೂಲ ಕಲ್ಪಿಸಲು ಶೂನ್ಯ ದರದಲ್ಲಿ ಬೆಳೆ ವಿಮಾ ಸೌಲಭ್ಯ ಒದಗಿಸಬೇಕು. ಕೃಷಿ ಉಪಕರಣಗಳು, ರಸಗೊಬ್ಬರ, ಬಿತ್ತನೆಬೀಜ ಮತ್ತು ಔಷಧಗಳ ಮೇಲೆ ಜಿಎಸ್‌ಟಿ ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ಕೀಟನಾಶಕ: ಜಿಎಸ್‌ಟಿ ಕಡಿತಕ್ಕೆ ಒತ್ತಾಯ

ಪಿಎಚ್‌ಡಿ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಕೃಷಿ ವ್ಯಾಪಾರ ಸಮಿತಿ) ಅಧ್ಯಕ್ಷ ಆರ್.ಜಿ. ಅಗರ್ವಾಲ್ ಮಾತನಾಡಿ, ಪ್ರಸ್ತುತ ಕೀಟನಾಶಕಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದನ್ನು ಶೇ 5ಕ್ಕೆ ತಗ್ಗಿಸಬೇಕು ಎಂದು ಕೋರಿದರು.

ದೇಶದಲ್ಲಿ ಕೀಟನಾಶಕಗಳ ಕಳ್ಳಸಾಗಣೆಯು ಹೆಚ್ಚಿದೆ. ನಕಲಿ ಕೀಟನಾಶಕಗಳ ಮಾರಾಟದ ಹಾವಳಿ ಉಲ್ಬಣಿಸಿದೆ. ಇದಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

‘ಎಂಎಸ್‌ಪಿ ಪರಿಷ್ಕರಿಸಿ’

ಭಾರತೀಯ ಕಿಸಾನ್ ಯೂನಿಯನ್ ವಕ್ತಾರ ಧರ್ಮೇಂದ್ರ ಮಲಿಕ್ ಮಾತನಾಡಿ, ‘ಭೂಮಿಯ ವೆಚ್ಚ, ಕೂಲಿ, ಕೊಯ್ಲೋತ್ತರ ವೆಚ್ಚ ಆಧರಿಸಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯನ್ನು ಪರಿಷ್ಕರಿಸಬೇಕಿದೆ’ ಎಂದು ಕೋರಿದರು.

ಕಂಪನಿಗಳು ವೆಬ್‌ಸೈಟ್‌ಗಳಲ್ಲಿ ಕೃಷಿ ಉಪಕರಣಗಳ ಬೆಲೆ ಪ್ರಕಟಿಸಬೇಕು. ಕೃಷಿ ಮಾರುಕಟ್ಟೆಗಳ ಮೂಲಸೌಕರ್ಯವನ್ನು ಉತ್ತಮಪಡಿಸಬೇಕು. ಎಲ್ಲಾ ಬೆಳೆಗಳಿಗೂ ಎಂಎಸ್‌ಪಿ ಸೌಲಭ್ಯ ವಿಸ್ತರಿಸಬೇಕು. ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಕೃಷಿ ಉತ್ಪನ್ನಗಳ ಆಮದಿಗೆ ಅವಕಾಶ ನೀಡಬಾರದು. ತುರ್ತು ಸಂದರ್ಭದಲ್ಲಷ್ಟೇ ಕನಿಷ್ಠ ರಫ್ತು ದರ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

‘ಕೈಗಾರಿಕಾ ಕಾರಿಡಾರ್ ಅಭಿವೃದ್ಧಿಗೆ ಕ್ರಮ’



ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಮತ್ತು ಆಂಧ್ರಪ್ರದೇಶ ರಾಜ್ಯ ಸರ್ಕಾರದಿಂದ ಜಂಟಿಯಾಗಿ ಹೈದರಾಬಾದ್–ಬೆಂಗಳೂರು ಕೈಗಾರಿಕಾ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, ರಾಜ್ಯಸಭೆಗೆ ತಿಳಿಸಿದ್ದಾರೆ.

2007ರಲ್ಲಿ ಈ ಕಾರಿಡಾರ್ ಘೋಷಿಸಲಾಗಿತ್ತು. 2014ರವರೆಗೂ ಘೋಷಣೆಯಾಗಿಯೇ ಉಳಿದಿತ್ತು. ಇದಕ್ಕೆ 2020ರಲ್ಲಿ ಅನುಮೋದನೆ ಸಿಕ್ಕಿದೆ. ಈ ವರ್ಷದ ಆಗಸ್ಟ್ 28ರಂದು ಇದರ ಕಾರ್ಯಗತಕ್ಕೆ ರೂಪುರೇಷೆ ಸಿದ್ಧಗೊಂಡಿದೆ ಎಂದು ತಿಳಿಸಿದ್ದಾರೆ.

ಎರಡು ಸರ್ಕಾರಗಳು ಇಪಿಸಿ (ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್, ಕಂಟ್ರಾಕ್ಟ್ ಗುತ್ತಿಗೆದಾರರು ನಿರ್ಮಾಣ ಪೂರ್ಣಗೊಳಿಸಿ ಸರ್ಕಾರಕ್ಕೆ ಹಸ್ತಾಂತರಿಸುವ ಮಾದರಿ) ಮಾದರಿಯಲ್ಲಿ ಟೆಂಡರ್ ಕರೆಯಲು ಸಿದ್ಧತೆ ನಡೆದಿದೆ ಎಂದು ಹೇಳಿದ್ದಾರೆ.

‘ಎಲ್ಲಾ ಪ್ರಕ್ರಿಯೆಯಲ್ಲೂ ಪಾರದರ್ಶಕತೆ ಕಾಯ್ದುಕೊಳ್ಳುತ್ತೇವೆ. ಆಂಧ್ರ ಸರ್ಕಾರವು ಪಾರದರ್ಶಕವಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಿದೆ. ಬಳಿಕ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು’ ಎಂದಿದ್ದಾರೆ.

ಅಲ್ಟ್ರಾಟೆಕ್ ಸಿಮೆಂಟ್‌ಗೆ ಸಿಸಿಐ ನೋಟಿಸ್

ನವದೆಹಲಿ (ಪಿಟಿಐ): ಇಂಡಿಯಾ ಸಿಮೆಂಟ್ಸ್ ಲಿಮಿಟೆಡ್‌ನ (ಐಸಿಎಲ್) ಷೇರುಗಳ ಸ್ವಾಧೀನಕ್ಕೆ ಮುಂದಾಗಿರುವ ಆದಿತ್ಯ ಬಿರ್ಲಾ ಸಮೂಹಕ್ಕೆ ಸೇರಿದ ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಗೆ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ನೋಟಿಸ್ ನೀಡಿದೆ.

ಸ್ಪರ್ಧಾತ್ಮಕ ಕಾಯ್ದೆ 2002ರ ಸೆಕ್ಷನ್ 29(1)ರ ಅನ್ವಯ ನೋಟಿಸ್ ಸ್ವೀಕರಿಸಲಾಗಿದೆ. ಆಯೋಗದ ಮುಂದೆ ಕಂಪನಿಯಿಂದ ವಿವರಣೆ ಸಲ್ಲಿಸಲಾಗುವುದು ಎಂದು ಅಲ್ಟ್ರಾಟೆಕ್ ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಪ್ರಸ್ತಾವಿತ ಹೆಚ್ಚುವರಿ ಷೇರುಗಳ ಸ್ವಾಧೀನ ಪ್ರಕ್ರಿಯೆಯು ಸಿಮೆಂಟ್ ಮಾರುಕಟ್ಟೆ ವ್ಯಾಪ್ತಿಯಲ್ಲಿ ಸಮಾನ ನೆಲೆಯಲ್ಲಿ ನಡೆಯಬೇಕಿರುವ ಸ್ಪರ್ಧೆಗೆ ಧಕ್ಕೆ ತರುವ ಸಾಧ್ಯತೆಯಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಈ ನೋಟಿಸ್ ನೀಡಲಾಗಿದೆ. ಇದಕ್ಕೆ ಉತ್ತರಿಸಲು 15 ದಿನಗಳ ಗಡುವು ನೀಡಲಾಗಿದೆ.

ದಕ್ಷಿಣ ಭಾರತದಲ್ಲಿ 35ಕ್ಕೂ ಹೆಚ್ಚು ಸಿಮೆಂಟ್ ಕಂಪನಿಗಳಿವೆ. ಈ ಪೈಕಿ ತಮಿಳುನಾಡಿನ ಐಸಿಎಲ್ ಪ್ರಮುಖ ಕಂಪನಿಯಾಗಿದೆ. ಇದರ ಪ್ರವರ್ತಕರಿಂದ ಹೆಚ್ಚುವರಿಯಾಗಿ ಶೇ 32.72ರಷ್ಟು ಷೇರುಗಳ ಸ್ವಾಧೀನಕ್ಕೆ ಅಲ್ಟ್ರಾಟೆಕ್ ಸಿಮೆಂಟ್ ಮುಂದಾಗಿದೆ.

ಸಂಕ್ಷಿಪ್ತ ಸುದ್ದಿ

ಮ್ಯೂಲ್‌ಹಂಟರ್ ಎಐ ಬಳಕೆಗೆ ಸೂಚನೆ

ನವದೆಹಲಿ (ಪಿಟಿಐ): ಡಿಜಿಟಲ್ ಹಣಕಾಸು ವಂಚನೆಗಳಿಗೆ ಕಡಿವಾಣ ಹಾಕಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಭಿವೃದ್ಧಿಪಡಿಸಿರುವ, ‘ಮ್ಯೂಲ್‌ಹಂಟರ್‌ಎಐ’ ಮಾಡೆಲ್ ಅಳವಡಿಸಿಕೊಳ್ಳಲು ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳು ಮುಂದಾಗಬೇಕಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಸೂಚಿಸಿದೆ.

ನಕಲಿ ಖಾತೆಗಳ ಪತ್ತೆ ಮತ್ತು ಅವುಗಳಿಗೆ ಕಡಿವಾಣ ಹಾಕಲು ಬ್ಯಾಂಕ್‌ಗಳು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ನಿರ್ದೇಶನ ನೀಡಿದ್ದಾರೆ.

ಜನರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ರಕ್ಷಿಸುವುದು ಬ್ಯಾಂಕ್‌ಗಳ ಹೊಣೆ. ಈ ನಿಟ್ಟಿನಲ್ಲಿ ತಂತ್ರಜ್ಞಾನ ಬಳಸಿಕೊಳ್ಳಬೇಕಿದೆ. ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಅಳವಡಿಕೆಯಿಂದ ಸಕಾಲದಲ್ಲಿ ನಕಲಿ ಖಾತೆಗಳನ್ನು ಪತ್ತೆ ಹಚ್ಚಬಹುದಾಗಿದೆ ಎಂದು ಹೇಳಿದ್ದಾರೆ.

ಕಿಸಾನ್ ಕೇಂದ್ರದಲ್ಲಿ ನ್ಯಾನೊ ಯೂರಿಯಾ ಲಭ್ಯ

ನವದೆಹಲಿ: ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳಲ್ಲೂ ರೈತರಿಗೆ ದ್ರವರೂಪದ ನ್ಯಾನೊ ಯೂರಿಯಾ ದೊರೆಯಲಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ದೇಶದ ಎಲ್ಲಾ ಕೃಷಿ ವಲಯಗಳ ವ್ಯಾಪ್ತಿಯಲ್ಲಿ ದ್ರವರೂಪದ ನ್ಯಾನೊ ಡಿಎಪಿ ಬಳಕೆಗೆ ಸಂಬಂಧಿಸಿದಂತೆ ರಸಗೊಬ್ಬರ ಇಲಾಖೆ ಮತ್ತು ಗೊಬ್ಬರ ತಯಾರಿಸುವ ಕಂಪನಿಗಳಿಂದ ಅಭಿಯಾನ ಆರಂಭಿಸಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ತಿಳಿಸಿದ್ದಾರೆ.

ರಸಗೊಬ್ಬರ ನಿಯಂತ್ರಣ ಆದೇಶ 1985ರ ಅನ್ವಯ ನ್ಯಾನೊ ಡಿಎಪಿ ಬಳಕೆಗೆ ಸರ್ಕಾರ ಅನುಮತಿ ನೀಡಿದೆ.

₹7 ಕೋಟಿ ಮೌಲ್ಯದ 210 ಟನ್ ಅಡಿಕೆ ವಶ

ಚಿತ್ರದುರ್ಗ: ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ಶನಿವಾರ ₹7 ಕೋಟಿ ಮೌಲ್ಯದ 210 ಟನ್ ಅಡಿಕೆ ವಶಕ್ಕೆ ಪಡೆದಿದ್ದಾರೆ.

ಅಡಿಕೆ ಹೊತ್ತ 7 ಲಾರಿಗಳು ಶಿವಮೊಗ್ಗದಿಂದ ಹೊಸಪೇಟೆ ಕಡೆಗೆ ಸಾಗುತ್ತಿದ್ದವು. ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಿಎಸ್‌ಟಿ ಅಧಿಕಾರಿ ಹಮೀದ್ ಸಿದ್ದಿಕಿ ನೇತೃತ್ವದ ತಂಡ ಲಾರಿಗಳನ್ನು ತಡೆದು ಪರಿಶೀಲನೆ ನಡೆಸಿತು. ಜಿಎಸ್‌ಟಿ ಪಾವತಿ ಸಂಬಂಧ ಸಮರ್ಪಕವಾದ ದಾಖಲೆ ಸಲ್ಲಿಸದ ಕಾರಣ ಲಾರಿಗಳನ್ನು ವಶಕ್ಕೆ ಪಡೆಯಲಾಗಿದೆ.

ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಲಾರಿಗಳನ್ನು ನಿಲ್ಲಿಸಲಾಗಿದೆ. ಜಿಎಸ್‌ಟಿ ಅಧಿಕಾರಿಗಳು ಪರಿಶೀಲನೆ ಮುಂದುವರಿಸಿದ್ದಾರೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಸೆಮಿಕಂಡಕ್ಟರ್ ಚಿಪ್ ಆಮದು ಶೇ 18ರಷ್ಟು ಏರಿಕೆ

ನವದೆಹಲಿ (ಪಿಟಿಐ): 2023–24ನೇ ಸಾಲಿನಡಿ ಭಾರತವು ₹1.71 ಲಕ್ಷ ಕೋಟಿ ಮೌಲ್ಯದ ಸೆಮಿಕಂಡಕ್ಟರ್ ಚಿಪ್‌ಗಳನ್ನು ಆಮದು ಮಾಡಿಕೊಂಡಿದೆ ಎಂದು ಕೇಂದ್ರ ಸರ್ಕಾರವು, ಸಂಸತ್‌ಗೆ ತಿಳಿಸಿದೆ.

1,843 ಕೋಟಿ ಚಿಪ್‌ಗಳನ್ನು ಆಮದು ಮಾಡಿಕೊಳ್ಳಲಾಗಿದೆ. 2022–23ನೇ ಸಾಲಿನಲ್ಲಿ ₹1.29 ಲಕ್ಷ ಕೋಟಿ ಮೌಲ್ಯದ 1,464 ಕೋಟಿ ಚಿಪ್‌ಗಳನ್ನು ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 18.5ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ ತಿಳಿಸಿದ್ದಾರೆ.

2021-22ರಲ್ಲಿ ಭಾರತವು ₹1 ಲಕ್ಷ ಕೋಟಿ ಮೌಲ್ಯದ 1,789 ಕೋಟಿ ಚಿಪ್‌ಗಳನ್ನು ಆಮದು ಮಾಡಿಕೊಂಡಿದೆ. ದೇಶೀಯವಾಗಿ ಸೆಮಿಕಂಡಕ್ಟರ್ ಚಿಪ್‌ಗಳ ತಯಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಕ್ರಮವಹಿಸಿದೆ. ಆ ಮೂಲಕ ಆಮದು ತಗ್ಗಿಸುವ ಗುರಿ ಹೊಂದಿದೆ.

ಇದರ ಭಾಗವಾಗಿ ಸೆಮಿಕಾನ್ ಇಂಡಿಯಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಇದಕ್ಕಾಗಿ ₹76 ಸಾವಿರ ಕೋಟಿ ನಿಗದಿಪಡಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ನೆಲಮಂಗಲ–ಕುಣಿಗಲ್ ರಸ್ತೆ, ಸೋಲೂರು ಹತ್ತಿರ ಬಿಟ್ಟಸಂದ್ರದಲ್ಲಿರುವ ನಮ್ಮ ತೋಟದಲ್ಲಿ ಸಸ್ಯಹಾರಿ ಅಡುಗೆ ಮಾಡಲು ವೀರಶೈವ–ಲಿಂಗಾಯಿತ ಅಡುಗೆಯವರು ಬೇಕಾಗಿದ್ದಾರೆ ಒಂದು ಕುಟುಂಬ ಉಳಿದುಕೊಳ್ಳಲು ವಸತಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಸೂಕ್ತ ಸಂಬಳ ನೀಡಲಾಗುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ 99019 85699

Domestic Helpers / Housekeeping

ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 19300/- ಸಂಪರ್ಕಿಸಿ: ಹೇಮಾವತಿ- 9945779607 ಸಂದೀಪ- 9108946691, ಮಿತುನ್-9112959375

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Hosur Road

SALE 4 floors Total 15 flats building rental income 2.30L AKATHA Garvebhavi Palya near BTM layout 2.80cr 9036706304

Seshadripuram

FLAT FOR SALE / MAIN ROAD- 900- SF 3rd floor JC Complex, Near Nataraj Theater, Bangalore-20. Con: 9543581274.

Sites

Shivamogga

30X60 ಪ್ರತಿಷ್ಠಿತ ರಂಗನಾಥ ಬಡಾವಣೆ, ಗೋಪಾಳ, ಶಿವಮೊಗ್ಗ ವಿಧಾತ್ರಿ ಹೋಟೆಲ್ ಹತ್ತಿರ, ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ: 9845017569

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೀಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ವೈವಾಹಿಕ

Grooms Wanted

Brahmin

ವರ ಬೇಕಾಗಿದೆ
ಬ್ರಾಹ್ಮಣ ವಧುವಿನ, ವಯಸ್ಸು 24, ಪಿಯುಸಿ ಕಲಿತಿರುವ / ವಯಸ್ಸು 28, ಎಸ್‌ಎಸ್‌ಎಲ್‌ಸಿ / ವಯಸ್ಸು 30, ಟೀಚರ್/ ವಯಸ್ಸು 34, ಪಿಯುಸಿ/ ವಯಸ್ಸು 38, ಎಸ್ ಎಸ್ ಎಲ್‌ಸಿ ಕಲಿತಿರುವ ವಧುವಿಗೆ ವರ ಬೇಕಾಗಿದೆ.
ಮೊ: 8792731562

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 24.12.2024 10ದಿನಗಳು ವಿಜಯವಾಡ,ಪಂಚರಾಮ ಅನ್ನಾವರಂ,ಶ್ರೀಕೂರ್ಮಂ,ಅರಕು ಭದ್ರಾಚಲಂ,ಫೀಠಾಪುರಂ ವಾರಂಗಲ್,ಸ್ವರ್ಣಗಿರಿ ರಾಮಾನುಜಾಚಾರ್ಯ. 02.01.2025 7ದಿನಗಳು ಒರಿಸ್ಸಾದ ಪುರಿ,ಕೋನಾರ್ಕ್ ಬುವನೇಶ್ವರ್,ಕಲ್ಕತ್ತಾ ದೇವಘರ್,ಇತರೆ. 02.01.2025 6ದಿನಗಳು ಹೈದರಾಬಾದ್,ರಾಮೋಜಿ ಯಾದಗಿರಿಗುಟ್ಟ,ಸ್ವರ್ಣಗಿರಿ. 21.01.2025 15ದಿನಗಳು ಅಖಂಡ ಮಧ್ಯಪ್ರದೇಶ (ಅಮರಕಂಟಕ್ ಸಹಿತ).ಅಖಂಡ ಗುಜರಾತ್ 12ದಿನಗಳು. 28.01.2025 10ದಿನಗಳು ಅಖಂಡ ಕೇರಳ ರಾಜ್ಯ ಪ್ರವಾಸ. 18.01.2025 8ದಿನಗಳು ಶ್ರೀಲಂಕಾ ರಾಷ್ಟ್ರ ಪ್ರವಾಸ (ರಾಮಾಯಣ ವಿಶೇಷ). 8073824856 9206979202 6366322639

6 ದಿನಗಳ ದುಬೈ. 6 ದಿನಗಳ ಬಾಲಿ. 6 ದಿನಗಳ ಶ್ರೀಲಂಕಾ. 7/11 ದಿನಗಳ ಸಿಂಗಪುರ್ ಮಲೇಷ್ಯಾ, ಥೈಲ್ಯಾಂಡ್. 7 ದಿನಗಳ ಜಪಾನ್. ಭಟ್ ಟ್ರಾವೆಲ್ 9844037295

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಸರ್ವಿಸಸ್ ಪೈಲ್ವಾನರಿಗೆ 6 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ



ಗ್ರೀಕೊ ರೋಮನ್ ಶೈಲಿಯ 55 ಕೆಜಿ ವಿಭಾಗದ ಫೈನಲ್‌ನಲ್ಲಿ ಎಸ್‌ಎಸ್‌ಸಿಬಿಯ ಲಲಿತ್ (ನೀಲಿ) ಮತ್ತು ಛತ್ತೀಸಗಢದ ಮನು ಯಾದವ್ ಜೊತೆ ಸೆಣಸಿದರು –ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿಯ (ಎಸ್‌ಎಸ್‌ಸಿಬಿ) ಪೈಲ್ವಾನರು ಇಲ್ಲಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ ಶನಿವಾರ ಆರು ಚಿನ್ನದ ಪದಕಗಳನ್ನು ಗೆದ್ದು ಪಾರಮ್ಯ ಮೆರೆದರು.

ಎರಡನೇ ದಿನ ನಡೆದ ಗ್ರೀಕೊ ರೋಮನ್ ಸ್ಪರ್ಧೆಯಲ್ಲಿ ಎಸ್‌ಎಸ್‌ಸಿಬಿ 220 ಅಂಕಗಳೊಂದಿಗೆ ಟೀಂ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಎರಡು ಚಿನ್ನದೊಂದಿಗೆ ಹರಿಯಾಣ (146 ಅಂಕ), ಒಂದು ಚಿನ್ನ ಗೆದ್ದ ದೆಹಲಿ (132 ಅಂಕ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆ. ಕರ್ನಾಟಕ 42 ಅಂಕಗಳೊಂದಿಗೆ 9ನೇ ಸ್ಥಾನ ಪಡೆಯಿತು.

ಮಹಿಳೆಯರ ವಿಭಾಗದಲ್ಲಿ ಉಳಿದಿರುವ ಎಂಟು ತೂಕ ವಿಭಾಗಗಳ ಸ್ಪರ್ಧೆ ಭಾನುವಾರ ನಿಗದಿಯಾಗಿದೆ.

ಫಲಿತಾಂಶ: ಗ್ರೀಕೊ ರೋಮನ್ ಸ್ಪರ್ಧೆ: 55 ಕೆಜಿ: ಲಲಿತ್ (ಎಸ್‌ಎಸ್‌ಸಿಬಿ)-1, ಮನು ಯಾದವ್ (ಸಿಜಿಎಚ್)-2, ನೀರಜ್ ಪಟೇಲ್ (ಮಧ್ಯಪ್ರದೇಶ)-3, ನಿತಿನ್ (ಹರಿಯಾಣ)-3; 60 ಕೆಜಿ: ಪ್ರವೇಶ್ (ಎಸ್‌ಎಸ್‌ಸಿಬಿ)-1, ಸಾಗರ್ ಸಿಂಗ್ (ಪಂಜಾಬ್)-2, ಸೌರಭ್ (ಉತ್ತರ ಪ್ರದೇಶ)-3, ಉದಿತ್ ಪಟೇಲ್ (ಮಧ್ಯಪ್ರದೇಶ)-3; 63 ಕೆ.ಜಿ: ಉಮೇಶ್ (ದೆಹಲಿ)-1, ವಿಜಯ್ (ಎಸ್‌ಎಸ್‌ಸಿಬಿ)-2, ಪಾರ್ಥ್ (ಮಹಾರಾಷ್ಟ್ರ)-3, ಸನ್ನಿ (ಹರಿಯಾಣ)-3; 67 ಕೆ.ಜಿ: ವಿನಾಯಕ ಸಿದ್ಧೇಶ್ವರ ಪಾಟೀಲ್ (ಎಸ್‌ಎಸ್‌ಸಿಬಿ)-1, ಅನಿಲ್ (ಹರಿಯಾಣ)-2, ಅಂಕಿತ್ (ದೆಹಲಿ)-3, ಅಮಿತ್ ಕುಮಾರ್ (ರಾಜಸ್ಥಾನ)-3; 72 ಕೆ.ಜಿ: ಅಂಕಿತ್ ಗುಲಿಯಾ (ಎಸ್‌ಎಸ್‌ಸಿಬಿ)-1, ಆಕಾಶ್ (ಹರಿಯಾಣ)-2, ದೀಪಕ್ (ದೆಹಲಿ)-3, ಗೌರವ್ (ಉತ್ತರಪ್ರದೇಶ)-3.

77 ಕೆ.ಜಿ: ಕರಣ್ (ಎಸ್‌ಎಸ್‌ಸಿಬಿ)-1, ಅಮಿತ್ ಕುಮಾರ್ ಗೋಪೆ (ಜಾರ್ಖಂಡ್)-2, ಸಾಗರ್ ಥಕ್ರಾನ್ (ದೆಹಲಿ)-3, ಔರಂಗಜೇಬ್ ಖಾನ್ (ಮಧ್ಯಪ್ರದೇಶ)-3; 82 ಕೆಜಿ: ಅಮನ್ (ಹರಿಯಾಣ)-1, ರಾಹುಲ್ (ಎಸ್‌ಎಸ್‌ಸಿಬಿ)-2, ಭಗವಂತ್ ಸಿಂಗ್ (ಉತ್ತರ ಪ್ರದೇಶ)-3, ಆರ್ಯ್ ಕಾಂಬೋಜ್ (ಪಂಜಾಬ್)-3; 87 ಕೆಜಿ: ಸುನಿಲ್ (ಹರಿಯಾಣ)-1, ದಿನೇಶ್ ಧಂಡಾ (ದೆಹಲಿ)-2, ರಾಜೇಶ್ ಮಚ್ರಾ (ರಾಜಸ್ಥಾನ)-3, ಸುಶಾಂತ್ (ಎಸ್‌ಎಸ್‌ಸಿಬಿ)-3; 97 ಕೆಜಿ: ಸೋನು (ಎಸ್‌ಎಸ್‌ಸಿಬಿ)-1, ನಮನ್ (ದೆಹಲಿ)-2, ಅಭಿಮನ್ಯು (ಪಂಜಾಬ್)-3, ನೇತಾರಾಮ್ ತೆತ್ರಾವಲ್ (ರಾಜಸ್ಥಾನ)-3; 130 ಕೆ.ಜಿ: ಉತ್ತಮ್ ರಾಣಾ (ಉತ್ತರ ಪ್ರದೇಶ)-1, ದಿಗ್ವಿಜಯ್ (ಮಹಾರಾಷ್ಟ್ರ)-2, ಜಗದೀಪ್ ಸಿಂಗ್ (ಪಂಜಾಬ್)-3, ಪ್ರೇಮ್ (ಎಸ್‌ಎಸ್‌ಸಿಬಿ)-3.

ಬಿಡ್ ಪ್ರಕ್ರಿಯೆಗೆ 120 ಆಟಗಾರ್ತಿಯರು

ಬೆಂಗಳೂರು: ದೇಶದ 91 ಆಟಗಾರ್ತಿಯರು ಒಳಗೊಂಡಂತೆ 120 ಮಂದಿ, ಡಿಸೆಂಬರ್ 15ರಂದು ಇಲ್ಲಿ ನಡೆಯುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್‌ನ ಮಿನಿ ಆಕ್ಷನ್‌ನಲ್ಲಿ ಬಿಡ್‌ಗೆ ಒಳಪಡಲಿದ್ದಾರೆ. ಖಾಲಿಯಿರುವ 19 ಸ್ಥಾನಗಳಿಗೆ ಈ ಪೈಪೋಟಿಯಿದೆ.

ಹರಾಜಿಗೆ ನೋಂದಾಯಿಸಿಕೊಂಡವರಲ್ಲಿ ಭಾರತದ 82 ಮಂದಿ ‘ಅನ್‌ಕ್ಯಾಪ್ಡ್’ ಆಟಗಾರ್ತಿಯರು. ವಿದೇಶದ ಎಂಟು ‘ಅನ್‌ಕ್ಯಾಪ್ಡ್’ ಆಟಗಾರ್ತಿಯರೂ ನೋಂದಾಯಿಸಿಕೊಂಡಿದ್ದಾರೆ. ಮೂವರು ಆಟಗಾರ್ತಿಯರು ಐಸಿಸಿ ಸಹ ಸದಸ್ಯ ರಾಷ್ಟ್ರಗಳಿಗೆ ಸೇರಿದವರು.

ಗುಜರಾತ್ ಜೈಂಟ್ಸ್ ಅತಿ ಹೆಚ್ಚು (₹4.4 ಕೋಟಿ) ಪರ್ಸ್ ಮೌಲ್ಯ ಹೊಂದಿದೆ. ಇಬ್ಬರು ವಿದೇಶಿಯರು ಸೇರಿದಂತೆ ನಾಲ್ಕು ಆಟಗಾರ್ತಿಯರನ್ನು ಹೊಂದಲು ಈ ಫ್ರಾಂಚೈಸಿಗೆ ಅವಕಾಶವಿದೆ. ಯುಪಿ ವಾರಿಯರ್ಸ್ ಮೂರು ಆಟಗಾರ್ತಿಯರ ಸ್ಥಾನ ತುಂಬಬೇಕಾಗಿದೆ.

ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳೂ ತಲಾ ನಾಲ್ಕು ಆಟಗಾರ್ತಿಯರ ಸ್ಥಾನ ತುಂಬಬೇಕಾಗಿದೆ. ಆದರೆ ಆರ್‌ಸಿಬಿ ತಂಡದಲ್ಲಿ ಹೊರದೇಶಗಳ ಆಟಗಾರ್ತಿಯರಿಗೆ ಸ್ಥಾನ ಖಾಲಿಯಿಲ್ಲ.

ಭಾರತ ತಂಡದ ಆಟಗಾರ್ತಿ ಸ್ನೇಹ್ ರಾಣಾ (ಮೂಲ ಮೌಲ್ಯ: ₹30 ಲಕ್ಷ), ವೆಸ್ಟ್ ಇಂಡೀಸ್‌ನ ಡಿಯಾಂಡ್ರಾ ಡಾಟಿನ್ (ಮೂಲಮೌಲ್ಯ ₹50 ಲಕ್ಷ) ಅವರಿಗೆ ಹೆಚ್ಚಿನ ಮೌಲ್ಯ ಸಿಗುವ ನಿರೀಕ್ಷೆಯಿದೆ. ಎರಡನೇ ಹರಾಜು ಪ್ರಕ್ರಿಯೆಯಿಂದ ಹಿಂದೆಸರಿದಿದ್ದ ಇಂಗ್ಲೆಂಡ್‌ನ ಹಿದರ್ ನೈಟ್ (₹50 ಲಕ್ಷ) ಕೂಡ ಬಿಡ್‌ಗೆ ಒಳಪಡುವ ಪ್ರಮುಖ ಆಟಗಾರ್ತಿಯರಲ್ಲಿ ಇದ್ದಾರೆ.

ಬಿಸಿಸಿಐ ಹಂಗಾಮಿ ಕಾರ್ಯದರ್ಶಿಯಾಗಿ ದೇವಜಿತ್ ನೇಮಕ

ನವದೆಹಲಿ: ಹಾಲಿ ಜಂಟಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಬಿಸಿಸಿಐನ ಹಂಗಾಮಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಬಿಸಿಸಿಐ ಕಾರ್ಯದರ್ಶಿಯಾಗಿದ್ದ ಜಯ್ ಶಾ ಅವರು ಈಚೆಗೆ ಐಸಿಸಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದರು.

ಯೋಧಾಸ್‌ಗೆ ಮಣಿದ ಪಲ್ಟನ್

ಪುಣೆ (ಪಿಟಿಐ): ಕನ್ನಡಿಗ ಗಗನ್ ಗೌಡ ಅವರ ಅಮೋಘ ರೇಡಿಂಗ್ ಬಲದಿಂದ ಯು.ಪಿ ಯೋಧಾಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ರೋಚಕ ಹಣಾ ಹಣಿಯಲ್ಲಿ 36–33ರಿಂದ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು.

ಇಲ್ಲಿನ ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ರಿಪ್ಪನ್‌ಪೇಟೆಯ ಹುಡುಗ ಗಗನ್ 15 ಪಾಯಿಂಟ್ಸ್ ಗಳಿಸಿ ಗೆಲುವಿನ ರೂವಾರಿಯಾದರು. ಅವರಿಗೆ ಭವಾನಿ ರಜಪೂತ್ (6) ಸಾಥ್ ನೀಡಿದರು.

ದಿನದ ಮತ್ತೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವು 34–32ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿತು.

ಫೈನಲ್‌ಗೆ ಅನ್ಮೋಲ್ ಲಗ್ಗೆ

ಗುವಾಹಟಿ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರರಾದ ಸತೀಶ್ ಕುಮಾರ್ ಕರುಣಾಕರನ್ ಮತ್ತು ಅನ್ಮೋಲ್ ಖಾರ್ಬ್ ಅವರು ಇಲ್ಲಿ ನಡೆಯುತ್ತಿರುವ ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು.

17 ವರ್ಷ ವಯಸ್ಸಿನ ಅನ್ಮೋಲ್ ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 21-19, 21-17ರಿಂದ ಸ್ವದೇಶದ ಮಾನ್ಸಿ ಸಿಂಗ್ ಅವರನ್ನು ಮಣಿಸಿದರು. ಅವರು ಫೈನಲ್‌ನಲ್ಲಿ ಚೀನಾದ ಕೈ ಯಾನ್ ಅವರನ್ನು ಎದುರಿಸಲಿದ್ದಾರೆ.

2023ರ ಒಡಿಶಾ ಓಪನ್ ಸೂಪರ್ 100 ಚಾಂಪಿಯನ್ ಆಗಿರುವ ಸತೀಶ್ ಅವರು 13-21, 21-14, 21-16ರಿಂದ ಆರನೇ ಶ್ರೇಯಾಂಕದ ವಾಂಗ್ ಝೆಂಗ್ ಕ್ಸಿಂಗ್ (ಚೀನಾ) ಅವರನ್ನು ಮಣಿಸಿದರು. ಅವರು ಫೈನಲ್‌ನಲ್ಲಿ ಚೀನಾದ ಮತ್ತೊಬ್ಬ ಆಟಗಾರ ಝು ಕ್ಸುವಾನ್ ಚೆನ್ ಅವರನ್ನು ಎದುರಿಸಲಿದ್ದಾರೆ.

ಅಶ್ವಿನಿ–ತನಿಶಾ ಜೋಡಿ ಫೈನಲ್‌ಗೆ: ಹಾಲಿ ಚಾಂಪಿಯನ್ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು ಮಹಿಳೆಯರ ಡಬಲ್ಸ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಮುನ್ನಡೆದರು.

ಅಗ್ರ ಶ್ರೇಯಾಂಕದ ಅವರು 21-14, 21-14ರಿಂದ ಚೀನಾದ ಕೆಂಗ್ ಶು ಲಿಯಾಂಗ್ ಮತ್ತು ವಾಂಗ್ ಟಿಂಗ್ ಗೆ ಜೋಡಿಯನ್ನು ಹಿಮ್ಮೆಟ್ಟಿದರು. ಅವರು ಫೈನಲ್‌ನಲ್ಲಿ ಚೀನಾದ ಮತ್ತೊಂದು ಜೋಡಿಯಾದ ಲಿ ಹುವಾ ಝೌ ಮತ್ತು ವಾಂಗ್ ಝಿ ಮೆಂಗ್ ಅವರನ್ನು ಎದುರಿಸುವರು.

ಐಎಸ್‌ಎಲ್: ಹ್ಯಾಟ್ರಿಕ್ ಸಾಧಿಸಿದ ಅತಿ ಹಿರಿಯ ಆಟಗಾರ

ಛೆಟ್ರಿ ದಾಖಲೆ: ಬಿಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ



ಗೆಲುವಿನ ಬಳಿಕ ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಮತ್ತು ಸಹ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಬೆಂಗಳೂರು (ಪಿಟಿಐ): ದಿಗ್ಗಜ ಆಟಗಾರ ಸುನಿಲ್ ಚೆಟ್ರಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಇತಿಹಾಸದಲ್ಲೇ ಹ್ಯಾಟ್ರಿಕ್ ಸಾಧಿಸಿದ ಅತಿ ಹಿರಿಯ ಆಟಗಾರನೆಂಬ ದಾಖಲೆ ಬರೆದರು. ಅವರ ಈ ಅಮೋಘ ಸಾಧನೆಯಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಶನಿವಾರ ನಡೆದ ಪಂದ್ಯದಲ್ಲಿ 4–2 ಗೋಲುಗಳಿಂದ ಕೇರಳ ಬ್ಲಾಸ್ಟರ್ಸ್ ತಂಡವನ್ನು ಸೋಲಿಸಿತು.

ಚೆಟ್ರಿ (40 ವರ್ಷ 126 ದಿನ) ಅವರಿಗಿಂತ ಮೊದಲು ಈ ದಾಖಲೆ ಬಾರ್ತಲೋಮಿಯೊ ಒಗ್ಬೆಚೆ ಅವರ ಹೆಸರಿನಲ್ಲಿತ್ತು. 2023ರ ಜನವರಿಯಲ್ಲಿ ಹೈದರಾಬಾದ್ ಎಫ್‌ಸಿ ಪರ (ಒಡಿಶಾ ಎಫ್‌ಸಿ ವಿರುದ್ಧದ ಪಂದ್ಯದಲ್ಲಿ) ಹ್ಯಾಟ್ರಿಕ್ ಸಾಧಿಸಿದಾಗ ಅವರ ವಯಸ್ಸು 38 ವರ್ಷ 96 ದಿನ.

ಈ ವರ್ಷದ ಆರಂಭದಲ್ಲಿ ಅಂತರ ರಾಷ್ಟ್ರೀಯ ಫುಟ್‌ಬಾಲ್‌ಗೆ ವಿದಾಯ ಹೇಳಿದ್ದ ಚೆಟ್ರಿ ಪಂದ್ಯದ 8, 73 ಮತ್ತು 90+8ನೇ ನಿಮಿಷ ಗೋಲುಗಳನ್ನು ಗಳಿಸಿ ತವರಿನ ಪ್ರೇಕ್ಷಕರಲ್ಲಿ ಸಂಭ್ರಮದ ಅಲೆಗಳನ್ನೆಬ್ಬಿಸಿದರು. ‘ಬ್ಲೂಸ್’ ತಂಡದ ಇನ್ನೊಂದು ಗೋಲನ್ನು ರಯಾನ್ ವಿಲಿಯಮ್ಸ್ 38ನೇ ನಿಮಿಷ ತಂದಿತ್ತರು.

ಕೇರಳ ಬ್ಲಾಸ್ಟರ್ಸ್ ಪರ ಜೀಸಸ್ ಜಿಮಿನೆಝ್ (56ನೇ ನಿಮಿಷ) ಮತ್ತು ಫ್ರೆಡ್ಡಿ ಲಾಲೌಮವ್ಮ (67ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ಈ ಗೆಲುವಿನಿಂದ ಬೆಂಗಳೂರು ಎಫ್‌ಸಿ ತಂಡ ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ಚೆಟ್ರಿ ಬಳಗ 11 ಪಂದ್ಯಗಳಿಂದ (7 ಜಯ, 2 ಡ್ರಾ, 2ಸೋಲು) ಒಟ್ಟು 23 ಅಂಕ ಸಂಪಾದಿಸಿದೆ. ಮೋಹನ್ ಬಾಗನ್ (20), ಪಂಜಾಬ್ ಎಫ್‌ಸಿ (18) ಕ್ರಮವಾಗಿ ನಂತರದ ಸ್ಥಾನದಲ್ಲಿವೆ.



ಎಲೆಲೆ ಎಲೆಯೇ? ಏನು ನಿನ್ನ ಲೀಲೆ 11



ಮಿಶ್ರ ಬೆಳೆ-ಬೆರಕೆ ಸೊಪ್ಪಿನ ವಿಸ್ಮಯ ಲೋಕದ ಬಗ್ಗೆ ಅಗಾಧ ಮಾಹಿತಿಯುಳ್ಳ ಪುಟ್ಟೀರಮ್ಮ ನೆಲಮೂಲದ 'ಕೃಷಿ ಪ್ರೊಫೆಸರ್'. ಕೃಷಿ ಎಂಬುದು ಇವರಿಗೆ ಬದುಕೂ ಹೌದು, ಜನಪದವೂ ಹೌದು. ಇವರಲ್ಲಿನ ದೇಸಿ ಕೃಷಿ ಜ್ಞಾನವನ್ನು ಗುರುತಿಸಿ ಸರ್ಕಾರ, ಈ ಸಾಲಿನ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿದೆ.

ಪುಟ್ಟೀರಮ್ಮನ ಕೃಷಿ ಜ್ಞಾನದ ಪರಸಂಗ...

ಗಾಣಧಾಳು ಶ್ರೀಕಂಠ

ಬೆಳದಿಂಗಳ ಬೆಳಕಲ್ಲಿ ಅರ್ಜುನರಾಯ ಅವರೆ ಬಿತ್ತಾಕೆ ಹೋಗಿ
ಅವರೆಯ ಸಾಲೆಲ್ಲ ಸರಮುತ್ತು ಕಿರುಗೆಜ್ಜೆ ಮೂಡಪ್ಪ ಬೆಳದಿಂಗಳೇ,
ಬೆಳದಿಂಗಳ ಬೆಳಕಲ್ಲಿ ಅರ್ಜುನರಾಯ...

ಹೀಗೆ ಹಾಡುತ್ತಲೇ ಅಕ್ಕಡಿ ಪದ್ಧತಿಯಲ್ಲಿ ಬೀಜ ಬಿತ್ತನೆ ಮಾಡುತ್ತಿದ್ದ ಕೃಷಿಕ ಮಹಿಳೆ ಪುಟ್ಟೀರಮ್ಮ, ಈ ಪದ್ಧತಿ ಪಾಂಡವರ ಕಾಲದ್ದು ಎಂದೇ ನಂಬಿದ್ದಾರೆ. ಇಂಥ ಕೃಷಿ–ಜನಪದ ಜೋಡಣೆಯ ನೂರಾರು ಹಾಡುಗಳು ಅವರ ಎದೆಯೊಳಗಿವೆ!

ಪುಟ್ಟೀರಮ್ಮ, ಚಾಮರಾಜನಗರ ಜಿಲ್ಲೆಯ ಪಣ್ಯದಹುಂಡಿಯವರು. 90ರ ಆಸುಪಾಸು ಅವರ ವಯಸ್ಸು. ಪತಿ ಲಿಂಗೇಗೌಡ, ಶತಾಯುಷಿ. ಒಬ್ಬ ಮಗ, ಒಬ್ಬ ಮಗಳು ಇದ್ದಾರೆ. ಗುಂಡ್ಲುಪೇಟೆಯ ಆಲತ್ತೂರಿನಲ್ಲಿದ್ದ ಇವರು, ಕಾರಣಾಂತರಗಳಿಂದ 30 ವರ್ಷಗಳ ಹಿಂದೆ ಪಣ್ಯದಹುಂಡಿಗೆ ಬಂದರು. ಸೋದರ ಮಾವ ಕೊಟ್ಟ ಒಂದು ಎಕರೆ ಹದಿನೈದು ಗುಂಟೆ ಜಮೀನಿನಲ್ಲಿ ಕೃಷಿ ಆರಂಭಿಸಿದರು. ಇಂದಿಗೂ ಅಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ.

ಪುಟ್ಟೀರಮ್ಮ, ಹನ್ನೆರಡನೇ ವಯಸ್ಸಿನಿಂದಲೇ ಅಪ್ಪನೊಂದಿಗೆ ಹೊಲಕ್ಕೆ ಇಳಿದು ಜೋಳದ ಬಿತ್ತನೆ ಶುರು ಮಾಡಿದವರು. ಅಪ್ಪನೊಂದಿಗೆ ಕೃಷಿ ಮಾಡುತ್ತಾ 'ಭೂಮ್ತಾಯಿ ಚಂದಕಿರಬೇಕು, ಬೀಜ ಜ್ವಾಪಾನ ಮಾಡಬೇಕು' ಎಂಬ ಪಾಠವನ್ನು ಕಲಿತವರು. ಮಡಿಲಲ್ಲಿ ನಾಲ್ಕಾರು ಜೋಳಿಗೆ, ಅದರಲ್ಲಿ ಒಂದೊಂದಕ್ಕೆ ಒಂದೊಂದು ಬಗೆಯ ಬೀಜ ತುಂಬಿಕೊಂಡು, ಸಣ್ಣ ಹಿಡುವಳಿಯಲ್ಲಿ ಮಿಶ್ರಬೆಳೆ, ಬಹುಬೆಳೆ, ಸಾಲು ಬೆಳೆ ಪದ್ಧತಿಗಳಲ್ಲಿ ಬಿತ್ತನೆ ಮಾಡುತ್ತಾ, ಒಂದು ರೀತಿಯ ವಿಶಿಷ್ಟ ಬಹುಬೆಳೆ ಪದ್ಧತಿಯನ್ನೇ ರೂಪಿಸಿದ್ದಾರೆ. ಅಕ್ಷರ ಬಾರದ ಪುಟ್ಟೀರಮ್ಮನಿಗೆ ಕೃಷಿ ಜ್ಞಾನ ಬಂದಿದ್ದು ಅನುಭವದಿಂದ.

ಮಳೆಯಾಶ್ರಿತವಾಗಿ ಕೃಷಿ ಮಾಡುತ್ತಿದ್ದ ಪುಟ್ಟೀರಮ್ಮಗೆ, 'ಮಳೆ-ಬೆಳೆ' ಹೊಂದಾಣಿಕೆ ಜ್ಞಾನವೂ ಇದೆ. 'ಇಂಥ ಸಮಯದಲ್ಲಿ ಈ ಬೆಳೆ ಬಿತ್ತಿದರೆ, ಇಂಥದ್ದೇ ಸಮಯಕ್ಕೆ ಮಳೆ ಬರುತ್ತದೆ. ಇದೇ ಕಾಲಕ್ಕೆ ಕೊಯ್ಲಿಗೆ ಬರುತ್ತದೆ' ಎಂದು ಅಂದಾಜಿಸುವ ಪರಿಣತಿ ಅವರದ್ದು. ಮುಂಗಾರಿಗೊಂದು, ಹಿಂಗಾರಿಗೊಂದು 'ಸಾಲು ಬೆಳೆಯ ಸೂತ್ರ'ಗಳನ್ನು ಹೇಳುತ್ತಾರೆ.

'ಸೀರೆ ಸೆರಗನ್ನು ನಾಲ್ಕೈದು ಭಾಗ ಮಾಡ್ಕೊಂಡು, ಒಂದ್ಕಡೆ ಜ್ವಾಳ, ಇನ್ನೊಂದ್ಕಡೆ ತೊಗರಿ, ಮತ್ತೊಂದ್ಕಡೀಗೆ ಅವರೆ, ಉದ್ದು, ಹೆಸರು ಕಾಳುಗಳ ಬೀಜಗಳನ್ನು ತುಂಬಿಕೊಂಡು ಹಾಡ್ತಾ ಹಾಡ್ತಾ ಅಕ್ಕಡಿ ಸಾಲು ಬಿತ್ತನೆ ಮಾಡುತ್ತಿದ್ವಿ. ಹತ್‌ಸಾಲು ಜ್ವಾಳ, ಒಂದು ಸಾಲು ತಡಗುಣಿ, ಇನ್ನತ್ತಸಾಲು ಜ್ವಾಳ, ಒಂದು ಸಾಲು ತೊಗರಿ, ಇನ್ನತ್ತಸಾಲು ಜ್ವಾಳ, ಆಮಲೆ ಹಳ್ಳು, ತಡಗುಣಿ. ತಡಗುಣಿಗೆ ಹರಳು ಬೆರೆಸಿದರೆ, ಹರಳು ಮ್ಯಾಕೆ ಬೆಳೀತದೆ, ಅಡಿಯಲ್ಲಿ ತಡಗುಣಿ ಬಳ್ಳೀ ಹರಡ್ಕಾತ್ತಾದೆ' ಎಂದು ಬಿತ್ತನೆ ಪದ್ಧತಿಯ ಒಂದು ವಿಧಾನವನ್ನು ವಿವರಿಸುತ್ತಾರೆ ಪುಟ್ಟೀರಮ್ಮ.

'ಇದನ್ನೆಲ್ಲ ಯಾರು ಕಲಿಸಿದ್ದು ನಿಮಗೆ' ಅಂದರೆ, ಸಣ್ಣ ನಗೆಯೊಂದಿಗೆ, 'ಹೆತ್ತಪ್ಪನ ಕಾಲದಿಂದಲೇ ಕಲಿತ್ತಿದ್ದಪ್ಪ. ಕೆಲಸ ಮಾಡ್ತಾ ಹೋದ್ರೆ ಭೂಮ್ತಾಯಿನೇ ಎಲ್ಲ ಕಲಿಸ್ತಾಳೆ' ಎನ್ನುತ್ತಾರೆ.

'ಇಷ್ಟೆಲ್ಲ ಬೆಳೆಯನ್ನು ಹೀಗೆ ಬೆಳೆಯಬೇಕು ಅಂತ ಯಾಕೆ ಎನ್ನಿಸಿತು. ಇಷ್ಟೊಂದು ಬೆಳೆಗಳನ್ನು ಏಕೆ ಬೆಳೆಯುತ್ತೀರಿ' ಅಂತ ಕೇಳಿದರೆ 'ನಮ್‌ಮನೀ ಊಟಕ್ಕೆ ಏನೇನು ಬೇಕೋ ಅದೆಲ್ಲವನ್ನೂ ಹೊಲದಲ್ಲಿ ಬೆಳ್ಕೊತೀವಿ. ಮುಂದಿನ ವರ್ಷಕ್ಕೆ ಬೀಜ ಇಟ್ಕೊಂಡು ಹೆಚ್ಚಾದ್ದನ್ನು ಮಾರ್ತೀವಿ. ಬೆಳೆ ನಮ್ಗಷ್ಟೇ ಅಲ್ಲ, ನಮ್ ಹಸ, ಕರ, ಕುರಿ ಮೇಕೆಗೂ ಬೇಕಲ್ಲವಾ?. ಹತ್ ಬೆಳೆ ಬೆಳೆದರೆ ಒಂದಲ್ಲ ಒಂದು ಕೈ ಹಿಡಿತಾದಲ್ಲ' ಎನ್ನುತ್ತಾರೆ. ಅವರ ಮಾತಿನಲ್ಲಿ 'ಬಹು ಬೆಳೆ' ಪದ್ಧತಿಯ ಮಹತ್ವದ ಜೊತೆಗೆ ಪ್ರಕೃತಿ- ಪರಿಸರದ ಸೂತ್ರಗಳನ್ನು ಅರಿತು ಬಾಳುವ ನಡೆಯೂ ಕಾಣುತ್ತದೆ.

ಬಿತ್ತನೆ ಬೀಜವನ್ನು ಜೋಪಾನವಾಗಿ ಸಂಗ್ರಹಿಸಿಡುವುದು, ಬೇರೆಯವರಿಗೆ ಹಂಚುವುದು ಪುಟ್ಟೀರಮ್ಮನ ಅಭ್ಯಾಸ. ಸಮುದಾಯದೊಂದಿಗೆ ಕಲಿತ ಜ್ಞಾನವನ್ನು, ಆ ಸಮುದಾಯಕ್ಕೇ ಹಂಚುವ ವಿಶಾಲ ಮನಸ್ಸು.

12ನೇ ಪುಟಕ್ಕೆ...

ಕಾಡಾನೆಗಳ ಸರಣಿ ಸಾವಿನ ಗೋಳು



ಹಾಸನ ಜಿಲ್ಲೆಯ ಆಲೂರು ಸಮೀಪದಲ್ಲಿ ತೀರಾ ಕೆಳಗೆ ಇದ್ದ ವಿದ್ಯುತ್ ತಂತಿಗೆ ಬಲಿಯಾದ ಸಲಗ

ಅಖಿಲೇಶ್ ಚಿಪ್ಪಳಿ

ಭಾರತದಲ್ಲಿ ಕರ್ನಾಟಕ ಅತಿಹೆಚ್ಚು ಆನೆಗಳನ್ನು ಹೊಂದಿದ ರಾಜ್ಯ ಎಂದು ಹೆಸರಾಗಿದೆ. ಆದರೆ, ಇಲ್ಲಿ ನಾನಾ ಕಾರಣಗಳಿಂದ ಆನೆಗಳ ಸಾವಿನ ಸರಣಿ ತುಂಡಾಗಿಲ್ಲ! ಅಲ್ಲದೇ ಮಾನವ ಮತ್ತು ಆನೆಗಳ ಸಂಘರ್ಷ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರ ತಾತ್ಕಾಲಿಕ ಶಮನಕ್ಕೆ ಮುಂದಾಗುತ್ತಿದೆ.

ಕಾಡಿನ ಮಧ್ಯದಲ್ಲಿ ಹಾದು ಹೋಗುವ ವಿದ್ಯುತ್ ತಂತಿಗಳು ಬಾನಾಡಿಗಳಿಗೆ ತುಂಬಾ ಅಪಾಯಕಾರಿ. ವೇಗವಾಗಿ ಹಾರುವ ಪಕ್ಷಿಗಳು ನೂರಾರು ಸಂಖ್ಯೆಯಲ್ಲಿ ವಿದ್ಯುತ್ ತಂತಿಗೆ ಸಿಕ್ಕು ಸಾಯುತ್ತಲೇ ಇರುತ್ತವೆ. ಹಾರುವ ಬೆಕ್ಕುಗಳಂತಹ ಸಸ್ತನಿಗಳು ಆಕಸ್ಮಿಕವಾಗಿ ಬಲಿಯಾಗುವ ಸಂಭವವನ್ನು ತಳ್ಳಿಹಾಕುವಂತೆಯೂ ಇಲ್ಲ. ಆದರೆ, ನೆಲವಾಸಿಗಳಾದ ಆನೆ, ಕಾಟಿಗಳು ಇಪ್ಪತ್ತು ಅಡಿ ಎತ್ತರದಲ್ಲಿರುವ ವಿದ್ಯುತ್ ತಂತಿ ತಾಗಿ ಸಾಯುವ ಸಂದರ್ಭ ತೀರಾ ಕಡಿಮೆ. ಕರ್ನಾಟಕದಲ್ಲಿ 2024ರ ಜನವರಿಯಿಂದ ನವೆಂಬರ್ 10ರ ತನಕ ಅರವತ್ತೊಂಬತ್ತು ಆನೆಗಳು ವಿವಿಧ ಕಾರಣಗಳಿಗೆ ಪ್ರಾಣ ಕಳೆದುಕೊಂಡಿವೆ. ಅದರಲ್ಲಿ ಹನ್ನೆರಡು ಆನೆಗಳು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟರೆ, ಇನ್ನುಳಿದವು ಗುಂಡೇಟು, ಅಪಘಾತ, ಇನ್ನಿತರ ಕಾರಣಗಳಿಗೆ ಜೀವಬಿಟ್ಟಿವೆ.

ನಾಗರಿಕ ಸಮಾಜದ ಆಗುಹೋಗುಗಳು ಒಂದು ಚೌಕಟ್ಟಿನಲ್ಲಿ, ಮಿತಿಯಲ್ಲಿರಬೇಕು ಎಂಬ ಕಾರಣಕ್ಕೆ ಕಾಯ್ದೆ, ಕಾನೂನುಗಳನ್ನು ರೂಪಿಸಲಾಗಿದೆ. ಕಾನೂನು ಪಾಲನೆ ಮಾಡುವುದರಿಂದ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ. ಹಾಗೆಯೇ ನಮ್ಮ ಅರಣ್ಯ ಮತ್ತು ಜೀವಿವೈವಿಧ್ಯ ನೆಲೆಗಳ ರಕ್ಷಣೆಗಾಗಿ ಅರಣ್ಯ ಇಲಾಖೆಯಿದೆ. ಬಹಳಷ್ಟು ಕಾನೂನುಗಳು ಸಂರಕ್ಷಣೆಯ ದೃಷ್ಟಿಯಿಂದ ತುಂಬಾ ಮಹತ್ವ ಪಡೆದಿವೆ. ರಾಜ್ಯದ ಜನರಿಗೆ ನಿರಂತರ ವಿದ್ಯುತ್ ಒದಗಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಿ (ಕೆಪಿಟಿಸಿಎಲ್) ಮತ್ತದರ ಅಂಗಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ. ವಿದ್ಯುತ್ ಇಲಾಖೆಯು ಸುಗಮ ನಿರ್ವಹಣೆ ದೃಷ್ಟಿಯಿಂದ ಅನೇಕ ನೀತಿ ನಿಯಮಗಳನ್ನು ಪಾಲಿಸಬೇಕು. ವಿದ್ಯುತ್ ಅವಘಡವಾಗದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತನ್ನ ನೌಕರರ ಜೊತೆಗೆ ಗ್ರಾಹಕರು ಮತ್ತು ಇತರೆ ಜೀವಿವೈವಿಧ್ಯಗಳಿಗೆ ವಿದ್ಯುತ್ತಿನಿಂದ ಯಾವುದೇ ತರಹದ ಹಾನಿಯಾಗದಂತೆ ನಿಯಮಗಳನ್ನು ಪಾಲಿಸುವುದು ಇಲಾಖೆಗೆ ಕಡ್ಡಾಯವಾಗಿರುತ್ತದೆ. ಸರ್ಕಾರದ ಇಲಾಖೆಗಳು ತಾವೇ ರೂಪಸಿಕೊಂಡ ನೀತಿ ನಿಯಮ ಕಾನೂನುಗಳನ್ನು ನೂರಕ್ಕೆ ನೂರು ಪಾಲನೆ ಮಾಡಿದ ಅಧಿಕೃತ ಉದಾಹರಣೆ ಸಿಗುವುದೇ ಇಲ್ಲ.




ಆನೆ ಮೃತಪಟ್ಟ ಪ್ರಕರಣದಲ್ಲಿ ಜಮೀನಿನ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದು ರೈತರ ಪ್ರತಿಭಟನೆ

ಇತ್ತೀಚಿಗೆ ಹಾಸನ ಜಿಲ್ಲೆಯ ಆಲೂದ್ದರು ಸಮೀಪ ಆನೆಯೊಂದು ವಿದ್ಯುತ್ ತಂತಿಗೆ ಸಿಲುಕಿ ಮೃತಪಟ್ಟಿತು. ಕೇಂದ್ರ ವಿದ್ಯುತ್ ನಿಗಮದ ಬಿಗಿ ನಿಯಮಗಳ ಪ್ರಕಾರ ಯಾವುದೇ ವಿದ್ಯುತ್ ಪ್ರಸರಣ ಮಾರ್ಗದ ವಿದ್ಯುತ್ ತಂತಿಗಳು ಇಂತಿಷ್ಟೇ ಎತ್ತರದಲ್ಲಿರಬೇಕು ಎಂದು ನಿಗದಿ ಮಾಡಿದೆ. ನೆಲಮಟ್ಟದಿಂದ ವಿದ್ಯುತ್ ತಂತಿಯು ಕನಿಷ್ಠವೆಂದರೆ 13.2 ಅಡಿ ಎತ್ತರದಲ್ಲಿರಬೇಕು. ಆದರೆ ಘಟನೆ ನಡೆದ ಸ್ಥಳದಲ್ಲಿ ಹಾದು ಹೋದ ವಿದ್ಯುತ್ ತಂತಿ ನೆಲಮಟ್ಟದಿಂದ ಬರೀ ಆರು ಅಡಿ ಎತ್ತರದಲ್ಲಿತ್ತು. ಇದು ಬರೀ ಆನೆಗಳಿಗಲ್ಲದೇ ಮನುಷ್ಯರಿಗೂ ಅಪಾಯವನ್ನುಂಟು ಮಾಡುವ ಸಂಭವವಿದೆ.



ಆಲೂರು ತಾಲ್ಲೂಕಿನ ಕಾಗನೂರು ಬಳಿ ಕೆಲ ವರ್ಷಗಳ ಹಿಂದೆ ಗದ್ದೆಯಲ್ಲಿ ತುಂಡಾಗಿ ಬಿದ್ದಿದ ವಿದ್ಯುತ್ ತಂತಿ ಸ್ಪರ್ಶಿಸಿದ ಎರಡು ಮರಿ ಆನೆಗಳು ಮೃತಪಟ್ಟಿದ್ದರಿಂದ ತಾಯಿ ಆನೆ ರೋದನೆ.



ಶೆಟ್ಟಿಹಳ್ಳಿ ಅಭಯಾರಣ್ಯದಿಂದ ಭದ್ರಾ ಅಭಯಾರಣ್ಯಕ್ಕೆ ಆನೆ ಹಿಂಡು ಓಡಿಸಲು ತಯಾರಾದ ಕುಮ್ಕಿ ಆನೆಗಳು

ವಿದ್ಯುತ್ ತಗುಲಿ ಕೆಳಗೆ ಬಿದ್ದ ಆನೆಯನ್ನು ರಕ್ಷಿಸುವ ಪ್ರಯತ್ನವನ್ನು ಆನೆಗಳ ಹಿಂಡು ಮಾಡಿದ್ದವು ಎಂಬುದಕ್ಕೆ ಕುರುಹಾಗಿ, ಮೃತ ಆನೆಯ ಹಣೆ ಮತ್ತು ಹಿಂಭಾಗದಲ್ಲಿ ತಿವಿದ ಗಾಯಗಳಿದ್ದವು. ಆನೆ ಸತ್ತಿದ್ದನ್ನು ಖಾತ್ರಿ ಪಡಿಸಿಕೊಂಡ ಹಿಂಡು ಅಲ್ಲಿಂದ ತೆರಳಿತ್ತು ಎಂಬುದನ್ನು ಅಲ್ಲಿನ ಘಟನೋತ್ತರ ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ. ಕಾಡಾನೆಗಳು ತಮ್ಮ ಕುಟುಂಬವನ್ನು ರಕ್ಷಣೆ ಮಾಡಿಕೊಳ್ಳುವಲ್ಲಿ ಮಾನವರಷ್ಟೇ ಕಾಳಜಿ ಹಾಗೂ ಬದ್ಧತೆಯನ್ನು ತೋರುತ್ತವೆ. ಮೂಲತಃ ಸಂಘಜೀವಿಯಾದ ಆನೆಗಳ ಹಿಂಡಿಗೆ ಹೆಣ್ಣಾನೆ ಯಜಮಾನಿಯಾಗಿರುತ್ತದೆ.

ಆನೆತಜ್ಞ ಆಂಟೋನಿ

ಲಾರೆನ್ಸ್ ಆಂಟೋನಿ ಜಗತ್ತು ಕಂಡ ಸರ್ವಶ್ರೇಷ್ಠ ಆನೆತಜ್ಞ. ಆಫ್ರಿಕಾದ ಕಾಡಿನಲ್ಲಿ ಪುಂಡಾಟದಲ್ಲಿ ತೊಡಗಿದ್ದವೆಂದು ಹೇಳಲಾದ ಒಂದು ಆನೆಯ ಹಿಂಡನ್ನು ಕೊಲ್ಲಬೇಕೆಂದು ಅಲ್ಲಿನ ಸ್ಥಳೀಯ ಆಡಳಿತ ಮುಂದಾದಾಗ, ಈತ ಆ ಹಿಂಡನ್ನು ತನ್ನ ಖಾಸಗಿ ಅರಣ್ಯಕ್ಕೆ ಕರೆ ತರುತ್ತಾನೆ. ಅವುಗಳ ಪುಂಡಾಟಿಕೆಯ ಕಾರಣಕ್ಕೆ ಇಡೀ ಹಿಂಡು ನಾಶವಾಗಬಹುದು ಎಂಬುದನ್ನು ಆ ಹಿಂಡಿಗೆ ಅರ್ಥ ಮಾಡಿಸುತ್ತಾನೆ. 'ಎಲಿಫೆಂಟ್ ವಿಸ್ಪರರ್' ಎಂಬ ಪುಸ್ತಕದಲ್ಲಿ ಇಂತಹ ಹಲವು ರೋಚಕ ಘಟನೆಗಳನ್ನು ದಾಖಲಿಸಲಾಗಿದೆ. ಅದರಲ್ಲಿ ಬಹಳ ಮುಖ್ಯವಾದ ಒಂದು ಘಟನೆ ಹೀಗಿದೆ:

ಹಿಂಡಿನ ಹೆಣ್ಣಾನೆಯೊಂದು ಅವಧಿಪೂರ್ವ ಮರಿಯನ್ನು ಈಯುತ್ತದೆ. ಭ್ರೂಣದಲ್ಲಿ ಸಂಪೂರ್ಣ ಬೆಳೆಯದ ಮರಿಯನ್ನು ಕಾಪಾಡಲು ಆ ಹಿಂಡು ಬಹಳ ಶ್ರಮ ಪಡುತ್ತದೆ. ಎಳೆಯ ಮರಿಗೆ ಎದ್ದು ನಿಲ್ಲುವುದಕ್ಕೆ ಆಗುತ್ತಿರಲಿಲ್ಲ. ಲಾರೆನ್ಸ್ ಆಂಟೋನಿಯ ಖಾಸಗಿ ಕಾಡಿನ ಒಂದು ಬಯಲಿನಲ್ಲಿ ಹೆಣ್ಣಾನೆ ಮರಿಯನ್ನು ಈಯಿದ್ದಿತ್ತು. ಆಗ ಘೋರ ಬೇಸಿಗೆ ಕಾಲ. ಮರಿಯನ್ನು ಸೂರ್ಯನ ಬಿಸಿಲಿನಿಂದ ರಕ್ಷಿಸಲು ಇಡೀ ಹಿಂಡು ಒಗ್ಗಟ್ಟಾಗಿ ಮರಿಯ ಮೇಲೆ ಬಿಸಿಲು ಬೀಳುವುದನ್ನು ತಡೆಯುವ ಮನಮಿಡಿಯುವ ಘಟನೆಯಿದು. ಉರಿ ಬಿಸಿಲಿನಲ್ಲಿ ಒಂದು ಎಳೆ ಜೀವವನ್ನು ಉಳಿಸುವ ನಿಟ್ಟಿನಲ್ಲಿ ಆ ಹಿಂಡು ತೋರುವ ಕಾಳಜಿ ಮತ್ತು ಬದ್ಧತೆ ಮನುಷ್ಯನ ಯಾವ ಮೇರು ಕ್ರಮಕ್ಕೂ ಸರಿಸಾಟಿಯಾಗುವುದಿಲ್ಲ. ನಂತರದಲ್ಲಿ ಉಪಾಯದಿಂದ ಲಾರೆನ್ಸ್ ಆ ಮರಿಯನ್ನು ತನ್ನ ಮನೆಗೆ ತಂದು, ಕೃತಕವಾದ ಹಾಲನ್ನುಣಿಸಿ ಬದುಕಿಸುವ ಪ್ರಯತ್ನ ಮಾಡುತ್ತಾನೆ. ಪ್ರಪಂಚಕ್ಕೆ ಹೊಂದಿಕೊಳ್ಳಲಾರದ ಮರಿಯಾನೆ ವಾರಗಳ ಆರೈಕೆಯ ಬಳಿಕವೂ ಅದು ಬದುಕಲಿಲ್ಲ.

2012ರಲ್ಲಿ ಲಾರೆನ್ಸ್ ಆಂಟೋನಿ ಹೃದಯಾಘಾತದಿಂದ ಮೃತ ಪಡುತ್ತಾನೆ. ತಮ್ಮ ಹಿಂಡನ್ನು ಸಾವಿನ ದವಡೆಯಿಂದ ರಕ್ಷಿಸಿದ ಈ ಮೇರು ಮಾನವನ ಅಂತಿಮ ದರ್ಶನಕ್ಕಾಗಿ ಇಡೀ ಹಿಂಡು 12 ತಾಸು ಸಾಗಿ ಅವನ ಮನೆ ಬಳಿಗೆ ಬಂದು ಶೋಕ ವ್ಯಕ್ತಪಡಿಸುತ್ತವೆ. ಎರಡು ದಿನ ಆಹಾರವನ್ನೂ ಸೇವಿಸದೆ ಆ ಜಾಗದಲ್ಲಿ ಬೀಡು ಬಿಟ್ಟಿದ್ದವು. ಅಚ್ಚರಿಯೆಂದರೆ, ಲಾರೆನ್ಸ್ ಆಂಟೋನಿ ತೀರಿಕೊಂಡ ಒಂದು ವರ್ಷಕ್ಕೆ ಸರಿಯಾಗಿ ಮತ್ತೆ ಅವನ ಮನೆ ಹತ್ತಿರ ಬಂದ ವಿವರಗಳ ವಿಡಿಯೊ ಜಾಲತಾಣದಲ್ಲಿ ಲಭ್ಯವಿದೆ. (https://www.facebook.com/share/v/19QLmn2dqw/). ಕಾಡಾನೆಗಳ ಈ ವರ್ತನೆ ವಿಜ್ಞಾನದ ತೆಕ್ಕೆಗೂ ಇನ್ನೂ ಸಿಕ್ಕಿಲ್ಲ.

ಹೆಚ್ಚುತ್ತಿರುವ ಸಂಘರ್ಷ

ಮನುಷ್ಯನ ಊಹೆಗೂ ನಿಲುಕದ ವರ್ತನೆಯನ್ನು ಈ ಬೃಹತ್ ದೇಹಿಗಳು ತೋರುತ್ತವೆ. ಬಹಳ ಬುದ್ಧಿಮತ್ತೆಯನ್ನು ಹೊಂದಿರುವ ಕಾಡಾನೆಗಳು ಕಾರಣವಿಲ್ಲದೇ ಮನುಷ್ಯನಿಗೆ ತೊಂದರೆ ನೀಡುವುದಿಲ್ಲ. ಕರ್ನಾಟಕ ಅತಿಹೆಚ್ಚು ಆನೆಗಳನ್ನು ಹೊಂದಿದ ರಾಜ್ಯ ಎಂಬ ಖ್ಯಾತಿ ಪಡೆದಿದೆ. ಅಂತೆಯೇ, ಮಾನವ-ವನ್ಯಜೀವಿ ಸಂಘರ್ಷವೂ ದಿನೇ ದಿನೇ ಹೆಚ್ಚುತ್ತಿದೆ.

ಈಗೊಂದು ಹತ್ತು ದಿನಗಳ ಹಿಂದೆ ಶಿವಮೊಗ್ಗದ ಶೆಟ್ಟಿಹಳ್ಳಿ ಅಭಯಾರಣ್ಯದಲ್ಲಿ ಹರೆಯದ ಸಲಗ ವಿದ್ಯುತ್ ತಂತಿಗೆ ಸಿಲುಕಿ ಮೃತಪಟ್ಟಿತು. ಶೆಟ್ಟಿಹಳ್ಳಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಸುಮಾರು 7-8 ಸಂಖ್ಯೆಯ ಕಾಡಾನೆಯ ಹಿಂಡು ತನ್ನ ನೆಲೆಯನ್ನು ಕಂಡುಕೊಂಡಿದೆ. ಅಭಯಾರಣ್ಯದ ವ್ಯಾಪ್ತಿಯಲ್ಲಿ ಅನೇಕ ಹಳ್ಳಿಗಳೂ ಇವೆ. ಹಳ್ಳಿ ಎಂದರೆ ರೈತಾಪಿ ಕೆಲಸ ತಾನೇ. ಅಲ್ಲೊಬ್ಬ ರೈತ ಜಮೀನಿನಲ್ಲಿ ಜೋಳವನ್ನು ಬೆಳೆದುಕೊಂಡಿದ್ದ. ರೈತರು ಅರಣ್ಯ ಇಲಾಖೆಗೆ ಆನೆಗಳು ಬಂದು ತಮ್ಮ ಬೆಳೆಗಳನ್ನು ಹಾಳು ಮಾಡುತ್ತಿವೆ ಎಂದು ದೂರಿದರು. ಕಾಡಾನೆಗಳ ವರ್ತನೆಗಳ ಕುರಿತಾಗಿ ಹಳ್ಳಿಗರಿಗೆ ಮಾಹಿತಿ ನೀಡುವುದು, ಅವುಗಳ ಪಥ ಏನಾದರೂ ಛಿದ್ರವಾಗಿದೆಯೇ ಎಂದು ಪತ್ತೆ ಹಚ್ಚುವುದು ಮತ್ತು ಅದಕ್ಕೆ ತಕ್ಕ ಪರಿಹಾರ ಕಂಡುಕೊಳ್ಳುವುದು ಇಂತಹ ಸಾಧ್ಯತೆಗಳನ್ನು ಚಿಂತಿಸಬೇಕಾದ ಅರಣ್ಯ ಇಲಾಖೆ, ಏಕಾಏಕಿ ಕಾಡಾನೆಗಳ ಹಿಂಡನ್ನು ಭದ್ರಾ ಅಭಯಾರಣ್ಯಕ್ಕೆ ಓಡಿಸುವ ತಪ್ಪು ನಿರ್ಧಾರ ಕೈಗೊಂಡಿತು ಹಾಗೂ ಕಾಡಾನೆಗಳ ಹಿಂಡನ್ನು ಓಡಿಸಲು ಪಟಾಕಿ ಸಿಡಿಸಿತು. ಈ ಗಲಾಟೆ ಗೌಜಿನಲ್ಲಿ ಒಂದು ಯುವ ಸಲಗ ಗುಂಪಿನಿಂದ ಬೇರೆಯಾಯಿತು.

ಹಿಂಡಿನಿಂದ ಬೇರೆಯಾದ ಅನನುಭವಿ ಯುವ ಆನೆಯು ಗುಂಪನ್ನು ಸೇರುವ ಪ್ರಯತ್ನದಲ್ಲಿತ್ತು. ಇತ್ತ ರೈತನಿಗೆ ತನ್ನ ಬೆಳೆಯನ್ನು ಆನೆಗಳು ಹಾಳು ಮಾಡುತ್ತವೆ. ಅವುಗಳಿಗೆ ತಕ್ಕ ಶಾಸ್ತಿ ಮಾಡಬೇಕು ಎಂದುಕೊಂಡು ಜಮೀನಿನ ಸುತ್ತಲು ವಿದ್ಯುತ್ ತಂತಿಯನ್ನು ಹರಿಸಿದ್ದ. ಗುಂಪಿನಿಂದ ಬೇರೆಯಾದ ಉದ್ವಿಗ್ನಗೊಂಡ ಯುವ ಆನೆಗೆ ವಿದ್ಯುತ್ ತಂತಿ ತನ್ನ ಪ್ರಾಣಕ್ಕೆ ಎರವಾಗಲಿದೆ ಎಂದು ತಿಳಿದಿರಲಿಲ್ಲ. ವಿದ್ಯುತ್ ತಂತಿ ಸೊಂಡಿಲಿಗೆ ತಾಗುತ್ತಿದ್ದಂತೆಯೇ ಆ ಆನೆ ಧರಾಶಾಯಿಯಾಯಿತು. ಅತ್ತ ವಿದ್ಯುತ್ ತಂತಿ ಹರಿಸಿದ ರೈತನ ಮೇಲೆ ಅರಣ್ಯ ಇಲಾಖೆ ಮೊಕದ್ದಮೆ ಹೂಡಿತು.

ಕಡೆಯದಾಗಿ: ಯಾವುದೇ ವನ್ಯಜೀವಿಗಳಿರಲಿ, ಪ್ರಜ್ಞಾಪೂರ್ವಕವಾಗಿ ಮನುಷ್ಯನಿಗೆ ತೊಂದರೆ ನೀಡುವ ಯಾವ ಇಚ್ಛೆಯೂ ಅವುಗಳಿಗೆ ಇರುವುದಿಲ್ಲ. ನಮ್ಮಗಳ ಜನಸಂಖ್ಯೆ ಹೆಚ್ಚಾದ ಕಾರಣಕ್ಕೆ ವನ್ಯಜೀವಿಗಳ ಆವಾಸಸ್ಥಾನ ಕಡಿಮೆಯಾಗುತ್ತಿದೆ. ಇದರಿಂದಾಗಿ, ನೈಸರ್ಗಿಕ ಸೇವೆ ನೀಡುವ ಜೀವಿವೈವಿಧ್ಯ ಪ್ರಭೇದಗಳ ಸಂಖ್ಯೆಯೂ ಕ್ಷೀಣಿಸುತ್ತಿದೆ. ಪರಿಸರ ನಾಶವಾದರೆ, ಅದರಿಂದ ಈ ಭೂಮಿಗೇನು ನಷ್ಟವಿಲ್ಲ. ಅಂತಿಮವಾಗಿ ಸಂತ್ರಸ್ತನಾಗುವವನು ಮನುಷ್ಯನೇ. 'ಮನುಷ್ಯನಿಗೆ ಪ್ರಕೃತಿಯ ಅವಶ್ಯಕತೆ ಇದೆಯೇ ಹೊರತು ಪ್ರಕೃತಿಗೆ ಮನುಷ್ಯನ ಅವಶ್ಯಕತೆ ಇಲ್ಲ' ಎಂದು ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಹೇಳಿರುವ ಮಾತು ಅರ್ಥಪೂರ್ಣ.

ಸಂತರ ಶರೀರ: ಶತಮಾನದ 3ನೇ ದರ್ಶನ



ಸಂತ ಕ್ಸೇವಿಯರ್ ಅವರ ಪಾರ್ಥಿವ ಶರೀರವಿರುವ ಗೋವಾದ 'ಬಸೀಲಿಕ ದೊ ಬೋಮ್ ಜೇಸುಸ್'

ಎಫ್. ಎಂ. ನಂದಗಾವ್

ಡಿಸೆಂಬರ್ 3 ಸಂತ ಫ್ರಾನ್ಸಿಸ್ ಕ್ಸೇವಿಯರ್ ಸ್ಮರಣೆಯ ವಾರ್ಷಿಕ ಹಬ್ಬ ಮತ್ತು ಅದೇ ಮಾಸದ ಕೊನೆಯಲ್ಲಿ ಯೇಸುವಿನ ಜನ್ಮದಿನ ಕ್ರಿಸ್ಮಸ್ ಸಂಭ್ರಮ. ಹೀಗಾಗಿ ಗೋವಾ ಮದುವಣಗಿತ್ತಿಯಂತೆ ಸಿಂಗಾರಗೊಳ್ಳುವುದನ್ನು ನೋಡಿಯೇ ಕಣ್ತುಂಬಿಕೊಳ್ಳಬೇಕು.

ಪೂರ್ವದ ನಾಡಿನ ಅಪೋಸ್ತಲರು ಎಂದು ಕ್ಯಾಥೋಲಿಕ್ ಕ್ರೈಸ್ತರು ಗುರುತಿಸುವ, ಗೋವಾದ ಸಂತ ಫ್ರಾನ್ಸಿಸ್ ಕ್ಸೇವಿಯರ್ ಪವಿತ್ರ ಶರೀರದ ಸಾರ್ವಜನಿಕ ಪ್ರದರ್ಶನ ಹಳೆಯ ಗೋವಾದ ಸಂತ ಕ್ಯಾಥರೀನ್ ಪ್ರಧಾನಾಲಯದಲ್ಲಿ ಆರಂಭವಾಗಿದೆ. ಇದು ಈ ಶತಮಾನದ 3ನೇ ಸಾರ್ವಜನಿಕ ಪ್ರದರ್ಶನವಾಗಿದೆ. 2025ರ ಜ.5ರವರೆಗೆ ಈ ಪ್ರದರ್ಶನ ನಡೆಯಲಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು, ಪ್ರವಾಸಿಗರು ಗಾಜಿನ ಪೆಟ್ಟಿಗೆಯಲ್ಲಿರುವ ಪವಿತ್ರ ಶರೀರದ ದರ್ಶನ ಪಡೆಯುತ್ತಿದ್ದಾರೆ.

ಕ್ಯಾಥೋಲಿಕ್ ಕ್ರೈಸ್ತರ ವಿಶ್ವಾಸದಂತೆ, ದೇವರ ಕೊಡುಗೆಯ ಕಾರಣ ನಿಸರ್ಗದ ನಿಯಮಗಳನ್ನು ಮೀರುವ ಹಲವು ಸಂತರ ಉಸಿರಿಲ್ಲದ ಶರೀರ ಮತ್ತು ಅವರು ಬಳಸಿದ ವಸ್ತುಗಳು ಹಾಳಾಗುವುದಿಲ್ಲ. ಸಂತ ಕ್ಸೇವಿಯರ್ ಅವರ ಶರೀರವನ್ನು ಶತಮಾನಗಳಿಂದ ಗೋವಾದ 'ಬಸೀಲಿಕ ದೊ ಬೋಮ್ ಜೇಸುಸ್'ನಲ್ಲಿ ಕಾಪಿಡಲಾಗಿದ್ದು, ಅದು ವಿಶ್ವದಾದ್ಯಂತ ಹರಡಿರುವ ಕ್ರೈಸ್ತ ಬಾಂಧವರನ್ನು ತನ್ನತ್ತ ಸೆಳೆಯುತ್ತಿದೆ.

ಯುರೋಪಿನ ಸ್ಪೇನ್ ದೇಶದ ನವಾರದಲ್ಲಿ 1506ರ ಏಪ್ರಿಲ್ 7ರಂದು ಹುಟ್ಟಿದ ಫ್ರಾನ್ಸಿಸ್ ಕ್ಸೇವಿಯರ್ ಅರಸು ಮನೆತನಕ್ಕೆ ಸೇರಿದವರು. ಪ್ರೊಟೆಸ್ಟಂಟ್ ಸುಧಾರಣಾ ಚಳವಳಿಯಿಂದ ಬಸವಳಿದಿದ್ದ ಕ್ಯಾಥೋಲಿಕ್ ಸಭೆಯನ್ನು ಬಲಪಡಿಸುವ ಆಶಯದಲ್ಲಿ ಸಂತ ಇಗ್ನೇಷಿಯಸ್ ನೇತೃತ್ವದಲ್ಲಿ ಆರಂಭವಾದ ಕ್ಯಾಥೋಲಿಕ್ ಕ್ರೈಸ್ತ ಪಂಥದ ಧರ್ಮ ಪ್ರಚಾರಕ ಗುರುಗಳ ಸಭೆ- ಯೇಸುಸಭೆಯ (ಜೆಸ್ವಿಟ್) ಏಳು ಸಂಸ್ಥಾಪಕ ಗುರುಗಳಲ್ಲಿ ಇವರೂ ಒಬ್ಬರು. ಈ ಹೆಸರುಗಳು ಕನ್ನಡದಲ್ಲಿ 'ಚೌರಪ್ಪ' ಮತ್ತು 'ಇನ್ನಾಸಪ್ಪ' ಎಂದು ರೂಪಾಂತರಗೊಂಡಿವೆ.

ಗೋವಾದ ಆಡಳಿತಾಧಿಕಾರಿಯ ಕೋರಿಕೆಯಂತೆ ಪೋಪರು ಆಯ್ಕೆ ಮಾಡಿದ ಗುರುಗಳು ಅಸ್ವಸ್ಥರಾದಾಗ, ಅವರ ಬದಲಿಗೆ 1542ರಲ್ಲಿ ಗೋವಾಕ್ಕೆ ಬಂದಿಳಿದ ಫ್ರಾನ್ಸಿಸ್ ಕ್ಸೇವಿಯರ್, ಬಡವರು, ದೀನ ದಲಿತರು ಮತ್ತು ರೋಗಿಗಳ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಅನಾಥರ, ಕುಷ್ಠರೋಗಿಗಳ ಆರೈಕೆ ಮಾಡುತ್ತಾರೆ. ಪ್ರಾರ್ಥನೆ, ಧ್ಯಾನದಲ್ಲಿ ತೊಡಗುತ್ತಿದ್ದ ಅವರು, ಸಾಮಾನ್ಯರೊಂದಿಗೆ ಬೆರೆತು ಜನಾನುರಾಗಿಯಾಗುತ್ತಾರೆ. ದಕ್ಷಿಣ ಭಾರತದ ಕರಾವಳಿಯಲ್ಲೂ ಧರ್ಮ ಪ್ರಚಾರ ಕೈಗೊಳ್ಳುತ್ತಾರೆ.

12ನೇ ಪುಟಕ್ಕೆ...

ಎಲೆಲೆ ಎಲೆಯೇ? ಏನು ನಿನ್ನ ಲೀಲೆ

ಮಂಗಳೂರಿನ ಸಾವಯವ ಬಳಗದ 'ಎಲೆ ಅರಿವು' ಕಾರ್ಯಕ್ರಮ ಸೊಪ್ಪಿನಿಂದ ಆಗುವ ಆರೋಗ್ಯ ಲಾಭಗಳು, ತಯಾರಿಸಬಹುದಾದ ಖಾದ್ಯಗಳು ಮತ್ತಿತರ ವಿಚಾರಗಳೊಂದಿಗೆ ಸಸ್ಯ ಪ್ರಪಂಚವನ್ನು ತೆರೆದಿಟ್ಟಿತ್ತು..

ಸರೋಜಾ ಪ್ರಕಾಶ

ಅಲ್ಲಿ ಸಾಲಾಗಿ ಬೆಂಚ್ ಮೇಲೆ ಜೋಡಿಸಿಟ್ಟ ಐವತ್ತಕ್ಕೂ ಹೆಚ್ಚು ಸೊಪ್ಪುಗಳ ಕಂತೆಗಳು. ಪ್ರತಿಯೊಂದಕ್ಕೂ ಒಪ್ಪವಾಗಿ ಬರೆದ ಹೆಸರುಗಳು. ನೋಡುತ್ತಾ ಹೋದಂತೆ ಸಾಮಾನ್ಯವಾಗಿ ಪರಿಚಯವಿರುವ ಸಾಲಿನಲ್ಲಿ ಅಪರಿಚಿತವಾದ ಸೊಪ್ಪುಗಳೇ ಅಧಿಕವಿದ್ದವು. ಸಾಂಬ್ರಾಣಿ, ನುಗ್ಗೆ, ಬಸಳೆ, ನೆಲನೆಲ್ಲಿಗಳಂತಹ ಕೆಲವು ನಿತ್ಯ ಕಾಣಸಿಗುವಂಥವೂ ಇದ್ದವು. ಕಚೂರ, ಪಂಚಪತ್ರೆ ಮುಂತಾದ ಹೆಸರು ಕೇಳಿದ, ನಾಯಿ ತುಳಸಿ, ಇಲಿಕಿವಿ, ಸಾಲಿಗ ಬಳ್ಳಿ, ಹಾಡೆ ಬಳ್ಳಿ, ಪುಳಿಯರ್ಲಿ, ಸೀಗೆಕುಡಿ, ಕೊಡೆಗಿಡ ಮುಂತಾದ ಇನ್ನೂ ಕೆಲವು ಕಂಡರಿಯದ ಗಿಡಗಳು ಮಂಗಳೂರಿನ ಭಾರತಿ ಕಾಲೇಜಿನಲ್ಲಿ ಸಾವಯವ ಬಳಗವು ಹಮ್ಮಿಕೊಂಡ 'ಎಲೆ ಅರಿವು' ಕಾರ್ಯಕ್ರಮದಲ್ಲಿದ್ದವು.

ಅತಿಥಿಗಳಲ್ಲೊಬ್ಬರಾದ ಪಿಲಿಕುಳದ ಉದಯಕುಮಾರ್ ಶೆಟ್ಟಿ ಅವರು ಒಳಗೆ ಬಂದವರೇ ಚೀಟಿಯೊಂದನ್ನು ಪಡೆದು ಅದರಲ್ಲಿ ಹೆಸರು ಬರೆದು ತಮ್ಮ ಕೈಯ್ಯಲ್ಲಿದ್ದ ಗಿಡವನ್ನು ಉಳಿದ ಸೊಪ್ಪುಗಳ ಸಾಲಿನಲ್ಲಿ ಜೋಡಿಸಿಟ್ಟರು. ಅದೇ ಕೋಳಿಕಾಲಿನ ಗಿಡ. 'ನಂಗೀಗ ಹೊರಗಡೆ ಅಂಗಳದಲ್ಲಿ ಕಾಣಿಸಿತು, ಸಾಂಬಾರ್‌ಗೆ ಇದು ತುಂಬ ಒಳ್ಳೆಯದಾಗುತ್ತೆ' ಎಂದು ಆ ಗಿಡ ಕುರಿತು ವಿವರ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಿಬ್ಬರ ಹೆಸರೂ ಪಾರ್ವತಿ. ಇಬ್ಬರೂ ಎಲೆ, ಸಸ್ಯ ಮತ್ತು ಮನೆಮದ್ದಿನ ವಿಷಯಗಳಲ್ಲಿ ಅಪಾರ ತಿಳಿವಳಿಕೆ ಹೊಂದಿರುವವರು. ಎಲೆ, ದಂಟು ಬಾಡಿದರೂ ಮೂಸಿ ಇದು ಇಂಥದ್ದೇ ಎಂದು ಖಚಿತವಾಗಿ ಹೇಳಬಲ್ಲವರು.

ಅಂದು ಮೂರು ಜಾತಿಯ ಎಲೆಗಳನ್ನು ಸಭಿಕರಿಗೆ ತಿನ್ನಲೆಂದು ಹಂಚಲಾಯಿತು. ನಮ್ಮ ಸುತ್ತಲಿನ ಅನೇಕ ಗಿಡಗಳು ನಿರ್ಲಕ್ಷಿತ ಗಿಡಗಳು, ದೇಹದ ವಿಷ ಹೊರ ತೆಗೆಯುವಂತಹ ಉತ್ತರಣೆಯಂತಹ ಗಿಡಗಳಿವೆ. ನೋವನ್ನು ಮರೆಸುವ, ನಿವಾರಿಸುವ ಚರ್ಮರೋಗಕ್ಕೆ ರಾಮಬಾಣವಾಗುವ ಎದೆಹಾಲು ಹೆಚ್ಚಿಸುವ, ನಿತ್ರಾಣ ಹೋಗಲಾಡಿಸುವ ಸೊಪ್ಪುಗಳಿವೆ. ಸೊಪ್ಪುಗಳ ಮಹತ್ವದ ಬಗ್ಗೆ ಅರಿಯಿರಿ ಎಂದ ಆ ಹಿರಿಯರ ಪ್ರಕಾರ 'ಒಳ್ಳೆಯದೆಂದು ಅತಿ ಬಳಕೆ ಸಲ್ಲದು, ಕ್ರಮಬದ್ಧವಾಗಿ, ನಿಯಮಿತವಾಗಿ ಸೇವಿಸಿದಾಗ ಮಾತ್ರ ಸೊಪ್ಪು ಔಷಧಿಯಾಗಿ ಪರಿವರ್ತನೆಯಾಗುತ್ತದೆ..'



ಅಡುಗೆ ಮಾಡಿ ನೋಡಿರಣ್ಣ ಈ ಸೊಪ್ಪಿನ ರುಚಿಯ...

ಉದಯಕುಮಾರ್ ಶೆಟ್ಟಿ ಅವರು ಮರಗಿಡಗಳ ಪರಿಣತರು, ಅಪಾರ ಓದು, ಓಡಾಟದ ಮೂಲಕ ದೇಶದ ಮೂಲೆಮೂಲೆಯ ಜನಪದ ಪದ್ಧತಿಗಳ ಬಗ್ಗೆ ಅರಿತವರು. 'ವಿದೇಶಿಯರು ಇಲ್ಲಿಗೆ ಬಂದು ಕಾಡಿನ ಜನರೊಂದಿಗೆ ಮಾತನಾಡಿ ಅಧ್ಯಯನ ನಡೆಸುತ್ತಾರೆ. ಆದರೆ ನಾವು ಈ ಮೌಖಿಕ ಪರಂಪರೆಗೆ ಬೆಲೆ ಕೊಡುತ್ತಿಲ್ಲವಲ್ಲ, ದಾಖಲಾತಿ ಅಧ್ಯಯನ ನಡೆಯುತ್ತಿಲ್ಲವಲ್ಲ' ಎಂದು ವಿಷಾದಿಸುವ ಅವರು, 'ಹುಲ್ಲಿನಲ್ಲಿ ನೂರಾರು ವಿಧ ಇವೆ. ಭದ್ರಮುಷ್ಟಿ, ಗರಿಕೆಯ ಹೊರತಾಗಿ ಬೇರೆ ಹುಲ್ಲುಗಳ ಕುರಿತು ಸಂಶೋಧನೆ ನಡೆಯಬೇಕಾಗಿದೆ. ಗುಡ್ಡೆ ಕೇಪುಳ, ಕುಂಟಾಲ ಮುಂತಾದ ಬೆಟ್ಟಗುಡಗಳಲ್ಲಿ ಬಿಸಿಲಿಗೆ ಮೈಯ್ಯೊಡ್ಡಿ ಬೆಳೆಯುವ ಸಸ್ಯೌಷಧಗಳ ಬಗ್ಗೆ ಶೋಧಗಳು ನಡೆಯುತ್ತಿಲ್ಲ. ಆದರೆ ಇಡೀ ಗುಡ್ಡಗಳೇ ಕುಸಿದು ಮಣ್ಣಾಗುತ್ತಿವೆ' ಎನ್ನುತ್ತಾ ಪರಿಸರವಿನಾಶದ ಕುರಿತು ಎಚ್ಚರಿಸಿದರು.

ದೇವಿಕಾ ಮತ್ತು ಮಂಜುಳಾ ಸೋದರಿಯರು ತಾವು ತಂದಿದ್ದ ಸೊಪ್ಪಿನ ಮೂಟೆಯಿಂದ ಬಿಡಿಬಿಡಿ ಸೊಪ್ಪಿನ ಕಂತೆಗಳನ್ನು ಚಕಚಕನೆ ಜೋಡಿಸಿಟ್ಟುಕೊಂಡು ಸುಮಾರು ಐವತ್ತು ವಿವಿಧ ಸೊಪ್ಪುಗಳ ಕನ್ನಡ, ಸಂಸ್ಕೃತ ಹಾಗೂ ವೈಜ್ಞಾನಿಕ ಹೆಸರುಗಳನ್ನು ಹೇಳಿದರು. ಬಳಕೆಯ ವಿಧಾನವನ್ನು ಚುಟುಕಾಗಿ, ಚುರುಕಾಗಿ ಆದರೆ ಸ್ಪಷ್ಟವಾಗಿ ವಿವರಣೆ ಕೊಟ್ಟರು. ಈ ಸೋದರಿಯರ ವಿಶೇಷವೆಂದರೆ, ಇಬ್ಬರೂ ಕೃಷಿ ಡಿಪ್ಲೊಮಾ ಓದಿದವರು. ಒಬ್ಬಾಕೆ ಜೇನು ಕೃಷಿ, ಇನ್ನೊಬ್ಬಾಕೆ ಕಸಿಕಟ್ಟುವ ಕಲೆಯಲ್ಲಿ ಆಳ ಅಧ್ಯಯನ ನಡೆಸುತ್ತ ವೃತ್ತಿಪರರಾಗುವತ್ತ ಹೆಜ್ಜೆಯನ್ನಿಡುತ್ತಿದ್ದಾರೆ. ಮಂಗಳೂರಿನ ಸಾವಯವ ಬಳಗ ಸೃಷ್ಟಿಸಿದ ಪೇಟೆ ಕೃಷಿಕ ಸಮುದಾಯಕ್ಕೆ ವಾರವಾರವೂ ಎಳೆಯ ತರಕಾರಿ ಮತ್ತು ಸೊಪ್ಪಿನ ಗಿಡಗಳನ್ನು ಪೂರೈಸುತ್ತಿದ್ದಾರೆ. ಇವರಿಗೆ ತಂದೆ ಹರಿಕೃಷ್ಣ ಕಾಮತ್ ಅವರೇ ಮಾರ್ಗದರ್ಶಕರು.



ಮಂಗಳೂರಿನಲ್ಲಿ ನಡೆದ 'ಎಲೆ ಅರಿವು' ಕಾರ್ಯಕ್ರಮದಲ್ಲಿ ಪ್ರದರ್ಶನಕ್ಕಿಟ್ಟ ಸೊಪ್ಪಿನ ಸಸಿಗಳು

ಶಿಬಿರಾರ್ಥಿಗಳಿಗೂ ತಮ್ಮ ಅಂಗಳದ ಸೊಪ್ಪುಗಳ ಬಗ್ಗೆ ಹೇಳಿಕೊಳ್ಳಲು ತುಸು ಅವಕಾಶವಿತ್ತು. ನುಗ್ಗೆಸೊಪ್ಪಿನ ಚಟ್ನಿಪುಡಿ, ದಾಲ್ಚಿನ್ನಿ ಎಲೆಯಲ್ಲಿ ಬೇಯಿಸಿದ ಕಡುಬು, ಹತ್ತೆಂಟು ಚಿಗುರೆಲೆಗಳನ್ನು ಬಳಸಿ ಮಾಡಿದ ತೊಕ್ಕು, ವಿಧವಿಧ ತಂಬುಳಿ, ಚಟ್ನಿಗಳನ್ನು ತಯಾರಿಸಿ ತಂದವರಿದ್ದರು. ಸೊಪ್ಪುಗಳನ್ನು ಕಾಗದದಲ್ಲಿ ಸುತ್ತಿಟ್ಟು ಮೇಲೆ ನೀರು ಚಿಮುಕಿಸಿಟ್ಟರೆ ದೀರ್ಘಾವಧಿಯವರೆಗೆ ಕಾಪಿಡಬಹುದು ಎಂದು ತಾವು ಕೊಯ್ದು ತಂದ ನಳನಳಿಸುವ ಸೊಪ್ಪನ್ನು ತೋರಿದವರೊಬ್ಬರು. ತಮ್ಮ ಕೈತೋಟದಿಂದ ಕೀಟವಿಕರ್ಷಕ, ಮುದ ಹೆಚ್ಚಿಸುವ ಮತ್ತು ಅಲಂಕಾರಿಕವಾಗಿಯೂ ಬೆಳೆಯಬಹುದಾದ ಸುವಾಸನಾಯುಕ್ತ ಪಚ್ಚೆತೆನೆ, ಪುದಿನಾ, ವಾತಂಗಿ ಈ ಎಲೆಗಳನ್ನು ತಂದವರೊಬ್ಬರು. ಅಂಗಳದ ಸೊಪ್ಪುಗಳನ್ನು ಬಳಸಬೇಕು, ಬಳಸಬೇಕೆಂದರೆ ಮೊದಲು ಬೆಳೆಯಬೇಕು, ಇತರರಿಗೆ ಮಾಹಿತಿ ಮತ್ತು ಬೆಳೆ ಹಂಚಬೇಕು ಎಂಬ ಮಾತೂ ಅಲ್ಲಿ ಧ್ವನಿಸಿತು.

ಮಹಿಳೆಯೊಬ್ಬರು ವೇದಿಕೆಗೆ ಬಂದು ತಾವು ತಂದ ಸೊಪ್ಪಿನ ಚಟ್ನಿ ಮಾಡುವ ಬಗೆಯನ್ನು ವಿವರಿಸಿ ಜೊತೆಗೇ 'ಬೀಟ್‌ರೂಟ್ ರಸ ತೆಗೆದು ಸಣ್ಣ ಉರಿಯಲ್ಲಿ ಕುದಿಸಿ ದಪ್ಪವಾದಾಗ ಹಸುವಿನ ತುಪ್ಪ ಒಂದೆರಡು ಹನಿ ಸೇರಿಸಿ ಲಿಪ್‌ಸ್ಟಿಕ್ ಆಗುತ್ತೆ' ಎನ್ನುತ್ತ ತಮ್ಮ ಕೆಂಪುತುಟಿಯ ರಂಗಿನ ಗುಟ್ಟನ್ನು ಬಹಿರಂಗಗೊಳಿಸಿದಾಗ ನಗೆಬುಗ್ಗೆ ಚಿಮ್ಮಿತ್ತು.

ಮೊದ ಮೊದಲು ಹೆಸರು ಕೊಟ್ಟ ಮೂವತ್ತೈದು ಜನರಷ್ಟೇ ಸೇರಿದರೂ ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಕೊಠಡಿ ತುಂಬಿ ಪ್ರತಿಯೊಬ್ಬರ ಕೈಯ್ಯಲ್ಲೂ ಸೊಪ್ಪಿನ ಕಂತೆಗಳಿದ್ದವು!

ಮಾಯವಾಗುತ್ತಿದೆ ಮಾವಿನಕೂರ್ವೆ ಬೀಗ

ಬೀರಣ್ಣ ನಾಯಕ ಮೊಗಟಾ

ಅದೊಂದು ಕಾಲದಲ್ಲಿ 'ಮಾವಿನಕೂರ್ವೆ ಬೀಗ ಮನೆಗೆ, ಕರಡದ ಹೊದಿಕೆ ಕೊನೆಗೆ' ಎಂಬ ಮಾತಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆಮಾತಾಗಿದ್ದ ಮಾವಿನಕೂರ್ವೆ ಬೀಗದ ಬಗ್ಗೆ ಜನರಿಗೆ ಅಪಾರ ನಂಬಿಕೆ ಇತ್ತು. ಅಡಿಕೆಯ ಕೊನೆಗೆ ಕರಡದಿಂದ ಹೊದಿಕೆ ಮಾಡಿದರೆ ಹೇಗೆ ಅಡಿಕೆಗೆ ಕೊಳೆ ರೋಗ ಬರುವದಿಲ್ಲವೋ ಹಾಗೆ ಮನೆಗೆ ಮಾವಿನಕೂರ್ವೆ ಬೀಗ ಹಾಕಿದರೆ ಬೀಗ ಮುರಿಯಲಾಗದು ಎಂಬ ಗಟ್ಟಿ ನಂಬಿಕೆ. ಅದು ನಿಜವೂ ಆಗಿತ್ತು. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಅಂಗಡಿ ಮುಂಗಟ್ಟುಗಳಿಗೆ ಮಾವಿನಕೂರ್ವೆ ಬೀಗಗಳೆ ರಕ್ಷಕರಾಗಿ ಕಾದ ಕಾಲವದು. ಹೆಚ್ಚು ಮಾತಾಡುವವರಿಗೆ 'ಅವನ ಬಾಯಿಗೆ ಮಾವಿನಕೂರ್ವೆ ಬೀಗ ಜಡೀರಿ' ಎನ್ನುವ ಮಾತು ಈ ಭಾಗದಲ್ಲಿ ಇನ್ನು ಚಾಲ್ತಿಯಲ್ಲಿದೆ.

ಶತಮಾನಗಳ ಇತಿಹಾಸ ಹೊಂದಿದ ಮಾವಿನಕೂರ್ವೆ ಬೀಗ ತಯಾರಾಗುತ್ತಿದ್ದದ್ದು ಹೊನ್ನಾವರದ ಶರಾವತಿ ನಡುಗಡ್ಡೆಯಲ್ಲಿ ಒಂದಾದ ಮಾವಿನಕೂರ್ವೆಯಲ್ಲಿ. ಹೀಗಾಗಿ ಆ ಬೀಗಕ್ಕೆ ಮಾವಿನಕೂರ್ವೆ ಎನ್ನುವ ಹೆಸರು ಬಂದಿದೆ. ವಿವಿಧ ರೀತಿಯಲ್ಲಿ ತಯಾರಿಸುವ ಶುದ್ಧ ಕಬ್ಬಿಣದ, ಒಂದೇ ವಿನ್ಯಾಸದ ಹಲವು ಆಕಾರದ ಮಾವಿನಕೂರ್ವೆ ಬೀಗಗಳಲ್ಲಿ ಎರಡು ಚಾವಿ ಬೀಗ, ಮೂರು ಚಾವಿ ಬೀಗ ಅತ್ಯಂತ ಜನಪ್ರಿಯವಾಗಿತ್ತು. ನಕಲಿ ಚಾವಿ ಮಾಡಲಾಗದ ಗ್ರಾಮೀಣ ತಂತ್ರಗಾರಿಕೆಯಿಂದ ಕೈ ಕಸುಬಿನಿಂದ ತಯಾರಾಗುತ್ತಿದ್ದ ಮಾವಿನಕೂರ್ವೆ ಬೀಗವೀಗ ಅವಸಾನದ ಅಂಚಿನಲಿದೆ.



ಮಾವಿನಕೂರ್ವೆ ಬೀಗ ತಯಾರಿಕೆಯಲ್ಲಿಯೇ ಜೀವನ ಸವೆಸಿದ ಹೊನ್ನಾವರ ತಾಲ್ಲೂಕಿನ ಮುಗ್ವಾ ಗ್ರಾಮದ ಚೀನಕೋಡಿನ ದಿವಂಗತ ಶಂಕರ ಆಚಾರಿಯವರ ಮಗ ಅರುಣ ಆಚಾರಿ ಇನ್ನು ಮಾವಿನಕೂರ್ವೆ ಬೀಗ ತಯಾರಿಕೆಯ ಕಸುಬನ್ನು ಬಿಟ್ಟಿಲ್ಲ. ಅವರ ಸೋದರ ಸಂಬಂಧಿ ಮಂಜುನಾಥ ದೇವಪ್ಪಾ ಆಚಾರಿ ಕೂಡ ಈ ಬೀಗ ತಯಾರಿಸುವಲ್ಲಿ ಪರಿಣತರು.



'ಒಂದು ದೊಡ್ಡ ಮಾವಿನಕೂರ್ವೆ ಬೀಗ ತಯಾರಿಸಬೇಕಾದರೆ ಕನಿಷ್ಠ ಎರಡು ದಿನ ಹಿಡಿಯುತ್ತದೆ. ಅದಕ್ಕೆ ಬೇಕಾಗುವ ಕಚ್ಚಾವಸ್ತು ಬೇಕೆಂದರೆ ಹೊನ್ನಾವರಕ್ಕೆ ಹೋಗಬೇಕು. ಅದಕ್ಕೆ ಗರಿಷ್ಠ ಎಂದರೆ ಒಂಬೈನೂರು ರೂಪಾಯಿಯವರೆಗೆ ಬೆಲೆ ಬರುತ್ತದೆ. ಅದಕ್ಕೆ ಕೆಲವೊಮ್ಮೆ ಗ್ರಾಹಕ ಕಾಯಬೇಕಾಗುತ್ತದೆ. ಕಂಪನಿಗಳ ಬೇರೆ ಬೇರೆ ಬೀಗದ ಭರಾಟೆಯಲ್ಲಿ ಮಾವಿನಕೂರ್ವೆ ಬೀಗಕ್ಕೆ ಬೇಡಿಕೆ ಕಡಿಮೆ ಆಗಿದೆ. ಆದರೂ ಈಗಲೂ ಬೆಂಗಳೂರು, ಮುಂಬೈಗಳಿಂದ ಆರ್ಡರ್ ಬರುತ್ತದೆ. ಇದನ್ನೆ ನಂಬಿಕೊಂಡು ಜೀವನ ಮಾಡುವ ಕಾಲ ಮುಗಿದಿದೆ' ಎನ್ನುವುದು ಅರುಣ ಆಚಾರಿಯವರ ಅಂಬೋಣ.

ಹಲವು ಶತಮಾನಗಳ ಇತಿಹಾಸ ಹೊಂದಿರುವ ಮಾವಿನಕೂರ್ವೆ ಬೀಗ ತಂತ್ರಜ್ಞಾನ ಇಷ್ಟು ಮುಂದುವರಿದರೂ ಮಾನವನ ಶಕ್ತಿ ಮತ್ತು ಚಾಣಾಕ್ಷತೆಯ ಬಲದಿಂದಲೇ ಇಂದಿಗೂ ತಯಾರಾಗುತ್ತಲೇ ಇದೆ.

'ಗ್ರಾಮೀಣ ತಂತ್ರಜ್ಞಾನಕ್ಕೆ ಒಂದು ಸವಾಲಾಗಿರುವ ಮಾವಿನಕೂರ್ವೆ ಬೀಗದ ಉಳಿವಿಗೆ ಸರ್ಕಾರ ಚಿಂತನೆ ನಡೆಸಬೇಕಾಗಿದೆ' ಎನ್ನುತ್ತಾರೆ ಸಾಹಿತಿ ಶ್ರೀಪಾದ ಶೆಟ್ಟಿ.

ಕೊಡವರ ಕೀರ್ತಿಗೆ ನಾಟ್ಯದ ಪತಾಕೆ

ಕೋಡಿಬೆಟ್ಟು ರಾಜಲಕ್ಷ್ಮಿ

ಭರತನಾಟ್ಯ ಕಲಾವಿದೆ ಶಿಲ್ಪಾ ನಂಜಪ್ಪ ಹೊಸತನದ ಹುಡುಕಾಟದಲ್ಲಿ ಸದಾ ನಿರತರು. ಪುರೋಹಿತ ಪರಂಪರೆಯ ಹಂಗಿಲ್ಲದ ಕೊಡವ ಆಚರಣೆಗಳ ಸಂಗ್ರಹ ಗ್ರಂಥ, 'ಪಟ್ಟೋಲೆ ಪಳಮೆ' ಯನ್ನು ಆಧರಿಸಿದ ಹಾಡುಗಳನ್ನು, ಕೊಡವ ಜನಪದ ಆಧರಿತ ಹಾಡುಗಳನ್ನು ಭರತನಾಟ್ಯದ ಹೆಜ್ಜೆಗಳಿಗೆ ಅಳವಡಿಸುವ ಪ್ರಯತ್ನವನ್ನು ಶಿಲ್ಪಾ ಇತ್ತೀಚೆಗಿನ ವರ್ಷಗಳಲ್ಲಿ ಮಾಡುತ್ತ ಬಂದವರು. ಅವರ ಪ್ರಯತ್ನಗಳ ಯಶಸ್ವಿ ತುಣುಕೊಂದು ಇತ್ತೀಚೆಗೆ ಮಂಗಳೂರಿನಲ್ಲಿ ಪ್ರದರ್ಶನಗೊಂಡಿತು.

ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಪ್ರಭುತ್ವದ ಉಳಿವಿಗಾಗಿ ತ್ಯಾಗದ ಮೆಟ್ಟಿಲೇರಿದ ಮಾತೃಹೃದಯಗಳ ನಿರೂಪಣೆಯನ್ನೇ ಕೇಂದ್ರವಾಗಿಸಿದ ಕಾರ್ಯಕ್ರಮ 'ಮಂಥನ'. ಇಲ್ಲಿ ಕೊಡಗಿನ ತಾಯಿ ಕಾವೇರಿಯ ನೋವನ್ನು ನೃತ್ಯದ ಹೆಜ್ಜೆಗಳಲ್ಲಿ ವಿಭಿನ್ನವಾಗಿ ಅನಾವರಣಗೊಳಿಸಿದ ಶಿಲ್ಪಾ, ಕೊಡವ ಸಂಸ್ಕೃತಿಯ ಛಾಪೊತ್ತುವಲ್ಲಿ ಯಶಸ್ವಿಯಾದರು 1917ರಲ್ಲಿ ಚಿನ್ನಪ್ಪ ಅಜ್ಜ ರಚಿಸಿದ ಕವಿತೆ 'ಶ್ರೀ ಮೂಲ ಕನ್ನಿಯೇ ಪೊಮ್ಮಾಲೆ ಕೊಡುಮಾಲೆ ಪೊಮ್ಮಾಲೆಂದ್ ನೀ ಚೂಡಿಯೊಳು ಕಾವೇರಿಯಮ್ಮೆ..' ಹಾಡು ಕೊಡವರ ನಾಡಗೀತೆಯಂತೆ ಸ್ವೀಕೃತವಾಗಿದೆ. ಈ ಹಾಡಿನಲ್ಲಿ ಕಾವೇರಿಯಮ್ಮನೇ ಎಲ್ಲರನ್ನೂ ಕಾಯುವ ದೇವತೆ. 'ಈ ನಾಡು ಎಷ್ಟು ಸುಂದರವಾಗಿದೆ ಎಂದರೆ ತಾಯಿ, ನಿನ್ನ ಅಲಂಕಾರಕ್ಕೆ ಚಿನ್ನದಾಭರಣಗಳ ಅಗತ್ಯವೇ ಇಲ್ಲ. ಪ್ರಕೃತಿಯ ಹಸಿರು ಮಾಲೆ ನಿನ್ನ ಕೊರಳ ಅಲಂಕರಿಸುವುದು, ನೀನೇ ಶಕ್ತಿಯಾಗಿ ಪಾರ್ವತಿಯಾಗಿ ಲೋಪಾಮುದ್ರೆಯಾಗಿ ಕೊಡವರನ್ನು ಕಾಪಾಡಲು ಕಾವೇರಿಯಾಗಿ ಇಳಿದು ಬಂದಿರುವೆ' ಎನ್ನುತ್ತ ಮೊದಲ ಭಾಗದಲ್ಲಿ ಕಾವೇರಿಯ ಸ್ತುತಿಯಿದೆ.

ಎರಡನೇ ಭಾಗದಲ್ಲಿ ಕಾವೇರಿಯಮ್ಮನನ್ನು ಮರೆಯುವ ಜನರ ಮೂರ್ಖತನದ ವಿಡಂಬನೆಯಿದೆ. 'ಅಂದು ನಿನ್ನನ್ನು ಅಗಸ್ತ್ಯ ಮುನಿಯು ಕಮಂಡಲುವಿನಲ್ಲಿ ಬಂಧಿಸಲು ಯತ್ನಿಸಿದರೆ ನೀನು ಅಲ್ಲಿಂದ ಚಿಮ್ಮಿ ಬಂಗಾಳ ಕೊಲ್ಲಿಯನ್ನು ಸೇರುವ ನದಿಯಾಗಿ ಹರಿದೆ' ಎನ್ನುತ್ತ, ಆಕೆಯ ಪರವಾಗಿ ನಿಲ್ಲುವುದು ಕೊಡವರ ಧರ್ಮವಲ್ಲದೆ ಮತ್ತೇನು..ಕೊಡವ ನಾಡು ಕಾವೇರಿಯಮ್ಮನಿಗೆ ಸೇರಿದ್ದು ಎಂಬುದನ್ನು ಆಗಾಗ ಮರೆಯುವ ಜನರು ಹುಸಿ ಅಹಂನಿಂದ ಬೀಗುವರು. ಆದರೆ ಇಂತಹ 'ಅಹಂ'ನ ಕೊರಳಹಾರವನ್ನು ಆಕೆಯು ಖಂಡಿತಾ ಒಲ್ಲಳೆಂದು ನದಿಯ ಸ್ವಾಭಿಮಾನವನ್ನು ಹೇಳುವ ಹಾಡಿಗೆ ನರ್ತಿಸಿ ಸಭಿಕರ ಶ್ಲಾಘನೆಯ ಚಪ್ಪಾಳೆ ಗಿಟ್ಟಿಸಿದರು. ರಾಗಮಾಲಿಕೆ ಮತ್ತು ತಾಳಮಾಲಿಕೆಯಲ್ಲಿ ಈ ನೃತ್ಯ ಮೂಡಿಬಂತು.

ಕೊಡವ ಜನಪದವನ್ನು ಭರತನಾಟ್ಯಕ್ಕೆ ಅಳವಡಿಸುವ ಪ್ರಯತ್ನ ಮಾಡಿದವರಲ್ಲಿ ಶಿಲ್ಪಾ ನಂಜಪ್ಪ ಪ್ರಮುಖರು. ನಡಿಕೇರಿಯಂಡ ಚಿಣ್ಣಪ್ಪ ಅವರು 1924ರಲ್ಲಿ ಪ್ರಕಟಿಸಿದ 'ಪಟ್ಟೋಲೆ ಪಳಮೆ' ಕೊಡವರ ಅಸ್ಮಿತೆಯನ್ನು ಸಾರುವ ಗ್ರಂಥ. ಈ ಕೃತಿಯನ್ನು ಶಾಸ್ತ್ರೀಯ ನೃತ್ಯ ಪ್ರಕಾರಕ್ಕೆ ಅಳವಡಿಸುವ ಸಂದರ್ಭದಲ್ಲಿ ಅವರ ಕಲಾಪ್ರೌಢಿಮೆಯು ಪ್ರಬುದ್ಧವಾಗಿದೆ.



ಶಿಲ್ಪಾ ನಂಜಪ್ಪ ಅವರ ನೃತ್ಯದ ಭಂಗಿ

ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

'ಕೊಡವ ಸಂಪ್ರದಾಯ ಮತ್ತು ಪರಂಪರೆಯನ್ನು ನೃತ್ಯದ ಮೂಲಕ ಲೋಕಕ್ಕೆ ಪರಿಚಯಿಸುವ ಪ್ರಯತ್ನ ನನ್ನದು. 2019–21 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಿಸಿಆರ್‌ಟಿ ಫೆಲೋಶಿಪ್ ಪಡೆದು ಈ 'ಕೊಡವ ಜನಪದ ಕಥೆಗಳು ಮತ್ತು ಭರತನಾಟ್ಯ' ವಿಷಯದ ಬಗ್ಗೆ ಅಧ್ಯಯನ ನಡೆಸಿರುವೆ. ಅಧ್ಯಯನ ನನ್ನ ಇಷ್ಟದ ವಿಷಯ' ಎನ್ನುವ ಅವರ ನೃತ್ಯ ಲಾಲಿತ್ಯಪೂರ್ಣವಾದುದು.

ಮೂರನೆಯ ನೃತ್ಯದಲ್ಲಿ ಅವರು ಲಂಪಟ ಪ್ರೇಮಿಯನ್ನು ಟೀಕಿಸುವ 'ಯೇ ತುಂಬಿ' ಎಂಬ ಕೃತಿಗೆ ಮುಗ್ಧನಾಯಿಕೆಯಾಗಿ ನರ್ತಿಸಿದರು. ಕೊನೆಯ ಕೃತಿ ತಿಲ್ಲಾನ ಅವರದ್ದೇ ರಚನೆ. ಕೊಡಗಿನ ಹುತ್ತರಿ ಸಂಭ್ರಮವನ್ನು ಬಿಂಬಿಸುವ ರೀತಿಗೌಳಾ ತಿಲ್ಲಾನದಲ್ಲಿ 'ಪೊಲಿ..ಪೊಲಿ ಪೊಲಿ... ದೇವಾ..' ಎಂದು ಧ್ವನಿಗೂಡಿಸುತ್ತ ಶಿಲ್ಪಾ ನೃತ್ಯ ಪ್ರಸ್ತುತಿಯನ್ನು ಸಂಭ್ರಮದಿಂದ ಸಮಾರೋಪಗೊಳಿಸಿದರು. ಇಗ್ಗುತಪ್ಪ ದೇವರು ಕೊಡವರಿಗೆ ಭತ್ತದ ಕೃಷಿಯನ್ನು ಹೇಳಿಕೊಟ್ಟವರು. ಹಿರಿಯರ ಹಾಡು ಉಮ್ಮತ್ತಾಟ್ ಮತ್ತು ಕೋಲಾಟದ ಅಂಶಗಳನ್ನು ಪರಿಗಣನೆ, ಜನಪದ ಮತ್ತು ಶಾಸ್ತ್ರೀಯತೆಯ ಸಮ್ಮಿಲನವು ಇಲ್ಲಿ ಸ್ಪಷ್ಟವಾಗಿ ಗೋಚರಿಸುವಂತಿತ್ತು. ನೃತ್ಯದಲ್ಲಿ ಸಾಮಾನ್ಯವಾಗಿ ಕಾಣುವ ಧನುರ್ಬಾಣಗಳ ಮುದ್ರೆಗೆ ಬದಲಾಗಿ ಬಂದೂಕು ಹೊಡೆದ ಮುದ್ರೆ ಗಮನ ಸೆಳೆಯಿತು.

ವಿದುಷಿ ರಾಧಿಕಾ ಶೆಟ್ಟಿ ನಿರ್ದೇಶನದ ನೃತ್ಯಾಂಗನ್ ಸಂಸ್ಥೆ ಆಯೋಜಿಸಿದ 'ಮಂಥನ' ಕಾರ್ಯಕ್ರಮದ ಎರಡನೇ ಭಾಗದಲ್ಲಿ ಎರಡು ಮಹಾಕಾವ್ಯಗಳಲ್ಲಿ ಪ್ರಭುತ್ವಕ್ಕಾಗಿ ತ್ಯಾಗ ಮಾಡಿದ ನಾಲ್ವರು ಮಹಿಳೆಯರ ಅಂತರಂಗದ ಧ್ವನಿಯು ಪ್ರಕಟವಾಗಿದೆ. ರಾಕ್ಷಸಿಯೆಂದೇ ನಮಗೆಲ್ಲ ಪರಿಚಿತಳಾದ ಹಿಡಿಂಬೆಯು ಪ್ರೇಮಿಯಾಗಿ, ಅಮ್ಮನಾಗಿ, ಮಗನನ್ನು ಕಳುಹಿಸಿಕೊಡುವ ತ್ಯಾಗಮಯಿ ಅಮ್ಮನನ್ನಾಗಿ ಪರಿಚಯಿಸಿದ್ದು ವಿದುಷಿ ಮಂಜುಳಾ ಸುಬ್ರಹ್ಮಣ್ಯ. ಕಾಡಿನಾದ್ಯಂತ ಸಂತೋಷದಿಂದ ಓಡಾಡುತ್ತ ಸಂಬಂಧಗಳ ಹಂಗಿಲ್ಲದ ಮುಕ್ತ ಜೀವನ ಅವಳದಾಗಿತ್ತು. ಭೀಮನ ಪ್ರೇಮ ಪಾಶದಲ್ಲಿ ಸಿಲುಕಿ ಮಗ ಘಟೋತ್ಕಜನನ್ನು ಹೆಡೆಯುವಷ್ಟರಲ್ಲಿ ಆಕೆಗೆ ಪತಿಯ ಸಾಂಗತ್ಯವಿರಲಿಲ್ಲ. ನೃತ್ಯಜತಿಯಲ್ಲಿ ಘಟೋತ್ಕಜನ ಹುಟ್ಟನ್ನು ಅಭಿವ್ಯಕ್ತಿಗೊಳಿಸುತ್ತಾ ಆತನ ಬಾಲ್ಯ ಬೆಳವಣಿಗೆಯಲ್ಲಿ ಮುಳುಗಿ ಹೋಗಿದ್ದ ಹಿಡಿಂಬೆ ಪ್ರಕಟಗೊಂಡಳು. ಮಾತೃತ್ವವು ಕೊಡುವ ಅನುಭೂತಿಯನ್ನು ವಿಸ್ಮಯದಿಂದ ಅನುಭವಿಸುತ್ತ ಇನ್ನು ಮಗನೊಡನೆಯೇ ನನ್ನ ಬದುಕು ಎಂದು ಭಾವಿಸುವಷ್ಟರಲ್ಲಿ ಭೀಮನು ಬಂದು ಮಗನನ್ನು ಕರೆದೊಯ್ಯುತ್ತಾನಲ್ಲಾ... ಈ ಕ್ಷಣವನ್ನು ಕಲಾವಿದೆ ಸುಂದರವಾಗಿ ಪ್ರಸ್ತುತಪಡಿಸಿದರು. ರಾಕ್ಷಸಿ ಪಾತ್ರವೊಂದರ ಪ್ರಸ್ತುತಿಗೆ ಪ್ರೇಕ್ಷಕರು ಕಣ್ಣಲ್ಲಿ ನೀರು ತುಂಬುವಂತಹ ಕ್ಷಣಗಳನ್ನು ಕಟ್ಟಿಕೊಟ್ಟರು. ಭೀಮನೊಡನೆ ಪ್ರೇಮಾಂಕುರಗೊಳ್ಳುವ ಸಂದರ್ಭದ ಅಭಿವ್ಯಕ್ತಿಗೆ ಅವರು ಮಿಶ್ರ ಜಾತಿಯ ಅಲರಿಪುವನ್ನೇ ಬಳಸಿಕೊಂಡರು. ಪುಟ್ಟ ಪ್ರಸ್ತುತಿಯ ಅವಧಿಯಲ್ಲಿಯೇ ಸಭಿಕರೆದೆಯಲ್ಲಿ ದುಃಖವನ್ನು ಉಕ್ಕಿಸುವಷ್ಟು ಭಾವಾಭಿವ್ಯಕ್ತಿ ಸಶಕ್ತವಾಗಿತ್ತು.

ಇಂತಹುದೇ ಮತ್ತೊಂದು ಕಥೆ ಚಿತ್ರಾಂಗದೆಯದ್ದು. ಆಕೆಯು ರಾಜ್ಯದ ವಾರಸುದಾರೆಯಾಗಿ ಬೆಳೆಯುವಾಗ, ಪ್ರೀತಿ ಪ್ರೇಮದ ಹಂಗು ಬೇಡವೆಂದೇ ನಿರ್ಧರಿಸಿದ್ದಳು. ಆದರೆ ಪ್ರಕೃತಿಯ ಲೀಲೆಯೆಂಬಂತೆ ಅರ್ಜುನನ ಪ್ರೇಮ ಪಾಶದಲ್ಲಿ ಸಿಲುಕಿ ಬಭ್ರುವಾಹನನನ್ನು ಪಡೆಯುತ್ತಾಳೆ. ಹೀಗೆಯೇ ಚೆನ್ನೈಯ ಇಂದುವೇಣು ಕೇಕೈಯಿಯಾಗಿ ರಾಮನ ಪಟ್ಟಾಭಿಷೇಕ ಸಂದರ್ಭವನ್ನು ಪ್ರಸ್ತುತಪಡಿಸಿದರು. ತನ್ನ ಕೈಯ್ಯಾರೆ ಎತ್ತಿ ಆಡಿಸಿದ ರಾಮನು, ಪ್ರಭುವಾಗಿ ಮೇಲೇರುತ್ತ ತನ್ನಿಂದ ದೂರಾದನೇ ಎಂಬ ಕೈಕೇಯಿಯ ಆತಂಕವು ಪ್ರಕಟಗೊಂಡ ಪ್ರಸ್ತುತಿ ಅಭಿನಯ ಪ್ರಧಾನವಾಗಿತ್ತು. ತುಳಸೀದಾಸ ರಾಮಾಯಣದ ತುಣುಕನ್ನು ಇಂದು ಆಯ್ಕೆ ಮಾಡಿಕೊಂಡರೆ, ಕಲಾವಿದೆ ವಿದುಷಿ ರಾಧಿಕಾ ಶೆಟ್ಟಿ, ಮಂಥರೆಯ ಪಾತ್ರದಲ್ಲಿ ವೇದಿಕೆಯೇರಿದರು. ಶ್ರೀ ರಾಮಾಯಣ ದರ್ಶನಂ ಕೃತಿಯ ಗೀತೆಗೆ ನರ್ತಿಸಿದರು. ಮಂಥರೆಯ ಪಾಲಿಗೆ ಎತ್ತಿ ಆಡಿಸಿದ ಕೂಸು ಕೈಕೇಯಿಯೂ ಹೌದು, ರಾಮನೂ ಹೌದು ಎಂಬುದು ಗಮನಾರ್ಹ.

ಮುನ್ನೋಟ 08-12-2024 ರಿಂದ 14-12-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಇರುವುದರಲ್ಲಿ ಸುಖವನ್ನು ಕಾಣಲು ಪ್ರಯತ್ನಪಡುವಿರಿ. ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ವ್ಯವಹಾರಗಳಿಗೆ ನಿಮ್ಮವರಿಂದಲೇ ಅಡ್ಡಿ ಬರುವ ಸಾಧ್ಯತೆ ಇದೆ. ಭೂಮಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಉದರ ಸಂಬಂಧಿ ದೋಷಗಳು ಕಾಡಬಹುದು. ವ್ಯವಹಾರಗಳಲ್ಲಿ ಎಚ್ಚರವಾಗಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಗೌರವಯುತವಾದ ನಡವಳಿಕೆಯನ್ನು ನಿಮ್ಮಲ್ಲಿ ಕಾಣಬಹುದು. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಗರ್ಭಿಣಿಯರು ಹೆಚ್ಚು ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ಸಂಗಾತಿಯ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಕೆಲವರಿಗೆ ಅನಿರೀಕ್ಷಿತ ಧನ ಲಾಭವಾಗುವ ಸಾಧ್ಯತೆಗಳಿವೆ. ವಿದೇಶಿ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಹಳ ಬುದ್ಧಿವಂತಿಕೆಯಿಂದ ವರ್ತಿಸುವಿರಿ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಂದರ್ಭವಿದೆ. ಕೃಷಿಯಿಂದ ಸ್ವಲ್ಪ ಆದಾಯ ಬರುತ್ತದೆ. ಬಂಧುಗಳು ನಿಮ್ಮ ಮೇಲೆ ಆಪಾದನೆ ಮಾಡಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಹೆಚ್ಚು ತಲೆನೋವು ಬರುತ್ತಿರುವವರು ಚಿಕಿತ್ಸೆ ಪಡೆಯುವುದು ಒಳ್ಳೆಯದು. ಸರ್ಕಾರಿ ಸಂಸ್ಥೆಗಳ ಜೊತೆಗಿನ ವ್ಯವಹಾರಗಳಲ್ಲಿ ಸ್ವಲ್ಪ ತೊಂದರೆಯಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಶಕ್ತಿ ಕುಂದಿದಂತೆ ನಿಮಗೆ ಅನ್ನಿಸಬಹುದು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರದಿಂದ ಬರಬೇಕಾದ ಹಣ ಈಗ ಬರುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಬರಬೇಕಾಗಿದ್ದ ಸಾಲಗಳನ್ನು ಈಗ ವಸೂಲಿ ಮಾಡಬಹುದು. ಸಂಗಾತಿಯಿಂದ ನಿಮಗೆ ಸೂಕ್ತ ಸಹಕಾರ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಒಂದು ರೀತಿ ಸಂತೋಷವಿದ್ದರೂ ಅದನ್ನು ಅನುಭವಿಸಲು ನೀವು ಇಷ್ಟಪಡುವುದಿಲ್ಲ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಸ್ತ್ರೀಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದು. ಸಂಸಾರದಲ್ಲಿ ಸುಖದ ನಡುವೆ ವೈಮನಸ್ಯವೂ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ದೊರೆಯುವ ಸಾಧ್ಯತೆ ಇದೆ. ಪ್ರಸೂತಿ ತಜ್ಞರು ಹೆಚ್ಚು ಎಚ್ಚರಿಕೆಯಿಂದ ಕೆಲಸ ಮಾಡಬೇಕು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಹಣ ಸಂಗ್ರಹಣೆ ಮಾಡುವತ್ತ ಹೆಚ್ಚು ಗಮನ ಕೊಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಹಿರಿಯರ ವ್ಯವಹಾರಗಳಿಂದ ನೀವು ಈಗ ದೂರ ಇರಬೇಕಾದ ಪರಿಸ್ಥಿತಿ ಬರಬಹುದು. ಹಣಕಾಸಿನ ವ್ಯವಹಾರ ಮಾಡುವ ಕೆಲವರಿಗೆ ಲಾಭವಿದೆ. ಮಾನಸಿಕ ಅಸ್ವಸ್ಥರು ಕೂಡಲೇ ಚಿಕಿತ್ಸೆ ಪಡೆಯುವುದು ಒಳ್ಳೆಯದು. ವೃತ್ತಿಯಲ್ಲಿ ಪರಿಚಿತರ ಮೂಲಕ ನಿಮ್ಮ ಕೆಲಸ ಕಾರ್ಯಗಳು ಆಗುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮನಸ್ಸಿನಲ್ಲಿ ಒಂದು ರೀತಿ ಗೆದ್ದಂತಹ ಭಾವನೆ ನಿಮಗಿರುತ್ತದೆ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳು ನಿಮಗೆ ಮುಜುಗರ ತರುತ್ತವೆ. ಸಂಸಾರದಲ್ಲಿ ಸ್ವಲ್ಪ ಸುಖಮಯ ವಾತಾವರಣವಿರುತ್ತದೆ. ಮೂಳೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಗೆ ಈಗ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವವರಿಗೆ ಲಾಭವಿರುತ್ತದೆ. ಉದ್ಯೋಗದಲ್ಲಿ ಸಾಮಾನ್ಯ ಪ್ರಗತಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯ ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚು ಸಹಕಾರ ದೊರೆಯುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಕೃಷಿಗಾಗಿ ಹೆಚ್ಚು ಹಣ ಖರ್ಚುಮಾಡುವಿರಿ. ಸಂಗಾತಿಯಿಂದ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ. ವ್ಯವಹಾರಗಳಲ್ಲಿ ಹಿರಿಯರ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಸ್ವಂತ ಗೌರವಕ್ಕೆ ಹೆಚ್ಚು ಬೆಲೆ ಕೊಡುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ನಡವಳಿಕೆಯಿಂದ ಶತ್ರುಗಳ ಮನಸ್ಸಿನಲ್ಲಿ ಭಯ ಹುಟ್ಟಿಸುವಿರಿ. ವಿದೇಶಿ ಸಂಸ್ಥೆಗಳಿಗಾಗಿ ಭೂಮಿಯನ್ನು ಕೊಡಿಸುವವರಿಗೆ ಲಾಭವಿರುತ್ತದೆ. ವ್ಯವಹಾರಗಳಲ್ಲಿ ಸ್ವಲ್ಪ ಲಾಭ ಬರುವ ಸಾಧ್ಯತೆ ಇದೆ. ಸಂಗಾತಿಗಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಕೃಷಿಯಿಂದ ನಿರೀಕ್ಷಿತ ಆದಾಯವಿರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಶುಚಿತ್ವದ ಬಗ್ಗೆ ಹೆಚ್ಚು ಗಮನ ಕೊಡುವಿರಿ. ಆದಾಯದಲ್ಲಿ ಸ್ವಲ್ಪ ಮಟ್ಟಿನ ಏರಿಕೆಯನ್ನು ಕಾಣಬಹುದು. ನಿಮ್ಮ ನೇರ ನಡೆ,ನುಡಿಯಿಂದ ಜನರನ್ನು ಗಳಿಸುವಿರಿ. ಎಷ್ಟೇ ಪ್ರತಿರೋಧವಿದ್ದರೂ ಕೂಡ ನಿಮ್ಮ ಕೆಲಸವನ್ನು ನೀವು ಸಾಧಿಸುವಿರಿ. ಭೂ ಸಂಬಂಧಿತ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಚಂಚಲ ಮನಸ್ಸಿನಿಂದ ಯಾವುದೇ ಕೆಲಸವನ್ನು ಮಾಡಬೇಡಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯವು ಹೆಚ್ಚುತ್ತದೆ. ಬಂಧುಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡಲೆತ್ನಿಸಿ ವಿಫಲರಾಗುವರು. ವಯಸ್ಕರು ತಮ್ಮ ಮಾತಿನ ಮೇಲೆ ನಿಗಾ ಇಟ್ಟುಕೊಳ್ಳುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುತ್ತದೆ. ಚರ್ಮ ರೋಗಗಳು ಕೆಲವರನ್ನು ಕಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಇತರರ ಬಗ್ಗೆ ಯೋಚನೆ ಮಾಡಿ ನಿಮ್ಮ ಮನಸ್ಸನ್ನು ಕೆಡಿಸಿಕೊಳ್ಳುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ಸರ್ಕಾರಿ ವೈದ್ಯರುಗಳಿಗೆ ಅಭಿವೃದ್ಧಿ ಇರುತ್ತದೆ. ಭೂಮಿ ವ್ಯವಹಾರಗಳಲ್ಲಿ ನಷ್ಟವಾಗಬಹುದು. ಕಣ್ಣಿನ ಬಗ್ಗೆ ಹೆಚ್ಚು ಎಚ್ಚರವಿರಲಿ. ಧಾರ್ಮಿಕ ವಿಷಯಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತದೆ. ಹಿರಿಯರ ಹಣದಲ್ಲಿ ಸ್ವಲ್ಪ ಪಾಲು ನಿಮಗೆ ಸಿಗಬಹುದು. ನಿಮ್ಮ ಶ್ರಮದಿಂದ ವೃತ್ತಿಯಲ್ಲಿ ಸ್ಥಿರಗೊಳ್ಳಬಹುದು.

ಪದಬಂಧ 2869



ಮೇಲಿನಿಂದ ಕೆಳಕ್ಕೆ

1. ಕನ್ಯಾ ಸ್ವರೂಪಿ ಪರಮೇಶ್ವರಿ 3
2. ಸುಡುವ ಕಾರ್ಯ 3
3. ದೇವರಿಗೆ ನೀಡುವ ಉಡುಗೊರೆ 3
4. ಭೂಮಿ ಬಾಯಿಬಿಟ್ಟಂತೆ ಸಂಬಂಧದಲ್ಲಿ ಉಂಟಾಗುವ ತೊಡಕು 3
7. ಅನುಭಾವಿಗಳ ಹಾಡು 4
9. ಕಲರವದಂತೆ ಜನರ ಕೂಗು 3
11. ಮೈ ಎಲುಬುಗಳನ್ನು ದಾನ ಕೊಟ್ಟ ಮಹರ್ಷಿ 3
12. ದೀನನಾದ ಹುಚ್ಚು ಪ್ರಿಯಕರ 3
13. ರಾಮಾಯಣದ ರಾಕ್ಷಸಿ ವ್ಯತ್ಯಾಸಗೊಂಡು ಕೆರೆ ಆಕಾರ ಪಡೆದಿದ್ದಾಳೆ 3
15. ಗರದಲ್ಲಿ ಮಾರ ಸುಳಿದಾಗ ಹಳ್ಳಿದಡ್ಡ ಸಿಗುತ್ತಾನೆ 3
16. ಬೆಳಗ್ಗೆಯಿಂದ ರಾತ್ರಿಯವರೆಗೆ 4
17. ಇದೀಗ ಮರೆಯಾಗುತ್ತಿರುವ ಮನೆಯ ಹಿಂಭಾಗ 3
19. ಹಾಲು ಕೊಡದ ಹಸು, ಬಂಜೆ ಭೂಮಿ 3
20. ಬಾಗಿಲು ಹಾಕುವ ತೆಲುಗು ಗಿಣಿ 3
21. ಮೃದು ಸ್ವಭಾವದವ 3
22. ಕಾಲಗಣನೆಯಲ್ಲಿ ಹೊಸ ಮಜಲಿನ ರೂಪ 3
23. ಉಷ್ಣ ಇಲ್ಲವೇ ಕೋನದ ಅಳತೆ ಪ್ರಮಾಣ ವಿರಳವಾಗಿದೆ 3

ಎಡದಿಂದ ಬಲಕ್ಕೆ

1. ಕೆಲಸಕ್ಕೆ ಅಂಟಿದ ಪದ ವ್ಯಾಕರಣದಲ್ಲಿ ಸಿಗುತ್ತೆ 4
3. ಕಂಬಿಯಂತೆ ಗಟ್ಟಿಯಾಗುವ ಕಬ್ಬಿನರಸದ ಪಾಕ 3
5. ಹಣೆಗೆಹಣೆ ಕೊಟ್ಟು ಗುದ್ದಾಟ 4
6. ದುಃಖದಲ್ಲಿ ಮುಳುಗಿದವ 3
8. ಲೆಕ್ಕಾಚಾರ ಮಾಡುವ ಕರಣಿಕ 4
10. ತಪ್ಪುನಡೆದು ಹೋದದ್ದನ್ನು ಮತ್ತೆ ಮೇಲೆತ್ತು 3
12. ಹೀನ ಸ್ಥಿತಿಯಿಂದ ಮಾತು ಮೂಕವಾದ ಶೋಷಿತ 5
14. ಚಿತ್ತಾರದ ಮೈಮಾಟದ ಗಂಧರ್ವ 4
16. ನಿತ್ಯ ಬಳಕೆಯ ದಾಖಲು ಪುಸ್ತಕ 4
18. ಬಂಗಾರದ ಆಗಸ ಹೂವಾಗಿ ಅರಳಿದೆ 5
20. ಪುಟಿದು ಮೇಲೇಳುವ ನೀರಿನ ಬುಗ್ಗೆ 3
22. ಮೇಕೆಯ ಶಬ್ದ ನಾವು ಸಹಜವಾಗಿ ನುಡಿವ ಮಾತು 4
24. ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ- ಮೂರು ಹೊತ್ತು 3
25. ಕೆಟ್ಟ ಉದ್ದೇಶ 4
26. ಕಲಶವೆತ್ತುವ ನಮ್ಮ ನಾಡಿನ ಉತ್ಸವ 3
27. ಅರೆ ಮಾನವ, ಅರೆ ವಿಷ್ಣು ಸ್ವರೂಪಿ 4

ಪದಬಂಧ ಉತ್ತರ -2868

ಮೇಲಿಂದ ಕೆಳಕ್ಕೆ

1.ಸಂಸ್ಕಾರವಿಧಿ 2.ಸಂಗೀತ 4.ಯಯಾತಿ 5.ತರುಣಶಕ್ತಿ 6.ಕುಂಕುಮ 7.ಲವಂಗ 8.ಚಿಂತಕ 9.ಸುರಗಿ 14.ರುಚಿತ 16.ಮಂಟಪ 17.ಧನಸಂಗ್ರಹ 18.ಹಂದರ 19.ಕಬಂಧ 20.ಸಂಕುಲ 21.ದಮಡಿ 22.ಜಾನಕೀರಾಮ 27.ಸಾಂಪ್ರತ 29.ಕಡವ

ಎಡದಿಂದ ಬಲಕ್ಕೆ

1..ಸಂಧ್ಯಾವಸಂತ 3.ನ್ಯಾಯಸಮ್ಮತ 6.ಕುಂತಲ 8.ಚಿಂತಿಸು 10.ವಿಲಾಕು 11.ವಂದಿತ 12.ರವೀಶ 13.ಮರುಗ 15.ಕಮಂಗಿ 18.ಹಂತಕ 20.ಸಂಪದ 23.ನಲಂದ 24.ಬಂದೂಕು 25.ಮದನ 26.ರಸಾಂಧ 28.ಲಕಡಿ 30.ಹರಿಚಿಂತನೆ 31.ಭಾವಸಂಗಮ



'ವಾಟರ್ ಫಾರ್ ಎಲಿಫೆಂಟ್ಸ್' ನಾಟಕದ ದೃಶ್ಯಗಳು




ರಂಗದ ಮೇಲೆ ಬದುಕಿನ ಸರ್ಕಸ್

ಕೃಷ್ಣಮೂರ್ತಿ ಹನೂರು

ಎತ್ತರೆತ್ತರಕ್ಕೆ ತೂಗುವ ಹಗ್ಗದ ಹಲಗೆಯಲ್ಲಿ ನಿಂತು ಪಲ್ಟಿ ಹೊಡೆಯುತ್ತ, ಪ್ರೇಕ್ಷಕರಿಗೆ ಕೂತಲ್ಲೇ ಎದೆ ಡವಗುಟ್ಟುವಂತೆ ಮಾಡುತ್ತಿದ್ದ ದೃಶ್ಯಾವಳಿಯ ಸರ್ಕಸ್‌ಗಳು ಈಗಾಗಲೇ ಹಳೆಯ ಕಾಲದ ಸಂಗತಿಯಾಗಿ ಹೋಗಿವೆ. ಇಂಥ ಸರ್ಕಸ್‌ಗಳಲ್ಲಿ ಗಂಡಸರೆಂಬವರು ಜೋಕರುಗಳಾದರೆ ಹೆಣ್ಣುಮಕ್ಕಳು ರೋಚಕ ದೃಶ್ಯಗಳಲ್ಲಿ ಪಾಲುಗೊಳ್ಳುತ್ತಿದ್ದುದು ಆಶ್ಚರ್ಯವೇ. (ಮೇರಾ ನಾಮ್ ಜೋಕರ್ ಸಿನಿಮಾದಲ್ಲಿ ಸ್ವತಃ ರಾಜ ಕಪೂರರು ಜೋಕರ್ ಆಗಿದ್ದ ನೆನಪು.) ಆಕಾಶದಲ್ಲೆಂಬಂತೆ ತೂಗುಯ್ಯಾಲೆಯಾಟ ಇದ್ದರೆ, ನೆಲದ ಮೇಲೆ ಬೆಂಕಿ ಹಚ್ಚಿದ ವೃತ್ತಾಕಾರದ ಮೂರು ಸರಳುಗಳ ನಡುವೆ ತೂರುವವರು ಹೆಣ್ಣುಮಕ್ಕಳೇ ಆಗಿರುತ್ತಿದ್ದರು. ಇದು ಕಾರಣವಾಗಿಯೇ ಆ ಕಾಲಕ್ಕೆ ಒಂದು ಸರ್ಕಸ್ ಕಂಪನಿಗೆ 'ಕಮಲ ತ್ರೀ ರಿಂಗ್ ಸರ್ಕಸ್' ಎಂದೇ ನಾಮಧೇಯವಿದ್ದ ನೆನಪು. ಇನ್ನು ಸರ್ಕಸ್‌ನಲ್ಲಿ ಹೆಣ್ಣು ಮಕ್ಕಳಷ್ಟೇ ಪ್ರಮುಖವಾದವು ಪ್ರಾಣಿಗಳು. ಯಾವ ಸಮೂಹವನ್ನು ಕ್ರೂರ ಅಂದುಕೊಂಡಿದ್ದೇವೋ ಆ ಪ್ರಾಣಿಗಳು ಸರ್ಕಸ್‌ನಲ್ಲಿ ಹೆಣ್ಣುಮಕ್ಕಳು ಹೇಳಿದ್ದನ್ನು ಶಿರಸಾವಹಿಸಿ ಕಲಿತ ಆಟವನ್ನು ತೋರುತ್ತಿದ್ದವು. ಈ ಆನೆ, ಕುದುರೆ,ಹುಲಿ , ಸಿಂಹಗಳೂ ಕಂಪನಿಯೊಂದಿಗೆ ಊರೂರು ಸುತ್ತಬೇಕಿತ್ತು!

ಇತ್ತೀಚೆಗೆ ನೋಡಿದ ಒಂದು ನಾಟಕ 'ವಾಟರ್ ಫಾರ್ ಎಲಿಫೆಂಟ್ಸ್' ಹೀಗೆ ಊರೂರು ಸಂಚರಿಸುವ ಸರ್ಕಸ್ ವಾಹನ ನಟರೊಂದಿಗೆ, ಪ್ರಾಣಿಗಳೊಟ್ಟಿಗೆ ಪ್ರಯಾಣಕ್ಕೆ ತೊಡಗುತ್ತದೆ. ಈ ಸರ್ಕಸ್ ನಾಟಕದ ಮೊದಲ ದೃಶ್ಯದಲ್ಲಿ ಸುಮಾರು ಎಪ್ಪತ್ತು ವರ್ಷದ ಹಿರಿಯನೊಬ್ಬ, ಭಾರತೀಯ ಹಳೆಯ ನಾಟಕಗಳ ಸೂತ್ರಧಾರನಂತೆ, ತನ್ನ ಸರ್ಕಸ್ ಕಂಪನಿಯ ಜೀವನಾನುಭವಗಳನ್ನು ವಿವರಿಸಲು ತೊಡಗುವಲ್ಲಿ, ಪಾತ್ರಧಾರಿಗಳೆಲ್ಲ ಅವನ ಕಳೆದ ನೆನಪಿನಂತೆ, ಕನಸಿನಂತೆ ಸುತ್ತ ಸುಳಿಯತೊಡಗುತ್ತಾರೆ. ಅನಂತರ ಗುಂಪಿನೊಳಗೆ ಹಿರಿಯನ ಮುಖ ಚಹರೆಯದೇ ಹುಡುಗನೊಬ್ಬ ಪ್ರವೇಶಿಸುವುದರ ಮೂಲಕ ಸರ್ಕಸ್ ನಾಟಕದ ಕಥೆ ಮುಂದುವರೆಯುತ್ತದೆ. ಆ ಯುವಕನಿಗೆ ಸರ್ಕಸ್‌ನ ಹುಡುಗ ಹುಡುಗಿಯರ ವಿಚಿತ್ರ ಮೈಮುರಿತದ ಆಟ, ಪ್ರಾಣಿಗಳ ಸಹವಾಸ ಇದೆಲ್ಲ ಹೊಸದಾಗಿ ದಿಗ್ಭ್ರಮೆ ಹುಟ್ಟಿಸುವ ಸಂಗತಿಗಳಾಗುತ್ತವೆ. ತಾಲೀಮು, ಸಂಜೆಯ ಆಟ ಇದೆಲ್ಲ ಕಠಿಣವೆಂಬಂತೆ ತೋರುತ್ತದೆ. ಇಷ್ಟಾಗಿಯೂ ಸರ್ಕಸ್ ಪಾತ್ರಧಾರಿಗಳ ಆಕಾಶದ ಹಾರಾಟದಲ್ಲಿ ಇವನ ನೋಟ, ಎಚ್ಚರದ ಕಲಿಕೆ ಆರಂಭವಾಗುತ್ತದೆ.

ಸರ್ಕಸ್ ಜೀವನ ಎಂದರೆ ನೆಲದ ಮೇಲೆ ಸ್ಥಿರವಾಗಿ ತಣ್ಣನೆಯ ಮರದ ಕೆಳಗೆ ವಸ್ತ್ರ ಹೊದ್ದು,ಕಣ್ಣು ಮುಚ್ಚಿ ಕೂರುವುದಲ್ಲವಲ್ಲ. ಹಾಗೆ ನಮ್ಮ ಕಣ್ಣ ಮುಂದೆ ನಡೆಯುತ್ತಿದ್ದ ಸರ್ಕಸಿನಲ್ಲಿ 23 ಅಡಿ ಎತ್ತರದಲ್ಲಿ ಹಗ್ಗ ಹಿಡಿದು ನಿಂತು ದೇಹವನ್ನು ನಿಶ್ಚಲ ಸ್ಥಿತಿಗೆ ತಂದು ಕಣ್ಣು ಮುಚ್ಚಬೇಕು. ಆಗಲಾದರೋ ಪ್ರೇಕ್ಷಕರ ಕಣ್ಣು ಅಚ್ಚರಿಯಿಂದ ಅಗಲವಾಗುತ್ತದೆ, ಮನಸು ದಿಗಿಲುಗೊಳ್ಳುತ್ತದೆ. ಆದರೆ ಆಟದಲ್ಲಿರುವವರು ಮಾತ್ರ ತಾವು ಅಪಾಯದಲ್ಲಿದ್ದೇವೆಂಬುದನ್ನು ತೋರಗೊಡುವುದೇ ಇಲ್ಲ! ಇಂಥ ಇವರ ಆಟದೊಂದಿಗೆ ಪ್ರಾಣಿಗಳೂ ಸೇರಿಕೊಳ್ಳುತ್ತವೆ. ಈ ಕ್ರಮದಲ್ಲಿ ಒಂದರ ಮೇಲೆ ಒಂದರಂತೆ ದೃಶ್ಯಗಳು ಪ್ರದರ್ಶನಗೊಳ್ಳುತ್ತ ಹೋದದ್ದು ನ್ಯೂಯಾರ್ಕಿನ ಬ್ರಾಡ್ವೇಯ ಇಂಪೀರಿಯಲ್ ಥಿಯೇಟರಿನಲ್ಲಿ.



ನ್ಯೂಯಾರ್ಕಿನ ಬ್ರಾಡ್ವೇಯ ಇಂಪೀರಿಯಲ್ ಥಿಯೇಟರ್

43 ಭಾಷೆಗಳಿಗೆ ಅನುವಾದ

ಈ 'ವಾಟರ್ ಫಾರ್ ಎಲಿಫೆಂಟ್ಸ್' ನಾಟಕ ರಚನೆಗೆ ಮೂಲ ಇದೇ ಹೆಸರಿನ ಕಾದಂಬರಿ. ಲೇಖಕಿ ಸಾರಾ ಗ್ರೂಯೆನ್. ಅಮೆರಿಕಾದ ವಾಯವ್ಯ ಕರೋಲಿನಾದಲ್ಲಿರುವ ಈಕೆಯ ಕಾದಂಬರಿಗಳು ಜಗತ್ತಿನ 43 ಭಾಷೆಗಳಿಗೆ ಅನುವಾದವಾಗಿದ್ದು, ಅದಕ್ಕಿರುವ ಓದುಗರೂ ಅಸಂಖ್ಯಾತ ಎನ್ನಲಾಗಿದೆ. ನಾಟಕ ನಿರ್ದೇಶಕಿ ಜೆಸ್ಸಿಕಾ ಸ್ಟೋನ್. ಸರ್ಕಸ್ ವಿನ್ಯಾಸ ಶಾನ್ ಕೆರೋಲ್. ಈ ಸರ್ಕಸ್ ನಾಟಕದ ಸೂತ್ರಧಾರಿಗಳು ಲೇಖನದ ಆರಂಭಕ್ಕೆ ಹೇಳಿದಂತೆ ಹೆಣ್ಣು ಮಕ್ಕಳು ಎಂಬುದನ್ನು ಗಮನಿಸಬೇಕು.

ಸರ್ಕಸಿನ ರೋಚಕ ದೃಶ್ಯಾವಳಿಗಳೆಲ್ಲ ಕಥೆಯಾಗುತ್ತ, ನಮ್ಮದೇ ಯಾವುದೋ ಹಂತದ ಅನುಭವವೆನಿಸುತ್ತ, ಒಮ್ಮೆ ಲೌಕಿಕವೆನಿಸಿ, ಮುಂದಿನ ಘಳಿಗೆಯಲ್ಲೇ ಅದು ಯಾವುದೋ ಎತ್ತರ ಪ್ರಯಾಣದ ಅಲೌಕಿಕ ಸಂಗತಿ ಎನಿಸುತ್ತಿತ್ತು. ಹಾಗೆಯೇ ತನ್ನ ನಡು, ಮೈಕೈಗೆಲ್ಲ ಹಗ್ಗ ಸುತ್ತಿಕೊಳ್ಳುತ್ತ ಮೇಲೆ ಹಾಯುವ ದೃಶ್ಯದಲ್ಲಿ ಆ ನಟ ಅಲ್ಲಿಂದಲೇ ಎಚ್ಚರ ತಪ್ಪಿ ಬಿದ್ದರೆ ಎಂಬ ಆತಂಕ ಬೀಳುವ ದೃಶ್ಯದ ನಡುವೆಯೇ ಕೇಳಿಬರುತ್ತಿದ್ದ ಧ್ವನಿಪೂರ್ಣ ಸಂಭಾಷಣೆಗೆ ದೀರ್ಘ ಚಪ್ಪಾಳೆ ಬೀಳುತ್ತಿತ್ತು.

ಎರಡೂವರೆ ಗಂಟೆ ಅವಧಿಯ ಈ ನಾಟಕದ ಒಂದು ಅರ್ಥಪೂರ್ಣ ದೃಶ್ಯ ಅಂದರೆ ರಂಗದ ನಟ್ಟ ನಡುವೆ 20 ಅಡಿ ಎತ್ತರದಲ್ಲಿ ಮೂವರು ಕುಳಿತಿದ್ದಾರೆ. ಅವರು ಸಿಂಹಾಸನದಲ್ಲಿ ಆಸೀನರಾಗಿರುವಂತಿದ್ದರೆ, ಎಡ ಬಲದಿಂದ ಅದೂ ನೆಲಸ್ತರದಿಂದ ಒಂದೇ ವೇಗದಲ್ಲಿ ಹಗ್ಗದ ಮೇಲೆ ನಡೆದು ಎತ್ತರದಲ್ಲಿ ಕೂತವರನ್ನು ಮುಟ್ಟಲು ಒಂದಿಬ್ಬರು ಹವಣಿಸುತ್ತಿದ್ದರು. ಆದರೆ ಈ ಆಕಾಂಕ್ಷಿಗಳು ಸಿಂಹಾಸನಸ್ಥರ ಬಳಿ ಬರುತ್ತಿದ್ದಂತೆಯೇ ಕೆಳಗೆ ನಿಂತವರು ಅವರಿಗೆ ಗೊತ್ತಾಗದಂತೆ ನಡುವಿಗೆ ಹಗ್ಗ ಕಟ್ಟಿ ಹಿಂದಕ್ಕೆ ಎಳೆದು ಹಾಕಿಬಿಡುತ್ತಿದ್ದರು. ಎಷ್ಟು ವೇಗದಲ್ಲಿ ಮೇಲೆ ಹೋಗುತ್ತಿದ್ದರೋ ಅಷ್ಟೇ ಬೇಗ ಕಾಣದ ಕೈಗಳ ಹಿಮ್ಮುಖ ಎಳೆತದಿಂದ ಹಿಂದೆ ಬೀಳುತ್ತಿದ್ದರು.

ಸಂಜೆಯಾಯಿತೆಂದರೆ ಸರ್ಕಸ್ ಗುಡಾರ ಆ ಹೊತ್ತಿನ ಪ್ರದರ್ಶನಕ್ಕಾಗಿ ಬಣ್ಣ ಬಣ್ಣದ ಲೈಟುಗಳೊಡನೆ ಎದ್ದುಬಿಡುವ ದೃಶ್ಯ ರಂಜನೀಯವೆನಿಸುತ್ತಿತ್ತು. ಒಂದೆಡೆ ಮೊಕ್ಕಾಮು ಮುಗಿದಲ್ಲಿ ಆಟದವರೆಲ್ಲ ರೈಲು ಬೋಗಿಯಲ್ಲಿ ಕೂತು ಪ್ರಯಾಣ ಮಾಡುವುದು ಮತ್ತೊಂದು ಮೋಜಿನ ದೃಶ್ಯ. ಇದೆಲ್ಲದರ ಹಿನ್ನೆಲೆಯಲ್ಲಿ ರಂಗದ ಹಿಂಭಾಗಕ್ಕೆ ನೀಲಿ ಆಕಾಶ ಒಮ್ಮೆ ಸ್ವಚ್ಛವಾಗಿ ನಕ್ಷತ್ರಗಳೊಡನೆ ಕಾಣಿಸಿದರೆ ಮತ್ತೊಮ್ಮೆ ಅದೇ ಆಕಾಶದಲ್ಲಿ ಕೆಂಪು ಹಳದಿಯ ಸಂಜೆ ಬೆಳಗಿನ ರಂಗು ತುಂಬಿಕೊಳ್ಳುತ್ತಿತ್ತು. ಅದಾಗಲೇ ಮೋಡಭರಿತ ವಾತಾವರಣವು ಮೂಡಿ ಇನ್ನೇನು ಮಳೆ ಹನಿ ಉದುರಬಹುದೆನಿಸುವ ಅನುಭವ. ಅದರಡಿಯೇ ಸರ್ಕಸ್ಸಿನ ಆಟದ ನಡುವಣ ಜೀವಿಗಳ ಒಳಮನದ ಕ್ರಿಯೆಗಳು ನಾಟಕದ ಮುಂದಿನ ಕಥೆಯಾಗಿರುತ್ತಿತ್ತು.

ಆನೆಯ ವೇಷವೂ ರಂಗದ ಮೇಲೆ ಬರುತ್ತಿದ್ದುದು ಸರಿ, ಆದರೆ ಆನೆಯ ದೇಹದ ಒಳಗೆ ಸೇರಿಕೊಂಡ ನಟರಲ್ಲಿ ಮುಂದಿನವರು ಹೆಜ್ಜೆಯಿಟ್ಟಂತೆ, ಅದಕ್ಕನುಗುಣವಾಗಿ ಹಿಂದಿನವರು ಹೆಜ್ಜೆಯಿಡುವುದರ ತಾಲೀಮು ಎಷ್ಟು ದಿನದ್ದೋ ಹೇಳುವಂತಿಲ್ಲ. ಇಂಥದೆಲ್ಲ ಪ್ರಾಣಿ, ಪುರುಷ, ಹೆಣ್ಣುಮಕ್ಕಳ ಸಾಹಸದ ನಡುವೆ ಸರ್ಕಸಿನಲ್ಲಿ ಒಬ್ಬ ಕುಂಟನೆನಿಸುವವನ ಪಾತ್ರವೂ ಇದ್ದು, ರಂಗದ ಮೇಲೆ ಆತನ ನಡೆದಾಟ, ಮಾತಿನ ವರಸೆ ಎಲ್ಲ ಪಾತ್ರಧಾರಿಗಳ ಜಿಗಿತವನ್ನು ಹಿಂದಿಕ್ಕುವಂತಿತ್ತು. ಆತ ಆಫ್ರಿಕನ್ ಅಮೆರಿಕನ್. ಇಷ್ಟಲ್ಲದೆ ನಾಟಕದ ನಡುವೆ ಮಂಚವೂ ಪ್ರತ್ಯಕ್ಷವಾಗಿ ಅಲ್ಲಿ ಪ್ರೇಮ ಸಲ್ಲಾಪ ಜರುಗುತ್ತಿರುವಲ್ಲಿ, ಅದೇ ಮಂಚ ರೋಗ ಶಯ್ಯೆಯೂ ಆಗಿ ಕಾಣಿಸಿಕೊಳ್ಳುತ್ತದೆ. ಮುಷ್ಠಿ ಬಿಗಿ ಹಿಡಿದಂತೆ, ಉಸಿರಾಡಲು ಸಮಯವಿಲ್ಲದಂತೆ, ನಿಮಿಷದ ಲೆಕ್ಕದಲ್ಲಿ ಜರುಗುವ ನಾಟಕದ ಕೊನೆ ಕೊನೆಗೆ 22 ಜನ ಪಾತ್ರಧಾರಿಗಳ ನಡುವೆ ಒಬ್ಬ ನಟನ ಬಾಯಿಂದ ಬರುವ ಒಂದು ಸಾರ್ವಕಾಲಿಕ ಸತ್ಯದ ಮಾತು, 'ವಿ ಗಾಟ್ ನಥಿಂಗ್' ಎಂಬುದು!

ನಾಟಕ ವೀಕ್ಷಣೆಯ ದರ ಇನ್ನೂರು ಡಾಲರ್, ರೂಪಾಯಿ ಲೆಕ್ಕದಲ್ಲಿ ಹದಿನೇಳು ಸಾವಿರ! ಆಟ ನೋಡಲು ಸೇರಿದ್ದ ಪ್ರೇಕ್ಷಕರ ಸಂಖ್ಯೆ ಒಂದು ಸಾವಿರದ ನಾನೂರು! ಆಸನ ಸಂಖ್ಯೆ ಇದ್ದದ್ದು ಅಷ್ಟೇ. ರಾತ್ರಿ ಒಂಬತ್ತುವರೆಗೆ ಷೋ ಮುಗಿದು ಹೊರಬಂದಲ್ಲಿ ನ್ಯೂಯಾರ್ಕಿನ ಬ್ರಾಡ್ ವೇಯ ಎಲ್ಲ ನಾಟಕಗಳ ತೆರೆ ತೆರಪಾಗಿ, ಬೀದಿಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ನಾಟಕ ಜಾತ್ರೆಯ ಜನ ನೆರೆದುಬಿಟ್ಟಿತ್ತು!

ಮೊದಲ ಓದು

ತೆರಿಗೆ ಹಂಚಿಕೆಯ ತೊಡಕು


ಭಾಷಾವಾರು ಪ್ರಾಂತ್ಯದ ಉಪರಾಷ್ಟ್ರೀಯವಾದ ದೇಶದ ಸಮಗ್ರತೆಗೆ ಹೇಗೆ ಪೂರಕ ಎನ್ನುವ ಅಂಶವನ್ನು ಪ್ರಸ್ತುತ ವಿದ್ಯಮಾನದ ಹಿನ್ನೆಲೆಯಲ್ಲಿ ಲೇಖಕ ನೀಲಕಂಠನ್ ವಿಶ್ಲೇಷಿಸಿದ್ದಾರೆ. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ರಾಜಕೀಯವನ್ನು ತೌಲನಿಕವಾಗಿ ಪರಾಮರ್ಶೆಗೆ ಒಡ್ಡಿದ್ದಾರೆ. ಉತ್ತರ–ದಕ್ಷಿಣ ಎಂಬ ಕಂದರ ಕೇಂದ್ರೀಕರಣದ ಹುನ್ನಾರದಿಂದ ಹುಟ್ಟಿದೆ. ತೆರಿಗೆ ಸಂಗ್ರಹ ಮತ್ತು ಅದರ ವಿಲೇವಾರಿಯಲ್ಲಿ ವಿರೋಧದ ದನಿ ಕೇಳುತ್ತಿದೆ. ಅದು ಏಕಾಏಕಿ ಹುಟ್ಟಿದ ಸಂಗತಿಯಲ್ಲ. ಅದಕ್ಕೆ ದೀರ್ಘ ಇತಿಹಾಸ ಇದ್ದು, ಹೇಗೆ ತನ್ನ ನೀತಿ ನಿರೂಪಣೆಯಲ್ಲಿ ಅದು ಇಬ್ಬಗೆಯುತ್ತದೆ ಎನ್ನುವುದನ್ನು ವೈಜ್ಞಾನಿಕ ದೃಷ್ಟಿಯಲ್ಲಿ ನೋಡಿದ್ದಾರೆ.

ದಕ್ಷಿಣ ರಾಜ್ಯಗಳ ಅಭಿವೃದ್ಧಿಗೆ ಉಪರಾಷ್ಟ್ರೀಯತೆ ಕಾರಣ ಎನ್ನುವ ಹಿಂದಿನ ಅಧ್ಯಯನಗಳನ್ನು ಲೇಖಕರು ಸಮ್ಮತಿಸುತ್ತಾರೆ. ಅದಕ್ಕೆ ಸಮರ್ಥನೀಯವಾಗಿ ಪ್ರಾದೇಶಿಕವಾರು ಜನಸಂಖ್ಯೆಯ ಪ್ರಮಾಣ, ಶಿಕ್ಷಣ, ಆರೋಗ್ಯ, ಆರ್ಥಿಕ ಬಲಾಬಲದ ಸಮೀಕ್ಷೆಯನ್ನು ವಿವರವಾಗಿ ನೀಡುತ್ತಾರೆ. ರಾಷ್ಟ್ರೀಯತೆಯ ರಾಜಕೀಯದಿಂದ ಉತ್ತೇಜಿತವಾಗಿರುವ ಕೇಂದ್ರ ಸರ್ಕಾರ ಚುನಾವಣೆ ಅನುಕೂಲಕ್ಕೆ ತನ್ನ ನೀತಿ ನಿಯಮಗಳನ್ನು ನಿರೂಪಿಸುತ್ತದೆ. ಸಂಸದೀಯ ಸದಸ್ಯರ ಪ್ರಮಾಣವನ್ನು ಜನಸಂಖ್ಯಾಧಾರಿತವಾಗಿ 2026ರ ಅವಧಿಗೆ ವಿಂಗಡಣೆ ಮಾಡಿದರೆ ಅದರಿಂದ ಆಗಬಹುದಾದ ಪರಿಣಾಮ ತಡೆಯುವ ಅಗತ್ಯವನ್ನೂ ಕೃತಿ ತಿಳಿಸುತ್ತದೆ.

ಸಂಶೋಧನೆಯ ನೆಲೆಯಲ್ಲಿ ಕೃತಿಯನ್ನು ರೂಪಿಸಲಾಗಿದ್ದು; ಪರಿಶೋಧನೆ, ಭಾರತ ಕೇಡಿನ ಸಮಸ್ಯೆಗಳು, ಇನ್ನೂ ಉತ್ತಮ ಒಕ್ಕೂಟ ಎಂದು ಮೂರು ಭಾಗದಲ್ಲಿ ಅನಾವರಣಗೊಂಡಿದೆ. ಸಮಗ್ರ ಅಭಿವೃದ್ಧಿಯ ಕುಂಠಿತಕ್ಕೆ ಕಾರಣವನ್ನು ಗುರುತಿಸುವ ಲೇಖಕರು ಅದಕ್ಕೆ ಪರಿಹಾರವನ್ನೂ ಸೂಚಿಸಿದ್ದಾರೆ.

ಎಂಜಿನಿಯರಿಂಗ್ ಪದವೀಧರ ನೀಲಕಂಠನ್ ಪ್ರಮುಖ ಹಣಕಾಸು ಸಂಸ್ಥೆಯಲ್ಲಿ ಡೇಟಾ ವಿಜ್ಞಾನಿಯಾಗಿದ್ದಾರೆ. ಆರ್ಥಿಕ, ರಾಜಕೀಯ, ಔದ್ಯೋಗಿಕ ಅವರ ಆಸಕ್ತಿಯ ಕ್ಷೇತ್ರ. ಅವರ South vs North: India's Great Divide ಕೃತಿಯನ್ನು ಲೇಖಕ ಕೆ.ಪಿ. ಸುರೇಶ್ ದಕ್ಷಿಣ V/S ಉತ್ತರ ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕೃತಿ ಎಲ್ಲರ ಉಪಯುಕ್ತ ಸಂಗತಿಯನ್ನೇ ಅನುಸಂಧಾನ ಮಾಡಿದರೂ ವಿಷಯ ಸಂಕೀರ್ಣವಾಗಿದೆ. ಅದನ್ನು ಶ್ರೀಸಾಮಾನ್ಯರಿಗೂ ಅರ್ಥವಾಗುವಂತೆ ಕೆ.ಪಿ. ಸುರೇಶ್ ಸರಳವಾಗಿ ನಿರೂಪಿಸಿದ್ದಾರೆ.



ಪು: 248
₹295

ದಕ್ಷಿಣ V/S ಉತ್ತರ
ಮೂಲ: ನೀಲಕಂಠನ್ ಆರ್.ಎಸ್.
ಕನ್ನಡಕ್ಕೆ: ಕೆ.ಪಿ. ಸುರೇಶ್
ಪ್ರ: ಕಾನ್ಕೇವ್ ಮಾಧ್ಯಮ ಮತ್ತು ಪ್ರಕಾಶನ
ಸಂ: 9902590303

ಮನ ಕಲಕುವ ಕತೆಗಳು

ಕತೆಯೋದಿ ಕಣ್ಮುಚ್ಚಿ ಕುಳಿತರೆ ಕಲಬುರ್ಗಿ ಸರ್ ನೆನಪಾಗುತ್ತಾರೆ. ಜೊತೆಗೆ ಗುಲ್ಜಾರ್ ಕವಿತೆಯೂ.. ಸತ್ತಿದ್ದು ಅವರಲ್ಲ, ವಿಚಾರಗಳಿದ್ದವು ಒಂದೀಸು, ಅವೇ ಮಾತಾಡುತ್ತಿದ್ದವು.. ಅವೇ ವಿಚಾರಗಳೇ ಹೊಸಿಲಮೇಲೆ ಕುಸಿದು ಬಿದ್ದವು.. ಎಂಬ ಸಾಲು ಇನ್ನಿಲ್ಲದಂತೆ ಕಾಡುತ್ತದೆ.

ಕತೆಯ ನಡುವೆ ಬರುವ ವಚನಗಳೂ ನಮ್ಮಂತರಂಗದ ಕೆಲಕ್ಷಣಗಳನ್ನು ಬೇಡುತ್ತವೆ. ಕತೆಗೆ, ವ್ಯಕ್ತಿಗೆ, ವಿಷಯಕ್ಕೆ, ಸಮಾಜಕ್ಕೆ ಹೊಂದುವಂಥ ಈ ವಚನಗಳು ಕತೆಯ ಆತ್ಮದಂತೆ ಬೆಳಗುತ್ತ ಹೋಗುತ್ತವೆ. ಕತೆ ಮುಗಿಸಿದಾಗ ಮುಗಿಸಿದ್ದು ಏನು, ಮಿಕ್ಕಿದ್ದು ಏನು ಎಂಬ ಪ್ರಶ್ನೆಯೊಂದು ಓದುಗರ ಮುಂದೆ ಬೃಹದಾಕಾರವಾಗಿ ಬೆಳೆದು ನಿಲ್ಲುತ್ತದೆ.

ಪ್ರತಿ ಕತೆಯೂ ತೀಕ್ಷ್ಣವಾದ ಟೀಕೆ ಮತ್ತು ವಿಡಂಬನೆಯೊಂದಿಗೆ ಸಾಗಿದರೂ ಹತಾಶೆ ಕೊನೆಗೆ ಸ್ಥಾಯಿಯಾಗಿ ನಿಲ್ಲುತ್ತದೆ. ಸಮಾಜದ ಅಂಕುಡೊಂಕುಗಳನ್ನು ತೀಡುವ ಗೋಜಿಗೆ ಹೋಗದೆ, ಇದ್ದದ್ದು ಇದ್ದಂತೆಯೇ ಹೇಳಿ, ನಮ್ಮಲ್ಲಿ ಎಲ್ಲವೂ ಚೆನ್ನಾಗಿದೆ ಎಂಬ ಭ್ರಾಂತಿಗೆ ಪ್ರಹಾರ ಮಾಡುತ್ತವೆ ಈ ಕತೆಗಳು. ಇವು ಮನರಂಜನೆಗಲ್ಲ, ಮಾಹಿತಿಗಲ್ಲ, ಆತ್ಮಾವಲೋಕನಕ್ಕೆ. ಸಮಾಜದೊಂದಿಗೆ ಮುಖಾಮುಖಿಯಾಗಿ ನಮ್ಮ ನಮ್ಮ ಜವಾಬ್ದಾರಿಯನ್ನು ನೆನಪಿಸುವ ಸಂಕಲನ. ಮಲಯಾಳಂ ಕಥಾಲೋಕವು, ಮಲಯಾಳಂ ಚಿತ್ರಲೋಕದಂತೆಯೇ ಭಿನ್ನವಾಗಿದೆ ಎಂಬುದು ಈ ಪುಸ್ತಕ ಎತ್ತಿಹಿಡಿಯುತ್ತದೆ. ವಿಕ್ರಂ ಅನುವಾದ, ಕನ್ನಡದ್ದೇ ಕತೆಗಳೆನ್ನುವಷ್ಟು ಸಹಜವಾಗಿದೆ.



ಪು: 96
₹150

ಭಗವನಂತನ ಸಾವು
ಲೇ: ಕೆ. ಆರ್. ಮೀರಾ
ಕನ್ನಡಕ್ಕೆ: ವಿಕ್ರಂ ಕಾಂತಿಕೆರೆ
ಪ್ರ: ಬಹುರೂಪಿ
ಸಂ:7019182729

10ನೇ ಪುಟದಿಂದ...

ಪುಟ್ಟೀರಮ್ಮನ ಕೃಷಿ...



ಬೆರಕೆ ಸೊಪ್ಪಿನ ಅಗಾಧ ಜ್ಞಾನ..

ಪುಟ್ಟೀರಮ್ಮಗೆ ಸೊಪ್ಪುಗಳ ಬಗ್ಗೆ ಅಗಾಧ ಜ್ಞಾನವಿದೆ. 'ಕಾಡಲ್ಲಿ ಸಿಕ್ಕೋದು ಬೆರಕೆ ಸೊಪ್ಪು. ಅವು ಪ್ರಕೃತಿ ಕೊಟ್ಟ ಆಹಾರ. ನಮ್ಮಲ್ಲಿ ನೂರೊಂದು ಸೊಪ್ಪು ಅವೆ. ಸಂಗಡಗಾತಿಯರೆಲ್ಲ ಕಾಡ್ಗೋಗಿ, ಬೆರಕೆ ಸೊಪ್ಪು ತಂದು, ನಿಂಗ್ಯಾವುದು ಸಿಕ್ತು, ನಂಗ್ಯಾವುದು ಸಿಕ್ತು ಅಂತ ಹಂಚ್ಕೊಳ್ತಿದ್ವಿ' ಎಂದು ನೆನಪಿಸಿಕೊಳ್ಳುತ್ತಾರೆ.

ಮಹಾಭಾರತದ ಕಾಲದಿಂದಲೂ ಬೆರಕೆ ಸೊಪ್ಪು ಕೊಯ್ಯುವ ಪದ್ಧತಿ ಇತ್ತು ಎಂಬ ನಂಬಿಕೆ ಇವರದ್ದು. 'ಬೆರಕೆ ಸೊಪ್ಪಿನ ಗಂಜಿ ಮಾಡಿ ಐವರು ಪಾಂಡವರಿಗೆ ಕೊಂತನ ದೇವಿ ಊಟಕ್ಕೆ ಇಕ್ಕುತ್ತಿದ್ದಳಂತೆ' ಎಂದು ಹೇಳುತ್ತಾ ಈ ನೆಲಮೂಲ ಜ್ಞಾನವನ್ನು ಪುರಾಣದೊಂದಿಗೆ ಬೆರೆಸುತ್ತಾರೆ ಪುಟ್ಟೀರಮ್ಮ.

ನೂರೊಂದು ಸೊಪ್ಪುಗಳು

'ನೂರೊಂದು ಸೊಪ್ಪು ಗೊತ್ತು ಅಂತೀರಿ, ಹೆಸರು ನೆನಪಿದಾವಾ' ಎಂದು ಕೆಣಕಿದರೆ 'ಯಾಕೆ ನೆನಪಿಲ್ಲ, ಹೇಳ್ತೀನಿ ಬರ್ಕಳ್ಳಿ' ಎಂದವರು, ಸೊಪ್ಪಿನ ಪಟ್ಟಿ ಹೇಳೋಕೆ ಶುರು ಮಾಡ್ತಾರೆ. ಕೊಟ್ಟನ ಗುರಜೆ ಸೊಪ್ಪು, ಕಾಡು ಗುರಜೆ, ಕರಿಕಡ್ಡಿ, ಹಿಟ್ಟಕುಡಿ ಸೊಪ್ಪು, ಕಿಲ್ಕೀರೆ, ಬದ್ಗೀರೆ, ಮಳ್ಳಿ ಸೊಪ್ಪು, ಕಾರ ಚಿಗುರು, ಕನ್ನ ಚಿಗುರು, ಕಲ್ಗುರ್ಜೆ, ಎತ್ತಿನ ಕುರಿ, ಬದ್ಲಗೆರೆ, ಗೊದ್ಲಗೆರೆ.. ಹೀಗೆ ಸೊಪ್ಪಿನ ಲೋಕವನ್ನೇ ತೆರೆದಿಡುತ್ತಾರೆ. ಇಳಿವಯಸ್ಸಿನಲ್ಲಿರುವ ಅವರಿಗೆ ಕಣ್ಣು ಕಾಣುತ್ತಿಲ್ಲ, ಆದರೆ ಅನುಭವದಿಂದ ಬಂದ ಜ್ಞಾನ ಅಳಿಸಿಲ್ಲ. ಸೊಪ್ಪುಗಳ ಹೆಸರನ್ನೂ ಮರೆತಿಲ್ಲ!

'ಹೋದ ಕಣ್ಣು
ಬರಿಸುತ್ತೆ ಒನೆಗೊನೆ
ಸೊಪ್ಪು, ಇದ್ಕಣ್ಣು
ಹೋಗಿಸುತ್ತೆ
ಕೊಟ್ನಗುರ್ಜೆ ಸೊಪ್ಪು...'

ಎಂದು ಗಾದೆ ಮಾತುಗಳಲ್ಲಿ ಸೊಪ್ಪಿನ 'ಆಹಾರಾರೋಗ್ಯ'ದ ಗುಣಗಳನ್ನು ಹೇಳುತ್ತಾರೆ.

ಪುಟ್ಟೀರಮ್ಮನವರ 'ಮಿಶ್ರಬೆಳೆ – ಬೆರಕೆ ಸೊಪ್ಪಿನ ವಿಸ್ಮಯ ಲೋಕ'ವನ್ನು 'ಇಕ್ರಾ' ಸಂಸ್ಥೆಯ ವಿ.ಗಾಯತ್ರಿಯವರು 'ಪುಟ್ಟೀರಮ್ಮನ ಪುರಾಣ' ಎಂಬ ಕೃತಿ ರೂಪದಲ್ಲಿ ದಾಖಲಿಸಿದ್ದಾರೆ.

ಒಂದೆಡೆ ಹವಾಮಾನ ವೈಪರೀತ್ಯದ 'ಬಿಸಿ'ಯಲ್ಲಿ ಕೃಷಿ ಕ್ಷೇತ್ರ ನಲುಗುತ್ತಿದೆ. ಮತ್ತೊಂದೆಡೆ ಒಣಭೂಮಿ ಕೃಷಿ, ಅಕ್ಕಡಿ ಬೇಸಾಯ ಹಾಗೂ ಬೆರಕೆ ಸೊಪ್ಪುಗಳು ಒಕ್ಕಲು ವ್ಯವಸ್ಥೆಯಿಂದ ಕಣ್ಮರೆಯಾಗುತ್ತಿವೆ. ಈ ವಿಷಮ ಕಾಲಘಟ್ಟದಲ್ಲಿ ಪುಟ್ಟೀರಮ್ಮನಂತವರ ದೇಸಿ ಕೃಷಿ ಜ್ಞಾನ ಹಾಗೂ ಅದರ ಅಳವಡಿಕೆ ಅತ್ಯವಶ್ಯ.

(ಚಿತ್ರಗಳು: 'ಇಕ್ರಾ' ಸಂಗ್ರಹದಿಂದ)

10ನೇ ಪುಟದಿಂದ...

ಸಂತರ ಶರೀರ...

ಮುಂದೆ ಏಪ್ರಿಲ್ 17, 1545 ರಂದು ಗೋವಾದಿಂದ ಪೂರ್ವ ದಿಕ್ಕಿಗೆ ನೌಕಾಯಾನ ಆರಂಭಿಸಿದ ಫ್ರಾನ್ಸಿಸ್ ಕ್ಸೇವಿಯರ್, ಮಲಕ್ಕಾ ತಲುಪಿ, ಜಪಾನ್ ಸೇರುತ್ತಾರೆ. ನಂತರ ಚೀನಾಕ್ಕೆ ಸೇರಿದ ಕಾಂಟೋನ್ ಪ್ರದೇಶದಲ್ಲಿದ್ದ ಸ್ಯಾನ್‌ಚಿನ್ ನಡುಗಡ್ಡೆ ತಲುಪುತ್ತಾರೆ. ಅಸ್ವಸ್ಥರಾಗಿ ಡಿಸೆಂಬರ್ 3, 1552 ರಂದು ಅಸುನೀಗುತ್ತಾರೆ. ಜೊತೆಗಾರರು, ಅವರ ಮೂಳೆಗಳನ್ನು ಗೋವಾಗೆ ಸಾಗಿಸಲು ಅನುವಾಗುವಂತೆ ಸುಣ್ಣದಿಂದ ಸಮಾಧಿ ಮಾಡುತ್ತಾರೆ.

ಎರಡು ತಿಂಗಳ ನಂತರ ಸಮಾಧಿಯ ಮಣ್ಣನ್ನು ಸರಿಸಿ ಶವಪೆಟ್ಟಿಗೆಯನ್ನು ತೆರೆದಾಗ ಶವವು ಕೊಳೆತಿರಲಿಲ್ಲ. ಒಬ್ಬರು ಶವದ ಎಡತೊಡೆಯಲ್ಲಿ ಗಾಯ ಮಾಡಿದಾಗ ಅಲ್ಲಿ ರಕ್ತ ತುಂಬಿಕೊಂಡಿತಂತೆ. ಗೋವಾದತ್ತ ನೌಕಾ ಪ್ರಯಾಣ ಆರಂಭಿಸಿದಾಗ, ಮಲಕ್ಕಾದ ಅಧಿಕಾರಿಯ ನಿರ್ದೇಶನದಂತೆ, ಅಲ್ಲಿನ ಬೆಟ್ಟದ ರಾಣಿ ಚರ್ಚ್‌ನಲ್ಲಿ 1553ರ ಫೆಬ್ರುವರಿಯಲ್ಲಿ ಸಮಾಧಿ ಮಾಡಲಾಗುತ್ತದೆ. ಆಗ ಮಲಕ್ಕಾದಲ್ಲಿನ ಪ್ಲೇಗ್ ಹಾವಳಿ ಶವದ ಉಪಸ್ಥಿತಿಯಿಂದ ಕಡಿಮೆಯಾಯಿತು ಎನ್ನಲಾಗುತ್ತದೆ. ಅದೇ ಸಾಲಿನ ಆಗಸ್ಟ್ 15ರಂದು ಸಮಾಧಿಯನ್ನು ತೆರೆದಾಗಲೂ ಶವ ತಾಜಾತನ ಉಳಿಸಿಕೊಂಡಿತ್ತು. ನಂತರ ಶವವನ್ನು ನೌಕೆಯಲ್ಲಿ ಗೋವಾಗೆ ಸಾಗಿಸಲಾಗುತ್ತದೆ. ಅಂತೂ ಇಂತೂ ಶವ ಮಾರ್ಚ್ 15, 1554 ರಂದು ಗೋವಾದ ರಾಯ್ ಬಂದರನ್ನು ತಲುಪುತ್ತದೆ. ಎರಡು ದಿನಗಳ ನಂತರ ಅದನ್ನು ಹಳೆಯ ಗೋವಾಗೆ ತಂದಾಗ ಅಲ್ಲಿದ್ದ 40 ಚರ್ಚುಗಳಲ್ಲೂ ಗಂಟೆಗಳು ನಿನಾದಿಸುತ್ತವೆ. ಶವಪರೀಕ್ಷೆ ನಡೆಸಿದ, ಅಂದಿನ ಗೋವಾದ ಪ್ರಧಾನ ವೈದ್ಯ ರುಬೆರಿಯೊ ಶವ ಕೊಳೆಯುತ್ತಿಲ್ಲವೆಂದು ವಿಸ್ಮಯ ವ್ಯಕ್ತಪಡಿಸುತ್ತಾರೆ.

ಆಗ ಸಂತ ಪಾಲರ ವಿದ್ಯಾಪೀಠದ ಆವರಣದ ಕಿರಿಗುಡಿಯಲ್ಲಿ ಮೂರು ದಿನ ನಡೆದ ಪ್ರದರ್ಶನವೇ ಪವಿತ್ರ ಶರೀರದ ಮೊದಲ ಸಾರ್ವಜನಿಕ ಪ್ರದರ್ಶನ. ಇಸಾಬೆಲಾ ಎಂಬುವವಳು ಶವದ ಬಲಗಾಲಿನ ಹೆಬ್ಬೆರಳನ್ನು ಕಚ್ಚಿಕೊಂಡು ಹೋದಳಂತೆ. ರಕ್ತದ ಕಲೆಗಳನ್ನು ಹಿಂಬಾಲಿಸಿದ ಜನ, ಅವಳ ಮನೆ ಮುಟ್ಟಿದರಂತೆ. ಸದ್ಯಕ್ಕೆ ಅದು ಪ್ರಧಾನಾಲಯದ ಬೆಳ್ಳಿಯ ಸಂಪುಟದಲ್ಲಿದೆ.

ಸಂತ ಪಾಲರ ವಿದ್ಯಾಪೀಠದ ಕಿರಿಗುಡಿಯ ಪೂಜಾವೇದಿಕೆಯ ಬಳಿ ಮೂರನೇ ಬಾರಿ ಶವದ ಸಮಾಧಿ ಮಾಡಲಾಗುತ್ತದೆ. 1560ರಲ್ಲಿ ಕಿರಿಗುಡಿಯನ್ನು ಕೆಡವಿದಾಗ, ಶವಪೆಟ್ಟಿಗೆಯನ್ನು ಗುರುಮಠದಲ್ಲಿ ಇರಿಸಲಾಗುತ್ತದೆ. ನಂತರ ಪಕ್ಕದ 'ಬಸೀಲಿಕ ದೊ ಬೋಮ್ ಜೇಸುಸ್'ಗೆ ಸಾಗಿಸಲಾಗುತ್ತದೆ. ಮತ್ತೆ ಸಮಾಧಿ ಮಾಡಲು ಹೋಗುವುದಿಲ್ಲ.

ಜನಮಾನಸದಲ್ಲಿ ಆಗಲೇ ಸಂತರಾಗಿದ್ದ ಫ್ರಾನ್ಸಿಸ್ ಕ್ಸೇವಿಯರ್ ಅವರ ಕೊಳೆಯದ ಶವದ ಪವಾಡ ಸುದ್ದಿ ಕೇಳಿದ ರೋಮಿನಲ್ಲಿನ ಯೇಸುಸಭೆಯ ಪ್ರಧಾನರ ಕೋರಿಕೆಯಂತೆ, ನವೆಂಬರ್ 3, 1614 ರಂದು ಸಂತರ ಮುಂಗೈ ಸೇರಿಸಿ ಬಲಗೈ ತೋಳಿನ ಅರ್ಧಭಾಗವನ್ನು ಕತ್ತರಿಸಿ ರೋಮಿಗೆ ಕಳುಹಿಸಲಾಗುತ್ತದೆ.

ಅದೇ ಬಗೆಯಲ್ಲಿ ಬಲಗೈ ತೊಳಿನ (ಹಿಂಗೈಯನ್ನು) ಉಳಿದ ಭಾಗವನ್ನು ಮೂರು ತುಂಡುಗಳಲ್ಲಿ ಕತ್ತರಿಸಿ ಅವನ್ನು ಮಲಕ್ಕಾ, ಕೊಚ್ಚಿನ್ ಮತ್ತು ಮಕ್ಕಾವುಗಳಲ್ಲಿರುವ ಯೇಸುಸಭೆಯ ಗುರುಮಠಗಳಿಗೆ ಕಳುಹಿಸಿಕೊಡಲಾಗಿದೆ. ಮುಂದೆ 1620ರಲ್ಲಿ ಸಂತರ ದೇಹದಲ್ಲಿನ ಕರಳೂ ಸೇರಿದಂತೆ, ಒಳಗಿನ ವಿವಿಧ ಅಂಗಾಂಗಗಳನ್ನು ಕತ್ತರಿಸಿ ತೆಗೆದು, ಜಪಾನ್ ದೇಶವೂ ಸೇರಿದಂತೆ ವಿಶ್ವದ ಎಲ್ಲೆಡೆಯೂ ಹಂಚಲಾಗಿದೆ. ಅವರನ್ನು 1622 ರಲ್ಲಿ ಸಂತರೆಂದು ಘೋಷಿಸಲಾಗುತ್ತದೆ.

ನಂತರ 1681ರಲ್ಲಿ ಪಾರ್ಥಿವ ಶರೀರದ ಚರ್ಮ ಒಣಗುವುದನ್ನು ಗಮನಿಸಿದಾಗ, ಆತಂಕಗೊಂಡ ಯೇಸುಸಭೆಯ ಸ್ಥಳೀಯ ಮುಖ್ಯಸ್ಥರು ಇನ್ನು ಮುಂದೆ ಮೇಲಿಂದ ಮೇಲೆ ಶವ ಸಂಪುಟವನ್ನು ತೆರೆಯಬಾರದು ಎಂದು ನಿರ್ಧರಿಸಿ, 1686ರಲ್ಲಿ ಹಳೆಯ ಶವ ಸಂಪುಟದಿಂದ ಹೊಸ ಶವ ಸಂಪುಟಕ್ಕೆ ಶವವನ್ನು ಸ್ಥಳಾಂತರಿಸುತ್ತಾರೆ. 1698 ರ ಕೊನೆಯಲ್ಲಿ ಅಮೃತಶಿಲೆ ಮತ್ತು ಸ್ಫಟಿಕ ರೂಪದ ಬೆಣಚು ಕಲ್ಲಿನ ಸಮಾಧಿ ನಿರ್ಮಿಸಲಾಗುತ್ತದೆ. ಈ ಕಲ್ಲಿನ ಸಮಾಧಿ ಇಟಲಿಯ ಕಲೆಯನ್ನು ಪ್ರತಿನಿಧಿಸಿದರೆ, ಅದರಲ್ಲಿನ ಬೆಳ್ಳಿಯ ಶವ ಪೆಟ್ಟಿಗೆ ಭಾರತೀಯ ಕಲೆಯ ಪ್ರತೀಕದಂತಿದೆ.

ಶವಪೆಟ್ಟಿಗೆಯನ್ನು ಆಗಾಗ ತೆರೆಯುವುದಕ್ಕೆ ಕಡಿವಾಣ ಬೀಳದಿದ್ದಾಗ, 1755ರಲ್ಲಿ ಪೋರ್ಚುಗಲ್ ಅರಸ ತನ್ನ ಅನುಮತಿ ಇಲ್ಲದೇ ಶವಪೆಟ್ಟಿಗೆ ತೆರೆಯಕೂಡದೆಂದು ಆದೇಶಿಸಿರುತ್ತಾನೆ. ಆದರೆ, ಯೇಸುಸಭೆಯನ್ನು 1759ರಲ್ಲಿ ರದ್ದುಮಾಡಿದಾಗ, ಯೇಸುಸಭೆಯ ಗುರುಗಳು ಸಂತರ ಶವಪೆಟ್ಟಿಗೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದಾರೆಂಬ ವದಂತಿ ಹಬ್ಬುತ್ತದೆ. ಭಕ್ತರ ಒತ್ತಡ ಹೆಚ್ಚಾದಂತೆ, 1782ರಲ್ಲಿ ಸಾರ್ವಜನಿಕರ ವೀಕ್ಷಣೆಗೆ ಶವ ಪೆಟ್ಟಿಗೆಯನ್ನು ತರೆದಿಡಲಾಗುತ್ತದೆ.

ಅಂತಿಮವಾಗಿ, ಪದೇ ಪದೇ ಸಂತರ ಪವಿತ್ರ ಪಾರ್ಥಿವ ಶರೀರವನ್ನು ತೆಗೆದು ತೋರಿಸುವುದಕ್ಕಿಂತ ಏಳು ಅಥವಾ ಹತ್ತು ವರ್ಷಗಳಿಗೊಮ್ಮೆ ಸಾರ್ವಜನಿಕ ಪ್ರದರ್ಶನ ನಡೆಸಲು ತೀರ್ಮಾನಿಸಲಾಗುತ್ತದೆ. ಅದರಂತೆ ಪಾರ್ಥಿವ ಶರೀರವಿರುವ ಗಾಜಿನಪೆಟ್ಟಿಗೆಯನ್ನು ಸಾರ್ವಜನಿಕ ವೀಕ್ಷಣೆಗೆ ಇರಿಸುತ್ತಾ ಬರಲಾಗಿದೆ. ಹತ್ತು ವರ್ಷದ ಅವಧಿ ಜಾರಿಯಲ್ಲಿದೆ.

ಸುಮಾರು 400ಕ್ಕೂ ಅಧಿಕ ವರ್ಷಗಳು ಗೋವಾದ ಮೇಲೆ ಅಧಿಕಾರ ಸ್ಥಾಪಿಸಿದ್ದ ಪೋರ್ಚುಗೀಸರ ಕಾಲದ ಕ್ಷೇವಿಯರ್ ರ ಶವ ಸಂಪುಟವಿರುವ 'ಬಸೀಲಿಕ ದೊ ಬೋಮ್ ಜೇಸುಸ್'- ಕಟ್ಟಡವನ್ನು 1581–1602 ನಡುವೆ ಹಳೆಯ ಗೋವಾದಲ್ಲಿ ನಿರ್ಮಿಸಲಾಗಿದೆ. ಜಂಬಿಟ್ಟಿಗೆಯ ಈ ಕಟ್ಟಡವನ್ನು ವಿಶ್ವಸಂಸ್ಥೆಯ ಯುನೆಸ್ಕೊ ಸಂಘಟನೆಯು, ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಿದೆ. ಸದ್ಯ ಸಂತರ ಪವಿತ್ರ ಶರೀರವನ್ನು ಸಿ ಕಥಿಡ್ರಲ್ ಎಂದು ಕರೆಯುವ ಸನಿಹದ ಸಂತ ಕ್ಯಾಥರೀನ್ ಪ್ರಧಾನಾಲಯದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.



ಫ್ರಾನ್ಸಿಸ್ ಕ್ಸೇವಿಯರ್ ಪಾರ್ಥಿವ ಶರೀರ

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಯುದ್ಧರುಜೆ

ಯುದ್ಧ (ನಾ). ಕದನ; ಸಮರ
ರುಜೆ (ನಾ). ಖಾಯಿಲೆ; ರೋಗ

ಶಾಂತಿಪ್ರಿಯ ಕುವೆಂಪು ಅವರು ಯುದ್ಧವನ್ನು ಒಂದು ರೋಗ ಎಂದು ತಿಳಿದು 'ಯುದ್ಧರುಜೆ' ಪದ ರೂಪಿಸಿದ್ದಾರೆ. ಒಂದು ಸಾನೆಟ್‌ನಲ್ಲಿ 'ಅಶೋಕ ಚಕ್ರವರ್ತಿ'ಯ ಗುಣಲಕ್ಷಣವನ್ನು ಚಿತ್ರಿಸುತ್ತ- ಜಯವಿದ್ದು, ಬಲವಿದ್ದು, ಜಯಿಸೆ ದೇಶಗಳಿದ್ದರೂ ಅವನ ಶಾಂತಿ, ಅಹಿಂಸಾ ಮನದ ಮೈತ್ರಿಯಿಂದ ಅವನ ವಜ್ರಶಕ್ತಿಗದೆ ಮೃದುವಾಯಿತು ಎಂದು ಬಣ್ಣಿಸಿದ್ದಾರೆ. ಅವನನ್ನು ಯುದ್ಧ ಖಾಯಿಲೆಯ ಮದ್ದು ಎಂದು ಹೀಗೆ ಕೀರ್ತಿಸಿದ್ದಾರೆ:

'ರಾಜನಾಗಿದ್ದರೇಂ? ನೀಂ ದಿಟದಿ ರಾಜಋಷಿ!
ಯುದ್ಧರುಜೆಗೆಂದೆಂದಿಗೂ ನೀನರಸುಮದ್ದು!'

ಶಿಲಾಭೇರಿ

ವೀರಗಲ್ಲು, ಮಾಸ್ತಿ ಕಲ್ಲುಗಳು ತಮ್ಮ ತ್ಯಾಗ ಬಲಿದಾನವನ್ನು ಮೃದು ಕಠೋರ ದನಿಯಲ್ಲಿ ಕೂಗಿ ಹೇಳುತ್ತಿವೆ. ಅವು ಪಾಳು ದೇವಾಲಯಗಳಲ್ಲಿ, ಲಂಟಾನ ಪೊದೆಯಲ್ಲಿ, ಕಲ್ಲು ಉರುಳಿ ಮುರಿದ ಅರಳಿಕಟ್ಟೆಯ ಹಳು ಬೆಳೆದ ಸ್ಥಳಗಳಲ್ಲಿವೆ. ಅವು ತಮ್ಮ ಸಾಹಸಗಾಥೆಯನ್ನು ಶಿಲಾಲಿಪಿಯಲ್ಲಿ, ಚಿತ್ರಭಿತ್ತಿಯಲ್ಲಿ ಹುದುಗಿಸಿಕೊಂಡಿರುವುದನ್ನು ಕೂಗಿಹೇಳುತ್ತಿವೆ.

ಆ ಕೂಗನ್ನು ಕಿವಿ ಹೊಂದಿರುವ ಕಿವುಡರೇ ಕೇಳಿಸಿಕೊಳ್ಳಿ ಎಂದು ಹೇಳುತ್ತ ಕುವೆಂಪು 'ಶಿಲಾಭೇರಿ' ಪದ ರೂಪಿಸಿ ಅವು ಭೋರಿಡುವ ಲಕ್ಷಣವನ್ನು ಭೇರಿ, ನಗಾರಿ ಬಾರಿಸಿದಂತೆ ಎಂದು ಕಾವ್ಯ ರಚಿಸಿದ್ದಾರೆ.

'ಬಲಿದಾನಗೈದ ಕನ್ನಡತನದ ತುತ್ತೂರಿ
ಭೋರಿಡುತಿದೆ ಶಿಲಾಭೇರಿ,
ಪ್ರಾಣ ಸಂಚಾರಿ!'

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ದೀಪಾವಳಿ ಕಥೆ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕಥೆ-ಉಫ್!!!



ಎಂ.ಡಿ ಚಿತ್ತರಗಿ

ಬಾಗಲಕೋಟೆ ಜಿಲ್ಲೆಯ ಹುನಗುಂದದವರು. ಮುದಗಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕ. 'ಏಣಿ', 'ಮಥನ', 'ಕಥಾತಪಸ್ವಿ', 'ಗಾಯಗೊಂಡಿವೆ ಬಣ್ಣ!', 'ಅಕ್ಷರ ಹೂ' ಇವರ ಪ್ರಕಟಿತ ಕೃತಿಗಳು. 'ಗಾಯಗೊಂಡಿವೆ ಬಣ್ಣ' ಕವನ ಸಂಕಲನಕ್ಕೆ 2022ನೇ ಸಾಲಿನ ಡಿ. ಸಿ. ಅನಂತಸ್ವಾಮಿ ದತ್ತಿ ಪ್ರಶಸ್ತಿ ಲಭಿಸಿದೆ.

ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದೀಪಾವಳಿ ಕವನ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕವನ-ಕಿನ್ನರಿ



ಸುಧಾ ಆಡುಕಳ

ಉಡುಪಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಗಣಿತ ಉಪನ್ಯಾಸಕಿ. ಮಕ್ಕಳ ನಾಟಕಗಳು, ಏಕವ್ಯಕ್ತಿ ರಂಗರೂಪಕಗಳನ್ನು ರಚಿಸಿದ್ದಾರೆ. ಇವರು ಬರೆದ 'ಬಕುಲದ ಬಾಗಿಲಿನಿಂದ' ಅಂಕಣ ಬರಹಗಳ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಒಂದು ಇಡಿಯ ಬಳಪ' ಕಥಾಸಂಕಲನಕ್ಕೆ ಮೈತ್ರಿ ಪುಸ್ತಕ ಬಹುಮಾನ ಲಭಿಸಿದೆ.

ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಆರಕ್ಕೇರದ ಪಣಜಿ ಚಿತ್ರೋತ್ಸವ



ಗೋವಾದಲ್ಲಿ 55ನೇ ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ (ಇಫಿ) ನಡೆದ ಸ್ಥಳ



ಇಫಿಯಲ್ಲಿ ಸಿನಿಮಾ ವೀಕ್ಷಿಸಲು ಸೇರಿದ್ದ ಅಪಾರ ಪ್ರೇಕ್ಷಕರು

ಪ್ರೇಮಕುಮಾರ್ ಹರಿಯಬ್ಬೆ

ಇತ್ತೀಚೆಗೆ ಪಣಜಿಯಲ್ಲಿ ನಡೆದ 55ನೆಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಕಳೆದ ವರ್ಷಕ್ಕಿಂತ ಭಿನ್ನವಾಗಿರಲಿಲ್ಲ. ಕಾನ್ಸ್, ವೆನಿಸ್, ಬರ್ಲಿನ್ ಇತ್ಯಾದಿ ಜಾಗತಿಕ ಚಿತ್ರೋತ್ಸವಗಳ ಮಟ್ಟಕ್ಕೆ ಪಣಜಿ ಚಿತ್ರೋತ್ಸವವನ್ನು ಸಂಘಟಿಸಬೇಕೆಂಬ ಪ್ರಯತ್ನ ಸ್ವಾಗತಾರ್ಹವಾದರೂ, ಪ್ರದರ್ಶನಗೊಳ್ಳುವ ಸಿನಿಮಾಗಳ ಆಯ್ಕೆ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರುವ ಅಗತ್ಯವಿದೆ. ನ್ಯಾಷನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್(ಎನ್‌ಎಫ್‌ಡಿಸಿ) ಇತ್ತ ಕಡೆ ಗಮನ ಹರಿಸಬೇಕು ಎನ್ನುವುದು ಚಿತ್ರೋತ್ಸವಕ್ಕೆ ಬಂದ ಬಹುತೇಕ ಪ್ರತಿನಿಧಿಗಳ ಅನಿಸಿಕೆ.

ಈ ವರ್ಷ ಸಿನಿಮಾ ಪ್ರದರ್ಶನ ತೆರೆಗಳ ಸಂಖ್ಯೆ ಹೆಚ್ಚಾಗಿತ್ತು. ಪಣಜಿ, ಪೊರ್ವರಿಂ ಅಲ್ಲದೆ ಪೋಂಡಾ ಮತ್ತು ಮಡಗಾಂವ್‌ಗಳಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದರು. ಈ ನಾಲ್ಕೂ ಕೇಂದ್ರಗಳಲ್ಲಿ ನಡೆದ ಎಲ್ಲ ಪ್ರದರ್ಶನಗಳೂ ಹೌಸ್‌ಫುಲ್ ಆಗಿದ್ದವು. ಚಿತ್ರೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯ ಜನ ಭಾಗಿಯಾದರು ಎನ್ನುವುದು ಸಮಾಧಾನದ ಸಂಗತಿ. ಆದರೆ ಸಿನಿಮಾಗಳನ್ನು ನೋಡಿದವರ ಅಭಿಪ್ರಾಯವೇನು ಎನ್ನುವುದು ಗೊತ್ತಾಗಲಿಲ್ಲ. ಜಾಗತೀಕರಣ, ಭಯೋತ್ಪಾದನೆ, ವಿಶ್ವ ವ್ಯಾಪಿಯಾಗಿರುವ ರಾಜಕೀಯ ಅಸ್ಥಿರತೆ, ಯುದ್ಧ ಭೀತಿ, ಮಾರುಕಟ್ಟೆ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿನ ಪಲ್ಲಟಗಳನ್ನು ಪರೋಕ್ಷವಾಗಿ ಧ್ವನಿಸುವ ಸಿನಿಮಾಗಳನ್ನು ಸಾಮಾನ್ಯ ಪ್ರತಿನಿಧಿಗಳು ಗ್ರಹಿಸುವುದು ಕಷ್ಟ. ಸಿನಿಮಾ ನೋಡಿ ಹೊರ ಜಗತ್ತನ್ನು ಅರ್ಥ ಮಾಡಿಕೊಳ್ಳುವುದು ಇನ್ನೂ ಕಷ್ಟ. ಬಹುತೇಕ ಸಿನಿಮಾಗಳಲ್ಲಿ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯ ವಿಭಿನ್ನ ಮುಖಗಳ ಪ್ರತಿಫಲನವಿತ್ತು.

> ಪ್ರತಿಷ್ಠೆಗಾಗಿ ಚಿತ್ರೋತ್ಸವ ಸಂಘಟಿಸುವ ಮನಸ್ಥಿತಿ ಬದಲಾಗಬೇಕು. ಸಿನಿಮಾಗಳ ಮೊದಲ (ಪ್ರೀಮಿಯರ್) ಪ್ರದರ್ಶನಕ್ಕೆ ಚಿತ್ರೋತ್ಸವ ವೇದಿಕೆ ಆಗಬಾರದು ಎಂಬ ಅಭಿಪ್ರಾಯ ಈ ಸಲವೂ ಕೇಳಿ ಬಂತು.

ಭಾರತೀಯ ಪನೋರಮಾ ವಿಭಾಗದಲ್ಲಿ ಮುಖ್ಯವಾಹಿನಿಯ ಕಮರ್ಷಿಯಲ್ ಸಿನಿಮಾಗಳನ್ನು ಆಯ್ಕೆ ಮಾಡುವ ಅಗತ್ಯ ಇಲ್ಲ ಎನ್ನುವುದು ಆಯ್ಕೆ ಸಮಿತಿಗೆ ಅರ್ಥವಾಗುತ್ತಿಲ್ಲ. ಈ ವಿಭಾಗದಲ್ಲಿ ಎಲ್ಲ ಪ್ರಾದೇಶಿಕ ಸಿನಿಮಾಗಳಿಗೂ ಸಮಾನ ಅವಕಾಶ ಸಿಗಬೇಕು ಎನ್ನುವ ಒತ್ತಾಯ ಈ ಸಲವೂ ಕೇಳಿ ಬಂತು. ಎನ್‌ಎಫ್‌ಡಿಸಿ ಮತ್ತು ಆಯ್ಕೆ ಸಮಿತಿಗಳು ಈ ಅಭಿಪ್ರಾಯಗಳನ್ನು ಗಮನಿಸಬೇಕು. ಅತ್ಯುತ್ತಮ ಭಾರತೀಯ ಸಿನಿಮಾಗಳನ್ನು ವಿದೇಶಿ ಸಿನಿಮಾಗಳ ಜತೆಯಲ್ಲಿ ಪ್ರದರ್ಶಿಸಬೇಕು. ಸಿನಿಮಾಗಳ ಆಯ್ಕೆ ಪಾರದರ್ಶಕವಾಗಿರಬೇಕು. ಈ ಸಲ ಚಿತ್ರೋತ್ಸವಕ್ಕೆ ಬಂದ ವಿದೇಶಿ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿರಲಿಲ್ಲ. ಸಿನಿಮಾಗಳ ಜೊತೆಯಲ್ಲಿ ಬಂದ ಒಬ್ಬಿಬ್ಬರು ತಂತ್ರಜ್ಞರನ್ನು ಹೊರತುಪಡಿಸಿದರೆ ಪ್ರತಿನಿಧಿಗಳ ಸಂಖ್ಯೆ ವಿರಳವಾಗಿತ್ತು. ಭಾರತದಲ್ಲೇ ನೆಲೆಸಿರುವ ವಿದೇಶಿಯರು, ಪ್ರವಾಸಕ್ಕೆ ಬಂದ ವಿದೇಶಿಯರೂ ಚಿತ್ರೋತ್ಸವದತ್ತ ಮುಖ ಮಾಡಲಿಲ್ಲ.

ಗುಣಮಟ್ಟದ ಸಿನಿಮಾಗಳ ಕೊರತೆ

ಚಿತ್ರೋತ್ಸವದಲ್ಲಿ ಪ್ರದರ್ಶನವಾದ 200ಕ್ಕೂ ಹೆಚ್ಚು ಸಿನಿಮಾಗಳ ಪೈಕಿ ಅತ್ಯುತ್ತಮ ಎನ್ನಬಹುದಾದವುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಹತ್ತು ಸಿನಿಮಾಗಳನ್ನು ನೋಡಿದರೆ ಮೂರು ಅಥವಾ ನಾಲ್ಕು ಸಿನಿಮಾಗಳು ಇದ್ದುದರಲ್ಲಿ ಉತ್ತಮವಾಗಿರುತ್ತವೆ. ಉಳಿದವು ಸಾಮಾನ್ಯ ಸಿನಿಮಾಗಳು. ಡಿಜಿಟಲ್ ತಂತ್ರಜ್ಞಾನದ ಸಾಧ್ಯತೆಗಳು, ಕೃತಕ ಬುದ್ಧಿಮತ್ತೆ ಇತ್ಯಾದಿಗಳನ್ನು ಬಳಸಿಕೊಂಡು ಉತ್ತಮ ಸಿನಿಮಾಗಳನ್ನು ನಿರ್ಮಿಸುವ ಪ್ರಯತ್ನ ನಡೆಯುತ್ತಿದೆ. ಆದರೂ ಗುಣಮಟ್ಟದ ಸಿನಿಮಾಗಳ ನಿರ್ಮಾಣ ಆಗುತ್ತಿಲ್ಲ. ಹೀಗೇಕೆ? ಜಾಗತಿಕ ಸಿನಿಮಾಗಳ ಗುಣಮಟ್ಟದಲ್ಲೂ ಕುಸಿತ ಕಾಣುತ್ತಿದೆ ಎಂಬ ಪ್ರಶ್ನೆಯನ್ನು ಪ್ರತಿನಿಧಿಗಳು ಸಣ್ಣಮಟ್ಟದಲ್ಲಿ ಅಲ್ಲಲ್ಲಿ ಚರ್ಚಿಸಿದರು. ಹಾಗೆ ನೋಡಿದರೆ ಇದೊಂದು ಬಗೆಯ ಗೊಣಗಾಟ. ಪಣಜಿ ಚಿತ್ರೋತ್ಸವದ ಗುಣಮಟ್ಟವೂ ವರ್ಷದಿಂದ ವರ್ಷಕ್ಕೆ ಕುಸಿಯುತ್ತದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ದೇಶದ ಉದ್ದಗಲದಲ್ಲಿ ಚಿತ್ರೋತ್ಸವಗಳನ್ನು ನಡೆಸುವ ಅಗತ್ಯವಿದೆಯೇ? ಎಂಬುದು ಪ್ರಶ್ನೆ.

ಚಿತ್ರೋತ್ಸವದ ಅಂಗವಾಗಿ ವ್ಯವಸ್ಥೆ ಮಾಡಿದ್ದ ಸಂವಾದಗಳಲ್ಲಿ ಸಿನಿಮಾ ರಂಗದಲ್ಲಿ ಮಹಿಳೆಯರಿಗೆ ರಕ್ಷಣೆ, ಕಥಾ ನಿರೂಪಣೆ, ತಂತ್ರಜ್ಞಾನದ ಹೊಸ ಆವಿಷ್ಕಾರಗಳು, ಸಿನಿಮಾ ನಿರ್ಮಾಣದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ, ಅನಿಮೇಷನ್ ಹಾಗೂ ಜನ್ಮ ಶತಮಾನೋತ್ಸವದ ಆಚರಣೆ ನಡೆಯುತ್ತಿರುವ ತೆಲುಗು ನಟ ಅಕ್ಕಿನೇನಿ ನಾಗೇಶ್ವರ ರಾವ್, ಬೆಂಗಾಲಿ ಚಿತ್ರರಂಗದ ತಪನ್ ಸಿನ್ಹಾ ಅವರ ಸಿನಿಮಾ ಜೀವನ ಮತ್ತು ಸಾಧನೆಗಳನ್ನು ಮೆಲುಕು ಹಾಕುವ ಚರ್ಚೆಗಳು ನಡೆದವು. ಭಾರತೀಯ ಸಿನಿಮಾಗಳಿಗೆ ಜಾಗತಿಕ ಮಾರುಕಟ್ಟೆ ಮತ್ತು ಹಣಕಾಸಿನ ಪ್ರಾಯೋಜಕತ್ವ ಒದಗಿಸಿ ಕೊಡುವ ಫಿಲ್ಮ್ ಬಜಾರ್ ಸಹ ಯಶಸ್ವಿಯಾಯಿತು.

ನಿರ್ದೇಶಕಿಯರ ದೃಢ ಹೆಜ್ಜೆಗಳು...

ಈ ವರ್ಷ ಜಾಗತಿಕ ಸಿನಿಮಾರಂಗದಲ್ಲಿ ಮಹಿಳೆಯರ ಸಾಧನೆ ಗಮನಾರ್ಹ. ಪಣಜಿ ಚಿತ್ರೋತ್ಸವದ ಸ್ಪರ್ಧಾ ವಿಭಾಗದಲ್ಲಿ ಪ್ರದರ್ಶನವಾದ ಹದಿನೈದು ಸಿನಿಮಾಗಳ ಪೈಕಿ ಎಂಟನ್ನು ನಿರ್ದೇಶಿಸಿದವರು ಮಹಿಳೆಯರು. ಇವುಗಳಲ್ಲಿ ಮೂರ್‍ನಾಲ್ಕು ಅತ್ಯುತ್ತಮವಾಗಿದ್ದವು.

ಹೆಚ್ಚು ಗಮನಸೆಳೆದ ಸಿನಿಮಾಗಳೆಂದರೆ ಸ್ಪೇನ್ ದೇಶದ ಇಸಿಯಾರ್ ಬೊಲ್ಲೈನ್ ನಿರ್ದೇಶನದ ‘ಐ ಆ್ಯಮ್ ನೆವೆಂಕಾ’, ಟರ್ಕಿ ದೇಶದ ಬೆಲ್ಕಿಸ್ ಬ್ಯಾರಕ್ ನಿರ್ದೇಶನದ ‘ಗುಲಿಝಾರ್’, ಇರಾನ್‌ನ ಮನ್‌ಜೆಹ್ ಹೆಕ್ಮತ್ ಮತ್ತು ಫಯೀಜ್ ಅಝೀಜ್‌ಖಾನಿ ನಿರ್ದೇಶನದ ‘ಫಿಯರ್ ಆ್ಯಂಡ್ ಟ್ರೆಂಬ್ಲಿಂಗ್’, ಕೆನಡಾದ ಸೋಫಿ ಡೆರಾಸ್ಪೆ ನಿರ್ದೇಶನದ ‘ಶೆಫರ್ಡ್’, ಫ್ರಾನ್ಸ್‌ನ ಲೂಯಿಸ್ ಕರ್ವೋಸಿಯೆರ್ ನಿರ್ದೇಶನದ ‘ಹೋಲಿ ಕೌ’.

ಯೂರೋಪಿನ ಬಾಲ್ಟಿಕ್ ಪ್ರಾಂತ್ಯದ ಪುಟ್ಟ ದೇಶ ಲಿಥುವೇನಿಯಾದ ಸೌಲೆ ಬಿಲಿಯುವೈಟ್ ನಿರ್ದೇಶಿಸಿದ ಚೊಚ್ಚಲ ಚಿತ್ರ ‘ಟಾಕ್ಸಿಕ್’ ಚಿತ್ರೋತ್ಸವದ ಅತ್ಯುತ್ತಮ ಸಿನಿಮಾ ಪುರಸ್ಕಾರಕ್ಕೆ (₹40 ಲಕ್ಷ) ಪಾತ್ರವಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಅದೇನೇ ಇರಲಿ, ಜಾಗತಿಕ ಸಿನಿಮಾ ರಂಗದಲ್ಲಿ ನಿರ್ದೇಶಕಿಯರು ದೃಢವಾದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ. ಈ ಬೆಳವಣಿಗೆ ಮುಂದಿನ ವರ್ಷಗಳಲ್ಲಿ ಭಾರತೀಯ ಸಿನಿಮಾದ ಪ್ರತಿಭಾವಂತೆಯರಿಗೆ ಉತ್ತೇಜನ ಆಗಬಹುದು.



ಗಮನ ಸೆಳೆದ ಶೆಫರ್ಡ್



ಶೆಫರ್ಡ್ ಸಿನಿಮಾ ದೃಶ್ಯ

ಚಿತ್ರೋತ್ಸವದಲ್ಲಿ ಹೆಚ್ಚು ಸದ್ದು ಮಾಡಿದ್ದು ಮತ್ತು ಮೆಚ್ಚುಗೆ ಗಳಿಸಿದ್ದು ಕೆನಡಾ ದೇಶದ ಸಿನಿಮಾ ‘ಶೆಫರ್ಡ್’. ಪತ್ರಿಕೆಯೊಂದರ ಜಾಹೀರಾತು ನೋಡಿದ ಮಥ್ಯಾಸ್ ಎಂಬ ಯುವಕ ಕುರಿ ಕಾಯುವ ವೃತ್ತಿಗೆ ಸೇರುತ್ತಾನೆ. ಕುರಿ ಸಾಕಣೆಯಲ್ಲಿ ತರಬೇತಿ ಪಡೆದು ದೊಡ್ಡ ಮಂದೆಯನ್ನು ನಿರ್ವಹಿಸುವ ಜವಾಬ್ದಾರಿ ಹೊರುತ್ತಾನೆ. ವೃತ್ತಿಯಲ್ಲಿನ ಅವನ ಕಾರ್ಯಕ್ಷಮತೆ ಮತ್ತು ಬದ್ಧತೆ ಹಾಗೂ ಪ್ರಕೃತಿಯೊಂದಿಗಿನ ಅನುಸಂಧಾನ, ಎದುರಾಗುವ ಅಡಚಣೆಗಳನ್ನು ಕಟ್ಟಿಕೊಡುತ್ತ, ಶತಮಾನಗಳಷ್ಟು ಹಳೆಯ ಸಾಂಪ್ರದಾಯಿಕ ವೃತ್ತಿಯ ಮೇಲೆ ‘ಶೆಫರ್ಡ್’ ಬೆಳಕು ಚೆಲ್ಲುತ್ತದೆ. ಪರ್ವತ ಪರಿಸರದಲ್ಲಿ ನೂರಾರು ಕುರಿಗಳ ಮಂದೆಯನ್ನು ಮುನ್ನಡೆಸುವ ದೃಶ್ಯಗಳು ಈ ಸಿನಿಮಾಕ್ಕೆ ದೃಶ್ಯ ಭವ್ಯತೆಯನ್ನು ತಂದುಕೊಟ್ಟಿವೆ.



ಕೆರೆಬೇಟೆ ಸಿನಿಮಾದ ದೃಶ್ಯ

‘ಐ ಆ್ಯಮ್ ನೆವೆಂಕಾ’ (ಸ್ಪೇನ್) ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಕಥೆಯನ್ನು ಕಟ್ಟಿಕೊಡುವ ಸಿನಿಮಾ. ಪೊನ್‌ಫೆರಡಾ ನಗರದ ಮೇಯರ್ ತನ್ನ ಪಕ್ಷದ ಸದಸ್ಯೆಯೊಬ್ಬಳನ್ನು ಲೈಂಗಿಕವಾಗಿ ಶೋಷಿಸುವ ಸಂದರ್ಭಗಳನ್ನು ನಾಟಕೀಯವಾಗಿ ಅನಾವರಣಗೊಳಿಸುವ ಸಿನಿಮಾ. 2003ರಲ್ಲಿ ನಡೆದ ನೈಜ ಘಟನೆ ಕುರಿತದ್ದು. ಈ ಪ್ರಕರಣದ ಸಂತ್ರಸ್ತೆ ನೆವೆಂಕಾಗೆ ಜನ ಮತ್ತು ನ್ಯಾಯಾಲಯಗಳು ಒತ್ತಾಸೆಯಾಗಿ ನಿಲ್ಲುತ್ತವೆ. ಆರೋಪಿಗೆ ಶಿಕ್ಷೆ ಆಗುತ್ತದೆ.




ಐ ಆ್ಯಮ್ ನೆವೆಂಕಾ

ನಿರ್ದೇಶಕರ ಚೊಚ್ಚಲ ಸಿನಿಮಾ ವಿಭಾಗದಲ್ಲಿ ಪ್ರದರ್ಶನವಾದ ರೊಮಾನಿಯಾ ದೇಶದದ ‘ನ್ಯೂ ಇಯರ್ ದಟ್ ನೆವರ್ ಕೇಮ್’, ಅಮೆರಿಕದ ಸಾರಾ ಫ್ರಿಡ್‌ಲ್ಯಾಂಡ್ ನಿರ್ದೇಶನದ ‘ಫೆಮಿಲಿಯರ್ ಟಚ್’, ತೆಲುಗಿನ ನಂದಕಿಶೋರ್ ಏಮನಿ ನಿರ್ದೇಶನದ ‘35 ಚಿನ್ನ ಕಥಾಕಾದು’, ಶಶಿ ಚಂದ್ರಕಾಂತ್ ಖಂಡಾರೆ ನಿರ್ದೇಶನದ ಮರಾಠಿ ಸಿನಿಮಾ ‘ಜಿಪ್ಸಿ’ ಅಲ್ಲದೆ ಪನೋರಮಾ ವಿಭಾಗದಲ್ಲಿದ್ದ ಕನ್ನಡದ ‘ಕೆರೆಬೇಟೆ’, ‘ಮಿಕ್ಕ ಬಣ್ಣದ ಹಕ್ಕಿ’ ಸಿನಿಮಾಗಳೂ ಗಮನ ಸೆಳೆದವು.



• ಎಂ.ಎಸ್.ಪೂಜಾರ



ಹಳೆ ಕಥೆ

1961ರ ಪಠ್ಯಪುಸ್ತಕದಲ್ಲಿನ ಈ ಕಥೆ ತುಂಬಾ ಸ್ವಾರಸ್ಯವಾಗಿದೆ. ಓದಿ.

ಒಂದು ಕಾಡಿನಲ್ಲಿ ನರಿಯೂ ಕರಡಿಯೂ ಇದ್ದವು. ಅವು ಗೆಳೆಯರಾಗಿದ್ದವು.

ಒಂದು ದಿನ ಕರಡಿ ನರಿಯನ್ನು ಕುರಿತು ‘ನನಗೆ ದಿನಾಲೂ ಆಹಾರ ಹುಡುಕಿ ಸಾಕಾಗಿ ಹೋಗುತ್ತದೆ. ನಾವು ಬೇಸಾಯ ಮಾಡೋಣ’ ಎಂದು ಹೇಳಿತು.

ನರಿ ಆ ಮಾತಿಗೆ ಒಪ್ಪಿತು. ಅವು ಒಂದು ಹೊಲವನ್ನು ಕೊಂಡುಕೊಂಡವು. ಆಗ ನರಿಯು ‘ಕರಡಿಯಣ್ಣಾ, ನಾವು ಬೆಳೆಯನ್ನು ಹೇಗೆ ಪಾಲು ಮಾಡಿಕೊಳ್ಳೋಣ?’ ಎಂದು ಕೇಳಿತು.

‘ಬೆಳೆದುದನ್ನು ಸರಿಯಾಗಿ ಎರಡು ಪಾಲು ಮಾಡಿ ಹಂಚಿಕೊಳ್ಳುವುದು ಒಳ್ಳೆಯದು’ ಎಂದು ಕರಡಿ ಹೇಳಿತು.

‘ಅದು ಸರಿಯೆ! ಈ ವರ್ಷ ನೆಲದ ಒಳಗೆ ಬೆಳೆದುದನ್ನು ನೀನು ತೆಗೆದುಕೋ. ನೆಲದ ಮೇಲೆ ಬೆಳೆದುದನ್ನು ನಾನು ತೆಗೆದುಕೊಳ್ಳುತ್ತೇನೆ. ಬರುವ ವರ್ಷ ನೆಲದ ಮೇಲೆ ಬೆಳೆದುದು ನಿನಗಿರಲಿ. ನೆಲದ ಒಳಗೆ ಬೆಳೆದುದು ನನಗಿರಲಿ’ ಎಂದು ನರಿಯು ಹೇಳಿತು. ಕರಡಿಯು ಆ ಮಾತಿಗೆ ಒಪ್ಪಿತು.

ಆ ವರ್ಷ ಅವು ಜೋಳ ಬಿತ್ತಿದವು. ಬೆಳೆ ಬಂದಿತು. ಜೋಳದ ತೆನೆಗಳೆಲ್ಲಾ ನರಿಯ ಪಾಲಿಗೆ ಬಂದವು. ಜೋಳದ ದಂಟು ಬೇರುಗಳು ಕರಡಿಯ ಪಾಲಿಗೆ ಬಂದವು. ಕರಡಿಯು ಆಗ ಗೊಣಗುಟ್ಟಿತು. ಇದು ಸರಿಯಲ್ಲ. ನಾವು ಇಬ್ಬರೂ ಕೆಲಸ ಮಾಡಿದ್ದೇವೆ. ಇಬ್ಬರಿಗೂ ತೆನೆಯಲ್ಲಿ ಸರಿಪಾಲು ಬರಬೇಕಲ್ಲವೆ? ಈ ಬೇರುಗಳಿಂದ ನನಗೇನು ಉಪಯೋಗ?’



‘ನಾವು ಮೊದಲೇ ಒಪ್ಪಿಕೊಂಡಂತೆ ನನ್ನ ಪಾಲಿಗೆ ತೆನೆ ಬಂದಿದೆ’ ಎಂದು ನರಿ ಹೇಳಿತು.

ಮರುವರ್ಷ ಅವು ಮತ್ತೆ ಬೇಸಾಯ ಮಾಡಲು ಸಿದ್ಧವಾದವು. ‘ಈ ವರ್ಷ ನಾವೇನು ಬಿತ್ತೋಣ’ ಎಂದು ಕರಡಿಯು ಕೇಳಿತು. ‘ಈ ವರ್ಷ ಬೆಳೆಯಲ್ಲಿ ಬದಲಾವಣೆ ಮಾಡೋಣ. ಗೆಣಸು ಬೆಳೆದರೆ ಒಳ್ಳೆಯದಲ್ಲವೇ’ ಎಂದು ನರಿಯು ಕೇಳಿತು. ‘ಹಾಗೆಯೇ ಆಗಲಿ’ ಎಂದು ಕರಡಿಯು ಹೇಳಿತು. ನರಿಯೂ ಕರಡಿಯೂ ಸೇರಿ ಗೆಣಸನ್ನು ಬೆಳೆಸಿದುವು.

ಗೆಣಸು ಚೆನ್ನಾಗಿ ಬೆಳೆಯಿತು. ಕರಡಿಯೂ ನರಿಯೂ ಆ ಗೆಣಸನ್ನು ಕಿತ್ತವು. ನರಿಯು ಗೆಣಸು ಗೆಡ್ಡೆಗಳನ್ನು ತೆಗೆದುಕೊಂಡು, ‘ಕರಡಿಯಣ್ಣಾ ಇಗೋ ನಿನ್ನ ಪಾಲು! ಈ ಗೆಣಸಿನ ಬಳ್ಳಿ!’ ಎಂದಿತು.

ಕರಡಿಯು, ‘ಇದು ಸರಿಯಲ್ಲ. ಗೆಡ್ಡೆಗಳಲ್ಲಿ ನನಗೂ ಸರಿಪಾಲು ಇದೆ’ ಎಂದು ಹೇಳಿತು.


‘ಕಳೆದ ವರ್ಷದ ಒಪ್ಪಂದ ಮರೆತು ಹೋಯಿತೇನು? ಈ ವರ್ಷ ನೆಲದ ಮೇಲೆ ಬೆಳೆದುದೆಲ್ಲಾ ನಿನಗೆ ಎಂದು ಒಪ್ಪಿಕೊಂಡಿದ್ದೆ’ ಎಂದು ನರಿ ಹೇಳಿತು.

ಆಗ ಕರಡಿಯು, ‘ನೀನು ಬಲು ಮೋಸಗಾರ. ನಿನ್ನ ಸಂಗಡ ಗೆಳೆತನ ಸಲ್ಲದು’ ಎಂದು ಹೇಳಿತು. ಕರಡಿಯು ಆ ಕಾಡನ್ನು ಬಿಟ್ಟು ದೂರಹೋಯಿತು.

ಡಗ್ಗ ಚಕ್ಕು ಕೇಶ್ರಪ್ಪ ಕಥೆಯ ಡ್ರೋನ್ ಹಾರಾಟ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಹೊಸ ಡ್ರೋನ್ ಖರೀದಿಸಿದ. ಡ್ರೋನ್ ಇದ್ದ ಬಾಕ್ಸ್ ಅನ್ನು ಪ್ಲಾಸ್ಟಿಕ್ ಸ್ಟೂಲ್ ಮೇಲೆ ಇಟ್ಟ. ಬಾಕ್ಸ್ ಒಳಗಿಂದ ಡ್ರೋನ್ ತೆಗೆದು, ಬಾಕ್ಸ್ ಪಕ್ಕಕ್ಕೆ ಇಟ್ಟು ಡ್ರೋನ್ ಅನ್ನು ಮತ್ತೆ ಸ್ಟೂಲ್ ಮೇಲೆ ಇರಿಸಿದ. ಡ್ರೋನ್ ಕೆಳಗಡೆ ಅಂಟಿನ ಟೇಪ್ ಇದ್ದಿದ್ದನ್ನು ಗುಂಡ ಗಮನಿಸಿಯೇ ಇರಲಿಲ್ಲ. ರಿಮೋಟ್ ತೆಗೆದುಕೊಂಡು ಡ್ರೋನ್ ಹಾರಿಸಿದ. ಆಗ ಅದು ಸ್ಟೂಲ್ ಸಹಿತ ಆಕಾಶಕ್ಕೆ ಹಾರಿತು.



ಪ್ರಾಸ ಪದ ಬಂಧ

ಅಕ್ಷರ ಪಟ್ಟಿ

ಸ	ಕ	ಜೀ	ಹ
ದ	ಉ	ಅ	ವ
ರೇ	ಪಾ	ಕ	ಪ್ರೋ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ವ	ತಿ
	ವ	ತಿ

2

	ವ	ನ
	ವ	ನ

3

	ವ	ನ
	ವ	ನ

4

	ರಿ	ಷ್ಠ
	ರಿ	ಷ್ಠ

5

	ವ	ಡೆ
	ವ	ಡೆ

6

	ತ್ಸಾ	ಹ
	ತ್ಸಾ	ಹ

ಚಿಕ್ಕಲೆಕ್ಕ

☐ X ☐ = ☐
☐ X ☐ = ☐
= 100

ಇಲ್ಲಿ ಕೊಟ್ಟಿರುವ ಎರಡು ಮಗ್ಗಿಗಳ ಗುಣ್ಯಗುಣಕಗಳ ಗುಣಲಬ್ಧದ ಎರಡೂ ಸಂಖ್ಯೆಗಳನ್ನು ಕೂಡಿಸಿದಾಗ 100 ಆಗಬೇಕು. ಆ ಗುಣ್ಯ ಗುಣಕಗಳು ಯಾವುವು?

ಗಣಿತದಲ್ಲಿ ಗರ್ದಿ ಗಮ್ಮತ್ತು

8ರ ನಂಟು

1. 37X24=888
2. 98765432X9=888888888
3. 68376X13=888888
4. 3367X264=888888
5. 888+88+8+8+8=1000

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಚುಟುಕು–ಗುಟುಕು 2.ತೋರಿಕೆ–ಸೋರಿಕೆ 3.ನಿಯಮ–ಸಂಯಮ 4.ಅಳಲು–ಕೊಳಲು 5.ಜರಡಿ–ಪರಡಿ

ಗಾದೆ ಗುರ್ತಿಸು:
1. ಆಕಳು ಕಪ್ಪಾದರೆ ಹಾಲು ಕಪ್ಪೆ?
2. ಅಕ್ಕ ಸತ್ತರೆ ಅಮವಾಸೆ ನಿಲ್ಲದು
3. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
4. ಆರಕ್ಕೇರಲಿಲ್ಲ ಮೂರಕ್ಕಿಳಿಯಲಿಲ್ಲ
5. ಎಳಿ ಸಿಕ್ರ ಹಚಡಾ ನುಂಗಾವ
6. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ
7. ಎತ್ತು ಏರಿಗೆಳೆದ್ರ ಕೋಣ ಕೆರಿಗೆಳಿತಂತ
8. ಕಬ್ಬು ಡೊಂಕಾದರೆ ಹಾಲು ಡೊಂಕೆ?
9. ಮೊಸರಿನ್ಯಾಗ ಕಲ್ಲ ಹುಡುಕಾಂವ
10. ಅತಿಯಾದರೆ ಅಮೃತವೂ ವಿಷ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅದಿತಿ ಸಿ.
ಉತ್ತಂಗಿ



ಅನನ್ಯ ಮೋಹನ್
ಬೆಂಗಳೂರು



ಧೃತಿ ಸಿ. ಕೆ.
ಬಂಟ್ವಾಳ



ಪ್ರತೀಕ್ಷಾ ಜೋಯ್ಸ್
ಸಾಗರ



ನನಸು ಎ.ಗೌಡ
ತುರುವೇಕೆರೆ



ತನ್ಮಯ್ ತೇಜ ಎ.ಎನ್.
ಹನೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World, Anchatageri Village
Brokers excuse.
Genuine Party Contact
9108133206

Sites

Anjanapura

ANJANAPURA 1ST Block, Sale 1750Sft SW Corner site Rs.12000/ Sft and 10th Block 3250 Sft SW Corner site Rs.13000/ Sft. Brokers Excuse. Contact Owner: 9036050743/ 9164274632

ANJANAPURA 10TH Block S/F & 6th Block W/F 30x40 Very Good Location, Immediate Construction: 9964627255

BDA SITE for Sale, Residential and Commercial Anjanapura BDA Layout Narayananagara BCMC Layout, Judicial Layout, Vakil Garden, Kanakapura Road 30x40, 40x60, 50x80 BDA E AUCTION and corner sites available. 80% Bank Loan. 9916592400

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/`A` Khatha SITES. BANASHANKARI 6th Stage, Anjanapura, Vishweswaraiah Layout. 9945724472.

BDA SITE for Sale, Residential and Prime Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80, 80% Bank Loan. 9916592400

Electronic City

PG SITE 1500 SFT ELECTRONIC CITY PHASE 1 SALE 8950/ SFT SUITABLE FOR RENTAL 9980577227

Gnanabharathi

GNANA BHARATHI LAYOUT,1ST BLOCK (Nagadevanahalli) Bangalore University Attached, BDA,20X30,EASt Facing Site For sale Contact: 9845139814, Brokers/Agents Excuse

Hebbal

4-ACRE CONVERTED Land Near Mahesh Bupathi Tennis Court Sahakarnagar, Genuine Buyers/ Sellers and Brokers Call:9900001973

HRBR Layout

"SITE FOR SALE at HRBR Layout 1st Block 1240 Sq.ft South facing 40 feet wide Road. 9880031654"

Jayanagar

BDA SITE for Sale, Residential and Prime Commercial Jayanagara, JP Nagara, BTM Layout, HSR Layout, Koramangala 30x40, 40x60, 50x80, 80% Bank Loan. 9916592400

J P Nagar

J.P.NAGAR`3BHK Flat`East 1400Sft 1.72Cr`&.30x40 Commercial 3.62cr 39x60 East`15500/- psft, jayanagar`9th 30x40 Old`East &.north 3.30cr- 9945310899

Kanakpura

BMRDA 32X60, East Facing Site For Sale at Kanakapura, Clear title, Near Chatra, Contact: 9845227242

Sites

SALE 30X40, 40X60 BDA Prime Corner Property J.P.Nagar 2nd Phase Near Innisfree House School Only Genuine Buyers Call:9986490019

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

NADAPRABHU KEMPEGOWDA Layout 7th block F Sector 50x80 W/F, 8th Block B sector 40x60 W/F and Vishveshwaraiah Layout-3rd-block 40x60 E/F. Contact:9686469799

KEMPEGOWDA LAYOUT BDA, CommercialProperty East Facing 50×80 Measurement, Only Genuine Buyer Contact. Owner. 9663005859/ 9731594565

KEMPEGOWDA LAYOUT BDA Site, 50x80 Double Road 1st Block K-Sector Near Peripheral Ring Road Commercial: 7899570235

BDA SITE FOR SALE @ Kempegowda Layout 40x60, 50x80 Good Location Contact: 9845555666

Mysore Road

"30X50 WF RESIDENTIAL SITE KHB L&C SILICON CITY TOP LOCATION HAMPAPUR NEAREST MYSORE ROAD- 9845143579"

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace, 9845287802 /8050001571

FOR SALE 40X60 North`facing, MUDA approved Commercial Site 80`ft. Road Near Christ Public School Bogadi, Mysore Rs.8335 per.Sft Contact: 9740328018.

Nagarabhavi

"**NAGARABHAVI NEAR** BDA-complex Annapoorneshwarinagar 40x60 South 40ft Road, 100% Vasthu BDA Site Sale. 9448432633"

Rajajinagar

SALE 15X35, West facing, Rajajinagar 2nd stage A block, Good location, Near Orion mall. 9845527196.

Rajarajeshwari Nagar

4450 SQFT Corner Site, in Developed BEML layout For Sale.Genuine Buyers, Contact: 8310509360 / 9880901769

R T Nagar

R.T.NAGAR 60X90 Site For Sale West Facing Excellent Location BDA Approved Call: 9341260828

Vishweshwariah Layout

SALE BDA Sites, SMV Layout, 1st block Site No.3191,3192 west facing & Site No.3094 South facing. Rs.12000/- (slightly negotiable) Owner: 9980922544

"AVAILABLE VISHVESHWARAIAH Layout 40x60, 50x80 BDA Site for sale, Beautiful location, Genuine Buyers Contact: 9945494074"

AVAILABLE 40X60 BDA Site Vishveshwaraiah Layout 60ft, 3rd Block Near Ullal Main Road Amma Asharmama: 9844603127

"**VISHVESHWARAIAH LAYOUT** Wanted BDA Sites 20x30,30x40, 40x60, 50x80 for Immediate Settlement, "Anugraha Construction"- 9886294610"

BDA 40X60 Site Sale, East Face, Sir M.V. Layout 8th Block, Site No. 2085, Price 12000/- sqft. Negotiable, Call: 9743322555

"**DIRECT OWNER**" 40x60 N/F BDA Site Sale VISHVESHWARAIAH LAYOUT BLOCK-1 near KHB Platinum Apartment. 9742681666

30X40 BDA Khatha site for SALE. AGS Layout, Ullal, Vishweshwraiah Layout. Contact: Swamy- 9620240447

Vidyaranyapura

60'X40' PRIME Location- 2 Block- BEL Layout- with 4BHK House S/F (15500/ sq.ft) 9844264852/ 9449059015.

Herohalli

HEROHALLI D Group Layout 1st Stage 30×40 E/F 40ft Road Near Andrahalli Main Road: 8217392686

House

Banashankari


30X52 E/S, CORNER VILLA HOUSE`SALE Banashankari 6th.Stage, 10th Block Attached, Gated Community, 2.5Cr. Full Cheque Payment 9799099699, 9740075563.

Basavanagudi

SALE BASAVANAGUDI Gandhi Bazaar 28x40 4 floor Each 2 BHK New Building Ct: 9844134068 8073859758



AASTHA INDUSTRIAL CITY
INDUSTRIAL PLOTS FOR SALE
Dabaspete
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299



Hebbal

HEBBAL FLYOVER Near By 30x35 New House Sale Ground Floor 2 Car Parking & 1 BHK 1st Floor, 2 BHK 2nd Floor, 2 BHK 24Hr Water 9845623970/ 9739400838

Jayanagar

JAYANAGAR 8TH Block 30x50 North facing, old house, Excellent location (Genuine buyers only) Sunil- 9845173427

J P Nagar

FORTY SQUARES Vastu House 4BHK Fully Furnished 4Carparking Cauvery Bore Water on 60x40 Site: 9341273990

Flat

Electronic City

ELECTRONIC CITY BMRDA Approved 3/4 Bedroom Villa & 2-3 Bedroom Flat Genuine Buyers Contact: 9916763727

Jayagar



J P Nagar

2 BHK High-end Flat FOR SALE 7th Phase JP Nagar
1355 sqft, North & Pool Facing Vaastu Competent in Majestic Fortune Ready for Possession, OC obtained. Contact:9019163704

Mysore Road

AVAILABLE SALE OR LEASE 3BHK APARTMENT FLAT TOP FLOOR PRICE NEGOTIABLE MYSORE ROAD 8105273951/ 9738223432

Whitefield

2BR FLAT for SALE or RENT in Janapriya Sai Darshan, Seeghalli, Whitefield. Call 7676485609

Commercial

Hosur Road

ONLY FOR commercial. Hosur Bus stand opposite near Axis bank. 2400 square feet. contact 9005008073

HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

Jayanagar

SALE COMMERCIAL 30x40 With old House on 80 feet Road Jayanagar 9th Block Excellent Location ct: 9844134068 8073859758

JAYANAGAR 9TH Block 100' Road 40x60 South. Near Jayadeva Metro 40x60 West, suitable Commercial, Sale- 9448533341.

SALE COMMERCIAL Jayanagar 2nd Block 35x75 With old House on 100 feet Road ct: 9844134068 8073859758

Whitefield



Kumarapark

FOR-SALE FAIR Field Layout Behind Chalukya-Hotel 3650sft Ground Floor Flat-Suitable for Office, Residence, Clinics-Heart of Bangalore 7829203369

Old Madras Road

PRIME OFFICE/ Showroom Sale 1638sft,`1st Floor, on`Old Madras Road, Opp.RMZ Infinity, Near Gopalan Signature Mall,`Metro Station, inside ORR- -9948661379



Koramangala



J P Nagar

COMMERCIAL BUILDING 60x90 sale JP Nagar 24th main East, rate 22 crore. 9886425997 white payment

Residential/ Commercial

Koramangala

ARCHITECT DESIGNED Bungalow with Swimming pool in Koramangala 15Cr and commmercial building fetching 16 Lakhs rent, For Sale in HSR Layout, Agents Excuse. 9845440436.

Mysore

MYSORE, 50X80 Commercial / Residential site , 2nd Phase Vijayanagar 4th Stage. East Facing , near NPS International school, Anjanadri Road. Contact 919880413134 / 6362718455

MORE Classifieds Ads on Subsequent Pages



Farm House/ Land/ Resorts

Mysore

LAND AVAILABLE
35000 sqft clear title land Available For Sale
Location: Mysore (Erstwhile Ranajith Theatre), Nilgiri road next to Mysore Central Mall
974 1460 224
991 6425 054

Out-Station

AGRICULTURE LAND and Godown for Sale: 8 Acars @ Gadag Road, Hubli and 1,43,600 sq.ft. Godown @ Harihar. 9481928895

LAND FOR SALE
TAMILNADU, COIMBATORE KARAMADAI - ANNUR ROAD NEAR CHINNAPUTHUR BUS STAND
NORTH, EAST, SOUTH FACE
3 ACRE 18 CENT
For 422 feet
MAIN ROAD FACING (North)
CONTACT
89034-49999

Industrial & Factory

Tumkur Road

SALE 9 acres Industrial Converted Land, Dabaspet 99 acres Koratagere Road 4 actes T.Begur 9141326819

Commercial Building

Kammanahalli

COMMERCIAL BDA BUILDING SALE @KAMMANAHALLI, GETTING RENT 5.5 LAKHS, SALE 9.5 CRORES: 9980577227

Yelahanka

HOTEL FOR Lease / Sale at Puttenahalli Yelahanka New Town, Doddaballapura Road Bangalore Contact: 8951231466

Agricultural Land

Out-Station

9LAKH PER ACRE Agriculture, and poultry and solar project land for sale 190km from Bangalore Call:8951240669

Kanakpura

KANAKAPURA 4ACRE and Channapatna 7acre Land Immediately Sale Contact: Richdaddy Properties 8951240669

Commercial Land

Electronic City

SALE 28000SFT Industrial/ Commercial Land at Electronic City Phase-2, Facing North & South Surrounded by IT Companies, maintained by ELCITA with 150KV power, clear titles, call VERNA DEVELOPERS, MG Road, Bangalore. 9916310226/ 9620253180.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

PROPERTY CORNER

ಕ್ಲಾಸಿಫೈಡ್ಸ್

The California Holiday Village

RK ENTERPRISES

Residential

DTCP APPROVED Sites

DTCP APPROVED

E-KHATA SITES

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ

45 ನಿಮಿಷಗಳ ಪ್ರಯಾಣ

ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.499 per sq ft Onwards



• ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
• 100% ಕಾನೂನಾತ್ಮಕ ದಾಖಲೆ ಪತ್ರಗಳು
• ಅಭಿವೃದ್ಧಿಪಡಿಸಿದ ಲೇಔಟ್ • ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

AMENITIES :
•Water •Street light •Roads •Park •Electricity
•Sewage Lines

Site dimension: 30x40 onwards

www.rkcalifornia.com ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

DMR PROPERTIES



ಬೆಂಗಳೂರು ನಗರಕ್ಕೆ ಸಮೀಪ ಇರುವ

DMR ಫಾರಂ ಲ್ಯಾಂಡ್

LIVE WITH NATURE | YOUR OWN COTTAGE | WEEKEND GETAWAY

ನೆಲಮಂಗಲ ಹತ್ತಿರ

ONE TIME INVESTMENT Life Time Enjoyment

ಬೆಂಗಳೂರು - ಮಂಗಳೂರು ಹೈವೇ ರಸ್ತೆ

with Club House

HIGHLIGHTS :
•ಬೆಂಗಳೂರು ನಗರಕ್ಕೆ ಅತ್ಯುತ್ತಮ ಸಂಪರ್ಕ
•ಬೆಂಗಳೂರು ಕೆಐಎಎಲ್ ವಿಮಾನ ನಿಲ್ದಾಣ ರಸ್ತೆಗೆ ಕೇವಲ 8 ನಿಮಿಷಗಳ ಪ್ರಯಾಣ.
•ನಮ್ಮ ಮೆಟ್ರೋ ಕೇವಲ 15 ನಿಮಿಷಗಳ ದೂರದಲ್ಲಿದೆ
•ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ ಹತ್ತಿರ •ರಾಷ್ಟ್ರೀಯ ಹೆದ್ದಾರಿ ಹತ್ತಿರ

ನೋಂದಣಿಗೆ ಸಿದ್ಧವಾಗಿದೆ

AMENITIES :
•ಎಂಟ್ರನ್ಸ್ ಆರ್ಚ್ •ಸುತ್ತಲೂ ಕಾಂಪೌಂಡ್ ಗೋಡೆ •ಲ್ಯಾಂಡ್ ಸ್ಕ್ಯಾಪಿಂಗ್ ಉದ್ಯಾನವನಗಳು •ಕ್ರಿಕೆಟ್ ಸ್ಟೇಡಿಯಂ •CCTV 24/7 •ಪ್ರತಿ ಸೈಟಿಗೂ ಪ್ರತ್ಯೇಕ ನೀರು ಸರಬರಾಜು •ವಿದ್ಯುತ್ •24x7 ಸೆಕ್ಯೂರಿಟಿ, •ಬೀದಿ ದೀಪಗಳು •ದೇವಸ್ಥಾನ •ಕ್ಲಬ್ ಹೌಸ್ ಮತ್ತು ಸ್ವಿಮಿಂಗ್ ಪೂಲ್ •ವಾಕಿಂಗ್ ಟ್ರಯಲ್ •ಜಾಗಿಂಗ್ ಪಾರ್ಕ್ •ಡ್ರೈನೇಜ್ •ಕಿಡ್ಸ್ ಪ್ಲೇ ಏರಿಯಾ •ವಿಶಾಲವಾದ ಟಾಂಬರ್ ರಸ್ತೆಗಳು •ಹನಿ ನೀರಾವರಿ ವ್ಯವಸ್ಥೆ

For Booking Contact: 9036558777, 8618831008

ಕೆ ಸ್ಕ್ವೇರ್ K SQUARE DELIVERING THE PERFECT PLOTS

ಸ್ಮಾರ್ಟ್ ಸಿಟಿ SMART CITY EXCELLENCE AT WORK

ಎಂಆರ್‌ಸಿಎಲ್ ಸಿಲ್ವನ್ ವುಡ್ಸ್

MRCL SYLVAN WOODS

PRM/KA/RERA/1251/310/PR/191124/007241

MOST REVOLUTIONARY PRICE OF PREMIUM PLOTS IN

NEW KENGERI EXTENSION

Market Price	Launch Price	Our Offer Price
₹6500* Per Sq.ft	₹4299* Per Sq.ft	₹3999* Per Sq.ft

FIRST 25 BOOKINGS*

Scan for Location

Just 9 Min From KENGERI

BMRDA APPROVED

RERA APPROVED

PRE LAUNCHING ON

13TH, 14TH & 15TH - DEC 2024

Ramohalli, Mysore road

ರಾಮೋಹಳ್ಳಿ, ಮೈಸೂರು ರಸ್ತೆ

www.ksquarehomes.com

90197 24459

*T&C Apply

ಎರಡನೇ ಟೆಸ್ಟ್
ಆಸ್ಟ್ರೇಲಿಯಾ ಮೇಲುಗೈ

ಭಾರತಕ್ಕೆ ಮತ್ತೆ ತಲೆನೋವಾದ ಹೆಡ್

• ಮಧು ಜವಳಿ

ಅಡಿಲೇಡ್: ಟ್ರಾವಿಡ್ ಹೆಡ್ ಭಾರತ ತಂಡಕ್ಕೆ 'ಹೆಡ್ಡೇಕ್'ನಿಂದ 'ಮೈಗ್ರೇನ್' ಆಗಿ ಪರಿಣಮಿಸಿದರು. ಈ ಎಡಗೈ ಬ್ಯಾಟರ್ ಸೊಗಸಾದ ಶತಕ ಸಿಡಿಸಿದರು. ಅದರ ಹೊಳಪು ಅಡಿಲೇಡ್ ಓವಲ್‌ನ ಬೆಳಕಿಗಿಂತ ಹೆಚ್ಚು ಪ್ರಕಾಶಮಾನವಾಯಿತು. ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು ಅವರು ಭಾರತದ ಕೈಯಿಂದ ಬಹುತೇಕ ಕಸಿದುಕೊಂಡಿದ್ದಾರೆ.

2023ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ 163 ರನ್‌ಗಳ ಅವಿಸ್ಮರಣೀಯ ಇನಿಂಗ್ಸ್ ಕಟ್ಟಿದ್ದ ಹೆಡ್ ಈಗ ಭಾರತದ ವಿರುದ್ಧವೇ, ನಿರ್ಣಾಯಕ ಸಂದರ್ಭದಲ್ಲಿ ಮತ್ತೊಂದು ಮಹತ್ವದ ಶತಕ (140, 141ಎಸೆತ, 17x4, 4x6) ಪೋಣಿಸಿದರು. ಇದರಿಂದ ಆಸ್ಟ್ರೇಲಿಯಾ ಪಿಂಕ್‌ಬಾಲ್ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶನಿವಾರ ಸುಭದ್ರ ಸ್ಥಿತಿಗೆ ತಲುಪಿತು. ಕ್ರೀಡಾಂಗಣದಲ್ಲಿ ಭರ್ತಿಯಾಗಿದ್ದ ಪ್ರೇಕ್ಷಕರು ತವರು ತಂಡದ ಆಟವನ್ನು ಸಂಪೂರ್ಣವಾಗಿ ಆಸ್ವಾದಿಸಿದರು.

ದಿನದಾಟ ಮುಗಿದಾಗ ಭಾರತ ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 128 ರನ್ ಗಳಿಸಿ ಅಪಾಯದಲ್ಲಿದೆ. ಭಾರತದ 180 ರನ್‌ಗಳಿಗೆ ಉತ್ತರವಾಗಿ ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 337 ರನ್ ಗಳಿಸಿ, 157 ರನ್‌ಗಳ ಮುನ್ನಡೆ ಸಂಪಾದಿಸಿತು. ಭಾರತ ಇನ್ನೂ 29 ರನ್ ಹಿಂದೆಯಿದೆ.

ಹೊನಲು ಬೆಳಕಿನಡಿ ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ನಿಯಮಿತ ವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಆಸ್ಟ್ರೇಲಿಯಾದ ದಾಳಿ ಬಿಗುವಾಗಿದ್ದು ವೇಗಿಗಳು ಗುಲಾಬಿ ಚೆಂಡನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಉತ್ತಮ ಆರಂಭವನ್ನು ದೊಡ್ಡ ಮೊತ್ತವಾಗಿ ಬೆಳೆಸಲು ಆಗಲಿಲ್ಲ. ಕೆ.ಎಲ್.ರಾಹುಲ್ ಮತ್ತು ವಿರಾಟ್ ಕೊಹ್ಲಿ ಕೂಡ ನಿರಾಸೆ ಮೂಡಿಸಿದರು.

ಆರನೇ ಕ್ರಮಾಂಕದಲ್ಲಿ ರೋಹಿತ್ ಶರ್ಮಾ (6, 15ಎ) ಮತ್ತೆ ಪರದಾಡಿದರು. ಒಮ್ಮೆ ಔಟ್ ಆದಾಗ ಅದು ನೋಬಾಲ್ ಆಗಿತ್ತು. ಆದರೆ ಕೆಲವೇ ಹೊತ್ತಿನ ನಂತರ ಪ್ಯಾಟ್ ಕಮಿನ್ಸ್ ಅವರು ಆಫ್‌ಸ್ಟಂಪ್ ನೇರಕ್ಕೆ ಹಾಕಿದ ಎಸೆತವನ್ನು ಸರಿಯಾಗಿ ಅಂದಾಜಿಸದೇ ಬೌಲ್ಡ್ ಆದರು.



ಟ್ರಾವಿಸ್ ಹೆಡ್ ಶತಕ ಸಂಭ್ರಮ... ಎಎಫ್‌ಪಿ ಚಿತ್ರ



ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ

ರಿಷಭ್ ಪಂತ್ (ಔಟಾಗದೇ 28, 4x5) ಮತ್ತು ನಿತೀಶ್ ರೆಡ್ಡಿ (ಔಟಾಗದೇ 15, 4x3) ಅವರ ಆಕ್ರಮಣದ ಆಟ ಪಂದ್ಯವನ್ನು ಮೂರನೇ ದಿನಕ್ಕೆ ಬೆಳೆಸಿದೆ.

ಮಧ್ಯಾಹ್ನ ಭಾರತ ತಂಡವು ಒಂದು ಹಂತದಲ್ಲಿ ಆಸ್ಟ್ರೇಲಿಯಾವನ್ನು (ಶುಕ್ರವಾರ: 1ಕ್ಕೆ86) ಬೇಗನೇ ಕಟ್ಟಿಹಾಕುವಂತೆ ಕಂಡಿತ್ತು. 11 ರನ್ ಅಂತರದಲ್ಲಿ ಆರಂಭ ಆಟಗಾರ ಮೆಕ್‌ಸ್ವೀನಿ ಮತ್ತು ಹಳೆಹುಲಿ ಸ್ಟೀವ್ ಸ್ಮಿತ್ ನಿರ್ಗಮಿಸಿದ್ದರು. ಆದರೆ ಶುಕ್ರವಾರದ ಆಟ ಮುಂದುವರಿಸಿದ ಮಾರ್ನಸ್ ಲಾಬುಷೇನ್ (64, 126ಎ, 4x9) ಅವರು ಹೆಡ್ ಜೊತೆಗೂಡಿ ಭಾರತದ ಲೆಕ್ಕಾಚಾರವನ್ನು ಬುಡಮೇಲು ಮಾಡಿ ದರು. ನಾಲ್ಕನೇ ವಿಕೆಟ್‌ಗೆ ಉಪಯುಕ್ತ 65 ರನ್‌ಗಳನ್ನು ಸೇರಿಸಿದರು. ಇದೇ ಹಾದಿಯಲ್ಲಿ ಲಾಬುಷೇನ್ ರನ್‌ಬರದಿಂದ ಹೊರಬಂದರು.

ಆಮೇಲೆ ಹೆಡ್ ಅವರ ಆಟ ಕಳೆಗಟ್ಟಿತು. ಮೂರು ಜೊತೆಯಾಟಗಳ ಮೂಲಕ ಅವರು ತಂಡದ ಸ್ಥಿತಿಯನ್ನು ಬಲಪಡಿಸಿದರು. ಅಧಿಕಾರಯುತ ಹೊಡೆತಗಳನ್ನು ಪ್ರದರ್ಶಿಸಿ ಬೌಲರ್‌ಗಳ ಮೇಲೆ ಸವಾರಿ ನಡೆಸಿದರು. ಈ ಜೊತೆಯಾಟಗಳಲ್ಲಿ 142 ರನ್‌ಗಳು ಹರಿದುಬಂದವು. ಇದರಲ್ಲಿ ಅವರೊಬ್ಬರೇ 91 ಎಸೆತಗಳಿಂದ 108 ರನ್ ಸೂರೆ ಮಾಡಿದ್ದರು. ಆಫ್ ಸ್ಪಿನ್ನರ್ ಆರ್.ಅಶ್ವಿನ್ ಅವರನ್ನು ಲಯಕ್ಕೆ ಬರಲು ಹೆಡ್ ಅವಕಾಶವನ್ನೇ ನೀಡಲಿಲ್ಲ. ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಎಂಟನೇ ಶತಕ ದಾಖಲಿಸಿದರು.

30 ವರ್ಷ ವಯಸ್ಸಿನ ಹೆಡ್ ಉಳಿದವರಿಗೂ ಕರುಣೆ ತೋರಲಿಲ್ಲ. ಯಾರೂ ಅವರನ್ನು ಅಪಾಯಕ್ಕೆ ಒಡ್ಡುವಂತೆ ಕಾಣಲಿಲ್ಲ. ಹರ್ಷಿತ್ ರಾಣಾ ಸಾಧಾರಣ ಬೌಲರ್‌ನಂತೆ ಕಂಡರು. ಅವರೆದುರು ಬೂಮ್ರಾ ಕೊಂಚ ಪರಿಣಾಮಕಾರಿಯಾದಂತೆ ಕಂಡು ಬಂದರು. ಸಿರಾಜ್ ಮುಖದಲ್ಲಿ ಹತಾಶೆಯ ಭಾವ ಕಂಡಿತು. ಆಗೊಮ್ಮೆ–ಈಗೊಮ್ಮೆ ಮಾತ್ರ ಅವರು ಅಪಾಯಕಾರಿಯಂತೆ ಕಂಡರು. ಕೊನೆಗೂ ಹೆಡ್ ಅವರನ್ನು ಲೊ ಫುಲ್‌ಟಾಸ್‌ನಲ್ಲಿ ಬೌಲ್ಡ್ ಮಾಡಿದಾಗ ಭಾರತದ ಬೌಲರ್ ಸ್ವಲ್ಪ ಅತಿಯೆನ್ನುವಂತೆ ವರ್ತಿಸಿದರು. ಇತರ ಆಟಗಾರರು ಅವರನ್ನು ಶಾಂತಗೊಳಿಸಿದರು.

ಹೊಸ ಚೆಂಡನ್ನು ಪಡೆದರೂ, ರನ್ ಹರಿವು ನಿಲ್ಲಲಿಲ್ಲ. ಬೂಮ್ರಾ ಒಂದೆಡೆ ನಿಯಂತ್ರಣ ಹೇರಿದರು. ಆಸ್ಟ್ರೇಲಿಯಾದ ಮುನ್ನಡೆ ಬೆಳೆಯಿತು. ಸಿರಾಜ್ ಮತ್ತು ಬೂಮ್ರಾ ಕೊನೆಯ ಕೆಲವು ಆಟಗಾರರು ನೆಲೆಯೂರದಂತೆ ನೋಡಿಕೊಂಡರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 180 (44.1 ಓವರ್‌ಗಳಲ್ಲಿ)
ಆಸ್ಟ್ರೇಲಿಯಾ: 337 (87.3 ಓವರುಗಳಲ್ಲಿ)
(ಶುಕ್ರವಾರ: 1ಕ್ಕೆ86)
ಮೆಕ್‌ಸ್ವೀನಿ ಸಿ ಪಂತ್ ಬಿ ಬೂಮ್ರಾ 39 (109ಎ, 4x6)
ಲಾಬುಷೇನ್ ಸಿ ಜೈಸ್ವಾಲ್ ಬಿ ನಿತೀಶ್ ರೆಡ್ಡಿ 64 (126ಎ, 4x9)
ಸ್ಮಿತ್ ಸಿ ಪಂತ್ ಬಿ ಬೂಮ್ರಾ 2 (11ಎ)
ಹೆಡ್ ಬಿ ಸಿರಾಜ್ 140 (141ಎ, 4x17, 6x4)
ಮಾರ್ಷ್ ಸಿ ಪಂತ್ ಬಿ ಅಶ್ವಿನ್ 9 (26ಎ, 4x1)
ಕ್ಯಾರಿ ಸಿ ಪಂತ್ ಬಿ ಸಿರಾಜ್ 15 (32ಎ)
ಕಮಿನ್ಸ್ ಬಿ ಬೂಮ್ರಾ 12 (22ಎ, 4x2)
ಸ್ಟಾರ್ಕ್ ಸಿ ಹರ್ಷಿತ್ ಬಿ ಸಿರಾಜ್ 18 (15ಎ, 4x3)
ಲಯನ್ ಔಟಾಗದೇ 4 (6ಎ)
ಬೋಲ್ಯಾಂಡ್ ಬಿ ಸಿರಾಜ್ 0 (9ಎ)
ಇತರೆ: 21 (ಬೈ 13, ಲೆಗ್‌ಬೈ 1, ನೋಬಾಲ್ 7)
ವಿಕೆಟ್ ಪತನ: 2–91 (ನೇಥನ್ ಮೆಕ್‌ಸ್ವೀನಿ, 36.1), 3–103 (ಸ್ಟೀವ್ ಸ್ಮಿತ್, 40.1), 4–168 (ಮಾರ್ನಸ್ ಲಾಬುಷೇನ್, 54.3), 5–208 (ಮಿಚೆಲ್ ಮಾರ್ಷ್, 63.4), 6–282 (ಅಲೆಕ್ಸ್ ಕ್ಯಾರಿ, 76.6), 7–310 (ಟ್ರಾವಿಸ್ ಹೆಡ್, 81.4), 8–332 (ಪ್ಯಾಟ್ ಕಮಿನ್ಸ್, 84.6), 9–332 (ಮಿಚೆಲ್ ಸ್ಟಾರ್ಕ್, 85.1), 10–337 (ಸ್ಕಾಟ್ ಬೋಲ್ಯಾಂಡ್, 87.3).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 23–5–61–4; ಮೊಹಮ್ಮದ್ ಸಿರಾಜ್ 24.3–5–98–4; ಹರ್ಷಿತ್ ರಾಣಾ 16–2–86–0; ನಿತೀಶ್ ಕುಮಾರ್ ರೆಡ್ಡಿ 6–2–25–1; ರವಿಚಂದ್ರನ್ ಅಶ್ವಿನ್ 18–4–53–1.

ಎರಡನೇ ಇನಿಂಗ್ಸ್:
ಭಾರತ: 5 ವಿಕೆಟ್‌ಗೆ 128 (24 ಓವರುಗಳಲ್ಲಿ)
ಜೈಸ್ವಾಲ್ ಸಿ ಕ್ಯಾರಿ ಬಿ ಬೋಲ್ಯಾಂಡ್ 24 (31ಎ, 4x4)
ರಾಹುಲ್ ಸಿ ಕ್ಯಾರಿ ಬಿ ಕಮಿನ್ಸ್ 7 (10ಎ, 4x1)
ಗಿಲ್ ಬಿ ಸ್ಟಾರ್ಕ್ 28 (30ಎ, 4x3)
ಕೊಹ್ಲಿ ಸಿ ಕ್ಯಾರಿ ಬಿ ಬೋಲ್ಯಾಂಡ್ 11 (21ಎ, 4x1)
ಪಂತ್ ಔಟಾಗದೇ 28 (25ಎ, 4x5)
ರೋಹಿತ್ ಬಿ ಕಮಿನ್ಸ್ 6 (15ಎ, 4x1)
ನಿತೀಶ್ ರೆಡ್ಡಿ ಔಟಾಗದೇ 15 (14ಎ, 4x3)
ಇತರೆ:9 (ಬೈ 5, ಲೆಗ್‌ಬೈ 2, ನೋಬಾಲ್ 2)
ವಿಕೆಟ್ ಪತನ: 1–12 (ಕೆ. ಎಲ್.ರಾಹುಲ್, 3.5), 2–42 (ಯಶಸ್ವಿ ಜೈಸ್ವಾಲ್, 8.1), 3–66 (ವಿರಾಟ್ ಕೊಹ್ಲಿ, 14.3), 4–86 (ಶುಭಮನ್ ಗಿಲ್, 17.2), 5–105 (ರೋಹಿತ್ ಶರ್ಮಾ, 20.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 9–0–49–1; ಪ್ಯಾಟ್ ಕಮಿನ್ಸ್ 8–0–33–2; ಸ್ಕಾಟ್ ಬೋಲ್ಯಾಂಡ್ 7–0–39–2.

ಹತ್ತನೇ ಪಂದ್ಯವೂ ನೀರಸ ಡ್ರಾ

ವಿಶ್ವ ಚೆಸ್: ಗುಕೇಶ್– ಲಿರೆನ್ ಸ್ಕೋರ್ 5–5 ಸಮಬಲ

ಸಿಂಗಪುರ (ಪಿಟಿಐ): ಭಾರತದ ಚಾಲೆಂಜರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಹತ್ತನೇ ಪಂದ್ಯ ಶನಿವಾರ ಅಂತಹ ಕುತೂಹಲ ಕೆರಳಿಸದೇ 'ಡ್ರಾ' ಆಯಿತು. ಇದು ಫೈನಲ್‌ನಲ್ಲಿ ಸತತ ಏಳನೇ 'ಡ್ರಾ' ಆಗಿದೆ.


ಇದು ಕಪ್ಪು ಕಾಯಿಗಳಲ್ಲಿ ಗುಕೇಶ್ ಆಡಿದ ಅತಿ ಸುಲಭದ 'ಡ್ರಾ' ಕೂಡ. ಈ ಡ್ರಾದಿಂದ ಗುಕೇಶ್ ಸಂತುಷ್ಟರಾದಂತೆ ಕಂಡರು. 32 ವರ್ಷ ವಯಸ್ಸಿನ ಡಿಂಗ್ ಲಿರೆನ್ ಕೂಡ ಯಾವುದೇ ಸಾಹಸಕ್ಕೆ ಕೈಹಾಕಲಿಲ್ಲ. ಅವರೂ ಕೂಡ ಪಾಯಿಂಟ್ ಹಂಚಿಕೊಳ್ಳುವ ನಿರ್ಧಾರದಿಂದ ಸಂತೃಪ್ತರಾದಂತೆ ಕಂಡುಬಂದರು.

ಹತ್ತನೇ ಪಂದ್ಯ 36 ನಡೆಗಳನ್ನು ಕಂಡಿತು. ಈಗ ಇಬ್ಬರೂ ತಲಾ ಐದು ಪಾಯಿಂಟ್ಸ್ ಗಳಿಸಿದ್ದಾರೆ. ಮೊದಲು 7.5 ಪಾಯಿಂಟ್ಸ್ ಗಳಿಸುವ ಆಟಗಾರ ವಿಶ್ವ ಚಾಂಪಿಯನ್ ಆಗಲಿದ್ದಾರೆ.

11ನೇ ಪಂದ್ಯದಲ್ಲಿ ಗುಕೇಶ್ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ. 14 ಪಂದ್ಯಗಳ ನಂತರವೂ ಸಮಬಲ (7–7) ಆದಲ್ಲಿ ನಿಯಮಗಳ ಪ್ರಕಾರ ವಿಶ್ವ ವಿಜೇತ ಆಟಗಾರನ ನಿರ್ಧಾರಕ್ಕೆ ಸಮಯದ ಮಿತಿಯಿರುವ ಟೈಬ್ರೇಕ್ ಪಂದ್ಯಗಳನ್ನು ಆಡಿಸಲಾಗುವುದು. ಫೈನಲ್ ಪಂದ್ಯವು ₹21 ಕೋಟಿ ಬಹುಮಾನ ಮೊತ್ತ ಹೊಂದಿದೆ.



ಗುಕೇಶ್



ಲಿರೆನ್ –ಫಿಡೆ ಚಿತ್ರ

ಪಂದ್ಯ ಮಧ್ಯಮ ಹಂತದಲ್ಲಿರುವಾಗಲೇ ಸಮಬಲದ ಸ್ಥಿತಿಗೆ ತಲುಪಿತು. ಹೀಗಾಗಿ ಚೆನ್ನೈ ಆಟಗಾರ ಗೆಲುವಿಗೆ ಪ್ರಯತ್ನ ಹಾಕಲಿಲ್ಲ.

ಕೊನೆಯಲ್ಲಿ ಇಬ್ಬರ ಬಳಿಯೂ ಬಿಳಿ ಚೌಕದಲ್ಲಿ ಸಾಗುವ ಬಿಷಪ್‌ಗಳ ಜೊತೆಗೆ ಆರು ಕಾಲಾಳುಗಳು ಉಳಿದಿದ್ದವು.

'ಇತ್ತೀಚಿನ ದಿನಗಳಲ್ಲಿ ಬಿಳಿ ಅಥವಾ ಕಪ್ಪು ಕಾಯಿಗಳಲ್ಲಿ ಆಡುವುದು ದೊಡ್ಡ ವ್ಯತ್ಯಾಸವನ್ನೇನೂ ಮಾಡುವುದಿಲ್ಲ. ಇನ್ನು ನಾಲ್ಕು ಕುತೂಹಲಕರ ಪಂದ್ಯಗಳಷ್ಟೇ ಉಳಿದಿವೆ' ಎಂದು 18 ವರ್ಷ ವಯಸ್ಸಿನ ಭಾರತದ ಆಟಗಾರ ಹೇಳಿದರು. ಅವರು ವಿಶ್ವ ಚಾಂಪಿಯನ್‌ಷಿಪ್ ಇತಿಹಾಸದಲ್ಲೇ ಅತಿ ಕಿರಿಯ ಚಾಲೆಂಜರ್ ಆಗಿದ್ದಾರೆ.

'ಇನ್ನು ತಪ್ಪು ಮಾಡಲು ಅವಕಾಶವಿಲ್ಲ. ಈ ಹಂತದಲ್ಲಿ ಒಂದು ಸೋಲು ಸಹ ಆಟಗಾರನನ್ನು ದುಸ್ಥಿತಿಗೆ ತಳ್ಳುತ್ತದೆ.

ಪ್ರತಿಯೊಂದು ನಡೆಯನ್ನು ಎಚ್ಚರಿಕೆಯಿಂದ ಇಡುವುದು ಅವಶ್ಯಕವಾಗಿದೆ' ಎಂದು ಲಿರೆನ್ ಅವರು ಪ್ರತಿಕ್ರಿಯಿಸಿದರು.

ಭಾರತಕ್ಕೆ ಬಾಂಗ್ಲಾ ಸವಾಲು ಇಂದು

ದುಬೈ (ಪಿಟಿಐ): ಭಾರತ ತಂಡ, ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಪುರುಷರ ಏಷ್ಯಾ ಕಪ್ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಭಾರತದ ಬಲಾಢ್ಯ ಬ್ಯಾಟಿಂಗ್ ಮತ್ತು ಬಾಂಗ್ಲಾದೇಶ ತಂಡದ ಚುರುಕಿನ ಬೌಲಿಂಗ್ ನಡುವಿನ ಪೈಪೋಟಿಗೆ ಫೈನಲ್ ವೇದಿಕೆಯಾಗಿದೆ.

ಈ ಟೂರ್ನಿಯ ಇತಿಹಾಸ ಗಮನಿಸಿದಲ್ಲಿ ಭಾರತ ಯಶಸ್ವಿ ತಂಡ ಎನಿಸಿದ್ದು, ಇದುವರೆಗೆ ಎಂಟು ಬಾರಿ ಪ್ರಶಸ್ತಿ ಗೆದ್ದುಕೊಂಡಿದೆ. ಮೂರು ವರ್ಷಗಳ ನಂತರ ಪ್ರಶಸ್ತಿ ಮರಳಿ ಪಡೆಯಲು ತುದಿಗಾಲಿನಲ್ಲಿದೆ. ಈ ಹಿಂದಿನ ಆವೃತ್ತಿಯಲ್ಲಿ ಭಾರತ ತಂಡವನ್ನು ಮಣಿಸಿದ್ದ ಹಾಲಿ ಚಾಂಪಿಯನ್ ಬಾಂಗ್ಲಾದೇಶ ಪ್ರಶಸ್ತಿ ಉಳಿಸಿಕೊಳ್ಳುವ ತವಕದಲ್ಲಿದೆ.

ಭಾರತದ ಆರಂಭ ಆಟಗಾರರಾದ ಆಯುಷ್ ಮ್ಹಾತ್ರೆ (175 ರನ್) ಮತ್ತು 13 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ (167) ಅವರು ಟೂರ್ನಿಯಲ್ಲಿ ಉತ್ತಮ ಯಶಸ್ಸನ್ನು ಗಳಿಸಿದ್ದಾರೆ. ಇನ್ನೊಂದು ಕಡೆ ಬಾಂಗ್ಲಾದೇಶ ತಂಡ ವೇಗದ ಬೌಲರ್‌ಗಳಾದ ಮೊಹಮ್ಮದ್ ಅಲ್ ಫಹದ್ ಮತ್ತು ಮೊಹಮದ್ ಇಕ್ಬಾಲ್ ಹಸನ್ ಇಮೊನ್ ಅವರ ದಾಳಿಯನ್ನು ನೆಚ್ಚಿಕೊಂಡಿದೆ. ಇಬ್ಬರೂ ತಲಾ 10 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಭಾರತ ಈ ಟೂರ್ನಿಯಲ್ಲಿ ಹಿನ್ನಡೆಯಿಂದ ಪುಟಿದೆದ್ದು ಬಂದಿದೆ. ಗುಂಪು ಹಂತದ ಮೊದಲ ಪಂದ್ಯದಲ್ಲಿ ಪಾಕಿಸ್ತಾನಕ್ಕೆ ಸೋತಿದ್ದ ಭಾರತ ನಂತರ ಚೇತರಿಸಿಕೊಂಡು, ಸೆಮಿಫೈನಲ್‌ನಲ್ಲಿ ಶ್ರೀಲಂಕಾ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತ್ತು. ಬಾಂಗ್ಲಾದೇಶ ಕಥೆಯೂ ಭಿನ್ನವಾಗಿಲ್ಲ. ಅದು ಶ್ರೀಲಂಕಾ ಎದುರು ಗುಂಪು ಹಂತದಲ್ಲಿ ಸೋಲನುಭವಿಸಿದ್ದ ಬಾಂಗ್ಲಾದೇಶ, ನಾಕೌಟ್ ತಲುಪಿದ ಮೇಲೆ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ತಂಡದ ಮೇಲೆ ಏಳು ವಿಕೆಟ್‌ಗಳ ಸುಲಭ ಜಯಪಡೆದಿತ್ತು.

ಕಳೆದ ಬಾರಿಯ ಹಿನ್ನಡೆಗೆ ಪ್ರತೀಕಾರ ತೀರಿಸಿಕೊಳ್ಳಲು ಮೊಹಮ್ಮದ್ ಅಮಾನ್ ನೇತೃತ್ವದ ಭಾರತ ತಂಡಕ್ಕೆ ನಾಳೆ ಉತ್ತಮ ಅವಕಾಶವಿದೆ.

ಪಂದ್ಯ ಆರಂಭ: ಬೆಳಿಗ್ಗೆ 10.15

ಸರಣಿ ಸೋಲು ತಪ್ಪಿಸುವ ಛಲದಲ್ಲಿ ಹರ್ಮನ್ ಪಡೆ


ಬ್ರಿಸ್ಟೇನ್ (ಪಿಟಿಐ): ಭಾರತದ ವನಿತೆಯರು ಭಾನುವಾರ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಸುಧಾರಿತ ಪ್ರದರ್ಶನ ನೀಡಿ, ಸರಣಿ ಸೋಲನ್ನು ತಪ್ಪಿಸಿಕೊಳ್ಳುವ ಛಲದಲ್ಲಿದ್ದಾರೆ.

ಗುರುವಾರ ನಡೆದ ಸರಣಿಯ ಮೊದಲ ಪಂದ್ಯದಲ್ಲೂ ಭಾರತದ ಅಗ್ರ ಬ್ಯಾಟರ್‌ಗಳ ಅಸ್ಥಿರ ಪ್ರದರ್ಶನ ಮುಂದುವರಿದಿತ್ತು. ಹೀಗಾಗಿ, ಆತಿಥೇಯ ತಂಡವು ಐದು ವಿಕೆಟ್‌ಗಳಿಂದ ಗೆಲುವು ಸಾಧಿಸಿ, ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆದಿತ್ತು.

ಸರಣಿಯನ್ನು ಉಳಿಸಿಕೊಳ್ಳಲು ಎರಡನೇ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವಿದೆ. ಅದರಲ್ಲೂ ಅಗ್ರ ಬ್ಯಾಟರ್ ಗಳಿಗೆ ಈ ಪಂದ್ಯ ಸತ್ವಪರೀಕ್ಷೆಯಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 5.15
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕೊನೆಯ 2 ಟೆಸ್ಟ್ ಆಡಲಿರುವ ಶಮಿ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯ ಕೊನೆಯ ಎರಡು ಟೆಸ್ಟ್ ಪಂದ್ಯಗಳಲ್ಲಿ ಆಡಲು ಸಜ್ಜಾಗಿದ್ದಾರೆ.

ಬಂಗಾಳದ ಬೌಲರ್‌ಗೆ ಎನ್‌ಸಿಎ ವೈದ್ಯಕೀಯ ತಂಡದಿಂದ ಅನುಮತಿ ಸಿಗಬೇಕಾಗಿದ್ದು, ಅದು ಔಪಚಾರದ ಕ್ರಮವೆನಿಸಿದೆ. ಮೆಲ್ಬರ್ನ್‌ನಲ್ಲಿ ಡಿಸೆಂಬರ್ 26ರಿಂದ ನಡೆಯುವ ಬಾಕ್ಸಿಂಗ್ ಡೇ ಟೆಸ್ಟ್ (ನಾಲ್ಕನೇ ಟೆಸ್ಟ್) ಅವರು ಕಾಣಿಸಿಕೊಳ್ಳಲಿದ್ದಾರೆ.

ಇದು ಐದು ಟೆಸ್ಟ್‌ಗಳ ಸರಣಿಯ ನಾಲ್ಕನೇ ಪಂದ್ಯ. ಮೂರನೇ ಟೆಸ್ಟ್ ಬ್ರಿಸ್ಬೇನ್‌ನಲ್ಲಿ ಡಿಸೆಂಬರ್ 14ರಂದು ಆರಂಭವಾಗುತ್ತದೆ. ಎನ್‌ಸಿಎದಿಂದ ಫಿಟ್ನೆಸ್ ಪ್ರಮಾಣಪತ್ರ ಶೀಘ್ರ ದೊರಕಲಿದೆ ಎಂದು ಶಮಿ ಅವರ ಆಪ್ತ ಮೂಲ ಪಿಟಿಐಗೆ ತಿಳಿಸಿದೆ.

'ಶಮಿ ಅವರ ಕಿಟ್‌ಅನ್ನು ಈಗಾಗಲೇ ಆಸ್ಟ್ರೇಲಿಯಾಕ್ಕೆ ರವಾನಿಸಲಾಗಿದೆ. ಅವರು ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿ ಆಡಲಿದ್ದು, ಬಳಿಕ ಆಸ್ಟ್ರೇಲಿಯಾಕ್ಕೆ ತೆರಳುವರು' ಎಂದು ಈ ಮೂಲ ತಿಳಿಸಿದೆ.

2023ರ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ವೇಳೆ ಪಾದದ ನೋವಿಗೆ ಒಳಗಾಗಿದ್ದ, 34 ವರ್ಷ ವಯಸ್ಸಿನ ಬೌಲರ್ ನಂತರ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಕ್ರಿಕೆಟ್‌ನಿಂದ ದೂರವಿದ್ದರು.ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ನಾಕೌಟ್ ಸುತ್ತು ಬೆಂಗಳೂರಿನಲ್ಲಿ ನಡೆಯಲಿದೆ. ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯ ವೈದ್ಯಕೀಯ ತಂಡದ ಮುಖ್ಯಸ್ಥ ಡಾ.ನಿತಿನ್ ಪಟೇಲ್ ನೇತೃತ್ವದ ತಂಡ ಮತ್ತು ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಟ್ರೇನರ್ ನಿಶಾಂತ್ ಬೊರ್ದೊಲೊಯಿ ಅವರು ಫಿಟ್ನೆಸ್ ಮೌಲ್ಯಮಾಪನ ನಡೆಸುವ ನಿರೀಕ್ಷೆಯಿದೆ.

ಇನ್ನಷ್ಟು ಕ್ರೀಡಾ ಸುದ್ದಿಗಳು 09



